


ಬರವಣಿಗೆ ಮತ್ತು ಸಿದ್ಧಾಂತಗಳು

ಲೇಖನಗಳು

ಡಾ. ಶಿರಗಾನಹಳ್ಳಿ ಶಾಂತ ನಾಯ್ಕ

ಬರವಣಿಗೆ ಮತ್ತು ಸಿದ್ಧಾಂತಗಳು

ಲೇಖನಗಳ ಸಂಗ್ರಹ

ಲೇಖಕರು

ಡಾ. ಶಿರಗಾನಹಳ್ಳಿ ಶಾಂತನಾಯ್ಕ

ಅನಿಕೇತನ ಪ್ರಕಾಶನ

ಎಲ್.೮, ೭ನೇ ತಿರುವು

ಮಾನಸಗಂಗೋತ್ರಿ, ಮೈಸೂರು. ೬

BARAVANIGE MATTU SIDDANTAGALU Collection of Essays written by Dr. Shiraganahalli Shanthanaik Published by Anikethan Prakashana, L. 8, 7th Cross, Manasagangothri, Mysore-6
Publisher : Smt. Dakshayani S.Naik
Mob : 78296 70053

ಮೊದಲ ಮುದ್ರಣ : **2010**

ಒಟ್ಟು ಪುಟಗಳು : **154+6=160**

ಬಳಸಿರುವ ಕಾಗದ : **70ಜಿ.ಎಸ್.ಎಂ. ಮ್ಯಾಪ್ಲಿತೋ**

ಡಾ. ಶಿರಗಾನಹಳ್ಳಿ ಶಾಂತನಾಯ್ಕ
ಎಲ್.೮, ೭ನೇ ತಿರುವು, ಮಾನಸಗಂಗೋತ್ರಿ, ಮೈಸೂರು - 6
ಜಂಗಮದೂರವಾಣಿ : **94490 21006**

ಪ್ರಕಾಶಕರು : **ಶ್ರೀಮತಿ ದಾಕ್ಷಾಯಣಿ ಎಸ್. ನಾಯ್ಕ**
ಎಲ್.೮, ೭ನೇ ತಿರುವು, ಮಾನಸಗಂಗೋತ್ರಿ, ಮೈಸೂರು - 6
ಜಂಗಮದೂರವಾಣಿ : **78296 70053**

ಮುಖಪುಟ : **ಶ್ರೀ ಮುರಳೀಧರ ರಾಠೋಡ್**

ಬೆಲೆ : **100/-**

ಪ್ರತಿಗಳು : **1000**

ಮುದ್ರಕರು :
ಉದಯರವಿ ಪ್ರಿಂಟರ್ಸ್
1354/1, ಕೃಷ್ಣಮೂರ್ತಿಪುರಂ, ಮೈಸೂರು - 570 004.
ದೂರವಾಣಿ : **2332971 (M) 94483 82971**

ಬರವಣಿಗೆ ಮತ್ತು ಸಿದ್ಧಾಂತದ ತಿಕ್ಕಾಟದಲ್ಲಿ...

ನನಗೆ ಬಹಳವಾಗಿ ಕಾಡುವುದು ಈ ದೇಶದ ಕಾನೂನು. ಬರಿಪುಸ್ತಕದ ಪುಟಗಳಲ್ಲಿ ಚಾಲನೆಯಲ್ಲಿರುವ ಇದು ಜಾರಿಗೆ ಬರುವುದೇ ಇಲ್ಲ. ದೇಶದ ಕೋಟ್ಯಾಂತರ ಜನರಿಗೆ ಈ ಕಾನೂನಿನ ಅರಿವು ಇಲ್ಲದರಿಂದ, ಮನಸಾನಿಚ್ಛೆ ಕಾನೂನಿನ ದುರುಪಯೋಗ ಪಡಿಕೊಳ್ಳುತ್ತಿರುವ ಜನಪ್ರತಿನಿಧಿಗಳೆಂಬ ಕತ್ತೆಗಳು ಅವರ ಹತ್ರದ ರೂಪಾಯಿ ಆಶೆಗೆ ದೊಡ್ಡವರನ್ನಾಗಿ ಮಾಡುವ ಈ ದೇಶದ ಪಾಪಿಜನಗಳು ಇಬ್ಬರಲ್ಲೂ ವ್ಯತ್ಯಾಸವಿಲ್ಲ. ಈ ನಡುವೆ ರಾಜಕಾರಣಿಗಿಂತಲೂ ಆಚೆ ರಾಜಕೀಯ ಮಾಡುತ್ತಿರುವ ಬುದ್ಧಿಜೀವಿ ಎಂದು ಸೋಗುಹಾಕಿಕೊಂಡಿರುವ ಜನರು. ಯಾರು ಯಾರಿಗೆ ಪೂರಕ ಯಾರಿಗೆ ಮಾರಕ ? ಯಾರು ಯಾರ ಪರ ? ಯಾರ ವಿರೋಧ ? ಯಾವ ಸಿದ್ಧಾಂತವನ್ನು ನಂಬಿ ಬರವಣಿಗೆ ಮಾಡಿದ್ದರೋ ಅದನ್ನ ಗಾಳಿಗೆ ತೂರಿ ಅಧಿಕಾರದ ಗದ್ದುಗೆಯ ಮೇಲೆ ರಾರಾಜಿಸಲು ಪವಾಡಿಸಿರುವುದು ವಿಪರ್ಯಾಸದ ಸಂಗತಿ. ಬರಹಗಾರ ನಾನು ಇದೇ ಸಿದ್ಧಾಂತವನ್ನು ನಂಬಿದ್ದೇನೆ ಎಂದುಕೊಂಡು ಎಲ್ಲೂ ಹೇಳಿಕೊಳ್ಳುವುದಿಲ್ಲ ಅವನ ಬರವಣಿಗೆಯನ್ನು ಇದೇ ಸಿದ್ಧಾಂತದ ಚೌಕಟ್ಟಿನಲ್ಲಿ ಹಿಡಿದಿರುವ ಹುಸಿ ಸಾಹಸಕ್ಕೆ ಹೋಗುವುದಿಲ್ಲ. ಡೆರಿಡಾನ ಡಿ ಕನ್ಸ್ಟ್ರಕ್ಷನ್ ಸಿದ್ಧಾಂತವಾಗಲಿ ಎಡ್ವರ್ಡ್ ಸೈದ್‌ನ ಓರಿಯೆಂಟಲಿಸಂ ಆಗಲಿ, ವಸಹಾತೊತ್ತರ ಚಿಂತೆಗಳು ಯಾವು ಹೀಗೆ ತನ್ನ ಬರವಣಿಗೆಯಲ್ಲಿರಬೇಕೆಂದು ಬರಹಗಾರ ಅಂದುಕೊಳ್ಳಲಾರ. ಯಾವುದೋ ಸಿದ್ಧಾಂತವನ್ನು ಓದಿರುತ್ತಾನೆ ಅದನ್ನ ತನ್ನ ನಾಯಕನ ಮುಖಾಂತರ ಪ್ರಚಾರ ಪಡಿಸಲು ಪ್ರಯತ್ನಿಸುವುದುಂತು ನಿಜ. 80-90 ರ ದಶಕದಲ್ಲಿ ಸ್ತ್ರೀ ಕೇಂದ್ರಿತ ಸಾಹಿತ್ಯ ಬಹಳ ಪ್ರಚಾರದಲ್ಲಿತ್ತು. ಅದು ಪೌರಾತ್ಯ ರಾಷ್ಟ್ರಗಳಲ್ಲಿ ಒಂದು ಆಂದೋಲನದ ರೂಪದಲ್ಲಿಯೇ ಪ್ರಸ್ತುತವಾಗಿತ್ತು. ಹಾಗಾಗಿ ಭಾರತೀಯ ಸ್ತ್ರೀವಾದ ಪ್ರೇಮಿನಲ್ಲಿ ಆ ಕಾಲಘಟ್ಟದಲ್ಲಿ ಬರೆದ ಮಹಿಳೆಯರ ಸಾಹಿತ್ಯವನ್ನೆಲ್ಲಾ ಫಿಟ್ ಮಾಡಲಾಯಿತು. ನನ್ನ ಬರವಣಿಗೆಯಲ್ಲಿ ನಾನು ಯಾವುದನ್ನು ಹೆಚ್ಚು ವಿಸ್ತೃತವಾಗಿ ಹೇಳಲು ಹೋಗಿಲ್ಲ. ಏಕೆಂದರೆ, ನಾನು ಯಾವ ಸಿದ್ಧಾಂತವನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಅದರ ಪ್ರಾಯೋಗಿಕ ಸಾಫಲ್ಯವನ್ನ ಕಂಡವನಲ್ಲ. ಒಂದು ಔಟರ್‌ಲೇಯರ್ ಅನ್ನ ಮಾತ್ರ ಕೊಡುವ ಯತ್ನ ಮಾಡಿದ್ದೇನೆ ಆದರೆ ಇಲ್ಲಿ ಬರುವ ಎಲ್ಲಾ ಲೇಖನಗಳು ಭಿನ್ನವಾಗಿವೆ, ಭಾಷೆ, ಸಾಹಿತ್ಯ ವ್ಯಕ್ತಿ, ಸಂಸ್ಕೃತಿ, ಬರವಣಿಗೆ ಚುನಾವಣೆ ಇತ್ಯಾದಿ. ನನ್ನ ಕೆಲವು ಲೇಖನಗಳು ಆರಂಭಕ್ಕೆ ಮುನ್ನವೇ ಮುಗಿದು ಹೋಗುತ್ತವೆ, ಕಾರಣ ನಾನು ಬರೆಯುತ್ತಿರುವ ಜನ ಸಾಮನ್ಯರಿಗೆ, ಅವರ ತಿಳುವಳಿಕೆಯ ತೊಟ್ಟಿಕ್ಕೆಗೆ ಸಿಕ್ಕರೆ ಸಾರ್ಥಕವಾದೀತು. ಬರವಣಿಗೆ ನನಗೆ ಅನಿವಾರ್ಯವೋ ಅಥವಾ ಅವಶ್ಯಕತೆಯೋ ಗೊತ್ತಿಲ್ಲ. ಈ ದೇಶದ ದೊಡ್ಡ ದೊಡ್ಡ ಚಿಂತಕರು ತಮ್ಮದೇ ಆಲೋಚನಾ ಲಹರಿಯನ್ನ ಹರಿಸಿದ್ದಾರೆ.

ಅವರೆಲ್ಲರ ಒತ್ತಾಸೆಯಾಗಿ ನಾನು ಬರೆಯುತ್ತಿದ್ದೇನೆ. ಜಗತ್ತನ್ನ ತೆರೆದ ಕಣ್ಣಿಂದ ಓದುವ ನಾನು ಅದನ್ನು ಅನುಭವಿಸಿದ್ದೇನೆ. ಶೋಷಣೆ, ಅನ್ಯಾಯ, ಜಾತಿಯ ಹೆಸರಿನಲ್ಲಿ ನಮ್ಮ ಮೇಲೆ ಸವಾರಿ ಮಾಡುವ ಜನರ ನಡುವೆ ನಮ್ಮಂತಹ ತಿಳುವಳಿಕೆ ಇರೋ ಜೀವಿಗಳಿಗೆ ಬದುಕು ದುಸ್ತರವೆನಿಸಿರುವಾಗ ಏನು ಅರಿಯದ ಕೋಟಿ ಕೋಟಿ ಜನರ ಪಾಡೇನು ಎಂಬುದು ದೊಡ್ಡ ಸವಾಲಾಗಿದೆ. ಪ್ರಜಾಪ್ರಭುತ್ವದ ಅಮಲು ಏರಿರೊ ನಮಗೆ ಯಾರ ಬಗ್ಗೆ ಯಾರು ಚಿಂತೆ ಮಾಡದ ಸ್ಥಿತಿ ಬಂದಿದೆ, ಮನೆ ಗೆಳೆಯನೊಬ್ಬನ ಬೈಕ್ ಮೇಲೆ ಬೆಂಗಳೂರಿನ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗುತ್ತಿದ್ದೆ. ಸಣ್ಣ ವಯಸ್ಸಿನ ಒಬ್ಬ ಬಡ ಹೆಂಗಸೋ ಹುಡುಗಿಯೋ ಅಂದರೆ 14 ರಿಂದ 15 ವರ್ಷಗಳಿರಬೇಕು. ಚಿಕ್ಕ ಮಗುವನ್ನು ಸಿಗ್ನಲ್‌ನ ಒಂದು ಕಟ್ಟೆಯ ಮೇಲೆ ಕೂಡಿಸಿ ಭಿಕ್ಷೆ ಬೇಡುತ್ತಿದ್ದಳು, ಅಪೌಷ್ಠಿಕತೆಯ ಕಾರಣ ಸರಿಯಾಗಿ ಬೆಳವಣಿಗೆಯಾಗದ ದೇಹರಚನೆ ಆಕೃತಿಯಿಂದ ಮಾತ್ರ ಮನುಷ್ಯಳು ಇಂತ ಅನರ್ಥವಾದ ಬದುಕಿನ್ನ ಬದುಕಿರುವ ಕೋಟ್ಯಾಂತರ ಜನರು ಬದುಕಿದ್ದಾರೆ. ಈ ದೇಶದ ಸಾಮಾಜಿಕ ರಚನೆಯಲ್ಲಿರು ವೈವಿಧ್ಯ ಮತ್ತು ವೈರುಧ್ಯ ಬೇರಾವ ಸಮಾಜದಲ್ಲಿಯೂ ಇಲ್ಲ. ಇದರ ಸರಿಯಾದ ಪರಿಚಯವಿರುವುದು ಕೆಳವರ್ಗದಿಂದ ಬಂದ ಬರಹಗಾರರಿಗೆ ಮಾತ್ರ. ಜಾತಿ ಒಂದೇ ಆದರೂ ಆ ಜಾತಿಯ ಜನರುಗಳಲ್ಲಿ ಕೂಲಿಗಳಿದ್ದಾರೆ, ಆಟೋ ಚಾಲಕರಿದ್ದಾರೆ, ಹಮಾಲಿಗಳಿದ್ದಾರೆ ಭೂ ಮಾಲಿಕರಿದ್ದರೆ, ಕೂಲಿ ಕೆಲಸದವರಿದ್ದಾರೆ, ಕಸ ತೆಗೆಯುವವರಿದ್ದಾರೆ, ಮನೆಗೆಲಸದವರಿದ್ದಾರೆ, ಕಟ್ಟಡ ಕಟ್ಟುವ, ಬೀದಿ ಗುಡಿಸುವ, ಪೊಲೀಸ್ ಜವಾನ, ಹಾಲುಮಾರುವವ, ಈರುಳ್ಳಿ ಮಾರುವವ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಹಾಗಾಗಿ, ಸಾಮಾಜಿಕರಣಗೊಂಡು ಸಂಸ್ಕೃತಿಯ ಹೆಸರಲ್ಲಿ ಅನಾಗರಿಕರಾಗಿರುವ ಧನದಾಹಿಗಳು ಒಂದೆಡೆಯಾದರೆ 'ಅನರ್ಥವಾದ' ಬದುಕನ್ನು ಬದುಕಿರುವವರು ಕೆಲವರಿದ್ದಾರೆ. ನನ್ನ ಈ 'ಅನರ್ಥವಾದ' ಹುಟ್ಟಿಕೊಂಡಿದ್ದೆ ಈ ಎಲ್ಲಾ ವೈರುಧ್ಯಗಳ ನಡುವೆ. ಸಿಗ್ನಲ್‌ನಲ್ಲಿ ಭಿಕ್ಷೆ ಬೇಡುತ್ತಿದ್ದ ಹುಡುಗಿಯ ಬದುಕು ಬಹುಮುಖ್ಯವಾಗಿ ಈ ವಾದದ ಹುಟ್ಟಿಗೆ ಪ್ರೇರಣೆ ನೀಡಿತು. ಬದುಕು ಎಂದರೇನು? ದೊಡ್ಡದೊಂದು ಬಂಗಲೆ ಅದನ್ನ ಕಾಯಲು ಡಾಬರ್‌ಮನ್, ಆಲ್ಸೆಸ್ಸಿಯನ್, ಮುದೋಳ್ ತಳಿಯ ದೊಡ್ಡ ದೊಡ್ಡನಾಯಿಗಳು, ಸಾಲದಕ್ಕೆ ಗೇಟಿನ ಹೊರಗಡೆ ಇರುವ ವಾಚ್‌ಮನ್‌ಗಳು. ಫ್ಯಾಕ್ಟರಿ, ಷೇರುಗಳು, ಮನೆಯ ಮುಂದಿನ ಕಾರುಗಳು ಇವಿಷ್ಟೇನಾ? ಬರುವ ಹಣದ ಲೆಕ್ಕಚಾರ, ಯಾರಿಂದ ಎಷ್ಟು ಸುಲಿಗೆ ಮಾಡಿಕೊಳ್ಳುವ ಅಂದಾಜು... ಇತ್ಯಾದಿಗಳು. ಮಾತ್ರ ಬದುಕು? ಅಂಬಾನಿ ಟಾಟ, ಬಿರ್ಲಾಗಳು ನೆಲಮುಟ್ಟದ ಜನರು ಕರ್ನಾಟಕದ ಸಂಪತ್ತು ಕೊಳ್ಳೆ ಹೊಡೆಯುತ್ತಿರುವವರು ಆರಾಮವಾಗಿದ್ದಾರ. ಬರಿ ದುಡ್ಡಷ್ಟೇ ಜೀವನವೇ? ಬಸವಣ್ಣನ ಸಮಾನತೆ ಅರ್ಥವೇನು ಹಾಗಾದರೆ. ಯಾವ ಮಠಗಳು ಬಸವತತ್ವಗಳನ್ನು ಅನುಷ್ಠಾನಕ್ಕೆ

ತರಬೇಕಿತ್ತು. ಅವೇ ಇವತ್ತು ಸಂಪತ್ತಿನ ಕೇಂದ್ರಗಳಾಗಿ ಅನೈತಿಕತೆಯ ಹಾದಿಯನ್ನ ಹಿಡಿದು ರಾಜಕಾರಣವನ್ನು ನಿಯಂತ್ರಿಸುತ್ತಿವೆ. ಮಂತ್ರಿಗಳ ಹಣವನ್ನ ಮುಚ್ಚಿಡುವ ಸೇಫ್‌ಲಾಕರ್‌ಗಳಾಗುತ್ತಿವೆ, ಇನ್ನೂ ಕಾನೂನು, ಸರ್ಕಾರ ಅಧಿಕಾರ ಎಲ್ಲವೂ ಗೌಣ ಇದಕ್ಕೆ ಪರಿಹಾರವೇ ಇಲ್ಲವೆ ಹಾಗಾದರೆ. ಬಹುಶಃ ಯಾವ ಪರಿಹಾರವೂ ಇಲ್ಲ. ಏಕೆಂದರೆ ಜಾತಿಯ ಬಲಾಬಲದ ಮೇಲೆ ನಿರ್ಣಯವಾಗುವ ಅಧಿಕಾರ, ಹಣ ಮತ್ತು ಸ್ಥಾನಗಳು ಏನನು ಜೀರ್ಣಿಸಿಕೊಳ್ಳಲಾರವು. ಜನಸಾಮಾನ್ಯನ ಬದುಕು ಶತಶತಮಾನಗಳಿಂದ ಯಾವ ರೀತಿ ಇತ್ತೊ ಇವತ್ತು ಹಾಗೆಯೇ ಇದೆ.

ಒಂದು ಕಡೆ ಮಠಗಳ ರಾಜಕಾರಣ ಮತ್ತೊಂದೆಡೆ ಜಾತಿರಾಜಕಾರಣ ಇದರ ನಡುವೆ ಸಮಾನತೆಯ ಕನಸು ನನಸಾಗುವುದು ಯಾವಾಗ ? ಶಾಂತವೇರಿ ಗೋಪಾಲಗೌಡರ ಹೆಸರು ಹೇಳಿಕೊಂಡೆ ರಾಜಕಾರಣದಲ್ಲಿ ರಾಜಕಾರಣ ಮಾಡುವ ಜನರಿಗೆ ಬಡವರ ಕೂಲಿಗಳ ನೋವು ಅರ್ಥವಾಗುವುದು ಯಾವಾಗ? ಈ ಹಿನ್ನೆಲೆಯಲ್ಲಿ ಸಿದ್ಧಾಂತಗಳು, ವಾದಗಳು ಹೊಸ ಹೊಸ ಆಯಾಮಗಳನ್ನು ನೀಡುತ್ತವೆ. ನನ್ನ ಬರವಣಿಗೆಯಲ್ಲಿ ಪ್ರತಿಪಾದಿತವಾಗಿರುವ 'ಅನರ್ಥವಾದ' ಬಹು ಪ್ರಸ್ತುತವಾದ್ದದು. Secular ಎಂದು ಮೇಲ್ನೋಟಕ್ಕೆ ಹೇಳಿಕೊಳ್ಳುವ ಜನರು Most commanads ಎಂಬ ಸತ್ಯ ಈ ಜನರಿಗೆ ಗೊತ್ತಿಲ್ಲ. ಈಗ ಏನಿದ್ದರೂ, ಅವಕಾಶವಾದದ ಕಾಲ. ಬಾಡಿಗೆ ಜನರು, ರಾಜಕಾರಣಿಯ ಭಾಷಣ ಕೇಳಲು ಬರುತ್ತಾರೆ ಭಾಷಣ ಕೆಡಿಸಲು ಬರುತ್ತಾರೆ, ದಂಗೆ ಏಳಲು ಸಿಗುತ್ತಾರೆ.

ಎಲ್ಲಾ ಕೆಲಸಕ್ಕೂ ಸಿಗುತ್ತಾರೆ ಹೀಗಾಗಿ, ಈ ಜನರು ಸುಧಾರಣೆಯಾಗಬೇಕಾಗಿರುವುದು ಅನಿವಾರ್ಯವಾಗಿದೆ. ಈ ಪುಸ್ತಕದಲ್ಲಿಯ ಕೆಲವು ವಿಷಯಗಳು ಚಿಂತನೆಗೆ ಗ್ರಾಸವಾದರೆ ಬರವಣಿಗೆ ಸಾರ್ಥಕವಾದೀತು. ಪುಸ್ತಕ ಕುರಿತು ನಾಲ್ಕು ಮಾತುಗಳನ್ನು ಬರೆದ ಪ್ರೊ. ಲಿಂಗದೇವರು ಹಳೇಮನೆ, ಮುಖಪುಟ ರಚಿಸಿದ ಮುರಳಿಧರ ರಾಠೋಡ್ ಮುದ್ರಿಸಿದ ಉದಯರವಿ ಪ್ರಿಂಟರ್ಸ್‌ಗೆ ನಾನು ಚಿರಋಣಿ.

ನನ್ನ ನೇರ ಆಲೋಚನೆ ಈ ಬದುಕೆ ಸ್ಫೂರ್ತಿ. ನಾನು ಅನುಭವಿಸಿದ ನೋವು, ಅನುಭವಸುತ್ತಿರುವ ಹಿಂಸೆ, ಕ್ಷುಲ್ಲಕ ಜಾತಿ ರಾಜಕಾರಣದ ಹೆಸರಲ್ಲಿ ಅವಕಾಶ ಕಬಳಿಸುತ್ತಿರುವ ತುಳಿಯುತ್ತಿರುವ ಜನರ ನಡುವೆಯೇ ಬದುಕನ್ನು ವಿಸ್ತರಿಸಿಬೇಕಾಗಿದೆ. ಒಂದು ವ್ಯವಸ್ಥೆಯಲ್ಲಿ ಕೆಲಸಮಾಡುವಾಗ ಅಡ್ಡಿಯಾಗುವ ಅನೇಕ ಸನ್ನಿವೇಶಗಳು ನಮ್ಮ ಬದುಕಿನ ದಿಕ್ಕನ್ನೇ ಬದಲಿಸುತ್ತವೆ. ಈ ಎಲ್ಲಾ ಸಂದರ್ಭಗಳು ಬರವಣಿಗೆ ಒತ್ತಾಸೆಯಾಗಿವೆ.

ಡಾ. ಶಿರಗಾನಹಳ್ಳಿ ಶಾಂತನಾಯ್ಕ.

ಪರಿವಿಡಿ

ಸಾಮಾಜಿಕ ಚಿಂತನೆಯನ್ನು ಸ್ಫೋಟಿಸಿದ ಎಂ. ಕೆ. ಇಂದಿರಾ ಅವರ ಕೃತಿಗಳು

ಎಂ.ಕೆ. ಇಂದಿರಾ ಕನ್ನಡದ ಅಪರೂಪದ ಹಿರಿಯ ಲೇಖಕಿ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಂದಿರಾ ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಕನ್ನಡಿಗರಿಗೆ ಆತ್ಮೀಯರಾಗಿದ್ದಾರೆ. ಇಂದಿರಾ ಅವರು ಬರೆವಣಿಗೆ ಆರಂಭಿಸಿದಾಗ ಕರ್ನಾಟಕದ ನೆಲ ಸಾಮಾಜಿಕ ಸಂಕ್ರಮಣಾವಧಿಯಲ್ಲಿತ್ತು. ಒಂದೆಡೆ ಪರಂಪರಾಗತ ಮೌಲ್ಯಗಳ ಒತ್ತಡ, ಇನ್ನೊಂದೆಡೆ ಪಾಶ್ಚಾತ್ಯ ಸಂಸ್ಕೃತಿಯ ಹೇರಿಕೆ. ಎರಡೂ ಘಟನೆಗಳು ಇಂದಿರಾ ಅವರ ಮೇಲೆ ಅಷ್ಟೇ ಪ್ರಮಾಣದ ಪ್ರಭಾವ ಬೀರಿದ್ದವು. ಅವರ ಎಲ್ಲಾ ಕಾದಂಬರಿಗಳಲ್ಲಿ 'ಹೆಣ್ಣು' ಮತ್ತು 'ಹೆಣ್ಣಿನ ಬದುಕು' ಪ್ರಧಾನವಾಗಿದ್ದು, ಮಹಿಳಾ ಪ್ರಜ್ಞೆಯ ಸಾಂಪ್ರದಾಯಿಕ ಸ್ವರೂಪ, ಅದರಲ್ಲೂ ಸ್ತ್ರೀ ವಿಷಯದಲ್ಲಿ ಬದಲಾಗುತ್ತಿರುವ ಸಾಮಾಜಿಕ ಧೋರಣೆಗಳನ್ನು ಕಾಣಬಹುದು. "ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಅನುಭವ, ಅಭಿವ್ಯಕ್ತಿಗಳಿಗೆ ತನ್ನದೇ ಆದ ವಿಶಿಷ್ಟ ಛಾಪು ಇರಲು ಸಾಧ್ಯ" ಎನ್ನುವ ಬರಗೂರು ರಾಮಚಂದ್ರಪ್ಪನವರ ಮಾತು ಸಮಂಜಸವಾದದ್ದು. ಮಹಿಳಾ ಸಾಹಿತ್ಯ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯ ಹಿನ್ನೆಲೆಯಲ್ಲಿಯೇ ಬೆಳೆದು ಬಂದದ್ದು. ನಾಲ್ಕು ಗೋಡೆಗಳ ಮಧ್ಯೆ ತನ್ನ ಜೀವನ ರೂಪಿಸಿಕೊಂಡು ಬಾಳುತ್ತಿದ್ದ ಮಹಿಳೆ ಈಗ ಎಲ್ಲಾ ರಂಗಗಳಲ್ಲೂ ಪ್ರವೇಶಿಸಿದ್ದಾಳೆ. ಇಂದಿರಾ ತಮ್ಮ ಕಾದಂಬರಿಗಳಲ್ಲಿ ಆಧುನಿಕ ಹೆಣ್ಣಿನ ಬದುಕನ್ನು ಚಿತ್ರಿಸದೆ, ಸಾಂಪ್ರಾದಾಯಿಕ ಹಿಂದೂ ಸಮಾಜದಲ್ಲಿ ಮಹಿಳೆ ಅನುಭವಿಸಿದ ಪಾರತಂತ್ರ್ಯ, ಶೋಷಣೆಗಳ ದಯನೀಯ ಸ್ಥಿತಿಯನ್ನು ದಟ್ಟವಾದ ಸಾಂಸ್ಕೃತಿಕ ವಿವರಗಳಲ್ಲಿ ಹಿಡಿದಿಡುವ ಪ್ರಗತಿಶೀಲ ಸಂದರ್ಭದ ಮಹತ್ವದ ಕಾದಂಬರಿಗಾರ್ತಿ. ಪುರುಷಪ್ರಧಾನ ಮೌಲ್ಯಗಳನ್ನು ಒಳಗೊಂಡ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಬಗೆಗಿನ ಸಾಮಾಜಿಕ ಗ್ರಹಿಕೆಗಳನ್ನು ವಾಸ್ತವಿಕತೆಯಿಂದ ಚಿತ್ರಿಸುತ್ತಲೇ ಆಧುನಿಕ ಶಿಕ್ಷಣ ಹಾಗೂ ಮಾನವೀಯ ಸಂವೇದನೆಗಳ ನೆಲೆಯಿಂದ ಮಹಿಳಾ ವಿಷಯದಲ್ಲಿ ಬದಲಾಗುತ್ತಿರುವ ಧೋರಣೆಗಳನ್ನು ಒಳಗೊಂಡಿರುವ ಅವರ ವಿಚಾರಗಳು ಪ್ರಗತಿಶೀಲ ಕಾಲಕ್ಕೆ ಸೇರಿವೆ.

ಇಂದಿರಾ ಅವರು ಸಂಪ್ರದಾಯ ವಿರೋಧಿಸುತ್ತಲೆ ಸಾಮಜಿಕ ಕಾಳಜಿ ಹೊಂದಿದವರು ಪ್ರಾಮಾಣಿಕರು, ಕರ್ತವ್ಯನಿಷ್ಠರು, ಪ್ರಗತಿಪರಧೋರಣೆಯುಳ್ಳವರು, ಮಾನವೀಯ ಹೃದಯುವನ್ನುಳ್ಳವರು. ಮಾನವರಲ್ಲೇ ದೇವರು ದಾನವರನ್ನು ಗುರುತಿಸುತ್ತಾರೆ. ಮನರಂಜನೆಯೊಂದೇ ಅವರ ಕಾದಂಬರಿಗಳ ಉದ್ದೇಶವಲ್ಲ. ಓದುಗರ ಮನಸ್ಸಿನ ಮೇಲೆ ಒಳ್ಳೆ ಪರಿಣಾಮಬೀರಿ, ಸಮಾಜದ ಸಮಸ್ಯೆಗಳ ಮೇಲೆ ಬೆಳಕು ಬೀರಿ; ಪರಿಹಾರ ಸೂಚಿಸುವುದೇ ಅವರ ಸಾಹಿತ್ಯ ರಚನೆಯ ಉದ್ದೇಶ. "ಎಂ.ಕೆ.ಇಂದಿರಾ ಅವರಿಗೆ ದಟ್ಟವಾದ ಜೀವನಾನುಭವವಿದೆ, ಅಂತೆಯೇ ಅವರ ಕೃತಿಗಳು ಪಾತ್ರ ವೈವಿಧ್ಯಕ್ಕೂ ಹೆಸರಾಗಿವೆ." ಅನುಪಮಾ ನಿರಂಜನ ಅವರ ಈ ಹೇಳಿಕೆ ನಿಜವಾಗಿದೆ. ಏಕೆಂದರೆ ಅವರ ಎಲ್ಲಾ ಕೃತಿಗಳಲ್ಲೂ ಸಮಾಜದ ವಿವಿಧ ಸಮಸ್ಯೆಗಳನ್ನು ಕುರಿತ ಗಂಭೀರ ಚಿಂತನೆ ಇದೆ. ಸಂಪ್ರದಾಯ, ಮಡಿವಂತಿಕೆಯ ಪರಿಸರದಲ್ಲೇ ಬಾಲ್ಯ ಕಳೆದ ಇಂದಿರಾ ಬ್ರಾಹ್ಮಣ ಸಮಾಜದ ಅಜ್ಞಾನ, ಅಂಧಶ್ರದ್ಧೆ ಕುರುಡು ಕಟ್ಟಳೆಗಳನ್ನು, ಅವೈಚಾರಿಕತೆಯನ್ನು ಟೀಕಿಸಿದ್ದಾರೆ. ಪುರುಷ ಸಮಾಜದ ಮಠಮಾನ್ಯಗಳು ಸ್ತ್ರೀಯರ ಬಗೆಗೆ ತೋರಿದ ಪಕ್ಷಪಾತ ನೀತಿಯನ್ನು ಅಮಾನುಷ ವರ್ತನೆಯನ್ನು ಅವರ ಡಾಂಭಿಕತೆಯನ್ನು ಟೀಕಿಸಿದ್ದಾರೆ. 'ಫಣಿಯಮ್ಮ ಕೃತಿ' ಇಡಿಯಾಗಿ ನಮ್ಮ ಸಮಾಜದ ವ್ಯವಸ್ಥೆಗೆ ತೋರಿದ ಪ್ರತಿಭಟನೆಯಾಗಿದೆ.

ಆರೋಗ್ಯಕರ ಸಮಾಜದ ಒಳಗುಟ್ಟನ್ನು ತಮ್ಮ ಕೃತಿಗಳ ಮೂಲಕ ಅರುಹಿ, ಸಾರ್ವತ್ರಿಕ, ಶಾಶ್ವತ ಮಾನವೀಯ ಮೌಲ್ಯಗಳನ್ನು ತಮ್ಮ ಕೃತಿಗಳಲ್ಲಿ ಬಿಂಬಿಸಿರುವ ಒಳಗೊಳಗೆ ಕುದಿವ ಬೇಗುದಿಯನ್ನು ಶಾಂತಚಿತ್ತದಿಂದಲೆ ಹೊರಹಾಕಿದ್ದಾರೆ. ಈ ಹಿನ್ನೆಲೆಯಲ್ಲಿ ಡಾ. ರಂ. ಶ್ರೀ. ಮುಗಳಿಯವರ ಅಭಿಪ್ರಾಯ ಹೀಗಿದೆ. "ಇಂದಿರಾ ಕರ್ನಾಟಕದ ಲೇಖಕಿಯರಲ್ಲಿ ಮನ್ನಣೆಯ ಸ್ಥಾನವನ್ನು, ತಮ್ಮ ಕತೆ, ಕಾದಂಬರಿ ಗುಣಮಟ್ಟದಿಂದ ಪಡೆದಿದ್ದ ಸುದೀರ್ಘ ಜೀವನಾನುಭವ ಮತ್ತು ಸಾಧನೆಗಳಿಂದ ಅವರು ತಮ್ಮ ಕಥನ ಕಲೆಯಲ್ಲಿ ಉತ್ತರೋತ್ತರ ಪ್ರಗತಿಯನ್ನು ಹೊಂದುತ್ತಲಿರು ವುದು ಹೆಮ್ಮೆಯ ಸಂಗತಿ. ಫಣಿಯಮ್ಮನನ್ನು ಅವರು ಕೇವಲ ಶೋಕದ ಮೂರ್ತಿಯನ್ನಾಗಿ ಚಿತ್ರಿಸದೆ ಒಂದು ಸಮಾಜೋಪಕಾರಿಯಾದ, ಸಾಂಪ್ರದಾಯಿಕತೆ ಯಿಂದ ಹೊರಬಿದ್ದ ಸ್ತ್ರೀ ಶಕ್ತಿಯ ಪ್ರತೀಕವಾಗಿ ಚಿತ್ರಿಸಿದ್ದು ಅವರ ಹೆಚ್ಚಿನ ಸಾಧನೆ". ಇದು ಇಂದಿರಾ ಅವರ ವಿದ್ವತ್ತಿಗೆ ಸಂದ ಗೌರವ.

ಎಂ.ಕೆ. ಇಂದಿರಾ ತನ್ನ ಕಾಲದ ಸಮಾಜವನ್ನು, ತಾನು ಬದುಕಿದ ಪ್ರದೇಶದ ಪ್ರಾದೇಶಿಕ ಜೀವನವನ್ನು ಸ್ತ್ರೀಯರ ಕುಂದುಕೊರತೆಗಳನ್ನು ತೆರೆದ ಕಣ್ಣಿನಿಂದ ನೋಡಿ ಕನಿಕರ, ಕಳವಳ ಪಟ್ಟು ಆ ಅನುಭವಗಳಿಗೆ ಕಾದಂಬರಿಯಲ್ಲಿ ಅನುಭವಗಳೆಲ್ಲ

ವಾಸ್ತವಿಕವಾದವುಗಳು. ಅವುಗಳಿಗೆ ನಮ್ಮ ಸಮಾಜ ತೋರುತ್ತಿದ್ದ ಅಸಡ್ಡೆ, ಅನಾದರ ಮೊದಲಾದವುಗಳನ್ನು ಎತ್ತಿ ತೋರಿಸಿದ್ದಾರೆ. ಅವರ ಕಾದಂಬರಿಯಲ್ಲಿ ವಿವಿಧ ಮನೋಧರ್ಮ ವ್ಯಕ್ತಿ ಚಿತ್ರಣಗಳು ಮೂಡಿಬಂದಿವೆ. ಇಂದಿರಾ ಅವರ ವಿಲಾಪ, ಸರಳತೆ, ಕಲಾಭಿರುಚಿ, ದಿಟ್ಟತನ, ಮೊದಲಾದ ಗುಣಗಳನ್ನು ಕೌಟುಂಬಿಕ ಕಾದಂಬರಿಗಳಲ್ಲಿ, ಸರಸ, ದಾಂಪತ್ಯ, ಕುಟುಂಬದ ಸುಖದುಃಖ, ಹೆಣ್ಣಿನ ಆಕಾಂಕ್ಷೆ, ಮಕ್ಕಳಿಲ್ಲದವರ ಕೊರಗು, ಭಗ್ನ ಪ್ರಣಯ, ಬಾಲ್ಯವಿವಾಹ, ಬಾಲ್ಯವಿಧವೆಯರ ಚಿತ್ರಣ, ಅಂತರ್ಜಾತಿ ವಿವಾಹದ ಸಮಸ್ಯೆ, ವೇಶ್ಯಾಸಮಸ್ಯೆ ಮೊದಲಾದ ಸ್ತ್ರೀ ಸಮಸ್ಯೆಗಳನ್ನು ಮನೋವಿಹಂಗಮವಾಗಿ ವರ್ಣಿಸಿದ್ದಾರೆ.

ಇಂದಿರಾ ಅವರು ಬರೆದ ಕಾದಂಬರಿಗಳು ವೈವಿಧ್ಯಮಯವಾಗಿದ್ದು, ಅವುಗಳನ್ನು ಮೂರು ಪ್ರಮುಖ ಗುಂಪುಗಳನ್ನಾಗಿ ವಿಂಗಡಿಸಬಹುದು.

ಅ. ವ್ಯಕ್ತಿ ಪ್ರಧಾನವಾದ ಕಥಾವಸ್ತುವಿನ ಕಾದಂಬರಿಗಳು

ಆ. ಕೌಟುಂಬಿಕ ಕಾದಂಬರಿಗಳು

ಇ. ಸಾಮಾಜಿಕ ಕಾದಂಬರಿಗಳು

ವ್ಯಕ್ತಿಪ್ರಧಾನ ಕಾದಂಬರಿಗಳು.

ಪ್ರೊ. ಎಲ್.ಎಸ್. ಶೇಷಗಿರಿರಾವ್ ಪ್ರಕಾರ "ಪಾತ್ರ ಪ್ರಧಾನವಾದ ಕಾದಂಬರಿಯಲ್ಲಿ ಪಾತ್ರನಿರೂಪಣೆ ಹೇಗೋ ಹಾಗೆ ವಸ್ತು ಹರಿಯುತ್ತದೆ. ಪಾತ್ರಗಳ ಸಂಪೂರ್ಣ ನಿರೂಪಣೆಯಾದಾಗ ಕಾದಂಬರಿ ಮುಕ್ತಾಯದತ್ತ ಸಾಗುತ್ತದೆ. ಇಂತಹ ಕೃತಿಗಳಲ್ಲಿ ಕಾದಂಬರಿಕಾರ ಆರಿಸುವ ಮುಕ್ತಾಯವನ್ನು ಬಿಟ್ಟು ಬೇರೊಂದು ಮುಕ್ತಾಯವನ್ನು ಯೋಚಿಸಲು ಸಾಧ್ಯ. ಒಂದು ಪ್ರಧಾನ ವ್ಯಕ್ತಿಯ ಪಾತ್ರದ ನಿರೂಪಣೆಗೆ ಪೋಷಕವಾದ ವ್ಯಕ್ತಿಗಳು." ಇಂದಿರಾ ಅವರ ಅನೇಕ ಕಾದಂಬರಿಗಳು ಮೇಲಿನ ವಿಷಯಕ್ಕೆ ಪೂರಕವಾಗಿವೆ. ಅವರ ಜಾಲಾ, ನಾಗವೀಣಾ, ಅಮರಾವತಿ, ಕೊಚುಭಟ್ಟ, ಗುಂಡ, ಗಿರಿಬಾಲೆ, ಆತ್ಮಸಖಿ, ಸೂತ್ರಧಾರಿ, ಕಲಾದರ್ಶಿ, ತೆಗ್ಗಿನಮನೆ ಸೀತೆ, ಇವು ಪಾತ್ರ ಪ್ರಧಾನವಾದ ವ್ಯಕ್ತಿ ಜೀವನವೇ ಕೇಂದ್ರಬಿಂದುವಾದ ಕಾದಂಬರಿಗಳು.

ಜಾಲ ಹಾಗೂ ನಾಗವೀಣಾ

ಈ ಎರಡೂ ಕಾದಂಬರಿಗಳಲ್ಲಿ ಕಾರಣಾಂತರದಿಂದಾಗಿ ಅನೈತಿಕತೆ ಹಾದಿಹಿಡಿದ ಹೆಣ್ಣಿನ ಬದುಕಿನ ಚಿತ್ರಣವಿದೆ. ಮಾನವ ಜೀವನವೇ ಒಂದು ಜಾಲ. ಕೆಲವರು ಮತ್ತೊಬ್ಬರಿಗಾಗಿ ಹರಡಿಕೊಂಡ ಜಾಲದಲ್ಲಿ ತಾವೇ ಸಿಕ್ಕಿಬಿದ್ದು ಒದ್ದಾಡುತ್ತಾರೆ.

'ಪಾರ್ವತಿ' ಅನೈತಿಕ ನಡತೆಯಿಂದಾಗಿ ತನ್ನ ಬದುಕಿನ ಅಧಃಪತನಕ್ಕೆ ತಾನೇ ಕಾರಣಳಾಗುತ್ತಾಳೆ. ಅವಳ ಪತನಕ್ಕೆ ಅನೈತಿಕ ಹಾದಿ ತುಳಿಯುವಿಕೆಗೆ ಪುರುಷರೆ ಕಾರಣ ಎಂಬ ಸತ್ಯ ತಿಳಿಯುವುದರೊಳಗೆ ಬಹಳ ದೂರ ಕ್ರಮಿಸಿರುತ್ತಾಳೆ. ಕಾಲರಾಯನ ಸೆಳವಿಗೆ ಸಿಲುಕಿದ ಪಾರ್ವತಿ ಸ್ವತಃ ಮಗನನ್ನೆ ಮೋಹಿಸುವ ಮಟ್ಟಕ್ಕೆ ಮುಟ್ಟುತ್ತಾಳೆ. ದೇವರು, ಧರ್ಮ, ಶೀಲ.ಸಂಪ್ರದಾಯ ಇವುಗಳಲ್ಲಿ ನಂಬಿಕೆ ಕಳೆದುಕೊಂಡ ಪಾಪ ಪ್ರಜ್ಞೆಯಿಂದ ಬಳಲುತ್ತಾಳೆ.

ಸ್ತ್ರೀ ಒಮ್ಮೆ ತಿಳಿದೋ, ತಿಳಿಯದೆಯೋ ಕಾಲುಜಾರಿದರೆ ಹಿಂದೂ ಸಮಾಜ ಅವಳನ್ನು ತಿರಸ್ಕರಿಸುತ್ತದೆ. ಆದರೆ ಕ್ರೈಸ್ತಧರ್ಮ ಮಾನವೀಯತೆಯಿಂದ ಆ ಹೆಣ್ಣಿಗೊಂದು ಜೀವನ ಕೊಡುತ್ತದೆ. ಒಬ್ಬ ವ್ಯಕ್ತಿ ತಪ್ಪು ಮಾಡಿದಾಗ ಅದರ ಹಿನ್ನೆಲೆಯನ್ನು ಅರಿತು ಮಾನವೀಯತೆಯ ದೃಷ್ಟಿಯಿಂದ ನೋಡಬೇಕು. ಆದರೆ 'ಜಾಲ' ಕಾದಂಬರಿಯ ನಾಯಕಿ 'ಪಾರ್ವತಿ' ಪುರುಷ ಪ್ರಧಾನ ಸಮಾಜದಲ್ಲಿ ನಲುಗಿಹೋಗುತ್ತಾಳೆ.

ಅವರ 'ನಾಗವೀಣಾ' ಕಾದಂಬರಿಯೂ ಕೂಡ ಹೆಣ್ಣಿಗೆ ಆಗುವ ಅವಮಾನ ಹಿಂಸೆ ಶೋಷಣೆಯನ್ನು ಪ್ರತಿಬಿಂಬಿಸುತ್ತದೆ. 'ಗುಂಡ ', 'ಕೂಚು ಬಟ್ಟ', 'ಅಮರಾವತಿ', 'ಕಲಾದರ್ಶಿ', 'ಸೂತ್ರಧಾರಿ' ಒಂದೇ ಆಶಯವನ್ನ ಹೊರಹಾಕುವ ಕಾದಂಬರಿ ಗಳಾಗಿದ್ದು, ವ್ಯಕ್ತಿಪ್ರಧಾನ ವಿಷಯವನ್ನೇ ಹೊಂದಿದವುಗಳು.

ಗಿರಿಬಾಲೆ (೧೯೬೯)

'ಸ್ತ್ರೀ' ಇರುವುದೇ ತ್ಯಾಗಮಾಡಲು. ಸಹನೆ, ಔದಾರ್ಯ, ಮುಗ್ಧತೆ ಸಹಜವಾಗಿಯೇ ಬಳುವಳಿಯಾಗಿ ಬಂದ ಗುಣಗಳು. ಬದುಕಿನುದ್ದಕ್ಕೂ ನೋವು, ಸಂಕಟಗಳನ್ನೇ ಅನುಭವಿಸಿ ಯಾವುದೇ ಬಗೆಯ ಫಲಾಪೇಕ್ಷೆಯಿಲ್ಲದೇ ತನ್ನ ಕರ್ತವ್ಯ ಮುಗಿಸಿ ಅದೇ ನೋವಲ್ಲಿಯೇ ಕಣ್ಮರೆಯಾಗಿ ಹೋದ ಹೆಣ್ಣುಗಳ ಉದಾಹರಣೆ ಸಾಕಷ್ಟಿವೆ.

ಗಿರಿಬಾಲೆಯಲ್ಲಿ ಬರುವ ಶಂಕರಿಯೂ ಸಹ ಒಬ್ಬ ಅಸಹಾಯಕ ಮುಗ್ಧಜೀವಿ. ಮನೆಯೇ ಅವಳ ಸರ್ವಸ್ವ, ತಂದೆಮನೆಯಲ್ಲಿ ಆಯಿತು ಗಂಡನ ಮನೆಯಲ್ಲಿ, ಅವಳಿಗೆ ಹೊರಗಿನ ಪ್ರಪಂಚವೇ ತಿಳಿಯದು. ತನ್ನ ಹಿರಿಯರ ಆಚಾರ ವಿಚಾರಗಳು, ಶೀಲ,ಸಂಪ್ರದಾಯಗಳು, ಸತ್ಯ, ಧರ್ಮ, ಕರ್ತವ್ಯನಿಷ್ಠೆ ಇವೇ ತನ್ನ ಜೀವನದ ಆಶಯಗಳೆಂದು ನಂಬಿದವಳು.

ಕಾದಂಬರಿಯ ಕತೆ ಆರಂಭವಾಗುವುದೇ ಪ್ರಾಂತ್ಯದ ಹಳ್ಳಿಗಳ ಕಡೆಗೆ ಬಸ್ಸುಗಳ ಓಡಾಟವಿಲ್ಲದ ಕಾಲದಲ್ಲಿ. ಬಾಲ್ಯವಿವಾಹ, ಬಹುಪತ್ನಿತ್ವ, ವೇಶ್ಯಾವಾಟಿಕೆ,

ಸಂಪ್ರದಾಯನಿಷ್ಠೆ ಪ್ರಬಲವಾಗಿದ್ದವು. ಶಂಕರಿ ಮದುವೆಯೂ ಬಾಲ್ಯದಲ್ಲೇ ಆಯಿತು. "ಗಂಡನಿಗೆ ಎಂದೂ ಎದುರು ಹೇಳಬೇಡ, ಹಬ್ಬ, ಹರಿದಿನ ಸರಿಯಾಗಿ ನಡೆಸು, ಮನೆಗೆ ಬಂದವರನ್ನು ಉಪಚರಿಸು, ಪೂಜೆ.ಪುರಸ್ಕಾರ ಎಂದೂ ಬೀಡಬೇಡ. ನಿನ್ನ ಕಷ್ಟ ಎಂದಾದರೂ ಪರಿಹಾರವಾದೀತು." ಎಂದು ಅವಳ ಅತ್ತೆ ಬುದ್ಧಿವಾದ ಹೇಳುತ್ತಿದ್ದಳು. ಈ ಮಾತುಗಳೆ ಅವಳು ಜೀವನ ಪರ್ಯಂತ ಗೀತೋಪದೇಶದಂತೆ ಪಾಲಿಸುತ್ತಾ, ಅವಳನ್ನು ದನಕ್ಕೆ ಬಡಿದಂತೆ ಬಡಿದರೂ ಸುಮ್ಮನಿರುತ್ತಾಳೆ. ಅವನು ಎಲ್ಲಾ ಸುಖಭೋಗ ಅನುಭವಿಸುತ್ತಿದ್ದರೂ ನಿರ್ಲಿಪ್ತಳಾಗುತ್ತಾಳೆ.

ಶಂಕರಿಯ ಗಂಡ ವೆಂಕಟೇಶ ಸೂಳೆಯರ ಸಹವಾಸ ಮಾಡಿದರೂ ತನ್ನ ಹಳ್ಳಿಯ 'ಹಗಲಮನೆ' ಸಾಹುಕಾರ ಸೂಳೆಯನ್ನಿಟ್ಟುಕೊಂಡಂತೆ ಗಂಡನೂ ಇಟ್ಟುಕೊಂಡಿರ ಬಹುದೆಂದು ಭಾವಿಸುತ್ತಾಳೆ. ಅಲ್ಲದೆ ಗಂಡನೆನಿಸಿದವನು ಹೆಂಡತಿಯ ಮೇಲೆ ದರ್ಪ ದಬ್ಬಾಳಿಕೆ, ಹೊಡೆಯುವುದು ಸಾಮನ್ಯವೆಂದು ತಿಳಿದು ಅವನು ಹೊಡೆಯುವುದನ್ನು ಮೌನವಾಗಿ ಸಹಿಸಿಕೊಳ್ಳುತ್ತಾಳೆ. ಏಕೆಂದರೆ ಪುರುಷನೇ ಶ್ರೇಷ್ಠ, ಹೆಣ್ಣು ಕನಿಷ್ಠ ಎನ್ನುವ ಕಾಲ ಅದಾಗಿತ್ತು. "ಅವನು ಹೊಡೀಲಿ, ಬೈಲಿ, ಬೇಕಾದ್ದು ಮಾಡ್ಲಿ, ಅವನ ಜೊತೆ ಮಾತ್ರ ಬಿಟ್ಟು ಬರಬ್ಯಾಡ". ಎನ್ನುವ 'ಗಿರಿಯಮ್ಮನ' ಮಾತು ಹೆಣ್ಣಿಗೆ ಗಂಡನ ಮನೆ ಎಷ್ಟೊಂದು ಅನಿವಾರ್ಯವಾಗಿತ್ತು. ತಮ್ಮ ಸಂಕಟವನ್ನೆ ತಮ್ಮ ಮುಂದಿನ ಪೀಳಿಗೆಯ ಹೆಣ್ಣುಗಳಿಗೆ ಯಥಾವತ್ತಾಗಿ ಹೇಳುವ ಹಿರಿಯರು ಒಪ್ಪಿಕೊಳ್ಳುವ ಸಂಸ್ಕೃತಿಯನ್ನೆ ಧಾರೆ ಎರೆಯುತ್ತಾರೆ. ಅವನು ಹೊಡೆದ್ರ ಹೊಡೀಲಿ, ತೆಪ್ಪಗಿದ್ಬಿಡು, ನಿನ್ನ ಕೆಲ್ಸ ನೀನು ಮಾಡ್ಕಂಡಿರು, ಎಷ್ಟು ದಿನ ಹಾರ್‍ಯಾಡ್ಯಾನು, ಹೆಣ್ಣಾದೋಳು ಸಹಿಸ್ಕೋಬೇಕು" ಎಂದು ಹಿರಿಯ ದುಗ್ಗಜ್ಜಿ ಹೇಳುವ ಮಾತು ಮೊದಲೇ ಸಹಿಸಿ ರೋಸಿಹೋದ ಶಂಕರಿಗೆ ಮತ್ತೆ ಅಂಥಹವೇ ಮಾತುಗಳಿಂದ ಹೆಣ್ಣು ಹುಟ್ಟಿದ್ದೆ ಪುರುಷನ ಎಲ್ಲಾ ತಪ್ಪುಗಳನ್ನು ಕ್ಷಮಿಸಲು, ಬರಿ ಹಿಂಸೆಯನ್ನೇ ಅನುಭವಿಸಲು ಮತ್ತು ಗೃಹಿಣಿ ಧರ್ಮವನ್ನು ಆಚರಿಸಲು ಎಂದು ತಿಳಿದು ಮನಸ್ಸನ್ನು ಗಟ್ಟಿಮಾಡಿಕೊಳ್ಳುತ್ತಾಳೆ.

ಹೆಂಡತಿಯ ವಿರುದ್ಧ ಎಷ್ಟೊಂದು ಕಠಿಣವಾಗಿ ಹೃದಯ ಹೀನವಾಗಿ ವೆಂಕಟೇಶ ನಡೆದುಕೊಂಡರೆ, ತನಗೆ ಮಕ್ಕಳಾಗುವುದಿಲ್ಲ ಎಂದು ತಿಳಿದಾಗ ತನ್ನಿಂದಾಗಿ ಗಂಡನ ಬದುಕು ಬರಡಾಗಬಾರದೆಂದು ಗಂಡನಿಗೆ ಮತ್ತೊಂದು ಮದುವೆಯಾಗಲು ಪ್ರೇರೇಪಿಸಿ ಅವನು ಮದುವೆಯಾಗಿ ಮಗುವನ್ನು ಪಡೆದಾಗ ತಾನೇ ತಾಯಿಯಾದಷ್ಟು ಸಂತೋಷ ಪಡುತ್ತಾಳೆ.

ತಾನು ವಿದ್ಯೆ ಕಲಿತು, ವ್ಯಾಪಾರ ಮಾಡಿ ಶ್ರೀಮಂತನಾಗಬೇಕು ಊರಿನ ಶ್ರೀಮಂತ

ಕೋದಂಡರಾಮಯ್ಯನ ಮಗಳನ್ನು ಮದುವೆಯಾಗಬೇಕೆಂದು ಕನಸುಕಂಡ ವೆಂಕಟೇಶ ಆದಾಗದೆ, ಸಂಪ್ರದಾಯಶೀಲ ಸುಬ್ಬಯ್ಯ.ಮಗ ತಮ್ಮಂತೆ ಶ್ಯಾನುಭೋಗನಾಗ ಬೇಕೆಂದು ಗಿರಿಯಮ್ಮನವರ ಸಂಬಂಧಿ ಅವಿದ್ಯಾವಂತೆ, ಹೆಣ್ಣನ್ನು ತಂದು ಮದುವೆ ಮಾಡಿದಾಗ ಹಠಮಾರಿ ಸ್ವಭಾವದ ವೆಂಕಟೇಶ, ತನ್ನ ಕನಸಿನ ರಾಣಿ 'ನೀಲವೇಣಿ' ಕೈತಪ್ಪಿಹೋಗಿದ್ದು 'ಶಂಕರಿ'ಯಿಂದ ಎಂದು ಬಗೆದು ಅವಳ ವಿರುದ್ಧ ಪ್ರತೀಕಾರದ ಭಾವನೆ ಬೆಳೆಯುತ್ತದೆ. ಅವನ ಛಲಕ್ಕೆ ಬಲಿಪಶುವಾದದ್ದು ಶಂಕರಿ.

ಎಂ.ಕೆ. ಇಂದಿರಾ ಅವರ ಗಿರಿಬಾಲೆ ಸ್ತ್ರೀಯರ ಸಮಸ್ಯೆಗಳನ್ನು ಹೊರಹಾಕಿದರೂ, ಇಲ್ಲಿಯ ನಾಯಕಿ ಯಾವತ್ತೂ ಪ್ರತಿಭಟಿಸುವುದಿಲ್ಲಾ. ಬದಲಾಗಿ ಒಪ್ಪಿಕೊಳ್ಳುವ ಮನೋಭಾವನೆಯನ್ನೇ ಹೊಂದಿದ್ದು, Passive resistance ಗುಣದಿಂದ ಕೂಡಿದ್ದಾಳೆ. ಆ ಕಾಲದ ಸಾಹಿತ್ಯ, ಆ ಕಾಲದ ಸ್ಥಿತಿ, ಪರಿಸರ ಇಂದಿರಾ ಅವರ ಮೇಲೆ ಪ್ರಭಾವ ಬೀರಿದ್ದರಿಂದ ಹಾಗೂ ತಾನು ಹುಟ್ಟಿ ಬೆಳೆದ ಪರಿಸರ ಗಾಢವಾಗಿ ಅವರ ಮೇಲೆ ಪ್ರಭಾವ ಬೀರಿದ್ದರಿಂದ protest ಮಾಡುವುದಿಲ್ಲ,

ಆತ್ಮಸಖಿ. (೧೯೭೦)

ಇಂದಿರಾ ತಮ್ಮ ಸುತ್ತಲ ಪರಿಸರದಿಂದ ತಮ್ಮ ಕಥಾವಸ್ತುವನ್ನು ಆಯ್ಕೆಮಾಡಿ ಕೊಳ್ಳುತ್ತಿದ್ದರು. ಅಂಥಹದ್ದೇ ಒಂದು ಕಥಾವಸ್ತುವನ್ನಾಧರಿಸಿದ ಕಾದಂಬರಿ ಆತ್ಮಸಖಿ. ಅಪ್ಪಟ ಗಾಂಧೀವಾದಿಗಳೂ. ರವೀಂದ್ರನಾಥ ಠಾಕೂರರ ಶಿಷ್ಯ ಅನಂತ ಶರ್ಮಾ.ಅವೈಚಾರಿಕತೆ,ಸಂಪ್ರದಾಯನಿಷ್ಠೆ, ಅಂಧಶ್ರದ್ಧೆ ತುಂಬಿದ ಸಮಾಜದಲ್ಲಿ ಬೆಳೆದರೂ ಎಲ್ಲರಿಗಿಂತ ಭಿನ್ನವಾಗಿ ಸಂಪ್ರದಾಯಸ್ಥ ಸಮಾಜವನ್ನು ದಿಟ್ಟತನದಿಂದ ವಿರೋಧಿಸಿದವರು.

ಬಾಲ್ಯದಲ್ಲೇ ಅನಂತಶರ್ಮಾ ಭಾವಜೀವಿಯಾಗಿದ್ದರು. ಒಂದು ಘಟನೆಯ ಹಿನ್ನೆಲೆಯಲ್ಲಿ ಸಂಪ್ರದಾಯ ವಿರೋಧಿಯಾದರೂ, ಅವರ ಅಕ್ಕನಿಗೆ ಅತ್ತೆಮನೆಯಲ್ಲಿ ಕೊಟ್ಟ ಹಿಂಸೆ ತೀವ್ರವಾದ ಪರಿಣಾಮವನ್ನುಂಟುಮಾಡುತ್ತದೆ. ಗಂಡ ಹೆಂಡತಿಯನ್ನು ಪರಿಚಯಮಾಡಿಕೊಂಡವರೆ ತಮ್ಮ ಜೀವನದ ಹಾದಿಯನ್ನು ಬದಲಿಸಿಕೊಳ್ಳುತ್ತಾರೆ.

ತಾವು ಮದುವೆಯಾದಾಗ ತಮ್ಮ ಹೆಂಡತಿಗೆ ಸಂಪ್ರದಾಯದ ಒಳಹರಿವಿನ ಪರಿಚಯಮಾಡಿಕೊಡುತ್ತಾರೆ. "ಸಾವಿತ್ರು ನಮ್ಮ ಸಮಾಜ ಬಹಳ ಕಠೋರವಾದದ್ದು. ಈಗೆಲ್ಲಾ ರಾಶಿ ರಾಶಿ ಅರಿಶಿಣ ಕುಂಕುಮ ಬಳಿತಾರೆ. ಹೂ, ಒಡವೆ, ವಸ್ತ್ರಾಲಂಕಾರ ಮಾಡುತ್ತಾರೆ. ನಾನೇ ಮೊದಲು ಆಕಸ್ಮಾತ್ ಸಾಯಬಹುದು. ಆಗ ಒಟ್ಟಿಗೆ ಎಲ್ಲವನ್ನೂ ತೆಗೆದು ವಿಧವೆ ವೇಷ ಹಾಕಿ ಕೂರಸ್ತಾರೆ" ಎನ್ನುವ ಅನಂತ ಶರ್ಮಾರ

ಮಾತು ಸಮಾಜದಲ್ಲಿಯ ಸಂಪ್ರದಾಯ ವಿರೋಧವನ್ನು ತೋರಿಸುತ್ತದೆ. ಅನಂತ ಶರ್ಮಾರ ಸಂಪ್ರದಾಯ ವಿರೋಧಿ ಭಾವನೆ, ಸತ್ಯಪ್ರಿಯತೆ. ಮಾನವ ಪ್ರೇಮ, ತ್ಯಾಗ, ಸಹನೆ, ಸಂಯಮ, ಸ್ವದೇಶಾಭಿಮಾನ, ನೈಜವಾಗಿ ನಿರೂಪಿತವಾಗಿದೆ. ಎಂ.ಕೆ. ಇಂದಿರಾ ಸಂಪ್ರದಾಯವನ್ನು ದಿಟ್ಟವಾಗಿ ವಿರೋಧಿಸಿದ್ದರು, ಸಾಂಪ್ರದಾಯಿಕ ಸಮಾಜವನ್ನು ತಮ್ಮ ಕಾದಂಬರಿಗಳಲ್ಲಿ ಪಾತ್ರಗಳು ವಿರೋಧಿಸುವಂತೆ ಬರೆದಿದ್ದಾರೆ. ಸ್ತ್ರೀ ಶೋಷಣೆ, ಸ್ತ್ರೀಯರಿಗಾಗುವ ಅನ್ಯಾಯವನ್ನು ಒಳಗೊಳಗೆ ವಿರೋಧಿಸುವ ಎದೆಗಾರಿಕೆಯನ್ನು ಮಾಡಿದ್ದಾರೆ.

ತೆಗ್ಗಿನಮನೆ ಸೀತೆ (೧೯೭೪)

ಬ್ರಿಟೀಷರು ಆಳ್ವಿಕೆ ನಡೆಸುತ್ತಿದ್ದ ಕಾಲದ ಕತೆ, ಕ್ರಮೇಣವಾಗಿ ಬದಲಾವಣೆ ಯಾಗುತ್ತಿತ್ತು. ಎಂ.ಕೆ. ಇಂದಿರಾ ಅವರೇ ಅಭಿಪ್ರಾಯಪಡುವಂತೆ ಮುಂದಿನ ಮೂವತ್ತು.ನಲವತ್ತು ವರ್ಷಗಳಲ್ಲಿ ಕಾಲ ಬಹಳ ಬದಲಾಗಿ ಮುಂಬಯಿ, ಮದ್ರಾಸ್, ಬೆಂಗಳೂರು, ಮೈಸೂರುಗಳಲ್ಲಿ ಸಾಕಷ್ಟು ಸಾಕ್ಷರತೆ ನಾಗರಿಕತೆ, ಆಧುನಿಕತೆ ಬೆಳೆದು ಬಂದಿದ್ದಕ್ಕೂ ಅರ್ಥಹೀನ ಸಂಪ್ರದಾಯದ ಅಂಧಕಾರದಲ್ಲಿ ತಡವರಿಸುತ್ತಿದ್ದ ಚಿಮಣಿ ಎಣ್ಣೆಯ ಗಾಜಿನ ಬುರುಡೆಯ ದೀಪಗಳು ಅದೇತಾನೆ ಕಾಲಿಡುತ್ತಿದ್ದವು. ಕಂಪನಿ ನಾಟಕಗಳು, ಬಸ್ ಸಂಚಾರ, ಶಾಲೆಗಳು ಆಧುನಿಕತೆ ಕಾಲಿಡುತ್ತಿರುವುದನ್ನು ಸೂಚಿಸುತ್ತವೆ.

ಇಂದಿರಾ, ಭಾರತೀಯ ಸಾಮಾಜಿಕ, ರಾಜಕೀಯ, ಜೀವನದಲ್ಲಿ ಹೊಸತನದ ಗಾಳಿ ಬೀಸುತ್ತಿರುವುದನ್ನು ಕುರಿತು ಹೇಳುತ್ತಾರೆ. ಇಷ್ಟೆಲ್ಲಾ ಬದಲಾವಣೆಗಳು ಉಂಟಾದರೂ; ನಾಗರಿಕತೆಯ ಗಾಳಿ ಬೀಸಿದ್ದರೂ "ಮಲೆನಾಡಿನ ಮೂಲೆಯಲ್ಲಿ, ಸುತ್ತಲೂ ಕೋಟೆಯಂತೆ ಘನೀಭೂತಗೊಂಡಂತೆ ಸುತ್ತಿಕೊಂಡಿರುವ ಗುಡ್ಡ ಬೆಟ್ಟ ಕಾಡುಗಳ ಸಂದಿಗೊಂದಿಗಳೊಂದಿಗೆ ಹೊರಪ್ರಪಂಚಕ್ಕೆ ಗೋಚರವಾಗದಂತೆ ಅಡಗಿಕುಳಿತಿದ್ದ ಹಳ್ಳಿಗಳಲ್ಲಿ ಈ ಕಟ್ಟೆಮನೆ, ತಗ್ಗಿನಮನೆಗಳೂ ಸೇರಿವೆ"

ಸ್ತ್ರೀಯರು ಅಜ್ಞಾನ, ಅಂಧಕಾರ, ಮೂಢನಂಬಿಕೆ, ಅರ್ಥಹೀನ ಸಂಪ್ರದಾಯಗಳ ನಡುವೆ ನಲುಗಿಹೋಗಿದ್ದರು. ನಾಲ್ಕು ಗೋಡೆಗಳ ನಡುವೆ ಬಂಧಿತರಾಗಿರುವ ಸ್ತ್ರೀ ವಾಸ್ತವವನ್ನು ಅರ್ಥಮಾಡಿಕೊಂಡಿರಲಿಲ್ಲ. ಇವೆಲ್ಲಾ ಗುಣಗಳಿಗೆ ಭಿನ್ನವಾದ ವಿಶಿಷ್ಟವಾದ ವ್ಯಕ್ತಿತ್ವ ಹೊಂದಿದ್ದವಳು 'ತೆಗ್ಗಿನಮನೆ' ಸೀತೆ ಕಾದಂಬರಿಯ ನಾಯಕಿ ಸೀತೆ.

ಸ್ತ್ರೀ ಮನೆ ಬಿಟ್ಟು ಹೊರಬರುವುದೇ ಮಹಾ ಅಪರಾಧ ಎನಿಸಿದ್ದ ಕಾಲದಲ್ಲಿ

ಅದೂ ಹಳ್ಳಿಯ ಸಂಪ್ರದಾಯಸ್ಥ ಕುಟುಂಬದ ಚಲುವೆ, ಹರೆಯದ ಸೊಸೆ ಹೊಳೆಗೆ ಧುಮುಕಿದುದು ಸಾಮಾನ್ಯವಾದ ಮಾತಲ್ಲ. ಪ್ರವಾಹದಲ್ಲಿ ಹುಟ್ಟುಹಾಕುವುದು ದಿಟ್ಟ ಮಹಿಳೆಗೆ ಮಾತ್ರ ಸಾಧ್ಯ ಎಂಬುದು ಸಾಬೀತಾಗುತ್ತದೆ. ಅವಳನ್ನು ಕಾಮುಕ ದೃಷ್ಟಿಯಿಂದ ನೋಡಿ ಒಬ್ಬಳೆ ಮನೆಯೊಳಗಿದ್ದಾಗ ಬಲತ್ಕಾರಿಸಲು ನೋಡಿದ 'ಅಪ್ಪುಗೆ' ತಕ್ಕ ಪಾಠ ಕಲಿಸುವುದು ಪುರುಷ ದೌರ್ಜನ್ಯವನ್ನು ಸದೆಬಡಿದ ಅವಳ ಧೈರ್ಯದ ಪ್ರತೀಕ. ಪಕ್ಕದ ಮನೆಯ ಅನ್ನಪೂರ್ಣಮ್ಮ ಕ್ಷಯದಿಂದ ಸಾಯುತ್ತಿದ್ದರೂ ಅವಳ ಗಂಡ ಸೂಳೆ ಮನೆಯೊಳಗಿರುವುದನ್ನು ಕಂಡು ಅವಳ ಮನಸ್ಸು ಬಂಡೇಳುತ್ತದೆ. "ಹೆಚ್ಚಿನ ವಿಮರ್ಶಾತ್ಮಕ ಬುದ್ಧಿಯಿಲ್ಲ. ಸ್ವಭಾವತಃ ದಿಟ್ಟವಾಸ್ತವ ಜೀವಿಯಾಗಿದ್ದ ಸೀತೆಯ ಮನಸ್ಸು ಬಂಡೆದ್ದು ಬುಸುಗುಡುತ್ತಿತ್ತು. ಹೆಂಡ್ತಿ ಸಾಯ್ತಾಬಿದ್ದಿದ್ದರೂ ಇವನೆಂಥ ಪತಿ? ಅಂಥವನ ಪಾದಮುಟ್ಟಿ ಪ್ರಾಣ ಬಿಡುವ ಹುಚ್ಚಿನ ಇದೆಂಥ ವ್ರತ ಈಕೆಯದು, ನಾನಾಗಿದ್ರೆ ಹಾಳಾಗ್ಲಿ ಅಂತಿದ್ದೆ" ಇದೊಂದು ಸಹಜ ಬಂಡಾಯವೇ ಸರಿ. ಪುರುಷ ದಬ್ಬಾಳಿಕೆ, ಸ್ತ್ರೀ ವೈಚಾರಿಕ ಮುಗ್ಧತನದ ಧೋರಣೆ.ಸ್ತ್ರೀಶೋಷಣೆ. ಸ್ಪಂದನೆಯನ್ನು ಕಾಣುತ್ತೇವೆ.

ಸ್ತ್ರೀ ಸ್ವಾತಂತ್ರ್ಯ, ಮಹಿಳಾ ಜಾಗೃತಿ ಬಗ್ಗೆ ಹೋರಾಡುತ್ತಿರುವ ಇಂದಿನ ವಿದ್ಯಾವಂತ ಆಧುನಿಕ ಮಹಿಳೆಯರಿಗೆ 'ಸೀತೆ' ಒಂದು ಸವಾಲು. ಅಂದಿನ ಕಾಲದಲ್ಲಿ ಸ್ತ್ರೀ ಸ್ವಾತಂತ್ರ್ಯ, ಸಮಾನತೆ, ಜಾಗ್ರತೆ ಇವುಗಳ ಕಲ್ಪನೆಯೇ ಇಲ್ಲದ ಕಾಲ, ಮನಸ್ಥೈರ್ಯ, ಧೈರ್ಯ, ಸಾಹಸ ಬುದ್ಧಿವಂತಿಕೆಯಿಂದ, ವಾಸ್ತವ ವಿಚಾರಗಳಿಂದ ಪುರುಷನ ದಬ್ಬಾಳಿಕೆಯ ವಿರುದ್ಧ ಬಂಡೇಳುತ್ತಾಳೆ.

ಇಂದಿರಾ ಅವರ "ತಗ್ಗಿನ ಮನೆ ಸೀತೆ ಅದ್ಭುತವಾಗಿದೆ. ಕಾದಂಬರಿಯ ವಸ್ತು, ಪಾತ್ರ ಚಿತ್ರಣ, ಶೈಲಿ ಮತ್ತು ಘಟನಾವಳಿಗಳು ವಾಸ್ತವಿಕತೆಗೆ ತೀರ ಹತ್ತಿರವಾಗಿವೆ. ಮಹಿಳೆಯ ಶೋಷಣೆಯ ಬಗೆಗೆ ಬರಿಯ ಗೋಳಿನ ಪುರಾಣವನ್ನೇ ಓದಿ ಬೇಸತ್ತಿದ್ದ ನನ್ನಂತಹವರಿಗೆ ತೆಗ್ಗಿನಮನೆ ಸೀತೆಯಂತಹ ಮಹಿಳಾ ಮಣಿಯರ ಅಸ್ತಿತ್ವ ಕಂಡು ಸಂತೋಷವಾಯ್ತು" ಎಂದು ಬಿ.ಎಸ್.ಎ. ಕುಂದಾಪುರ ಅಭಿಪ್ರಾಯ ಪಟ್ಟಿರುವುದು ಸಮಂಜಸವಾಗಿದೆ.

ವ್ಯಕ್ತಿಚಿತ್ರಣಗಳನ್ನೊಳಗೊಂಡ ಈ ಕಾದಂಬರಿಗಳು ವ್ಯಕ್ತಿ ಕೇಂದ್ರಿತವಾಗಿವೆ. ಶಂಕರಿ, ಸೀತೆ ಮುಂತಾದ ಸ್ತ್ರೀಯರು ತಮ್ಮ ಬದುಕನ್ನು ರೂಪಿಸಿಕೊಂಡ ರೀತಿ ಸಂಪ್ರದಾಯಪ್ರಧಾನ ಸಮಾಜದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಹೆಣಗಾಡುವ ಪರಿ ಮನೋಜ್ಞವಾಗಿದೆ. ಸಾಮಾಜಿಕ ಸ್ತರದಲ್ಲಿ ತನ್ನನ್ನು ಗುರುತಿಸಿಕೊಳ್ಳಲಾಗದೆ ಮೂಲೆಯೊಳಗೆ ಗಂಡನ ಅಜ್ಞೆಯನ್ನು ಅನುಸರಿಸಿಯೇ ಬದುಕಬೇಕಾದ ಸ್ಥಿತಿಯಲ್ಲಿ

ಮೌಲ್ಯ ಕಳೆದುಕೊಂಡ ಅವಳ ಸಾಂಸ್ಕೃತಿಕ ಬದುಕು ಹೊರೆಯಾದರೂ ಬಸವನ ಹುಳುವಿನಂತೆ ತೆವಳುತ್ತಾ ಸಾಗುವ ಪರಿಯನ್ನು ಹೊರಹಾಕಿರುವ ಇಂದಿರಾ ಅವರ ಹರಸಾಹಸ ಪ್ರಮುಖವಾಗುತ್ತದೆ.

ಇಂದಿರಾ ಅವರ ಕೌಟುಂಬಿಕ ಕಾದಂಬರಿಗಳು

ಕುಟುಂಬ ಸಮಾಜದ ಅಂಗ, ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕದಿಂದ ಭಾರತೀಯ ಸಾಮಾಜಿಕ ಜೀವನದಲ್ಲಾದ ಬದಲಾವಣೆ ಕುಟುಂಬದ ಮೇಲೆ ಪರಿಣಾಮ ಬೀರಿದ ಪರಿ, ಬಡತನ, ನಿರುದ್ಯೋಗ, ಜನಸಂಖ್ಯೆ ಹೆಚ್ಚಳ, ಹಳೇಹೊಸ ತಲಾಮಾರುಗಳಲ್ಲಿ ಕಂಡುಬರುವ ವೈಚಾರಿಕ ಅಂತರ, ಮೌಲ್ಯಗಳ ಸಂಘರ್ಷ ಇವೆಲ್ಲಾ ಅಕೌಟುಂಬಿಕ ಜೀವನದಲ್ಲೂ ಸಮಸ್ಯೆಗಳನ್ನು ಹುಟ್ಟಿಸಿವೆ. ವ್ಯಕ್ತಿನಿಷ್ಠತೆಯಿಂದಾಗಿ, ಅವಿಭಕ್ತ ಕುಟುಂಬ ಒಡೆದುಹೋಗುತ್ತಿವೆ. ಕೌಟುಂಬಿಕ ಮೌಲ್ಯಗಳು ಏರುಪೇರಾಗಿವೆ. ಅತ್ತೆ ಸೊಸೆಯರ ಸಂಬಂಧ, ಸ್ತ್ರೀಯರ ತ್ಯಾಗ, ಸಹನೆ, ದಾಂಪತ್ಯಜೀವನದ ವೈಪರೀತ್ಯ ಕಾದಂಬರಿಗಳ ಪ್ರಮುಖ ಅಂಶಗಳಾಗಿವೆ.

ರಸವಾಹಿನಿ, ಒಂದೇ ನಿಮಿಷ, ಬ್ರಹ್ಮಚಾರಿ, ಸುಖಾಂತ, ಹೆಣ್ಣಿನ ಆಕಾಂಕ್ಷೆ ತಿಳಿದವರು, ಶಾಂತಿಧಾಮ, ತುಂಗಭದ್ರ ಮುಂತಾದವುಗಳು ಕೌಟುಂಬಿಕ ಕಾದಂಬರಿಗಳು.

ಎಂ.ಕೆ. ಇಂದಿರಾ ಅವರ ಕೌಟುಂಬಿಕ ಕಾದಂಬರಿಗಳು ಸಾಮಾಜಿಕ ಜೀವನದ ಕೈಗನ್ನಡಿಯಂತಿವೆ. ಕುಟುಂಬದ ಸಾಂಸ್ಕೃತಿಕ ಬದುಕಿನ ಒಳಚಿತ್ರಣವನ್ನು ಪ್ರತಿಬಿಂಬಿಸುತ್ತವೆ. ಇವರ 'ರಸವಾಹಿನಿ' 'ಮನತುಂಬಿದ ಮಡದಿ' ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷ ಚಿತ್ರಣಗೊಂಡಿದೆ. ಎಂ.ಕೆ. ಇಂದಿರಾ ಹೆಣ್ಣಾಗಿ ಹೆಣ್ಣಿನ ಭಾವನೆಯನ್ನು ಅರಿಯಲು ಪ್ರಯತ್ನಿಸಿದ್ದಾರೆ. ಹೆಣ್ಣು ಆಧುನಿಕತೆಗೆ ತೆರೆದುಕೊಳ್ಳುವರೀತಿ, ಹಳೆಯ ಸಂಪ್ರದಾಯದಿಂದ ಬಿಡುಗಡೆಗೊಳ್ಳುವಾಗ ಅನುಭವಿಸುವ ಸಂದಿಗ್ಧ ಸ್ಥಿತಿ, ಭಿನ್ನವಾಗೆ ಬಿಚ್ಚಿಕೊಂಡಿದೆ.

'ಒಂದೇ ನಿಮಿಷ' ಭಾರತೀಯ ಹಿಂದೂ ಸಂಪ್ರದಾಯದಲ್ಲಿ ಪುರಾಣ ರಾಮಾಯಣ ಮಹಾಭಾರತ ಕಾಲದಿಂದಲೂ ನಡೆದುಬಂದ ಸಮಸ್ಯೆ ವಸ್ತುವಾಗಿದೆ. ಹೆಣ್ಣು ಗರ್ಭಧರಿಸದಿದ್ದರೆ ಅವಳೇ ದೋಷಪೂರಿತಳೆಂಬ ಸಹಜನಂಬಿಕೆ. ಪುರುಷ ಪ್ರಧಾನ ಸಾಮಾಜಿಕ ಚೌಕಟ್ಟಿನಲ್ಲಿ ಹೆಣ್ಣಿನ ಅಳಲಿಗೆ ಬೆಲೆಯೇ ಇಲ್ಲ. ಪುರುಷನಲ್ಲಿ ದೋಷವಿದ್ದರೂ ಅದು ಗೌಣ. ಹೆಣ್ಣು ಹೆರುವ ಸಾಮರ್ಥ್ಯವಿದ್ದಾಗ್ಯೂ ದೋಷಪೂರಿತಳು. ಹೀಗೆ ಜನಜೀವನದ ಒಂದೊಂದು ಘಟನೆಗಳೂ ತಮ್ಮ ಸುತ್ತಲ ಬದುಕನ್ನು ಕಟ್ಟಿಕೊಂಡು ಕಾದಂಬರಿಗಳಾಗಿ ರೂಪುಗೊಳ್ಳುತ್ತಾ ಹೋಗುತ್ತವೆ.

ಹೆಣ್ಣಿನ ಆಕಾಂಕ್ಷೆ (೧೯೬೬)

ಒಂದು ಸಂಸಾರದ ಕಥೆಯಾಗಿ ಇಡೀ ಸಮಾಜದ ಅಂತರಂಗ ಬಿಚ್ಚಿಡುವ ವಸ್ತು 'ಹೆಣ್ಣಿನ ಆಕಾಂಕ್ಷೆ' ಕುಟುಂಬದಲ್ಲಾದ ಸಾವುಗಳು ಅನಿರೀಕ್ಷಿತವಾದರೂ ಮೇಳೈಸಿಕೊಳ್ಳುವ ಸಂಪ್ರದಾಯದ ಬಣ್ಣ ಅವೈಜ್ಞಾನಿಕ ಕಾರಣಗಳು ಸೂಕ್ಷ್ಮವಾಗಿ ನಿರೂಪಿಸಲ್ಪಟ್ಟಿವೆ. ಇಂದಿರಾ ವೈದಿಕ ಸಮಾಜದ ಕಟ್ಟಳೆಗಳನ್ನು, ಚೌಕಟ್ಟಿನ ಪರಿಮಿತಿಯನ್ನು ಹತ್ತಿರದಿಂದ ಬಲ್ಲವರಾದ್ದರಿಂದ, ಗಂಡು ಸರ್ವಶ್ರೇಷ್ಠನೆಂತಲೂ ಹೆಣ್ಣು ಕನಿಷ್ಠ ಶೂದ್ರ ಸಂತತಿಯ ಪ್ರತೀಕವೆಂದು ಬಗೆದ ಇಬ್ಬಗೆಯ ನೀತಿಯನ್ನು ಖಂಡಿಸುವ ಮಟ್ಟಕ್ಕೆ ಹೋಗದಿದ್ದರೂ ತಮಗಿರುವ ಅಸಮಾಧಾನ ಹೊರಗೆಡವಲು ಹವಣಿಸಿದ್ದಾರೆ. ನಾಗು ಹದಿನೆಂಟರ ವಿಧವೆ. ಸಮಾಜ ಅವಳನ್ನು ವಿರೂಪ ಗೊಳಿಸಿದರೂ ಪಶುಜಾತಿಯ ಪುರುಷನಿಗೆ ಆಹಾರವಾಗಿ ಗರ್ಭಿಣಿಯಾಗುತ್ತಾಳೆ. ಪುರುಷನ ದೌರ್ಜನ್ಯಕ್ಕೆ ಒಳಗಾಗಿ ಜೀವನವನ್ನು ನರಕ ಮಾಡಿಕೊಂಡ ಸ್ತ್ರೀಯರಿಗೆ ಸಮಾಜ ಕೊಡುವ ಬಹುಮಾನ ಹೆಣ್ಣನ್ನೇ ದೋಷಿಯಾಗಿಸಿ ತಿರಸ್ಕರಿಸುವುದು. ಶೀಲ, ನೀತಿ, ನಿಯಮ, ಸಹನೆ, ತಾಳ್ಮೆ, ಸಂಪ್ರದಾಯಶೀಲತೆ ಇವೆಲ್ಲವೂ ಹೆಣ್ಣಿಗಾಗಿ ಮೀಸಲಿಟ್ಟ ಪದಗಳಂತಿವೆ. ಅನಂತಯ್ಯನ ಕುಟುಂಬಕ್ಕೆ ಆಧಾರಸ್ತಂಭವಾದ ಪಾತಮ್ಮ ಒಂಬತ್ತನೆ ವರ್ಷಕ್ಕೆ ವಿಧವೆಯಾಗಿ ಅಂಥ ಸಮಾಜದ ಕಪಿಮುಷ್ಟಿಯಲ್ಲಿ ಸಿಲುಕಿ, ಬದುಕಿನ ಸುಖಗಳಿಂದ ವಂಚಿತರಾಗೆ ಉಳಿದು ಒಪ್ಪತ್ತೂಟವೇ ವರದಾನವೆಂದು ಬದುಕುವುದು ಅಂದಿನ ಸಮಾಜದಲ್ಲಿಯ ಸ್ತ್ರೀ ಶೋಷಣೆಯ ಪ್ರತೀಕವಾಗಿದೆ. ಹೆಣ್ಣಿನ ಸಾಮಾಜಿಕ ಬದುಕೆ ಇಲ್ಲದಂತೆ ನಿರ್ಮಾಣವಾದ ವ್ಯವಸ್ಥೆಯಲ್ಲಿ ಇಂದಿರಾ ಪ್ರತಿಭಟನೆ ಮಾಡಹೊರಟಿದ್ದರೆ. ಪ್ರವಾಹದೆದುರು ಈಜಹೊರಟಂತಾಗುತ್ತಿತ್ತು. ಹೆಣ್ಣಿನೊಳಗಿನ ನೋವಿನ ಕಟ್ಟೆ ಒಡೆಯಲು ಕಾಲುಶತಮಾನವೇ ಬೇಕಾಯಿತು.

ಶಾಂತಿಧಾಮ (೧೯೭೯)

ಮನುಷ್ಯನ ಬದುಕಿನ ಏರಿಳಿತಗಳಲ್ಲಿವಿಧಿಯ ಕೈವಾಡ ಕುರಿತು ಬಿಚ್ಚಿಕೊಳ್ಳುತ್ತಾ ಹೋಗುವ ಕಾದಂಬರಿ. ಕೌಟುಂಬಿಕ ಜೀವನದ ಮೌಲ್ಯಗಳು ಏರುಪೇರಾಗುತ್ತಿರು ವುದನ್ನು ಸಾಂಕೇತಿಕವಾಗಿ ಸೂಚಿಸುತ್ತದೆ. ಧರ್ಮ ಸಂಸ್ಕೃತಿಯಲ್ಲಿ ಅಚಲ ನಂಬಿಕೆ ಇಟ್ಟು ನಿಷ್ಠಾವಂತ ಜೀವನ ನಡೆಸಿದ ಶ್ರೀನಿವಾಸರಾಯರು ಹಳೆಯ ತಲೆಮಾರಿಗೆ ಸೇರಿದವರು. ಅವಿಭಕ್ತ ಕುಟುಂಬದಲ್ಲಿ ವಿಶ್ವಾಸ ಉಳ್ಳವರು. ಪದ್ಮಮ್ಮ ಹಳೆತಲೆಮಾರಿನ ಗೃಹಿಣಿ. ತಾಗ, ಹೃದಯ ಸಂಸ್ಕಾರ ಹಿರಿಯದಾದುದು. ಪತಿಯ ನೆರಳಲ್ಲಿ ನಡೆದು ಧರ್ಮ,ಅರ್ಥ, ಕಾಮ, ಮೋಕ್ಷದಲ್ಲಿ ಭಾಗಿಯಾಗುತ್ತಾಳೆ.

ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳ ಕಾಲದಲ್ಲೂ ಹಳೆಯದರ ಜೊತೆಗೆ ಹೊಸದನ್ನು ಸ್ವಾಗತಿಸುವ ತವಕ. ಆದರೆ ಆಧುನಿಕತೆ, ಅಂಧಾನುಕರಣೆಯಲ್ಲಿ, ಸಂಸ್ಕೃತಿಯಲ್ಲಿ ನಂಬಿಕೆ ಶಿಥಿಲವಾಗಿ ವ್ಯಕ್ತಿನಿಷ್ಠತೆಗೆ ಪ್ರಾಧ್ಯಾನ್ಯತೆ ಬಂದಿದೆ. ಶ್ರೀನಿವಾಸರಾಯರ ಮಗ ಕೇಶವ ಅವಿಭಕ್ತ ಕುಟುಂಬದಲ್ಲಿ ತನ್ನ ನಂಬಿಕೆಯನ್ನು ಕಳೆದುಕೊಂಡು ಬೇರೆಯಾಗುತ್ತಾನೆ. ಇದು ಈ ಕಾಲದ ವಿಚಾರ ಎಂಬುದು ಶ್ರೀನಿವಾಸರಾಯರಿಗೆ ತಿಳಿಯುವುದಿಲ್ಲ. ಸಾಮಾಜಿಕ ಚಿಂತನೆಯಲ್ಲೂ ಬದಲಾವಣೆಯಾದದ್ದಕ್ಕೆ ಹಳೆ ತಲಾಮಾರಿನ ವಿಧವೆ ಬೆಳ್ಳಮ್ಮ ವಿಧವೆಯಾದರೂ ಶಿಕ್ಷಣ ಪಡೆಯುತ್ತಾಳೆ. ಸ್ವತಂತ್ರ ಜೀವನ ನಡೆಸುತ್ತಾಳೆ. ವೈಯಕ್ತಿಕ ಬದುಕಿಗೆ ಒತ್ತು ಬರುತ್ತಿರುವದಕ್ಕೆ ಇದೊಂದು ಉತ್ತಮ ಉದಾಹರಣೆ. ಇಲ್ಲಿ ಕಂಡು ಬರುವ ಬದಲಾವಣೆ ಬರಿ ಆಂತರಿಕವಾಗಿರದೆ ವೇಷಭೂಷಣ, ರೀತಿನೀತಿ, ಉಡುಗೆತೊಡುಗೆ, ಎಲ್ಲದರಲ್ಲೂ ಮತ್ತೊಂದು ಸಂಸ್ಕೃತಿಯ ಪ್ರಭಾವ ಕಂಡುಬರುತ್ತದೆ. ಆಯ್ಕೆ ಸ್ವಾತಂತ್ರ ಸ್ತ್ರೀಯರಿಗೆ ಲಭಿಸುತ್ತದೆ. ಇದರಿಂದಾಗಿ ಎಷ್ಟೋ ಶತಮಾನಗಳಿಂದ 'ಹೂಂ' ಗುಟ್ಟುತ್ತಲೇ ಬಂದ ಸ್ತ್ರೀ ಈಗ ಮಾತನಾಡತೊಡಗಿದ್ದಾಳೆ. ಹರಕೆ ಕುರಿಯಂತೆ ಕಣ್ಣೆತ್ತಿ ನೋಡದ ಗಂಡಿನೊಡನೆ ಬದುಕುತ್ತಿದ್ದ ಬದುಕು ಬದಲಾಗಿದೆ ಎಂಬುದನ್ನು ಪ್ರತಿಪಾದಿಸುತ್ತಾರೆ.

ತುಂಗಭದ್ರ (1963)

ಇಪ್ಪತ್ತನೆಯ ಶತಮಾನದ ಆರಂಭ ಕಾಲದ ಸಾಮಾಜಿಕ ಜೀವನದ ಹಿನ್ನೆಲೆಯಿಂದ ಮೂಡಿ ಬಂದ ಕಾದಂಬರಿ ಇದು. ಮೂರನೇ ದಶಕದಾದಿಭಾಗ, ಧರ್ಮಾಂಧತೆಯ ಕಾರ್ಮೋಡ ಮುಸುಕಿದ್ದ ಕಾಲ. ಅಪ್ಪನೆಟ್ಟ ಆಲದ ಮರಕ್ಕೆ ನೇಣುಬಿಗಿದುಕೊಳ್ಳುವ ಕೂಪಮಂಡೂಕಗಳೇ ತುಂಬಿಕೊಂಡಿದ್ದ ಕಾಲ. ಮೂಢ ನಂಬಿಕೆ, ಸ್ವರ್ಗ.ನರಕ, ಪಾಪಪುಣ್ಯಗಳನ್ನು ಜನರು ಬಲವಾಗಿ ನಂಬಿದ್ದರು. ಸ್ತ್ರೀಗೆ ಸ್ವಾತಂತ್ರವಿರಲಿಲ್ಲ. ಬಾಲ್ಯ ವಿವಾಹ ಪದ್ಧತಿ ಬಲವಾಗಿತ್ತು. ಮಲೆನಾಡಿನ ಮೂಲೆಯಲ್ಲಿರೋ ಒಂದು ಹಳ್ಳಿ ಸ್ತ್ರೀಯರಿಗೆ ಇನ್ನೂ ನರಕಯಾತನೆ ನೀಡುವ ಪದ್ಧತಿಯನ್ನು ಪ್ರತಿಪಾದಿಸುತ್ತಲೇ ಬಂದಿದೆ. ಸಕಾಲದಲ್ಲಿ ಯುವತಿಯರಿಗೆ ಮದುವೆಯಾಗದಿದ್ದರೆ ಅವರ ಇಡೀ ಕುಟುಂಬವನ್ನೇ ಸಮಾಜದಿಂದ ಬಹಿಷ್ಕರಿಸಲಾಗುತ್ತದೆ. ಸ್ಫುರದ್ರೂಪಿಯಾದ ಹೆಣ್ಣಿಗೆ ಮದುವೆಯೇ ಕಠಿಣವಾಗಿರುವಾಗ ಹುಟ್ಟು ಕುರುಡಿಯರಾದ ತುಂಗಭದ್ರೆಯರ ಪಾಡೇನು? ಅವರಿಬ್ಬರೂ ದೊಡ್ಡವರಾದಾಗ ಸುತ್ತಮುತ್ತಲಿನ ಜನ ತನಿಖೆ ಮಾಡತೊಡಗುತ್ತಾರೆ. ಕೆಲ ಕುಹುಕಿಗಳು ಅವರಿಗೆ

ಬೇಗನೆ ಮದುವೆ ಮಾಡದಿದ್ದರೆ ಶೃಂಗೇರಿ ಸ್ವಾಮಿಗೆ ಹೇಳಿ ಬಹಿಷ್ಕಾರ ಹಾಕಿಸುವುದಾಗಿ ಹೆದರಿಸುತ್ತಾರೆ. ಕಾದಂಬರಿಯ ತುಂಬ ಹೆಣ್ಣುಮಕ್ಕಳಿಗೆ ಮಾತ್ರ ವೇದ್ಯವಾಗಿರುವ ಜೀವನದರ್ಶನ ತುಂಬಿದೆ.

ಸಾಮಾಜಿಕ ಸಮಸ್ಯೆಗಳನ್ನೊಳಗೊಂಡ ಕಾದಂಬರಿಗಳು.

ಸಮಾಜದ ಕಟ್ಟುಪಾಡಿನಲ್ಲಿ ಹುಟ್ಟಿಕೊಂಡ ಬಾಲ್ಯವಿವಾಹ, ವೇಶ್ಯಾಸಮಸ್ಯೆ, ಆರ್ಥಿಕ ವ್ಯವಸ್ಥೆಯಿಂದ ಹುಟ್ಟಿಕೊಂಡ ಬಡತನ, ವರದಕ್ಷಿಣೆ, ಅಂಗವಿಕಲತೆ, ಮಠಗಳಲ್ಲಿ ನಡೆಯುವ ಮೋಸ, ಕಪಟ ಸನ್ಯಾಸಿಗಳ ಢಾಂಬಿಕತೆ, ಮೂಢನಂಬಿಕೆ, ಅವೈಚಾರಿಕತೆ, ಸ್ತ್ರೀ ಶೋಷಣೆ, ನಗರ ಜೀವನದ ವಸತಿ ಸಮಸ್ಯೆ, ಜಾತಿ ಸಮಸ್ಯೆ, ಯುವಜನರ ಸಮಸ್ಯೆಗಳು ಇಂದಿರಾ ಅವರ ಕಾದಂಬರಿಯ ವಸ್ತುಗಳಾಗಿವೆ.

ಅವರ ಆಭರಣ, ತಾಪದಿಂದ ತಂಪಿಗೆ, ಯಾರು ಹಿತವರು, ಮುಸುಕು, ಮನೆಕಟ್ಟಿ ನೋಡಿ, ತಪೋವನದಲ್ಲಿ, ಗೆಜ್ಜೆಪೂಜೆ, ಸದಾನಂದ, ಮಧುವನ, ಫಣಿಯಮ್ಮ, ಪೂರ್ವಾಪರ, ಚಿದ್ವಿಲಾಸ, ಹೂಬಾಣ, ನೂರೊಂದು ಬಾಗಿಲು, ಹಸಿವು, ಬಿದಿಗೆ ಚಂದ್ರಮ, ಡೊಂಕು, ಜಾತಿ ಕೆಟ್ಟವಳು, ಟುಲೆಟ್ ಮುಂತಾದ ಕಾದಂಬರಿಗಳು ಸಮಾಜದ ಜ್ವಲಂತ ಸಮಸ್ಯೆಗಳನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿವೆ.

ನವೋದಯ ಕಾದಂಬರಿಗಳ ಆದರ್ಶವಾದ ಇವರ ಕಾದಂಬರಿಗಳಲ್ಲಿ ಇದ್ದಾಗ್ಯೂ ವಾಸ್ತವಿಕತೆಯ ಗಟ್ಟಿಯಾದ ನೆಲೆಗಟ್ಟಿದೆ. ಪ್ರಗತಿಪರ ಚಿಂತನೆ ಇದೆ. ಬಾಲ ವಿಧವೆಯರ ಮರು ವಿವಾಹ ಕುರಿತು ಚಿಂತಿಸುವ ಲೇಖಕಿ, ಸ್ತ್ರೀ ಶೋಷಣೆಗೆ ತೀವ್ರವಾಗಿ ಸ್ಪಂಧಿಸಿದ್ದಾರೆ.

ಬಡತನ, ಮೂಢನಂಬಿಕೆ, ಸಂಪ್ರದಾಯವನ್ನು ಕಂದಾಚಾರವಾಗಿಸಿ ಹೆಣ್ಣಿನ ಬದುಕನ್ನು ನರಕ ಮಾಡಿದ ಜನರ ಕುರಿತು ತಣ್ಣನೆಯ ಆಕ್ರೋಶ ವ್ಯಕ್ತಪಡಿಸುತ್ತಾರೆ. ವೈಜ್ಞಾನಿಕತೆ. ವೈಚಾರಿಕತೆ, ಈ ನೆಲಕ್ಕಂಟಿದ ವಾಸ್ತವ ಸಾಮಾಜಿಕ ಪ್ರಜ್ಞೆ, ಬದುಕಿನ ಬಗೆಗೆ ಇರುವ ಆಳವಾದ ಶ್ರದ್ಧೆ, ಜೀವಾನಾನುಭವ ಇವರ ಸಾಮಾಜಿಕ ಕಾದಂಬರಿಗಳ ಜೀವಾಳ. ನವೋದಯ ಹಾಗೂ ಪ್ರಗತಿಶೀಲ ಎರಡರ ಸಾಮಾಜಿಕ ಗ್ರಹಿಕಾ ಕ್ರಮವನ್ನು ಇಟ್ಟುಕೊಂಡು ಇವರ ಕಾದಂಬರಿಗಳು ಬೆಳೆಯುತ್ತವೆ.

'ವರ್ಣಲೀಲೆ', 'ಕತೆಗಾರ ಪ್ರೀತಿ ಪ್ರೇಮ ಸಮಾಜದ ದೃಷ್ಟಿಕೋನದಲ್ಲಿ ಹೇಗೆ ನೋಡಲ್ಪಟ್ಟಿದೆ ಎಂಬುದನ್ನು ಕುರಿತು ಬರೆದ ಕಾದಂಬರಿಗಳಾದರೆ 'ಮನೋಮಂದಿರ' (1983) ಜಾತಿ, ಮತ, ಕುಲ, ಶೀಲ, ಸಂಸ್ಕೃತಿ ಅಂತಸ್ತು ಇತ್ಯಾದಿ ಸಾಮಾಜಿಕ ಕಟ್ಟುಪಾಡುಗಳಲ್ಲಿ ಸಿಲುಕಿದ ಗೃಹಿಣಿಯ ಭಗ್ನಪ್ರೇಮವನ್ನು, ಸಾಮಾಜಿಕ ಕಟ್ಟುಪಾಡಿ ನೊಳಗೆ ಸಿಲುಕಿದ ಅಸಹಾಯಕ ವ್ಯಕ್ತಿಗಳ ಬದುಕಿನ ಚಿತ್ರಣವನ್ನು ಮನೋಜ್ಞವಾಗಿ ಕಟ್ಟಿಕೊಡುತ್ತಾರೆ.

ಎಂ.ಕೆ. ಇಂದಿರಾ ಅವರ ಹಸಿವು, ಬಿದಿಗೆ ಚಂದ್ರಮ ಡೊಂಕು, ನೂರೊಂದು ಬಾಗಿಲು, ಯಾರು ಹಿತವರು, ಮುಸುಕು, ಹೂಬಾಣ, ಡಾಕ್ಟರ್, ಪೂರ್ವಪರ, ಚಿದ್ವಿಲಾಸ, ಟುಲೆಟ್, ಬ್ರಹ್ಮಚಾರಿ, ಮುಂತಾದ ಕಾದಂಬರಿಗಳಲ್ಲಿ ಅಂತದ್ದೇನೂ ಗಂಭೀರ ಸಮಸ್ಯೆಗಳು ಚರ್ಚೆಗೊಳಗಾದಂತೆ ಕಂಡುಬರುವುದಿಲ್ಲ. ಸರಳ ವಸ್ತುಗಳ ಸಾದಾ ನಿರೂಪಣೆ ಇದೆ. ಆದರೆ ಆಯ್ದ ವಸ್ತುವನ್ನು ಸಾಮಾಜಿಕ ಹಿನ್ನೆಲೆಯಲ್ಲಿ, ಸಂಸ್ಕೃತಿಕ ಒಳಪದರವನ್ನು ಹಿಂಜಿ ನೋಡುವುದರಲ್ಲಿ ತಮ್ಮ ಕಲಾತ್ಮಕತೆಯನ್ನು ಜೀವಂತವಾಗಿರಿಸಿಕೊಂಡಿದ್ದಾರೆ.

ಜಾತಿ ಕೆಟ್ಟವಳು.

ಇಂದಿರಾ ಅವರು ಬ್ರಾಹ್ಮಣ ಸಮಾಜದಲ್ಲಿನ ಅಂಧಶ್ರದ್ಧೆ, ಮೌಢ್ಯತೆಗಳನ್ನು ಟೀಕಿಸಿದ್ದಾರೆ. ಕಾದಂಬರಿ ನಾಯಕ ವಾಸುದೇವ ಕಾದಂಬರಿಯ ಹೆಚ್ಚುಭಾಗ ಆಕ್ರಮಿಸಿದ್ದಾನೆ. ಅಂದಿನ ಸಮಾಜದಲ್ಲಿ 'ಜಾತಿ ಕೆಟ್ಟವರು' ಎಂದು ಹೆಸರಾದವರ ಮನೆಯ ಹುಡುಗಿಯನ್ನೆ ಮದುವೆಯಾಗುತ್ತಾನೆ. ವಿದ್ಯಾವಂತ ವಾಸುಗೆ, ಸಮಾಜದ ರೀತಿ, ನೀತಿ ಕಂಡು ಬಹು ಕಾಲದಿಂದ ಸಮಾಜದಲ್ಲಿ ಬೇರೂರಿದ್ದ ಅಂಧ ಶ್ರದ್ಧೆ, ಡಾಂಭಿಕತೆ ಇವುಗಳ ಪ್ರಜ್ಞೆ ಆತನಿಗಿದೆ. ಆದ್ದರಿಂದಲೇ ಸಮಾಜವನ್ನು ಧೈರ್ಯದಿಂದ ಎದುರಿಸಿ 'ಜಾತಿ ಇಲ್ಲದವರ' ಮನೆಯ ಹುಡುಗಿಯನ್ನು ಮದುವೆಯಾಗಿ ಕುಟುಂಬ, ಊರು, ಸಮಾಜದಿಂದ ದೂರವಾಗುತ್ತಾನೆ, ಪರೋಕ್ಷವಾಗಿ ಬಹಿಷ್ಕರಿಸಲ್ಪಡುತ್ತಾನೆ. ಸ್ವಸಂಪಾದನೆಯಿಂದ ಮೇಲೆ ಬಂದು ಗಣ್ಯವ್ಯಕ್ತಿಯಾಗಿ ಬೆಳೆದು ನಿಂತಾಗ ಜಾತಿ ಕೆಟ್ಟವಳನ್ನು ಮದುವೆಯಾದನೆಂದು ಆತನಿಗೆ ಅಂಟಿದ ಕಳಂಕವೂ ಮಾಯವಾಗುತ್ತದೆ. ಕಾಲಕ್ರಮೇಣ ಸಮಾಜದ ಕಟ್ಟುಪಾಡುಗಳು ಸಡಿಲವಾಗುತ್ತವೆ. ಕಾಲ ಬದಲಾದಂತೆ ಸಮಾಜವೂ ಬದಲಾಗುತ್ತದೆ ಎಂಬುದನ್ನು ಇಲ್ಲಿ ಸೂಚ್ಯವಾಗಿ ಹೇಳಲಾಗಿದೆ.

ಸ್ತ್ರೀ ಶೋಷಣೆಯ ಹಿನ್ನೆಯಲ್ಲಿಯೇ ಈ ಕಾದಂಬರಿಯಲ್ಲಿ ಜಾತಿ ಸಮಸ್ಯೆ ಹುಟ್ಟಿಕೊಂಡಿದೆ. ಬ್ರಾಹ್ಮಣ ಸಮಾಜವೇ ತನ್ನ ಜಾತಿಯ ಹೆಣ್ಣು ಮಕ್ಕಳಿಗೆ ಬಹಿಷ್ಕಾರ ಹಾಕುತ್ತದೆ. ಕಾರಣ ವಿಧವೆ, ಗರ್ಭಿಣಿ ಎಂಬುದಕ್ಕಾಗಿ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಗೊಂದು ನೀತಿ, ಪುರುಷನಿಗೊಂದು ನೀತಿ ರೂಪಿತವಾಗಿದೆ. ವಾಸ್ತವದಲ್ಲಿ ವಿಚಾರಮಾಡಿದರೆ ಶೀಲ, ಚಾರಿತ್ರ್ಯಗಳ ದೃಷ್ಟಿಯಿಂದ ತಪ್ಪಿನಡೆದಾಗ ಪುರುಷನಿಗಿಂತ ಹೆಣ್ಣೇ Target ಆಗುವ ಸಾಧ್ಯತೆಗಳು ಹೆಚ್ಚು. ಪುರುಷ ಟೀಕಾಚೌಕಟ್ಟಿನೊಳಗೆ ಬರುವುದೇ ಇಲ್ಲ.

"ನೀವು ನಿಮ್ಮ ಅಪ್ಪಯ್ಯ, ಅಮ್ಮ ಒಪ್ಪಿದ ಇನ್ನೊಂದು ಹುಡುಗೀನ ಲಗ್ನವಾಗಿ.

ನನ್ನ ದೆಸೆಯಿಂದ ನೀವು ಮನೆಯೋರಿಗೆಲ್ಲಾ ದೂರ ಆಗಿಬಿಟ್ಟಿರಲ್ಲಾ ಅಂತ ಮನಸ್ಸಿಗೆ ಕೊರೆಯುತ್ತೆ. ಅವರು ಹೇಳಿದ ಹೆಣ್ಣನ್ನು ಲಗ್ನ ಆಗಿದ್ದರೆ ಮುಪ್ಪಿನಲ್ಲಿ ಹಾಯಾಗಿರುತ್ತಿದ್ದರೋ" ಎಂದು ನೊಂದುಕೊಳ್ಳುವ ವಾಸುವಿನ ಹೆಂಡತಿ ನೀರಜ ಬ್ರಾಹ್ಮಣ ಕುಲದವಳೆ ಆದರೂ ವಿಧವೆ ಹೊಟ್ಟೆಯೊಳಗೆ ಹುಟ್ಟಿದಳು ಎನ್ನುವ ಒಂದೇ ಕಾರಣಕ್ಕೆ ಜಾತಿ ಕೆಡುತ್ತಾಳೆ. ಮುದುಕಿ ಬುಳ್ಳಮ್ಮ ಇಡೀ ಇತಿಹಾಸವನ್ನೇ ಜಾಲಾಡಿಬಿಡುತ್ತಾಳೆ. ರಾಮಾಯಣ, ಮಹಾಭಾರತಗಳ ಕಾಲದಿಂದಲೂ ಹೆಣ್ಣನ್ನು ಸಮಾಜ ನಡೆಸಿಕೊಂಡು ಬಂದ ರೀತಿಯ ಅರಿವು ಅವಳಿಗಿದೆ. ಅದಕ್ಕೆ "ಕುಂತಿ ಎಂತದೋ ತಮಾಷೆ ಮಾಡಾಕ ಹೋಗಿ ಕರ್ಣ ತಾನು ಸೂತ, ಸೂತ ಅಂತ ಜೀವನವೆಲ್ಲಾ ಕೊರಗಿದ್ನಲ್ಲಾ. ಆ ಹುಟ್ಟಿಸಿದ ಪುಣ್ಯಾತ್ಮ ಒಂದೇ ಸಮ ಉರೀತಾನಲ್ಲ ಅವನಾರ ಹೇಳ್ಬಾರ್ದಾ ಕರ್ಣಂಗೆ" ಎನ್ನುವಲ್ಲಿ ಸ್ತ್ರೀಗೆ ಇರುವ ಮಿತಿಯ ಅರಿವಾಗುತ್ತದೆ. ಅದೇ ಪುರುಷನಿಗೆ ಯಾವ ತರಹದ ಹೆದರಿಕೆ ಇಲ್ಲಾ. ಮುದುಕಿ ಸಿಟ್ಟಿಂದ ಗುಡುಗುತ್ತಾಳೆ. "ಆ ಪರಾಶರ ಮುನಿಗಳನ್ನ ನೋಡಿದ್ರೆ, ದೋಣಿಯೊಳಗೆ ವೇದವ್ಯಾಸರನ್ನ ಹುಟ್ಟಿಸಿ ನಡೆದರು. ಕುಂತಿ ಹಂಗ ಯೋಜನಗಂಧಿಗೂ ಲಗ್ನಕ್ಕೆ ಮುಂಚೆ ಬಾಣಂತನಾತು" ಯಾವೊಬ್ಬ ಪುರುಷನಿಗೂ ಕಾಡದ ಪಾಪ ಪ್ರಜ್ಞೆ ಸ್ತ್ರೀಗೆ ಕಾಡುತ್ತದೆ.

"ಪಾಪ, ಐಜ್ಜನ ಗಂಡಂದ್ರು ಇದ್ಕಂಡು ಆ ಪ್ರಾಯದ ಹುಡುಗಿ ದ್ರೌಪತೀನ ಒಳಗೆ ಸೀರೆ ಬಿಚ್ತಾ ಇದ್ರೆ ಉದ್ದ ಗುದ್ದೆ ಹಂಗೆ ಬಿಮ್ಮಗ ಕುಂತಿದ್ರಲ್ಲ ಅವರೆಲ್ಲಾ ಯಾಕ ಮಣ್ಣು ಹೊಯ್ಕಾಳಾಕ ಐಜ್ಜನ" ಎಂದು ಹೇಳುವಲ್ಲಿ ಸಿಟ್ಟಿದೆ. ಪುರುಷನನ್ನು ಕುರಿತು ದ್ವೇಷವಿದೆ. ತನ್ನ ಪರಿಸ್ಥಿತಿಗೆ ಕಾರಣಕರ್ತನಾದ ಪುರುಷ ತನ್ನ ನೆರವಿಗೆ ಬರುವುದಿಲ್ಲಾ ಎಂಬ ಆತಂಕವಿದೆ.

ಆ ಸೀತೆ ಬಂಗಾರದಂತ ಹುಡುಗಿ "ಏನು ಕರ್ಮ ಮಾಡಿ ಆ ರಾಮನ ಕೈ ಹಿಡಿದ್ಲೋ. ಉದ್ದಕ್ಕೂ ಗೋಳೆ ಆತು." ಎನ್ನುವ ಬುಳ್ಳಮ್ಮನಿಗೆ ಸಮಾಜದ ಅಜ್ಞಾನ ಪುರುಷನ ದೌರ್ಜನ್ಯದ ಅರಿವಿದ್ದರೂ ಅಂದು ಅನಿವಾರ್ಯವಾಗಿಯೇ ಸಾಮಾಜಿಕ ವ್ಯವಸ್ಥೆಯನ್ನು ಒಪ್ಪಿಕೊಂಡು ಬಾಳಬೇಕಾದದ್ದು ಅನಿವಾರ್ಯವಾಯಿತು.

(1973)ರಲ್ಲಿ ಪ್ರಕಟಗೊಂಡ ಕಾದಂಬರಿಗಳ ಸಮೀಕ್ಷೆ ಮಾಡಿದ ಎನ್.ವಿ. ವಿಮಲರವರು ಹೇಳುವಂತೆ "ಎಂ.ಕೆ. ಇಂದಿರಾ ಅವರ 'ಜಾತಿ ಕೆಟ್ಟವಳು' ಕಾದಂಬರಿಯ ವಸ್ತು ಸಾಮಾನ್ಯವಾದದ್ದಾದರೂ ನಿರೂಪಣೆಯಿಂದ ಆಕರ್ಷಕವಾಗಿದೆ. ರೋಚಕವಾಗಿದೆ". ಕಾದಂಬರಿಯ ಸಾಮಾಜಿಕ ಪ್ರಸ್ತುತತೆಯನ್ನು ಗಮನಿಸದೆ ಸಮೀಕ್ಷೆಯಲ್ಲಿ ನೇರ ಮಾತುಗಳಲ್ಲಿ ಹೇಳುವ ಪ್ರಯತ್ನ ಮಾಡಿರುವುದು ಅಂದಿನ ಅನಿವಾರ್ಯ ವಿಮರ್ಶೆಯಾಗಿತ್ತು.

ಎಂ.ಕೆ. ಇಂದಿರಾ ಸಮಾಜದಲ್ಲಿರುವ ಸ್ತ್ರೀ ಬಗೆಗಿನ ಸಾಮಾಜಿಕ ಧೋರಣೆಯನ್ನು ಖಂಡಿಸಿದ್ದಾರೆ. ಮಲೆನಾಡಿನ ಬ್ರಾಹ್ಮಣ ಕುಟುಂಬಗಳಲ್ಲಿ ಹೆಣ್ಣುಮಕ್ಕಳು ಉಸಿರಾಡುವುದು ಸಾಧ್ಯವಾಗದ ಸ್ಥಿತಿ ಇದೆ. ಹೆಣ್ಣು ಹುಟ್ಟಿದ ದಿನದಿಂದಲೇ ಸಮಸ್ಯೆಯಾಗುತ್ತಾಳೆ. ಎಂ.ಕೆ ಇಂದಿರಾ ತಮ್ಮ ಕಾದಂಬರಿಗಳ ಮೂಲಕ ಈ ಸಮಸ್ಯೆಗಳನ್ನು ಅನಾವರಣಗೊಳಿಸುತ್ತಲೇ ಅವುಗಳ ನಿವಾರಣೆಗೆ ಬೇಕಾಗಿರುವ ಬದ್ಧತೆಯನ್ನು ನಮ್ಮೆದುರಿಗಿಡುತ್ತಾರೆ.

'ಗೆಜ್ಜೆ ಪೂಜೆ' (1966) ಕಾದಂಬರಿಯಲ್ಲಿ ಹೆಣ್ಣಿನ ಸಮಸ್ಯೆಗಳ ವಿವಿಧ ಮಗ್ಗಲುಗಳ ಪರಿಚಯ ಆಗುತ್ತದೆ. ಇಲ್ಲಿ ಸ್ತ್ರೀಯೇ ಪ್ರಧಾನ ವಸ್ತುವಾದ್ದರಿಂದ ಅಂದಿನ ಸಮಾಜದಲ್ಲಿ ಸ್ತ್ರೀ ಅನುಭವಿಸುತ್ತಿದ್ದ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. 'ಗೆಜ್ಜೆ ಪೂಜೆ' ವೇಶ್ಯೆಯೊಬ್ಬಳ ಸುತ್ತ ಹೆಣೆದ ಕತೆ. 'ಚಂದ್ರ' ವೇಶ್ಯೆ ಸಂಗವ್ವನ ಮೊಮ್ಮಗಳು. ಅವಳ ತಾಯಿ ಅಪರ್ಣ ಕೂಡ ವೇಶ್ಯೆ. ಆದರೆ ತನ್ನ ಮಗಳು ಈ ನರಕದಿಂದ ಪಾರಾಗಬೇಕೆಂಬ ಬಯಕೆಯಿಂದ ವಿದ್ಯೆ ಕೊಡಿಸುತ್ತಾಳೆ. ಹಣ, ಅಂತಸ್ತು, ವಿದ್ಯೆ ಏನೆಲ್ಲಾ ಇದ್ದಾಗ್ಯೂ ಸಾಮಾಜಿಕ ವ್ಯವಸ್ಥೆಯಲ್ಲಿ ಅವಳಿಗೆ ಅಂಟಿಕೊಂಡ ವೇಶ್ಯೆ ಪಟ್ಟದಿಂದ ಮಾತ್ರ ಹೊರಬರಲಾಗದೆ ತೊಳಲಾಡುತ್ತಾಳೆ.

ಇದೊಂದು ಸಮಾಜಕ್ಕೆ ಅಂಟಿಕೊಂಡ ಪಿಡುಗಾಗಿದ್ದು, ಕಾನೂನು ರೀತ್ಯ ತೊಡೆದುಹಾಕಲು ಪ್ರಯತ್ನಿಸಿದಷ್ಟು ಬೇರೆ ಬೇರೆ ರೂಪಗಳನ್ನು ತಳೆದು ಉಳಿದುಕೊಂಡು ಬಂದಿದೆ. ದೇವದಾಸಿ, ಮುತ್ತು ಕಟ್ಟುವುದು, ಬಸವಿ ಬಿಡುವುದು ಮುಂತಾದವು ಅನಿಷ್ಟಗಳು ಇವತ್ತಿಗೂ ಸಮಾಜದಲ್ಲಿ ಉಳಿದುಕೊಂಡು ಬಂದಿದೆ. ಜನರಲ್ಲಿರುವ ಅಜ್ಞಾನ ಮೂಢನಂಬಿಕೆ, ಶಿಕ್ಷಣದ ಕೊರತೆ, ಬಡತನ, ಹೆಚ್ಚುತ್ತಿರುವ ಜನಸಂಖ್ಯೆ, ವರದಕ್ಷಿಣೆ ಪಿಡುಗು ವೇಶ್ಯಾಪದ್ಧತಿಯ ಹೆಚ್ಚಳಕ್ಕೆ ಕಾರಣ ಎನ್ನಬಹುದು. ಧನದಾಹವುಳ್ಳ ಸಂಗವ್ವ ಹುಟ್ಟಿದ ತಿಂಗಳಲ್ಲೇ ತಬ್ಬಲಿಯಾದ '[illegible]ರ್ಣ' ಳನ್ನು ದುರಾಸೆಯಿಂದ ಸಾಕುತ್ತಾಳೆ. ಅಪರ್ಣ ಯೌವನಕ್ಕೆ ಬಂದಾಗ ಬ್ರಾಹ್ಮಣ ಯುವಕ ಚಂದ್ರಶೇಖರನೊಡನೆ ಸ್ನೇಹ ಬೆಳೆಸಿ ಗರ್ಭಿಣಿಯಾಗುತ್ತಾಳೆ. ಆದರೆ ಚಂದ್ರಶೇಖರ ಶ್ರೀಮಂತನಲ್ಲದ ಕಾರಣ ಸಂಗವ್ವ ಅಪರ್ಣಳನ್ನು ಬೇರೆ ಕಡೆಗೆ ಕರೆದೊಯ್ದು ಶ್ರೀಮಂತ ಶೆಟ್ಟಿಗೆ 'ಗೆಜ್ಜೆ ಪೂಜೆ' ಮಾಡಿಸುತ್ತಾಳೆ. ಅನಾಥಳಾಗಿ ಹುಟ್ಟಿದ ಒಂದೇ ಕಾರಣಕ್ಕಾಗಿ ತನ್ನ ಬಾಳನ್ನೇ ಹಾಳು ಮಾಡಿಕೊಂಡ ಅಪರ್ಣ ಸಮಾಜದ ಈ ಕ್ರೌರ್ಯದ ಕುರಿತು ಎಂದೂ ಯೋಚಿಸುವುದಿಲ್ಲ.

ಚಂದ್ರ ಮಾತ್ರ ಭಿನ್ನವಾಗಿಯೇ ಬೆಳೆಯುತ್ತಾಳೆ. ಅವಳ ಅದಮ್ಯ ಚೇತನಕ್ಕೆ ಒಂದೊಂದು ಸಾರಿ ಆಘಾತವಾಗುವುದುಂಟು. 'ಸೂಳೆಯ ಮಗಳು ಸೂಳೆ' ಎಂದು

ಹೀಯಾಳಿಸುವ ಸುತ್ತಲಿನ ಜನರ ಕಹಿನುಡಿಗೆ ನೊಂದುಕೊಳ್ಳುತ್ತಾಳೆ. ಅವಳು ದೊಡ್ಡವಳಾದ ಮೇಲೆ, ಸಮಾಜದಲ್ಲಿ ತನ್ನ ಮನೆಗೂ ಪರರ ಮನೆಗೂ ಇರುವ ತಾರತಮ್ಯವನ್ನು ಗ್ರಹಿಸುತ್ತಾಳೆ. ಎದುರುಮನೆಯ ಬ್ರಾಹ್ಮಣ ಯುವಕ ಸೋಮನನ್ನು ಪ್ರೀತಿಸುತ್ತಾಳೆ. ಸಂಪ್ರದಾಯಕ್ಕೆ ಅಂಟಿಕೊಂಡ ಸೋಮನ ಮನೆಯವರು ಮದುವೆಗೆ ಒಪ್ಪಲಾರರೆಂಬ ಅಳುಕು ಅವನಿಗಿದೆ. ಚಂದ್ರ ದ್ವಂದ್ವದಲ್ಲಿ ಮುಳುಗುತ್ತಾಳೆ.

ಚಂದ್ರ ತನ್ನ ಹುಟ್ಟು ಬ್ರಾಹ್ಮಣನೊಬ್ಬನಿಂದಾದದ್ದು ಎಂಬುದನ್ನು ಅರಿತಾಗ ಖುಷಿಪಡುತ್ತಾಳೆ. ತಾನು ಉಚ್ಚಕುಲಕ್ಕೆ ಸೇರಿದವಳೆಂದು ಸಮಾಜಕ್ಕೆ ತೋರಿಸಬೇಕೆಂದು ಮನದೊಳಗೆ ಧೃಢನಿರ್ಧಾರ ಮಾಡುತ್ತಾಳೆ. ತನ್ನ ಪ್ರಿಯಕರ ಸೋಮನಿಗೆ ಜೀವನ ವೃತ್ತಾಂತ ಹೇಳಿದಾಗಲೂ ಅವಳನ್ನು ಕೇವಲ ಭೋಗದ ವಸ್ತುವೆಂದು ತಿಳಿಯುತ್ತಾನೆ ವಿನಃ ಅವಳ ಆಂತರಿಕ ಮಾನಸಿಕ ಒತ್ತಡಕ್ಕೆ ಸ್ಪಂದಿಸುವುದಿಲ್ಲ. ಸಾಮಾಜಿಕವಾಗಿ ಪುರುಷ ಸ್ತ್ರೀಯನ್ನು ನಡೆಸಿಕೊಂಡು ಬಂದ ರೀತಿಗೆ ಒಂದು ಉತ್ತಮ ಉದಾಹರಣೆ 'ಗೆಜ್ಜೆ ಪೂಜೆ' ಪುರುಷ ತನ್ನ ಸ್ವಾರ್ಥಕ್ಕಾಗಿ ಹೆಣ್ಣನ್ನು ಬಲಿಕೊಡುವುದರಲ್ಲಿ ನಿಸ್ಸೀಮ. ಚಂದ್ರಶೇಖರ ಚಂದ್ರಳಿಗೆ ತನ್ನ ಮಗಳೆಂದು ಯಾರಿಗೂ ಹೇಳಬಾರದೆಂದು ಮಾತು ತೆಗೆದುಕೊಳ್ಳುತ್ತಾನೆ. ಒಂದೆಡೆ ಸಮಾಜ ಮತ್ತೊಂದು ಕಡೆಗೆ ತಂದೆಗಿತ್ತ ವಚನ (dialema) ಉಭಯಸಂಕಟದಲ್ಲಿ ತೊಳಲಾಡುವ ಚಂದ್ರ ಸಮಸ್ಯೆಯ ಜಟಿಲತೆಯ ಅರಿವಾದೊಡನೆ ಗೆಜ್ಜೆ ಪೂಜೆಗೆ ಒಪ್ಪಿಕೊಳ್ಳುತ್ತಾಳೆ.

ಚಂದ್ರ ಚಿಕ್ಕವಳಿರುವಾಗಲೇ ಅವಳನ್ನ ಕಾಡುವ ಜಾತಿ.ಮತ, ತಂದೆ, ತಾಯಿ, ಸೂಳೆ ಎಂಬ ಪ್ರಶ್ನೆಗಳನ್ನು ಮೀರಿ ಬೆಳೆಯುತ್ತಾಳೆ. ಗೆಳತಿಯ ಅಕ್ಕನ ಮದುವೆಯನ್ನು ಕಂಡು ತಾನೂ ಮದುವೆಯಾಗಬೇಕೆಂದು ಬಯಸುತ್ತಾಳೆ. ಆದರೆ ಸೂಳೆ ಎನ್ನುವ ಪದ ಅವಳ ಅಸ್ಥಿತ್ವವನ್ನೇ ಜಾಲಾಡಿಬಿಡುತ್ತದೆ. ತಂದೆ ಎನಿಸಿಕೊಂಡ ಶೆಟ್ಟಿಯ ಬಗೆಗೆ ತಿರಸ್ಕಾರ ಉಂಟಾಗುತ್ತದೆ. ತಾನು ಪ್ರೀತಿಸಿದ ಸೋಮನ ಮೇಲೆ ಪ್ರಾಣವನ್ನೇ ಇಟ್ಟುಕೊಂಡ ಚಂದ್ರಿಗೆ ಸೋಮ ತೋರಿಸುವ ನಿರ್ಲಿಪ್ತತೆ ಪುರುಷ ಪ್ರಧಾನ ಸಮಾಜದ ಸಹಜತೆ ಎನ್ನುವಂತಿದೆ. ಅವನಿಗೆ ಚಂದ್ರಿಯೊಡನೆ ಸುಖ ಬೇಕು. ಆದರೆ ಸಮಾಜವನ್ನು ಎದುರಿಸಿ ಮದುವೆಯಾಗುವುದು ಬೇಡ. ಅವಳ ಅನಿವಾರ್ಯತೆಯ ಉಪಯೋಗ ಪಡೆದುಕೊಂಡು ಕಾಲಕ್ರಮೇಣ ಅವಳನ್ನು ಬದಿಗೆ ಸರಿಸಿ ಮದುವೆಯಾಗುವ ಸೋಮ, ಸಂಪ್ರದಾಯದ ಕಾವಲುಗಾರನಂತೆ ಕಂಡುಬರುತ್ತಾನೆ.

ಚಂದ್ರಾಳಿಗೆ ಮದುವೆಯೇ ಮುಖ್ಯವಾಗಿಬಿಡುತ್ತದೆ. ಎಂ.ಕೆ.ಇಂದಿರಾ ಮದುವೆ ಇಲ್ಲದಿದ್ದರೆ ಹೆಣ್ಣಿಗೆ ಅಸ್ತಿತ್ವವೇ ಇಲ್ಲ ಎಂಬಂತೆ ಚಿತ್ರಿಸಿದ್ದಾರೆ. ಅಂದಿನ ಕಾಲದ ರೀತಿ ನೀತಿ ಸಂಪ್ರದಾಯದ ಚೌಕಟ್ಟಿನೊಳಗೆ ತಮ್ಮ ಬರವಣಿಗೆಯನ್ನು ಮಾಡಿಕೊಂಡು

ಬಂದಿದ್ದರಿಂದ ಅವರೆದುರಿಗೆ ಹೆಚ್ಚು ಅವಕಾಶಗಳು ಇದ್ದಾಗ್ಯೂ ಅವು ಗೌಣವಾಗಿಬಿಡುತ್ತವೆ.

ಶಕುಂತಲಾದುರ್ಗಿಯವರು ಅಭಿಪ್ರಾಯಪಡುವಂತೆ ಇಂದಿರಾ ಅವರ ಕಾದಂಬರಿಯಲ್ಲಿ "ವೇಶ್ಯೆಯರ ಬಗೆಗಾಗಲಿ, ಪುರುಷ ಸಮಾಜದ ಬಗೆಗೆ ದ್ವೇಷವಾಗಲಿ, ಟೀಕೆಯಾಗಲಿ, ಖಂಡನೆಯಾಗಲಿ ಬಂದಿಲ್ಲಾ." ಅದು ಅಂತೆಯೇ ಇರುವುದು ನಿರೂಪಿಸುವಲ್ಲಿ ನೈಜತೆಗಿಂತ ಕಲ್ಪನೆಯ ಮೆರಗು ಹೆಚ್ಚಾಗಿದೆ.

ಸಮಾಜದ ಗಂಭೀರ ಸಮಸ್ಯೆಯನ್ನು ಎತ್ತಿಕೊಂಡಿರುವ ಈ ಕಾದಂಬರಿ ಒಂದು ಉತ್ತಮ ಕೃತಿ. ಶ್ರೀಮತಿ ಗೀತಾದೇಸಾಯಿ ಅವರ ಪ್ರಕಾರ, "ವೇಶ್ಯಾ ಜೀವನದ ಬಗೆಗೆ ಇದುವರೆಗೆ ಅನೇಕ ಕಾದಂಬರಿಗಳು ಬಂದಿದ್ದರೂ ಇವುಗಳಲ್ಲೆಲ್ಲಾ " 'ಗೆಜ್ಜೆಪೂಜೆ' ಕಲಶಪ್ರಾಯವಾಗಿದೆ. ಸಮಸ್ಯೆ ಹಳೆಯದಾದರೂ ಅದನ್ನು ಹೇಳುವ ಇಂದಿರಾ ಕೌಶಲ್ಯಪೂರ್ಣ ವಿಧಾನ, ಸ್ವಭಾವಿಕ ಸನ್ನಿವೇಶಗಳಿಂದ ನಾವೀನ್ಯಪೂರ್ಣ ಎನಿಸುತ್ತದೆ.

ಆದ್ದರಿಂದಲೇ 'ಗೆಜ್ಜೆಪೂಜೆ' ಒಂದು ವಿಶಿಷ್ಟ ಕೃತಿಯಾಗಿದೆ.ಇಂದಿರಾ ಅವರ ನಿರೂಪಣೆ ಅದ್ಭುತವಾಗಿದೆ. ಹೊಸದೃಷ್ಟಿಕೋನದಿಂದ ನೋಡದಿದ್ದರೂ 'ಹೆಣ್ಣಿನ ಶತ್ರು ಹೆಣ್ಣೇ' ಎಂದು ಪ್ರತಿಪಾದಿಸುವಲ್ಲಿ ಹೆಣ್ಣಿನ ಶೋಷಣೆ ಹೆಚ್ಚು ಸಂದರ್ಭಗಳಲ್ಲಿ ಹೆಣ್ಣಿನಿಂದಲೇ ಆಗುತ್ತದೆ. ಈ ನಿಟ್ಟಿನಲ್ಲಿ 'ಗೆಜ್ಜೆಪೂಜೆ' ಉತ್ತಮ ಕಾದಂಬರಿಯಾಗಿದೆ.

ಸದಾನಂದ (1965)

ಸ್ಥಿತ್ಯಂತರ ಹೊಂದಿರುವ ಸಮಾಜದಲ್ಲಿಯೂ ಉಳಿದುಬಂದಿರುವ, ಅರ್ಥಹೀನ ಸಂಪ್ರದಾಯ, ಕಟ್ಟುಪಾಡುಗಳನ್ನು ಮುರಿಯುವ ಪ್ರಯತ್ನ ಸದಾನಂದದಲ್ಲಿ ನಡೆದಿದೆ. ಬಾಲ್ಯವಿಧವಾ ವಿವಾಹ, ಅಂಗವಿಕಲರ ಸಮಸ್ಯೆಗಳನ್ನೊಳಗೊಂಡಿದೆ. ?ರ್ಮಶಾಸ್ತ್ರ ಕುರುಡು ಸಂಪ್ರದಾಯ, ದೈವ, ಭೂತಗಳದ್ದೇ ಪ್ರಧಾನವಾದ ಬ್ರಾಹ್ಮಣ ಸಮಾಜ ವಿಧವೆಯರ ಬಾಳನ್ನು ನರಕ ಮಾಡಿದೆ. ಆದರೆ ಕೆಳವರ್ಗದಲ್ಲಿ ಅಷ್ಟೊಂದು ದೊಡ್ಡ ಸಮಸ್ಯೆಯಾಗಲಾರದು. ವಿಧವೆಯರು ಕೂಡಿಕೆಮಾಡಿಕೊಂಡು ಬದುಕನ್ನು ಸಾಗಿಸುವ ಹಿನ್ನೆಲೆಗಳಿವೆ.

ಆದರೆ ಸಮಾಜದಲ್ಲಿ ಹಾಗೂ ಕುಟುಂಬಗಳಲ್ಲಿ ವಿಧವೆಯನ್ನು ನೋಡುವ ದೃಷ್ಟಿ ಬದಲಾಗಬೇಕು. ಹಳೆ ತಲೆಮಾರಿನ ಹಿರಿಯರ ಸಂಪ್ರದಾಯ ಕಟ್ಟಳೆ ಮುರಿದು, ಬದಲಾದ ಹೊಸ ಪೀಳಿಗೆಯೊಡನೆ ಹೊಂದಾಣಿಕೆ ಮಾಡಿಕೊಳ್ಳುವ ವಿಚಾರ ಬೆಳೆಸಿಕೊಳ್ಳುವುದು ಅಗತ್ಯ. ಈ ದೆಸೆಯಲ್ಲಿ ವಿದ್ಯಾವಂತ ಯುವಕರು,

ಧೀರಪುರುಷರು ವಿಧವೆಯರ ಕೈ ಹಿಡಿದು ಅವರಿಗೊಂದು ಹೊಸಬಾಳು ಕೊಟ್ಟಾಗ ಸಮಸ್ಯೆಗೊಂದು ಪರಿಹಾರ ದೊರೆತೀತು ಎಂಬುದು ಲೇಖಕಿಯ ಅಭಿಲಾಷೆ. ಆದರೆ ಜಾತಕ, ದೈವತ್ವದ ಮೇಲಿನ ನಂಬಿಕೆಯನ್ನು ಯಥಾವತ್ತಾಗಿ ನಿರೂಪಿಸಿರುವ ಲೇಖಕಿ ಪ್ರಗತಿಪರ ವಿಚಾರ ಮಂಡನೆಯೊಂದಿಗೆ ತಳುಕುಹಾಕುತ್ತಾರೆ. 'ಶ್ರೀಮತಿ ಎಂ.ಕೆ. ಇಂದಿರಾ ಅವರ 'ಸದಾನಂದ' ಕಾದಂಬರಿಯಲ್ಲಿ ಮೊದಮೊದಲು ವಸ್ತು ಸ್ಪಷ್ಟವಾಗುವುದಿಲ್ಲ. ಮದುವೆ ಸಂಬಂಧಗಳಲ್ಲಿ ದೈವದ ಪಾತ್ರ ಕಾದಂಬರಿಯ ವಸ್ತುವಿರಬಹುದೇನೋ. ಕಾದಂಬರಿಯಲ್ಲಿ ಆದರ್ಶವಾದಿ, ವಿಧುರ ಲೇಖಕ ಸದಾನಂದನ ಪ್ರವೇಶದೊಂದಿಗೆ ಸಮಸ್ಯೆಗೆ ಬೇರೆ ಸ್ವರೂಪವೇ ಬರುತ್ತದೆ.' ಡಾ. ಗಿರಡ್ಡಿಯವರ ಈ ಅಭಿಪ್ರಾಯ ನಿಜವೆನಿಸುತ್ತದೆ. ಯಾರೋ ಒಬ್ಬ ಪಂಡಿತ ಹೇಳಿದ ತಕ್ಷಣ ನಡೆಯುವುದಾದರೆ ವಿಶ್ವದಲ್ಲಿ ಎಲ್ಲಾ ಉಲ್ಟಾ ಪಲ್ಟ ಆಗುತ್ತಿತ್ತೇನೋ. ಸ್ವಯಂ ಎಂ.ಕೆ. ಇಂದಿರಾ ಅವರೇ ಕೆಲವೊಮ್ಮೆ ಗೊಂದಲಕ್ಕೆ ಈಡಾಗಿರುವುದು ಅವರ ಕಾದಂಬರಿಯಲ್ಲಿ ಅಲ್ಲಲ್ಲಿ ಕಂಡುಬರುತ್ತದೆ.

ದಿ. ಶ್ರೀರಂಗರ ಅಭಿಪ್ರಾಯ ಹೀಗಿದೆ. 'ಈ ಕಾದಂಬರಿಯಲ್ಲಿ ಸದಾನಂದನೇ ಬುದ್ಧಿಪೂರ್ವಕವಾಗಿ ಕ್ರಾಂತಿಯ ವಾತಾವರಣ ನಿರ್ಮಿಸುತ್ತಾನೆ. ಸ್ಮಾರ್ತ ತಂದೆ, ಹವ್ಯಕ ತಾಯಿ, ಪಿತ್ರಾರ್ಜಿತ ಸಂಪತ್ತು, ಮೆರಗಿನ ರೂಪ ಆರೋಗ್ಯಗಳಿದ್ದರೂ, ಕಳೆದ ಹೆಂಡತಿ ಸ್ಮರಣೆಗೆ ನಿಷ್ಠನಾದ ವಿಧುರ, ಮೂವತ್ತರಡನೆಯ ವಯಸ್ಸಿಗೆ ಅನುಭವಜನ್ಯ ತತ್ವಜ್ಞಾನ ಹೊಗೆಸೊಪ್ಪಿನ ದುರಭ್ಯಾಸ ಮಾತಿಲ್ಲದ ಸಮಾಜಸೇವೆ ಜನಪ್ರಿಯ ಕಾದಂಬರಿಕಾರ. ಪ್ರಾಮಾಣಿಕತೆ ಮತ್ತು ಧೈರ್ಯ ಹೀಗೆ ಬಂದ ಸ್ವರೂಪದ ಆದರ್ಶಪ್ರಾಯನಾಗಿದ್ದರೂ ಬರಲಿಕ್ಕುಂಟೋ ಎಂಬ ಸಹಜ ಶೈಲಿಯಿಂದ ಜೀವಂತಾಗಿದ್ದಾನೆ. ತಮ್ಮ ವಿಚಾರವಾದಿ, ಆದರ್ಶವಾದಿ ವೈಚಾರಿಕತೆಯ ಅಭಿವ್ಯಕ್ತಿಗಾಗಿಯೇ ಸದಾನಂದನ ಪಾತ್ರವನ್ನು ಲೇಖಕಿ ಸೃಷ್ಟಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.'

ಎಂ.ಕೆ. ಇಂದಿರಾ, ನಿರೂಪಣೆಯಲ್ಲಿ ಮುಗ್ಧ ವಿಧವೆ ಬದುಕಿನ ಆರಂಭ ಕುರಿತು ಹೀಗೆ ಬರೆಯುತ್ತಾರೆ. "ಹನ್ನೆರಡನೆಯ ವರ್ಷಗಳವರೆಗೆ ಏನು ನಡೆಯಿತು ಎಂಬುದು ಅವಳಿಗೆ ನೆನೆಪಿಲ್ಲ. ಕಟ್ಟಿದ ಕೆಲವೇ ದಿನಗಳಲ್ಲಿ ಮಾಂಗಲ್ಯ ತೆಗೆದಾಯಿತು. ಬಂದು ನೋಡಿ ವ್ರತಗಳಿಲ್ಲ, ಪೂಜೆ.ಪುರಸ್ಕಾರಗಳಿಲ್ಲಾ, ಬ್ರಾಹ್ಮಣ ಮುತ್ತೈದೆಯರ ಸೇವೆಯಲ್ಲಿ ಮನೆಯ ಮೂಲೆ ಕೋಣೆಯವೇ , ಉಂಡುಟ್ಟು ಸುಖದಿಂದ ಸರಿಯಿತು ಹನ್ನೆರಡು ವರ್ಷ. ಮತ್ತೆ ನೂರು ವರ್ಷ ಬದುಕಿದ್ದರೂ ಉಂಡು ಉಡುವುದಕ್ಕೆ ನೆಮ್ಮದಿ. ಸುಖವೆ? ನೆಮ್ಮದಿಯೆ ? ಇಷ್ಟರಿಂದ ಬದುಕಿನ ಸಾರ್ಥಕತೆಯಾಯಿತೆ"

ಸ್ತ್ರೀಯರ ಜಡಬದುಕಿನ ಕುರಿತು ಲೇಖಕಿ ಚಿಂತಿಸಿದ್ದು ಕಮಲಳ ಅಂತರಂಗವನ್ನು ಒಳಹೊಕ್ಕು ನೋಡಿದವರಂತೆ ಮೊನಚಾಗಿ ಬರೆಯುತ್ತಾರೆ.

ಪುರುಷರಲ್ಲಿಯ ದ್ವಂದ್ವವನ್ನು ಸಮರ್ಥವಾಗಿ ಚಿತ್ರಿಸುತ್ತಾ ಕಮಲಾಳ ಮದುವೆ ವಿಷಯ ಕುರಿತು ರಾಜು ಮತ್ತು ಅವನ ತಂದೆಯ ನಡುವೆ ನಡೆಯುವ ಮಾತುಕತೆ ಹಾಗೂ ಆತನ ತಂದೆ ರಾಮಣ್ಣದ್ವಂದ್ವದಲ್ಲಿ ಸಿಲುಕಿ ಯಾವ ನಿರ್ಣಯವನ್ನೂ ತೆಗೆದುಕೊಳ್ಳಲಾಗದ ಸ್ಥಿತಿ ಸಮಾಜದಲ್ಲಿಯ ಆಚರಣೆಗಳು ಅವರೊಳಗೆ ನೆಲೆಸಿರುವ ಪರಿಗೆ ಒಂದು ಉತ್ತಮ ಉದಾಹರಣೆಯೇ ಸರಿ.

"ಅಕ್ಕನಿಗೊಂದು ಮದುವೆ ಮಾಡ್ಬೇಕಪ್ಪ!" ರಾಮಣ್ಣನವರ ವಿಚಾರ ತುಂಡಾಯಿತು. ಎದುರಿಗೆ ತೋಟದಲ್ಲಿದ್ದ ನೀರು ಕುಡಿದು ಕುರ್ಚಿಗೆ ಕುಳಿತರು. ರಾಜು ಸುಮ್ಮನೆ ಕುಳಿತಿದ್ದ. ಹತ್ತು ನಿಮಿಷ ಬಿಟ್ಟು ತೊದಲಿದರು ತಂದೆ.

"ಈಗ ನೀನು ಏನಂದೆ?"

"ಅಕ್ಕನಿಗೊಂದು ಮದುವೆ ಮಾಡಬೇಕೊಂದೆ"

"ಏನೇ ಆದರೂ ಇದು ನಮ್ಮ ಜನಕ್ಕೆ ಬಂದದ್ದಲ್ಲ ಕಣೋ ರಾಜ." ಎಂದು ರಾಮಣ್ಣ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿರುತ್ತಾರೆ. ಬಿಸಿರಕ್ತದ ಯುವಕ ರಾಜುವಿನಲ್ಲಿ ಏನನ್ನಾದರೂ ಸಾಧಿಸಬಲ್ಲೆ ಎಂಬ ಛಲ ಎದೆಯೊಳಗಿರುವುದರಿಂದ ತಂದೆಯವರಿಗೆ ಅವನ ಅಕ್ಕನ ಬದುಕಿನ ನಿಜಸ್ಥಿತಿಯ ಅರಿವು ಮಾಡಿಕೊಡುತ್ತಾನೆ.

"ಇದಕ್ಕೆ ನಾ ಏನೇಳ್ಲಪ್ಪ ಬರೀ ಉಂಡು ತಿಂದು ನಿದ್ದೆ ಮಾಡೋದೇ ಒಂದು ಜೀವನಾಂತ ಅಂದ್ರೆ ಒಂದು ಕಾಡು ಮರಕ್ಕೂ ನಮಗೂ ಏನೂ ವ್ಯತ್ಯಾಸಾನೇ ಇಲ್ಲ. ನಾವೆಲ್ಲ ಮದ್ವೆ, ಮಾಡ್ಕೊಂಡು ಲೋಲಾಪತಿ ಮಾಡೋದು, ಅವಳೊಬ್ಬಳು ಸನ್ಯಾಸಿ ಆಗಿರೋದಂದ್ರೆ ನಂಗಂತೂ ತುಂಬಾ ಬೇಜಾರಪ್ಪ, ಗಂಡಸರಿಗಾದ್ರೆ ಇಷ್ಟೊತ್ತಿಗೆ ಮೂರು ಮದ್ವೆ ಆಗಿರ್‍ತಿತ್ತು" ಎನ್ನುವಲ್ಲಿ ನಮ್ಮ ಸಮಾಜದ ಕಟ್ಟುಕಟ್ಟಳೆಗಳ ಬಗ್ಗೆ ಸಿಟ್ಟಿದೆ. ಸ್ತ್ರೀ ಪುರುಷರ ಬಗ್ಗೆ ನಮ್ಮ ಸಾಮಾಜಿಕ ವ್ಯವಸ್ಥೆಯೊಳಗಿರುವ ಇಬ್ಬಗೆಯ ನೀತಿ ಕುರಿತು ರೋಷವಿದೆ.

ಮಗನ ಆವೇಶಭರಿತ ಮಾತುಗಳು ರಾಮಣ್ಣನವರನ್ನು ಚಿಂತೆಗೀಡುಮಾಡುತ್ತವೆ. ಮಗಳ ಭವಿಷ್ಯಕ್ಕಾಗಿ ಕುರುಡು ಕಟ್ಟಳೆಗಳನ್ನು ಕಿತ್ತೊಗೆದು, ಹೊಸ ಜನಾಂಗದ ವಿಚಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಹಳೆಯದರಿಂದ ಸಂಪೂರ್ಣ ಮುಕ್ತರಾಗದೇ, ಹೊಸ ಮೌಲ್ಯಗಳನ್ನು ಸ್ವೀಕರಿಸುವಾಗ ಉಂಟಾಗುವ ಸಂಘರ್ಷ ಅವರಲ್ಲಿ ಕಂಡುಬರುತ್ತದೆ.

ಫಣಿಯಮ್ಮ (೧೯೭೬)

ಹಿಂದಿನ ಸಮಾಜದಲ್ಲಿ 'ಸ್ತ್ರೀ' ಯಾವ ರೀತಿ ಬದುಕಿದ್ದಳು ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ. ಒಂಬತ್ತು ವರ್ಷಕ್ಕೆ ವಿಧವೆಯಾಗಿ ನೂರಾ ಹನ್ನೆರಡು ವರ್ಷಗಳ ಸುದೀರ್ಘ ಜೀವನ ನಡೆಸಿ ತಮ್ಮ ಜೀವನದಲ್ಲಿ ತಾವು ಕಂಡುಂಡ ಅನುಭವಗಳೊಟ್ಟಿಗೆ ಸಮಾಜ-ಸಂಸ್ಕೃತಿಗಳಲ್ಲಾದ ಬದಲಾವಣೆಗಳನ್ನು ಕಂಡ ಫಣಿಯಮ್ಮ ಐತಿಹಾಸಿಕ ಮೈಲುಗಲ್ಲೇ ಸರಿ. ತನ್ನ ಪಾಲಿಗೆ ಸತ್‌ಪ್ರಭಾವ ಬೀರುವ ಶಕ್ತಿಯಾಗುತ್ತಾಳೆ.

ಕಾದಂಬರಿಯ ಆರಂಭದಿಂದಲೇ ಲೇಖಕಿ ಸ್ತ್ರೀ ಶೋಷಣೆಯಲ್ಲಿ ಪುರುಷವರ್ಗ, ಅದರಲ್ಲೂ ಬ್ರಾಹ್ಮಣ ಸಮಾಜದ ಮಠಮಾನ್ಯಗಳ ಕೈವಾಡ ಹಾಗೂ ತೆಗೆದುಕೊಳ್ಳುವ ಅಮಾನುಷ ತೀರ್ಮಾನಗಳನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸುತ್ತಾ, ಗೇಲಿಮಾಡುತ್ತಾರೆ.

"ಆಗಿನ ಕಾಲದಲ್ಲಿ ಬಲವಾಗಿ ಬೇರೂರಿದ್ದೆಂದರೆ ವಿಪರೀತ ಮಡಿವಂತಿಕೆ. ಅದರ ಜೊತೆಗೆ ಸಂಪ್ರದಾಯ ಶಾಸ್ತ್ರ ಮತ್ತು ಹೆಚ್ಚಿನದೆಂದರೆ ಕೂಪಮಂಡೂಕತ್ವ. ಆಗ ಶ್ರೀ ಶ್ರೀ ಶ್ರೀ ನೃಸಿಂಹ ಭಾರತಿ ಸ್ವಾಮಿಗಳು ಪಟ್ಟಕ್ಕೆ ಬಂದಕಾಲ. ಮಾತೆತ್ತಿದರೆ ಬಹಿಷ್ಕಾರ, ಯಾವಳಾದರೂ ಬಾಲ ವಿಧವೆ ಬಸುರಿಯಾದಳೆಂದರೆ ಮುಗಿಯಿತು. ಆಕೆಯನ್ನು ಬಸಿರುಮಾಡಿದವರೇ ಶೃಂಗೇರಿಗೆ ಹೋಗಿ ಆಕೆಯ ಬಗ್ಗೆ ಸ್ವಾಮಿಗಳಲ್ಲಿ ದೂರು ಹೇಳಿ ಆಕೆಯನ್ನು ಜಾತಿಯಿಂದ ಹೊರಗೆ ಹಾಕಿಸಿ ಬರುತ್ತಿದ್ದರು. ಸ್ವಾಮಿಗಳಾದರೋ ಹೇಳಿ ಕೇಳಿ ಸನ್ಯಾಸಿ. ಸದಾ ಈ ವ್ಯಭಿಚಾರದ ಪುರಾಣ ಕೇಳಿ ಕೈ ಸನ್ನೆಯಿಂದಲೇ ಅದನ್ನು ಮಠದ ಧರ್ಮಾಧಿಕಾರಿಗಳಿಗೆ ವಹಿಸುತ್ತಿದ್ದರು. ಕೇಳಬೇಕೆ? ತೋಳನಿಗೆ ಕುರಿಕಾಯಲು ಬಿಟ್ಟಂತೆ"

ಹೀಗೆ ಲೇಖಕಿ ಬಹಳ ಸೆಡುವಿನಿಂದಲೇ ಬರೆಯುತ್ತಾರೆ. ಸ್ತ್ರೀ ತಟಸ್ಥವಾಗಿ ಭೂಮಿಯಂತೆ ಶೋಷಣೆಯನ್ನು ಅನುಭವಿಸುತ್ತಿರಬೇಕೆಂಬುದು ಗಂಡಿನ ಅಭಿಪ್ರಾಯ. ಶೋಷಣೆ ಎಷ್ಟು ಸಾಧ್ಯವೋ ಅಷ್ಟು ಮಾಡುವುದು ತನ್ನ ಕರ್ತವ್ಯ ಎಂದು ತಿಳಿದಂತಿದೆ.

ತನ್ನ ಮೇಲೆ ನಡೆಯುತ್ತಿರುವ ಹಿಂಸೆಗೆ ಮೂಕಪ್ರೇಕ್ಷಕಳಾಗಿ ನೋಡುತ್ತಾ ಕಾಲಕಳೆಯುತ್ತಿದ್ದ ಫಣಿಯಮ್ಮ ಏನು ನಡೆಯುತ್ತಿದೆ ಎಂಬುದನ್ನು ಅರಿತುಕೊಳ್ಳುವ ಜ್ಞಾನ ಸಹ ಅವಳಲ್ಲಿರಲಿಲ್ಲಾ. "ಹುಡುಗಿ ಇನ್ನೂ ಕನ್ಯೆಯಾಗಿರುವದರಿಂದ ಹನ್ನೊಂದನೇ ದಿನ ಸೌಮಂಗಲ್ಯದ ಚಿಹ್ನೆಗಳನ್ನೆಲ್ಲಾ ತೆಗೆದು ತಲೆಗೂದಲನ್ನು ಮಾತ್ರ ಹಾಗೇ ಬಿಟ್ಟಿರಬೇಕು, ಮತ್ತು ಬಿಳಿ ಸೀರೆ ಉಡಿಸಿರಬೇಕು. ಮೈ ನೆರೆದ ನಾಲ್ಕನೇ ದಿನವೇ ಶಿರೋಮುಂಡನ ಮಾಡಿಸಿ ಆಜನ್ಮ ಮಡಿಹಿಡಿಸಬೇಕು. ಇದರಲ್ಲಿ

ಏನಾದರೂ ಹೆಚ್ಚುಕಡಿಮೆಯಾದರೆ ಇಡೀ ಮನೆತನಕ್ಕೆ ಬಹಿಷ್ಕಾರ" ಮಾನವ ಧರ್ಮಕ್ಕೆ ವಿರುದ್ಧವಾದ ಅಮಾನುಷವಾದ ನಿರ್ಣಯಗಳು. ಏನೂ ಅರಿಯದ ಮುಗ್ಧ ಬಾಲಕಿ, ಜಗತ್ತಿನ ರೀತಿ ರಿವಾಜುಗಳ ಕಲ್ಪನೆ ಕೂಡ ಇಲ್ಲದೆ ಬೆಳೆಯುತ್ತಿರುವವಳಿಗೆ ನಾಲ್ಕು ವರ್ಷಗಳ ಕಾಲ ಕತ್ತಲೆ ಕೋಣೆಯಲ್ಲಿ ಕಳೆಯುವುದೆಂದರೆ? ಹಸುಳೆ ಫಣಿಯಮ್ಮನ ತಲೆಯನ್ನು ನುಣ್ಣಗೆ ಬೋಳಿಸುವಾಗ ಅಸಹಾಯಕಳಾಗಿ ಬಿಕ್ಕುತ್ತಿದ್ದಳು.

ಫಣಿಯಮ್ಮ ವಿಧವೆಯಾಗಿ ಎಪ್ಪತ್ತು-ಎಂಬತ್ತು ವರ್ಷಗಳ ಅನಂತರ ಸಮಾಜದಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದವು. ಗುಡ್ಡೇಪಾಲು ಸೀತಾರಾಮನ ಮಗಳು ದಾಕ್ಷಾಯಿಣಿ ಗಂಡಸತ್ತಾಗ ಕೇವಲ ಹದಿನಾರುವರ್ಷ, ಸಮಾಜದಲ್ಲಿ ಎಷ್ಟೇ ಬದಲಾವಣೆ ಬಂದರೂ ಸ್ತ್ರೀಯರ ವಿಷಯದಲ್ಲಿ ಸಂಪ್ರದಾಯ ಜಿಡ್ಡುಗಟ್ಟಿ ಕೊಂಡಿತ್ತು. ಅವಳ ವಿಧವೆಯಾಗಿ ಹತ್ತನೆ ದಿನ ಊರ ಹಿರಿಯರು, ಮನೆಯ ಮುದುಕ ಮುದುಕಿಯರೆಲ್ಲಾ ಮಡಿ ಹಿಡಿಸಬೇಕೆಂದು ಹಟ ಹಿಡಿದರು. ಸೀತಾರಾಮು ಫಣಿಯಮ್ಮನನ್ನು ಮುಂದಿಟ್ಟು ಕುಳಿತ "ನಾನು ಈಗ್ಗೆ ಮಡಿಯಾಗುವುದಿಲ್ಲ. ರಾತ್ರಿ ಹೊತ್ತು ಉಪವಾಸ ಮಾಡೋಕೆ ನನ್ಕೈಲಿ ಕೂಡಲ್ಲ ನಾ ಒಲ್ಲೆ" ಮೊಂಡು ಹಠ ಹಿಡಿದು ಕುಳಿತ ದಾಕ್ಷಾಯಿಣಿಯ ಮಾತಿಗೆ ಬೇಸರಗೊಂಡು ಮಠದ ದೂತರಾಗಿ ಬಂದ ಭಟ್ಟಯ್ಯ ಸಂಪ್ರದಾಯವನ್ನು ಪೋಷಿಸುವ ಪೋಷಕರಂತೆ "ಸೀತಾರಾಮು, ಎಂಥದಯ್ಯ ನಿನ್ನ ಮಗಳ ಹಟ. ಅದೇ ಮನಿಗೆ ಹಿರಿಯ ಸೊಸೆ. ಪ್ರಾಯದ ಹುಡುಗಿ ಊರೋರ ಕಣ್ಣು ತಾಕೊ ಹಂಗದೆ. ಮಡಿಮಾಡ್ಸಿ ಒಂದು ವರ್ಷನಾರ ಮನೆ ಒಳಗೆ ಮುಚ್ಚಿಟ್ರೆ ಮುಂದೆ ಹ್ಯಾಂಗರ ಸುಧಾರಿಸಬೋದು. ನಿಮ್ಮಜ್ಜಿ ಫಣಿಯಮ್ಮ ನೋಡು, ನಾನು ಹುಟ್ಟೋಕೆ ಮುಂಚಿಂದ ಅವರು ಹೀಂಗೆ ಅದಾರೆ. ಕೈ ಎತ್ತಿ ಮುಗಿಬೇಕು. ಒಂಭತ್ತು ವರ್ಷಕ್ಕೆ ಗಂಡನ್ನ ಕಳಕೊಂಡು ಹದಿಮೂರು ವರ್ಷಕ್ಕೆ ಮಡಿ ಹಿಡಿದು ಅಷ್ಟು ವರ್ಷದಿಂದ ಶಬರಿ ಹಂಗದಾರೆ" ಎಂದು ಫಣಿಯಮ್ಮನ ಬದುಕನ್ನು ಸಮರ್ಥಿಸಿ ಸಮಾಜದಲ್ಲಿನ ಪ್ರಬಲ ಕಟ್ಟುಪಾಡುಗಳು ವಿಧವೆಯೊಬ್ಬಳ ಬದುಕನ್ನು ಅಂಧಕಾರಕ್ಕೆ ನೂಕಿದ್ದರೂ ಅದನ್ನೇ ವೈಭವೀಕರಿಸಿ ಸಮಾಜದಲ್ಲಿ ಬೇರೂರುವಂತೆ ವ್ಯವಸ್ಥಿತವಾಗಿ ನೋಡಿಕೊಳ್ಳಲಾಗುತ್ತಿರುವ ಪುರೋಹಿತಶಾಹಿಯ ಕ್ರಮವನ್ನು ವಿರೋಧಿಸುತ್ತಾರೆ.

ಫಣಿಯಮ್ಮ, ಎಷ್ಟೋ ವರ್ಷಗಳ ಗಾಢ ಮೌನ ಮುರಿದು "ಅಯ್ಯೋ ಭಟ್ಟೈನೋರೆ ನಿಮ್ಮಕಾಲದ ಮಾತ ಯಾತಕ್ಕ ಹೇಳ್ತೀರಿ" ನಂಗಂತೂ ಮುಖ ನೋಡಿದ್ದೂ ನೆನಪಿಲ್ಲ. ನಾ ಹುಟ್ಟಿದ್ದೇ ಹೀಗೇನೋ ಅನಿಸಿಬಿಟ್ಟಿದೆ. ಆಗ್ಲೂ, ಈಗ್ಲೂ ಕಾಲ ಯಾಪಾಟಿ ಬದಲಾಗೈತೆ ಚೆಂದಾಗಿ ಉಂಡು-ತಿಂದು ಮಾಡೋ ಹುಡುಗಿ ಇದು.

ಫಣಿಯಮ್ಮ ಕಾಲಕ್ಕೆ ತಕ್ಕಂತೆ ಬದಲಾಗುವ ಮಾನವೀಯ ಮೌಲ್ಯಗಳಿಗೆ ತುಡಿಯುವ ಹಿರಿ ಚೇತನ. ಹೆಣ್ಣಿನ ಅಂತರಾಳದ ಕ್ಲೀಷೆಯನ್ನು ಅರಿತಿದ್ದರಿಂದ ದಾಕ್ಷಾಯಿಣಿ ಮಾತುಗಳನ್ನು ಸಮರ್ಥಿಸಿದರು. ತನಗಾದದ್ದು ಅವಳಿಗೂ ಆಗಲಿ ಎಂಬ ಸ್ವಾರ್ಥ ಹೆಣ್ಣಾಗದೆ ಹೆಣ್ಣಿನ ಬದುಕಿನ ಚೌಕಟ್ಟನ್ನು ಅರಿತವರಾಗೆ ಭಟ್ಟೈಯ್ಯರಿಗೆ ಕೊಂಕು ನುಡಿಯುತ್ತಾರೆ.

ದಾಕ್ಷಾಯಿಣಿ, ಬದಲಾದ ಕಾಲಮಾನದ ಸ್ತ್ರೀ. ಪ್ರತಿಭಟನೆ ಸಹಜವಾಗೇ ಹೊರ ಹೊಮ್ಮುತ್ತದೆ. ಅವಳ ಮೈದುನನಿಂದಲೇ ಬಸಿರಾದಾಗ ಅವಳನ್ನ ತೌರಿಗೆ ಅಟ್ಟುವ ಪ್ರಯತ್ನಗಳು ನಡೆಯುತ್ತವೆ. ಯಾರ ಪ್ರಭಾವಕ್ಕೂ ಒಳಗಾಗದೆ ಪ್ರತಿಭಟಿಸುತ್ತಾಳೆ. "ನಿಮ್ಮ ಮಗನೇ ಬಸಿರು ತುಂಬಿದವನು. ನಾ ಯಾಕೆ ತೌರಿಗೆ ಹೋಗ್ಲಿ. ನೀವೇ ಬಾಣಂತನ ಮಾಡಿ. ಆ ಮಗನ ಬದ್ಲಿಗೆ ಈ ಮಗ ಅಷ್ಟೇ ಸೈಯಲ್ಲ" ಎಲ್ಲಾ ದಿಗ್ಬಂಧನದಿಂದ ಹೊರಬಂದು ಪ್ರತಿಭಟಿಸುತ್ತಾಳೆ.

ಸಂಪ್ರದಾಯಸ್ಥ ಮುದಿಮಂದಿ ಸುಮ್ಮನೆ ಕೂಡುವವರಲ್ಲ. ಬಿದ್ದರೂ ಮೀಸೆ ಮಣ್ಣಾಗಲಿಲ್ಲಾ ಎಂಬಂತೆ. ಪಂಚಾಯ್ತಿ ಕಟ್ಟೆ ಬಹಿಷ್ಕಾರದ ಹೆದರಿಕೆ ತೋರಿಸುತ್ತಾರೆ. ದಾಕ್ಷಾಯಿಣಿ ಬೇರೆ ಹೆಂಗಸರಂತೆ ಮುದುಡಿಕೊಳ್ಳದೆ ಅದು ಹ್ಯಾಂಗ ಬಹಿಷ್ಕಾರ ಹಾಕುತ್ತಾರೋ ನಾ ನೋಡ್ತಿನಿ. ಕಡಿಗೂ ಬಹಿಷ್ಕಾರ ಹಾಕಿದ್ರ ನಿಮ್ಮನ್ನೆಲ್ಲ ಮನಿಯಿಂದ ಅಟ್ಟಿ ನಾನೊಬ್ಬೆ ಇರ್ತೀನಿ ಏನ್ಮಾಡ್ತೀರಿ? ಇನ್ನೂ ನೀವು ಮಿತಿ ಮೀರಿದ್ರ ಹೊಲೇರ್ನೆಲ್ಲ ಮನೆ ಒಳಗೆ ಕರ್ಕೊಂಡ ಬರ್ತಿನಿ ಗೊತ್ತಾ ? ಅಬ್ಬರ ಹಾಕಿ ಎಷ್ಟೋ ಶತಮಾನಗಳಿಂದ ನಿಂತ ನೀರಂತೆ ಕೊಳೆತು ನಾರುತ್ತಿದ್ದ ವ್ಯವಸ್ಥೆಯನ್ನು ಬಂದಹಾಗೆ ಒಪ್ಕೊಂಡು ಬಂದಿದ್ದ ಹೆಂಗಸರ ಪರವಾಗಿ ಅವರ ಪ್ರತಿನಿಧಿಯಂತೆ ಸಿಡಿದೇಳುತ್ತಾಳೆ. ಫಣಿಯಮ್ಮ ತಮ್ಮ ಗಾಢ ಮೌನದಲ್ಲೇ ವ್ಯವಸ್ಥೆ ನಡುವಿನಿಂದ ಭುಗಿಲೆದ್ದ ಕಿಚ್ಚನ್ನು ಸ್ವಾಗತಿಸುತ್ತಾರೆ. ಇದು ಹೆಣ್ಣಿನ ವಿರುದ್ಧದ ಎಷ್ಟೋ ಸಮಸ್ಯೆಗಳಿಗೆ ಸವಾಲಾಗುವುದೆಂದು ಅರಿತುಕೊಳ್ಳುತ್ತಾರೆ. ಸಂಪ್ರದಾಯವನ್ನು ವಿರೋಧಿಸುವ ಪುರುಷ ಪ್ರಗತಿಶೀಲ ಚಿಂತಕರು ದಾಕ್ಷಾಯಿಣಿಯನ್ನು ಸಮರ್ಥಿಸುತ್ತಾರೆ.

"ಹುಡುಗಿ ಛಲೋ ಕೆಲಸ ಮಾಡಿದ್ಲು. ಮೈದನ್ನೇ ಮಾಡ್ಕಂಡಳಲ್ಲಪ್ಪೋ. ಇವರೇನು ದನಗಳೋ ಕತ್ತೆಗಳೋ, ಅಲ್ಲಾ ಹದಿನಾರು ವರ್ಷ ಪ್ರಾಯದ ಹೆಣ್ಣು ವಯಸ್ಸಾಗಿಲ್ಲ, ಮಕ್ಕಳಾಗಿಲ್ಲ,ಮರಿಯಾಗಿಲ್ಲ ಸಂಸಾರದ ಕಷ್ಟಸುಖ ಕಂಡದ್ದಿಲ್ಲ ಇನ್ನೂ ಆಟ ಆಡೋ ಹುಡುಗೀನ ತಲೇ ಬೋಳ್ಸೋಕೆ ಏನು ಅವಸ್ರಾಗಿತ್ತು. ಈಗಿನ ಕಾಲದಾಗೆ ಮುದುಕೀರೆ ಮಡಿಯಾಗಲ್ಲ. ಸಮಾಮಾಡು ಹುಡುಗಿ, ಮಗು ಅವರ ಮನೇದೆ ಸೈಯಲ್ಲ" ಪುರುಷರು ಸ್ತ್ರೀಯರ ಬಗ್ಗೆ ಯೋಚಿಸುತ್ತಾರೆ. ಅವಳು

ಮನುಷ್ಯಳು. ಅವಳಿಗೂ ಅಸ್ತಿತ್ವವಿದೆ ಎಂದು ತಿಳಿದವರು ಯಾವುದೇ ಪೂರ್ವಗ್ರಹ ಪೀಡಿತರಾಗದೆ ತಮ್ಮ ಬೆಂಬಲ ಸೂಚಿಸುವುದು ಬದಲಾದ ಸಾಮಾಜಿಕ ಜೀವನದ ಸಂಕೇತ. ಹಿಂದೆ ಅಸಹಾಯಕ ತಂದೆತಾಯಿಗಳಿಗೆ ತಮ್ಮ ಕಣ್ಣೆದುರಿಗೆ ಮಗಳ ಜೀವನ ಹಾಳಾಗುವುದನ್ನು ಮೂಕಪ್ರೇಕ್ಷಕರಾಗಿ ನೋಡಿ ಸುಮ್ಮನಾಗಬೇಕಿತ್ತು. ಈಗ ಕಾಲ ಬದಲಾಗಿದೆ.

ಕಾದಂಬರಿಯುದ್ದಕ್ಕೂ ಲೇಖಕಿ ಪುರುಷ ಪ್ರಧಾನ ಸಮಾಜದಲ್ಲಿ ಪುರಾಣ ಪುಣ್ಯ ಕಥೆಗಳಲ್ಲಿ ಬರುವ ಸ್ತ್ರೀಯರನ್ನು ಕುರಿತ ಪಕ್ಷಪಾತ, ಅಸಂಗತತೆಗಳು, ಅವೈಚಾರಿಕತೆ, ಅವೈಜ್ಞಾನಿಕತೆ ಸಂಗತಿಗಳನ್ನು ಫಣಿಯಮ್ಮನ ಮೂಲಕ ಪ್ರಶ್ನಿಸುತ್ತಲೇ ಹೋಗಿದ್ದಾರೆ. ರಾಮಯಾಣ, ಮಹಾಭಾರತಗಳ ಕಾಲದಲ್ಲಿ ಸ್ತ್ರೀಯರನ್ನು ನಡೆಸಿಕೊಂಡ ರೀತಿಯನ್ನು "ಶ್ರೀ ರಾಮನ ಕೈ ಹಿಡಿದ ಮಹಾತಾಯಿ ಸೀತಾದೇವಿ ಎಂಥ ಸುಖಪಟ್ಟೆ! ಉದ್ದಕ್ಕೂ ಆಕೀಗೆ ಕಷ್ಟವೇ ಪ್ರಪಂಚಕೆಲ್ಲಾ ಬೇಕಾದ ದೇವರು ಆ ರಾಮಚಂದ್ರ ಆಕೀನ ಬೆಂಕಿಗೆ ಹಾರಿಸ್ದ. ಬಸರಿಹೆಂಗ್ಸಿನ ಕಾಡಿಗೆ ಕಳಸ್ದ. ದ್ರೌಪದಿ ತುಸು ಕಷ್ಟಪಟ್ಟಳೇ... ಎಂಥ ಪುರಾಣವೋ ಪುಣ್ಯ ಕತೆಯೋ ಅಂತೂ ಮಾಡೊಕೆ ಕಸುಬಿಲ್ಲದೋರು ಬರೆದಿಟ್ರು ನಮ್ಮಂಥ ಸೋಮಾರಿಗಳು ಅದನ್ನ ನಂಬೂದು ಇಷ್ಟೆ ಸೈ..."

ಫಣಿಯಮ್ಮ ಜೀವನದ ಅನುಭವದಿಂದ ಕಲಿತ ಜ್ಞಾನ ಬಹಳಷ್ಟಿದೆ. ಸಮಾಜದಲ್ಲಿಯ ಆಗುಹೋಗುಗಳೆ ಅವಳಿಗೆ ಸಾಕಷ್ಟು ಬೋಧಿಸಿದೆ.

"... ಗಂಡಸರು ಸಾವಿರ ಹೆಂಗಸರನ್ನು ಕೂಡಿದರೂ ಅವರು ಅಗ್ನಿಯಂತೆ ಶುದ್ಧರಂತೆ" ಕಚ್ಚೆ ಹರುಕ ಸುಬ್ಬನ ಧಾಂಬಿಕತೆಯನ್ನು ವ್ಯಂಗ್ಯವಾಗಿ ಟೀಕಿಸುತ್ತಾ "ಏನಿದು? ವಿಚಿತ್ರ ಸಂಪ್ರದಾಯ ನಮ್ಮದು? ಗಂಡಸು ಹೊಲತಿಯನ್ನು ಮುಟ್ಟಿ ಬಂದರೂ ಸ್ನಾನ ಮಾಡಿ, ಜನಿವಾರ ಬದಲಾಯಿಸಿದರೆ ಶುದ್ಧ, ಹೆಂಗಸರು ಅಪ್ಪಿತಪ್ಪಿ ಪುರುಷನನ್ನು ನೋಡಿದರೆ ಆಕೆ ಕುಂಟಿ. ಧರ್ಮಶಾಸ್ತ್ರಗಳು ಪುರುಷನಿಗೆ ಸ್ತ್ರೀಯನ್ನು ಶೋಷಿಸಲು ಅನುಕೂಲಶಾಸ್ತ್ರಗಳಾಗಿ ಪರಿಣಮಿಸಿವೆ. ಇದನ್ನೆ ಪ್ರತಿಷ್ಠೆ ಎಂದುಕೊಳ್ಳುತ್ತಾನೆ ಪುರುಷ. ಇದೊಂದು ಟೊಳ್ಳು ಪ್ರತಿಷ್ಠೆ. ಬರಿ ಡಾಂಭಿಕತೆಯಿಂದ ಕೂಡಿದ್ದೂ ಎಂದು ಆತ ತಿಳಿಯುವುದಿಲ್ಲ. "ಈ ದಿಸೆಯಲ್ಲಿ ಫಣಿಯಮ್ಮನ ಹುಡುಕಾಟ ನಿರಂತರವಾದುದು. ಮಡಿ-ಮೈಲಿಗೆಗಳಂತಹ ಕುರುಡು ಆಚರಣೆಗಳ ಬಗೆಗೆ ಅವಳ ವಿಚಾರಗಳು ಹೀಗಿವೆ "ನಮ್ಮ ಗರ್ಭದೊಳಗಿನ ರಕ್ತ ಹೊರಗೆ ಬಂದಾಗ ಅದು ಹೆಂಗಸಿನ ಪಾಲಿಗೆ ಮೈಲಿಗೆ. ಮೂರು ದಿನ ಹೊರಗೆ ಕೂತಿರಬೇಕು. ನಾಲ್ಕನೆಯ ದಿನಕ್ಕೆ ಅದು ಶುದ್ಧ. ನಂತರ ಮಡಿ..." ಎಂದು ಎಲ್ಲವನ್ನೂ ಜಾಲಾಡಿಸುತ್ತಾರೆ. "ಫಣಿಯಮ್ಮ ಬರಿ ಪಾತ್ರವಾಗದೆ ಇಡೀ ಸ್ತ್ರೀ ಸಮಾಜವನ್ನ ಪ್ರತಿಬಿಂಬಿಸುವ

ಸಂಕೇತವಾಗಿದ್ದಾರೆ. ಈ ನೆಲದ ಬಾಳಿನಿಂದ ಮೇಲೆಕ್ಕೆದ್ದು ನಿಂತ ಚೇತನ ಫಣಿಯಮ್ಮ" ಎನ್ನುವ ಪಿ.ಜಯಾ ಅವರ ಮಾತಾಗಲೀ, ಗೀತಾದೇಸಾಯಿಯವರ" ಇಂದಿರಾ ಅವರಲ್ಲೆಲ್ಲಾ ಫಣಿಯಮ್ಮನ ವ್ಯಕ್ತಿತ್ವವೇ ಅಡಗಿದೆ." ಮಾತು ಸತ್ಯಕ್ಕೆ ಸಮೀಪವಾಗಿದೆ.

ಫಣಿಯಮ್ಮ ಅಂದಿನ ಕಾಲದಲ್ಲಿ ಎಲ್ಲರಿಗಿಂತ ಭಿನ್ನಳಾಗಿ ಕಂಡವಳು. ಅಂದಿನ ವ್ಯವಸ್ಥೆಗೆ ಮುಗ್ಧಳಾಗಿ ತನ್ನನ್ನು ಒಪ್ಪಿಕೊಂಡರೂ, ಹೊಸಗಾಳಿಗೆ ತನ್ನನ್ನೊಡ್ಡಿಕೊಂಡಳು. ಪ್ರತಿಯೊಬ್ಬರಿಗೂ ಬೇಕಾದ ಪವಿತ್ರ ಪ್ರತಿಭೆಯಾಗಿ ನಿಲ್ಲುತ್ತಾಳೆ. ಒಂದು ಸಂಸ್ಕೃತಿಯ ರೂಪವಾಗಿ ಹೊರ ಹೊಮ್ಮುತ್ತಾಳೆ. ಫಣಿಯಮ್ಮ ಕನ್ನಡ ಸಾಹಿತ್ಯದಲ್ಲೇ ಒಂದು ಚಿರಂತನ ಉನ್ನತ ಪಾತ್ರ.

"ಜಿಡ್ಡುಗಟ್ಟಿದ ಸಂಪ್ರದಾಯಶೀಲ ಸಮಾಜ ವ್ಯವಸ್ಥೆಯಲ್ಲಿ ತಮ್ಮ ಸ್ಥಾನಮಾನಗಳ ಅರಿವೇ ಇಲ್ಲದೆ ವ್ಯವಸ್ಥೆಗೆ ಬದ್ಧರಾದ ಮಹಿಳೆಯರು ಹೊಸ ಗಾಳಿಗೆ ಮೈಯೊಡ್ಡಿಕೊಂಡ ಪಾತ್ರಗಳನ್ನು ಲೇಖಕಿ ಸೃಷ್ಟಿಸಿದ್ದಾರೆ." ಎನ್ನುವ ವಿ.ಗ. ನಾಯಕರ ಮಾತು ನಿಜವೆನಿಸುತ್ತದೆ. ನಾಯಕರು ಹೇಳುವಂತೆ "ಪರಂಪರೆಯನ್ನು ತಿರಸ್ಕರಿಸದ, ಸಂಪ್ರದಾಯವನ್ನು ಸಹಿಸದ ಒಂದು ಪ್ರಜ್ಞಾ ಪ್ರವಾಹ ಫಣಿಯಮ್ಮ" ಎನ್ನುವಲ್ಲಿ ಸಂಪ್ರದಾಯದ ವಿರುದ್ಧ ಈಜಹೊರಟ ಫಣಿಯಮ್ಮನ ಎತ್ತರ ದರ್ಶನವಾಗುತ್ತದೆ.

ಎಂ.ಕೆ. ಇಂದಿರಾ ಸ್ವಾತಂತ್ರ್ಯ ಅನಂತರ ಸಾಹಿತ್ಯಲೋಕದಲ್ಲಿ ಗುರುತಿಸಿಕೊಂಡ ಪ್ರಮುಖ ಹೆಸರು. ಅವರ ಬರೆವಣಿಗೆಯ ಆಯ್ಕೆ ಬಹುತೇಕ ಸ್ವಾತಂತ್ರ್ಯ ಪೂರ್ವದ ಸಾಮಾಜಿಕ, ಸಾಂಸ್ಕೃತಿಕ ಬದುಕನ್ನ ಕುರಿತದ್ದಾಗಿದೆ. ತಾನು ಬದುಕಿದ ಅನುಭವಿಸಿದ ಒಂದು ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗಮನಿಸಿ ಯಥಾವತ್ತಾಗಿ ದಾಖಲಿಸದೆ ಅದಕ್ಕೊಂದು ಸಾಹಿತ್ಯಕವಾದ ರೂಪ ಕೊಡುವಲ್ಲಿ ಶ್ರಮಿಸಿದ್ದಾರೆ. ಹಿಂದಿನ ಸಂಧಿಗ್ಧತೆ, ಗೊಂದಲ, ದ್ವಂದ್ವಗಳ ಸುಳಿಯಿಂದ ಕೆಲವು ಕಡೆ ಬಿಡಿಸಿಕೊಂಡಂತೆ ಕಂಡರೂ ಬಹಳ ಸಂದರ್ಭಗಳಲ್ಲಿ ಪುರುಷಪ್ರಧಾನ ಸಮಾಜದ ದಬ್ಬಾಳಿಕೆ ಅವರನ್ನು ಕಾಡದೇ ಬಿಟ್ಟಿಲ್ಲ.

ಇಂದಿರಾ ತಮ್ಮ ಬರಹಗಳಲ್ಲಿ ಸ್ತ್ರೀ ಹಾಗೂ ಸ್ತ್ರೀಯ ಬದುಕು ಎರಡು ವಿಷಯಗಳ ಸುತ್ತಲೇ ಹೆಣೆದುಕೊಂಡಿರುವುದನ್ನು ಕಾಣುತ್ತೇವೆ. ಇಂದಿರಾ ಅವರ ಮಹಿಳೆ ನಂಬಿಕೆ, ಧರ್ಮವನ್ನು ಸರ್ವಸ್ವವೆಂದು ತಿಳಿದುಕೊಂಡ ಸಂಪ್ರದಾಯಶೀಲ ಬ್ರಾಹ್ಮಣ ಮಹಿಳೆ, ಮನುಸ್ಮೃತಿಯನ್ನು ಚಾಚೂತಪ್ಪದೆ ಜಾರಿಗೆ ತಂದಿರುವ ಕಾಲದಲ್ಲಿ ಬದುಕಿದ್ದವಳು. ಎಷ್ಟೋ ಸಂದರ್ಭಗಳಲ್ಲಿ ಸಾಮಾಜಿಕ ಬದಲಾವಣೆ ಅವಳ ಮೇಲೆ ಯಾವುದೇ ರೀತಿಯ ಪರಿಣಾಮ ಬೀರುವುದಿಲ್ಲ. ಇಂದಿರಾ ಅವರ ಪಾತ್ರಗಳು 'ಸ್ತ್ರೀವಾದಿ' ಚಿಂತನೆ ಭಾರತಕ್ಕೆ ಕಾಲಿಡದ ಸನ್ನಿವೇಶದಲ್ಲಿ

ಉಗಮಗೊಂಡವುಗಳಾಗಿವೆ. ಸ್ತ್ರೀವಾದಿ ಚಿಂತನೆ ಪೌರಾತ್ಯ.ಪರಿಣಾಮಕಾರಿಯಾಗಿ ಹಬ್ಬಿದ ಕಾಲ. ಭಾರತೀಯ ಸಂಸ್ಕೃತಿ ಸಮಾಜ ಅದೇ ತಾನೇ ಸ್ವಲ್ಪ ಸ್ವಲ್ಪವಾಗಿ ಬದಲಾವಣೆಯನ್ನು ಕಾಣುತ್ತಿದ್ದ ಕಾಲ. ಆದ್ದರಿಂದ ಇಂದಿರಾ ಸಂಪ್ರದಾಯವನ್ನು ಎದುರುಹಾಕಿಕೊಂಡು ಬರೆಯಲು ಸಶಕ್ತವಾಗಿರಲಿಲ್ಲ.

ಇಂದಿರಾ ಅವರ ಸಮಗ್ರ ಕೃತಿಗಳಲ್ಲಿ ಸ್ತ್ರೀ ಚಿಂತನೆ ಪ್ರಧಾನವಾಗಿದೆ. ಅವರ ಸಮಸ್ಯೆಗಳು ಹೊರಹೊಮ್ಮಿ ಸಂಪ್ರದಾಯದ ನಡುವೆ ನಲುಗಿದ ಮಹಿಳೆಯ ಚಿತ್ರಣವಿದೆ. ಪ್ರತಿಯೊಂದು ಕಾದಂಬರಿಗಳಲ್ಲಿ 'ಸ್ತ್ರೀ'ಯೇ ಪ್ರಮುಖ ಪಾತ್ರ ವಹಿಸುತ್ತಾಳೆ. ಅವಳ ಬದುಕಿನ ಸುತ್ತವೇ ಸಾಗುವ ವಸ್ತು. ಪುರುಷನ Double standard ನಿಂದಾಗಿ ನರಕವಾಗುವ ಅವಳ ಬದುಕು ಆರಂಭವಾಗುವುದು ಶೂನ್ಯದಿಂದ. ಕೊನೆಗೊಳ್ಳುವುದು ಶೂನ್ಯದಲ್ಲೇ. ಧರ್ಮ, ಕಾಮ, ಅರ್ಥ, ಸಪ್ತಪದಿ ತುಳಿಯುವಾಗಿನ ಈ ಅರ್ಥ ಕಳೆದುಕೊಂಡ ಸವಕಲು ಶಬ್ದಗಳು ಸ್ತ್ರೀಯರಿಗೆ ಮಾತ್ರ ಸೃಷ್ಟಿಗೊಂಡಿವೆ ಎಂಬುದನ್ನು ಅವರ ಅನೇಕ ಕಾದಂಬರಿಗಳು ಪ್ರತಿಪಾದಿಸುತ್ತವೆ.

'ಬಾಲವಿಧವೆ' ಹೆಚ್ಚು ಕಮ್ಮಿ ಬಹುಭಾಗ ಅವರ ಕಾದಂಬರಿಗಳಲ್ಲಿ ಕಂಡು ಬರುವ ಸಾಮನ್ಯ ಸಮಸ್ಯೆ. ಜೊತೆಗೆ ವೇಶ್ಯೆ ಮತ್ತು ಕೌಟುಂಬಿಕ ಸಮಸ್ಯೆಗಳಿಗೆ ಸ್ತ್ರೀ ಸ್ಪಂದಿಸುವ ರೀತಿಯೇ ಪ್ರಧಾನವಾಗಿದೆ. ಇಂದಿರಾ, ಶಶಿದೇಶಪಾಂಡೆ ಒಂದೇ ಸಾಮಾಜಿಕ ಚೌಕಟ್ಟಿನೊಳಗಿನ ಸಮಸ್ಯೆಗಳನ್ನು ಕುರಿತು ಬರೆದಿದ್ದರೂ ಬರೆವಣಿಗೆಯ ಸ್ವರೂಪದಲ್ಲಿ ಭಿನ್ನವಾಗಿ ನಿಲ್ಲುತ್ತಾರೆ.

ಎಂ.ಕೆ.ಇಂದಿರಾ ಅವರ ಕಾದಂಬರಿಗಳಲ್ಲಿ ಸಮಾಜ, ದೈವಗಳ ಪಾತ್ರ, ಮಠ, ಧರ್ಮದ್ದೇ ಅಂತಿಮಸ್ಥಾನ, ವ್ಯಕ್ತಿಯ ಬದುಕು ಗೌಣ. ಸಾರ್ವತ್ರಿಕವಾದ ನಡುವೆ ವೈಯಕ್ತಿಕ ಕೂಗು ಕೇಳಿಸುವುದೇ ಇಲ್ಲ. ಹೆಣ್ಣು ನಾಲ್ಕು ಗೋಡೆಗಳ ನಡುವೆ ಉತ್ಸವ ಮೂರ್ತಿಯಾಗಿ ಉಳಿಯುತ್ತಾಳೆ. ಕುಟುಂಬ, ಸಮಾಜದಲ್ಲಿ ಯಾವುದೇ ನಿರ್ಣಯಕ್ಕೆ ಭಾಗಿಯಾಗುವುದಿಲ್ಲ. ಪುರುಷರ ತೀರ್ಮಾನಕ್ಕೆ ಬದ್ಧಳಾಗಿರಬೇಕಾಗಿರುವುದು ಅವಳ ಕರ್ತವ್ಯ. ಕನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ಇಂದಿರಾ ಅವರ ಕಾಲ ಬಹುಮಹತ್ವ ಪಡೆಯುತ್ತದೆ. ಕಾರಣ ಹೊಸ ಸಂಸ್ಕೃತಿ ಕನ್ನಡದಮೇಲೆ ಪ್ರಭಾವ ಬೀರಿದ ಕಾಲ. ಇಂದಿರಾ ಅವರ ಸಮಗ್ರ ಕೃತಿಗಳಲ್ಲೂ ಕ್ರಮೇಣ ಬೆಳವಣಿಗೆ ಕಾಣುತ್ತೇವೆ.

ಈಗಿನ Feminism Trend ಇಲ್ಲದ ಮಡಿವಂತಿಕೆಯ ಕಾಲದಲ್ಲಿ ಗಂಭೀರವಾದ ಮಹಿಳಾಪರ ಚಿಂತನೆಯನ್ನು ತಮ್ಮ ಕಥೆ ಕಾದಂಬರಿಗಳ ಮೂಲಕ ಎಂ.ಕೆ. ಇಂದಿರಾ ಸ್ಫೋಟಿಸಿದ್ದಾರೆ. ಇವತ್ತು ಪುರುಷರನ್ನು ದೂರುವುದೇ ಸ್ತ್ರೀವಾದ ಎಂದುಕೊಂಡು ಎಷ್ಟೋ ಜನ ಮಹಿಳೆಯರಿಗೆ ಎಂ.ಕೆ. ಇಂದಿರಾ ಅವರ ಬರೆವಣಿಗೆ ಸ್ಫೂರ್ತಿಯಾಗಲಿ.

ಪುರುಷರ ಮೇಲೆ ಸೇಡು ತೀರಿಸಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವ ಮಹಿಳಾ ವಾದಕ್ಕೆ ಯಾವ ರೀತಿಯ ಅರ್ಥವೂ ಇಲ್ಲ. ನಿಜವಾದ ಮಹಿಳಾವಾದದ ಮೂಲ ಆಶಯ ಎಲ್ಲಾ ರೀತಿಯಲ್ಲಿಯ ಸಮಾನತೆಯನ್ನು, ಕೌಟುಂಬಿಕ, ರಾಜಕೀಯ, ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯದಲ್ಲಿ ಪಡೆಯುವುದಾಗಿದೆ. ಸಿದ್ಧಾಂತವನ್ನು ಪಾಶ್ಚಿಮಾತ್ಯ ಮಹಿಳಾವಾದಿಗಳು ಪ್ರತಿಪಾದಿಸಿದರು. ಆದರೆ ಪರಿಸ್ಥಿತಿ ಏನಾಗಿದೆ. ಭಾಷಾಶಾಸ್ತ್ರದಲ್ಲಿ ಮಹಾ ಪ್ರಬಂಧ ಮಂಡಿಸಿ ಪಂಡಿತನಾದ ನಾರ್ವೆಯ ಸ್ನೇಹಿತನೊಬ್ಬ, ಅಂತರಾಷ್ಟ್ರೀಯ ವಿಚಾರಗೋಷ್ಠಿಯೊಂದರಲ್ಲಿ ಮಾತಾಡುತ್ತಿದ್ದ ಸಂದರ್ಭದಲ್ಲಿ...

ಅವನು : ನಿಮಗೆ ಎಷ್ಟು ಜನ ಮಕ್ಕಳು?

ನಾನು : ಇಬ್ಬರು

ಅವನು : ನೀವು ನಿಮ್ಮ ಹೆಂಡತಿಯನ್ನು ಪ್ರೀತಿಸಿದ್ದು ಯಾವಾಗ?

ನಾನು : ಮದುವೆಯಾದ ಮೇಲೆ ಎಲ್ಲಾ ಸಹಜವಾಗಿಯೇ ಆಗುತ್ತದೆ.

ಅವನು : ನಿಮ್ಮ ಹೆಂಡತಿ ನಿಮಗೆ ಕೊಟ್ಟ ಮಾತನ್ನು ನಿಭಾಯಿಸುತ್ತಾರೆಯೇ?

ನಾನು : ಹೌದು, ಎಷ್ಟೇ ಭಿನ್ನಾಭಿಪ್ರಾಯ ಬಂದರು ಹೊಂದಾಣಿಕೆ ಇದೆ. ನಿಮ್ಮ ದೇಶದಲ್ಲಿ ಹೇಗಿದೆ?

ಅವನು : ನಿಭಾಯಿಸುವುದಾಗಿ ಮಾತು ಕೊಡುತ್ತೇವೆ. ಆದರೆ ಅವಳು ದುಡಿಯುತ್ತಾಳೆ, ನಾನೂ ದುಡಿಯುತ್ತೇನೆ. ಒಮ್ಮೊಮ್ಮೆ ಅವಳ ಪಾಡಿಗೆ ಅವಳು ಬದುಕುತ್ತಾಳೆ, ನನ್ನ ಪಾಡಿಗೆ ನಾನು. ಸಂಸಾರ ಅನ್ನುವ Indain concept ಇದೆಯಲ್ಲ, ಅದಕ್ಕೆ ತೀರಾ ವ್ಯತಿರಿಕ್ತವಾಗಿದೆ ನಮ್ಮ ಬದುಕು.

ಬಹಳ ಹೊತ್ತು ಆಲೋಚಿಸಿದೆ. ಪುರುಷಪ್ರಧಾನ ಸಂಸ್ಕೃತಿಯಲ್ಲಿ ಏನೆಲ್ಲಾ ಅನ್ಯಾಯ ಆಕ್ರಮಣ ಸಹಿಸುತ್ತಾ ಬಂದಿರುವ ಭಾರತೀಯ ಮಹಿಳೆ ಬದಲಾಗುತ್ತಿರುವ ಕಾಲಮಾನಕ್ಕೆ ತಕ್ಕಂತೆ ಬದಲಾಗುವುದು ಸಹಜವಾದಾಗ್ಯೂ ಇಲ್ಲಿಯ ಸಾಮಾಜಿಕ ಪರಿಸ್ಥಿತಿ ಪಾಶ್ಚಾತ್ಯರಿಗಿಂತ ಸಂಪೂರ್ಣವಾಗಿ ಭಿನ್ನವಾಗಿದೆ. ಕೆಳವರ್ಗದ ಮಹಿಳೆ ಪುರುಷರಲ್ಲಿ ಸಮಾನತೆ ಸಹಜವಾಗಿಯೇ ಕಂಡುಬರುತ್ತದೆ. ಬಡವನೊಬ್ಬ ಹೆಂಡತಿಯ ಜೊತೆಗೆ ಮದ್ಯವನ್ನು ಹಂಚಿಕೊಂಡು ಕುಡಿಯುವುದರಿಂದ ಹಿಡಿದು ಎಲ್ಲಾ ಜವಾಬ್ದಾರಿಗಳನ್ನೂ ಹಂಚಿಕೊಳ್ಳುವಲ್ಲಿ ಯಾವ ಉತ್ಪ್ರೇಕ್ಷೆಯೂ ಇರಲಾರದು.

ವರ್ಗೀಕೃತ ಸಾಮಾಜಿಕ ಹಿನ್ನೆಲೆಯ ಈ ದೇಶದಲ್ಲಿ ಒಂದು ಜಾತಿಯ ಜನರು ಮಾತ್ರ ಹೆಣ್ಣನ್ನು ಕೀಳಾಗಿ ಕಾಣುತ್ತಾ ಬಂದಿದ್ದಾರೆ. ಆದರೆ ವಿಚಿತ್ರವೆಂದರೆ ಆ ವರ್ಗದ ಮಹಿಳೆಯೇ ಈಗ ಲೀಡರ್ ಆಗಿ ಮತ್ತೊಬ್ಬರ ಸಲುವಾಗಿ ಹೋರಾಡುತ್ತಿರುವುದು.

ಒಂದು ಸನ್ನಿವೇಶದಲ್ಲಿ ಮಹಿಳಾವಾದದ ಪರ ಪಾಂಡಿತ್ಯಪೂರ್ಣ ಭಾಷಣ ಮಾಡುತ್ತಿದ್ದ ಮಹಿಳೆಯೊಬ್ಬಳಿಗೆ ನಾನು ಪ್ರಶ್ನೆ ಕೇಳಿದೆ.

ಪ್ರ : ಒಬ್ಬ ಮಹಿಳೆ ಉನ್ನತ ಸ್ಥಾನಕ್ಕೆ ಹೋದಾಗ ಪುರುಷರ ಜೊತೆ ಸೇಡು ತೀರಿಸಿಕೊಳ್ಳಲು ಆತನನ್ನು ಕುಳಿತುಕೊಳ್ಳುವಂತೆ ಹೇಳದೆ ಕೈ ಕಟ್ಟಿ ಮುಂದೆ ನಿಂತುಕೊಳ್ಳುವ ಅವನ ಭಂಗಿಯನ್ನು ನೋಡಿ ವಿಕೃತ ಖುಷಿಪಡುತ್ತಾಳೆ. ಇದು ಯಾವ ಮಹಿಳಾವಾದ?

ಉ : ನನಗೂ ಅನುಭವವಾಗಿದೆ. ಮಹಿಳೆಯೊಬ್ಬಳು ನಮ್ಮ ಮೇಲಾಧಿಕಾರಿಯಾದರೆ ಅವಳೊಳಗೆ ಪುರುಷಪ್ರಧಾನ ವ್ಯವಸ್ಥೆ ರೂಪಿಸಿದ ಮನಸ್ಥಿತಿ ಇಲ್ಲಿ ಕೆಲಸ ಮಾಡುತ್ತಿರುವುದರಿಂದ ಕ್ರಿಯಾತ್ಮಕವಾಗಿ ಆ ರೀತಿಯ ವರ್ತನೆಯನ್ನು ಸಹಜವಾಗಿ ಕಾಣುತ್ತೇವೆ.

ಪುರೋಹಿತಶಾಹಿ ಹುಟ್ಟುಹಾಕುವ ಅವೈಜ್ಞಾನಿಕ ಅವಾಂತರಗಳನ್ನು ಒಪ್ಪಿ ನಡೆಯುವಲ್ಲಿ ಪುರೋಹಿತಶಾಹಿ ನಮ್ಮೊಳಗೆ ಪ್ರವೇಶಪಡೆಯುವುದನ್ನು ಹೇಗೆ ಗುರುತಿಸುತ್ತೇವೆಯೋ ಹಾಗೆಯೇ ಪುರುಷಪ್ರಧಾನ ವ್ಯವಸ್ಥೆ ಹುಟ್ಟುಹಾಕಿದ ಸಾಮಾಜಿಕ ಮೌಲ್ಯಗಳು ಅನುಕೂಲಕರವಾಗದಿದ್ದಲ್ಲಿ ಅದನ್ನು ದಕ್ಕಿಸಿಕೊಳ್ಳಲು ಸಾಧ್ಯಾವಾದಲ್ಲಿ ಅವು ನಮ್ಮ ಮೂಲಕವೂ ಚಾಲ್ತಿಗೆ ಬರಬಹುದು. ಮೇಲಿನ ಉತ್ತರವನ್ನು ನಾವು ಹೀಗೂ ಗ್ರಹಿಸಬಹುದು.

ಒಟ್ಟಾರೆ ಎಂ.ಕೆ. ಇಂದಿರಾ ಸೇಡಿನ ಮನೋಭಾವದ ಆಲೋಚನಾ ಕ್ರಮವನ್ನು ತಮ್ಮೊಳಗಿಟ್ಟುಕೊಳ್ಳದೆ ಒಂದು ಕೆಟ್ಟ ವ್ಯವಸ್ಥೆ ತೊಲಗಲು ಅಲ್ಲಿ ಸರ್ವರ ಸಹಭಾಗಿತ್ವದ ಅಗತ್ಯವಿದೆ ಎಂಬುದನ್ನು ಮನಗಾಣುತ್ತಾರೆ. ಅವರು ಸೃಷ್ಟಿಸುವ ಅನೇಕ ಪುರುಷಪಾತ್ರಗಳು ಸಹ ತಮ್ಮ ತಪ್ಪನ್ನು ಒಪ್ಪಿಕೊಂಡು ಸರ್ವಸಮಾನ ಮನೋಭಾವನೆಯನ್ನು ತಳೆದು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಪೂರಕವಾಗಿ ನಡೆದುಕೊಳ್ಳುವುದನ್ನು ಕಾಣುತ್ತೇವೆ. ಆ ಮೂಲಕ ಪುರುಷರಷ್ಟೇ ಸಂಖ್ಯೆಯಲ್ಲಿರುವ ಮಹಿಳೆಯರೂ ಪುರುಷರೊಟ್ಟಿಗೆ ಸಹಬಾಳ್ವೆಯಿಂದ ಗೌರವದ ಬಾಳುವೆಯನ್ನು ಬಾಳುವಂತಹ ಸಮಾಜವು ನಿರ್ಮಾಣವಾಗಲೆಂದು ಆಶಿಸುವ ಎಂ.ಕೆ. ಇಂದಿರಾರಂಥಹ ಬರಹಗಾರರು ಇಂದು ಇನ್ನೂ ಹೆಚ್ಚು ಪ್ರಸ್ತುತರಾಗುತ್ತಾರೆ.

❄ ❄ ❄ ❄ ❄

ಮರಾಠಿ ಕನ್ನಡಗಳ ಸೇತುವೆ ಸರಜೂಕಾಟ್ಕರ್

"Tommrrow we will build A clean city, there is no sorrow, sufferings" - W.H. Auden.

ಸಾಹಿತ್ಯ ಯಾವಾಗಲೂ ಹೊಸ ಸಾಧ್ಯತೆಗಳನ್ನು ನಿರೀಕ್ಷಿಸುತ್ತದೆ. ಬಂಡಾಯದ ಕಾಲಘಟ್ಟದಲ್ಲಿ ಮೊನಚಾಗಿ ಬೆಳೆದ ಸರಜೂ ಮರಾಠಿ ದಲಿತ ಸಾಹಿತ್ಯದ ಪ್ರಭಾವಕ್ಕೆ ಒಳಗಾಗದೆ ಇರಲು ಸಾಧ್ಯವಾಗಲಿಲ್ಲ.

ಬಂಡಾಯದ ಬಿಸಿಗಾಳಿ ಎರಡನೆ ತಲೆಮಾರಿಗೆ ತಂಪಾದಂತೆ ತೋರುತ್ತದೆ.

ಅದರೊಟ್ಟಿಗೆ ಬೆಳೆದ ದಲಿತ ಸಾಹಿತ್ಯದ ಸ್ಥಿತಿಯೂ ಬದಲಾಗಿಲ್ಲ.

ಸರಜೂ ನಮ್ಮ ನಡುವಿನ ಅಪರೂಪದ ಸಾಹಿತಿ. ಅವರ ಸಾಹಿತ್ಯವಲಯ ವಿಸ್ತೃತಗೊಂಡಂತೆ ಕನ್ನಡದ ಬಹಳ ಸಾಹಿತಿಗಳ ವಲಯ ವಿಸ್ತೃತಗೊಂಡಿಲ್ಲ. ಒಳ್ಳೆಯ ಕವಿ, ವಿಮರ್ಶಕ, ನಾಟಕಕಾರ, ಅನುವಾದಕ ಹಾಗೂ ಇತಿಹಾಸಜ್ಞ ಕೂಡ. ಕನ್ನಡ - ಮರಾಠಿ ಸಾಹಿತ್ಯದ ನಡುವೆ ಒಟ್ಟಾರೆ ಅಭೀಪ್ಸೆಯನ್ನು ಕನ್ನಡದ ಸಾಹಿತ್ಯಾಸಕ್ತರಿಗೆ ನೀಡಿರುವುದು ಅವರ ಅಸಾಧಾರಣ ಕೊಡುಗೆ. "ಬಂಡಾಯದ ಕಾಲಘಟ್ಟದಲ್ಲಿ ಮೊನಚಾಗಿ ಬೆಳೆದ ಸರಜೂ ಮರಾಠಿ ದಲಿತ ಸಾಹಿತ್ಯದ ಪ್ರಖರತೆಗೆ ದೃಷ್ಟಿಹರಿಸದೆ ಇರಲಾಗಲಿಲ್ಲ". ಮರಾಠಿ ಜನಪದ ಸಾಹಿತ್ಯ ಭರತಖಂಡದಲ್ಲೆ ಅತ್ಯಂತ ಹೆಚ್ಚು ಚರ್ಚೆಗೆ ಗ್ರಾಸವಾದ ಕಾಲ. ದಲಿತ ಸಾಹಿತಿಗಳು ಬದುಕಿನ ತುಣುಕುಗಳನ್ನು ಹೆಕ್ಕಿ ಹೆಕ್ಕಿ ಕತೆಗಳನ್ನು ಕಾದಂಬರಿಗಳನ್ನು ಜೀವನ ಚರಿತ್ರೆಗಳನ್ನಾಗಿ ಬರೆದಾಗ ಪಂಡಿತರನೇಕರು ಕಣ್ಣರಳಿಸಿ ನೋಡತೊಡಗಿದರು. ಇಡೀ ಮರಾಠಿ ಜಗತ್ತೆ ಯಾಕೆ ದೇಶದ ಎಲ್ಲಾ ಪಂಡಿತರ ನಿದ್ದೆ ಹಾಳಾಯ್ತು. ಅಂಥ ಸಾಹಿತ್ಯದ ಅನುವಾದ ಮಾಡಿ ಕನ್ನಡಿಗರಿಗೆ ಒದಗಿಸಿದ್ದು ಸರಜೂರ ಮಹತ್ವದ ಸಾಧನೆಯೇ ಸರಿ.

ಪ್ರಸ್ತುತ ನಾನು ಮೂರು ಪುಸ್ತಕಗಳ ವಿಷಯವನ್ನು ಹೇಳಬಯಸುತ್ತೇನೆ. ಈ ಮೂರು ವಿಭಿನ್ನ ಪ್ರಕಾರಗಳು ಒಂದು ಜೀವನ ಚರಿತ್ರೆ, ಅಂಬೆ ನಾಟಕ, ಮಹಾವೃಕ್ಷ ವೈಚಾರಿಕ ಲೇಖನಗಳ ಸಂಗ್ರಹ. ಈ ಮೂರು ಪ್ರಕಾರಗಳನ್ನು ಓದಿದಾಗ ಮೂರು ವಿಭಿನ್ನ ನೆಲೆಯಲ್ಲಿ ಸರಜೂ ಕಾಣುತ್ತಾರೆ.

ದೇವರಾಯ ಇಂಗಳೆಯವರ ಜೀವನ ವೃತ್ತಾಂತವನ್ನು ಓದಿದಾಗಂತು ಇತಿಹಾಸದ ವಿದ್ಯಾರ್ಥಿ ಸತ್ಯಕ್ಕೆ ಓರೆ ಹಚ್ಚಿ ನೋಡುವ ಪ್ರಯತ್ನ ಮಾಡುವಂತೆ ದೇವರಾಯರ

ಹೋರಾಟ, ಸಾಮಾಜಿಕ ಚಿಂತನೆ, ಸಂಘರ್ಷ, ಜನಾಂಗದ ಕುರಿತ ಕಾಳಜಿ, ಅವರ ಪಾಂಡಿತ್ಯವನ್ನು ಎಳೆ ಎಳೆಯಾಗಿ ಬಿಡಿಸಿ ನೋಡುವ ಪ್ರಯತ್ನ ಮಾಡಿದ್ದಾರೆ ಎನಿಸುತ್ತದೆ. ಒಂದು ಕಾದಂಬರಿಯಂತೆ ಸಾಗುವ ದೇವರಾಯರ ಬದುಕು ಇತಿಹಾಸದಲ್ಲಿ ಅಡಗಿರುವ ಅನೇಕ ಸತ್ಯಸಂಗತಿಗಳು ಅಮರಿಕೊಂಡಿದೆ. ಒಂದು ಜನಾಂಗದ ಶೋಷಣೆ ಆ ಜನರ ಹೆಸರಿನ ಹಿಂದಿರುವ ಅಡ್ಡ ಹೆಸರು ಅಥವಾ 'Surname' ಅಂಥ ನಾವೇನು ಕರೆಯುತ್ತೇವೆ ಅದರಿಂದ ಆಗುತ್ತಿದೆ ಎಂಬ ನಿದರ್ಶನ ಸ್ವತಃ ದೇವರಾಯರು ತಮ್ಮ ಅನುಭವದ ಹಿನ್ನೆಲೆಯಿಂದ ಕಂಡುಕೊಂಡ ಸತ್ಯ.

ಭಿನ್ನ ಮಾರ್ಗಗಳಿಂದ ದಲಿತರ ಜೀವನ ಕ್ರಮವನ್ನು ಅವರು ಹಿಡಿದಿಡುವಲ್ಲಿ ಬಳಸುವ ಪರ್ಯಾಯ ಮಾರ್ಗ ದಲಿತರ ಬದುಕಿಗೆ ಒಂದು ಹೊಸ ಆಯಾಮವನ್ನು ಒದಗಿಸಿಕೊಡುವತ್ತ ತುಡಿಯುವುದನ್ನು ಗಮನಿಸಬಹುದು. ದಲಿತರ ಬದುಕು, ಅವಮಾನ ಅಪಮಾನದ ಪಾಪಕೂಪದಲ್ಲಿ ಕುಗ್ಗಿ ಹೋಗಿರುವುದನ್ನು ಅಲ್ಪಸ್ವಲ್ಪ ಕಲಿತ ದೇವರಾಯ ಬಹಳ ಸೂಕ್ಷ್ಮವಾಗಿಯೇ ಗಮನಿಸಿದ್ದಾರೆ. ಕೊಲ್ಹಾಪುರದಲ್ಲಿ ಆದ ಅವಮಾನ ದೇವರಾಯರ ಸ್ವಾಭಿಮಾನಕ್ಕೆ ಸವಾಲಾಗಿತ್ತು.

"ದಾಡಿಮಾಡಿಸಿಕೊಳ್ಳಲು ಕ್ಷೌರಿಕನ ಅಂಗಡಿಗೆ ಹೋಗಿದ್ದ ತಮ್ಮ ಹಳೆಯ ಚಾಳಿಯಂತೆ ಕ್ಷೌರಿಕ ಅವನಿಗೆ ಸೋಪುಹಚ್ಚುತ್ತ, 'ಯಾಊರಾಂವಾ' ಎಂದು ಕೇಳಿದ. ದೇವರಾಯ ತಾನು ಇಂಗಳೆಯವ ಎಂದು ಹೇಳಿದ. ಕ್ಷೌರಿಕನ ಮುಂದಿನ ಪ್ರಶ್ನೆ ಬಂತು ಏನ್ ಅಡ್ಡ ಹೆಸರು? ದೇವರಾಯ ನಿಜವನ್ನೇ ನುಡಿದ 'ಹೊಲೇರ್' ಎಂದು.

ಮರುಕ್ಷಣ ನಾಗರಹಾವಿನ ಹೆಡೆಯ ಮೇಲೆ ಕಾಲಿಟ್ಟಂತೆ ಕ್ಷೌರಿಕ ಅವನಿಂದ ದೂರ ಸರಿದು ನಿಂತ. ಏಳು, ಏಳು ಇಲ್ಲಿಂದ. ಇಲ್ಲಿ ಒಳಬರಲು ನಿನಗೆ ಅದೆಷ್ಟು ಧೈರ್ಯ? ನಿನ್ನನ್ನು ಮುಟ್ಟಿದ್ದಕ್ಕೆ ನಾನು ಈಗ ಜಳಕ ಮಾಡಬೇಕು. ನೀನು ಇಲ್ಲಿ ಬಂದೆಯೆಂದು ಉಳಿದ ಜನರಿಗೆ ಗೊತ್ತಾದರೆ ನಾನು ಹೊಟ್ಟೆಗೆ ಗೋಣಿತಾಟು ಕಟ್ಟಿಕೊಳ್ಳಬೇಕಾಗುತ್ತದೆ" ಎಂದು ಚೀರಾಡಿದ.

ಶತಮಾನಗಳಿಂದಲೂ ನಡೆದುಕೊಂಡು ಬಂದಿದ್ದ ಈ ಶೋಷಣೆ ಮನುಷ್ಯನನ್ನು ಯಾವ ಹಂತಕ್ಕೆ ತಲುಪಿಸುತ್ತದೆ ಎಂದರೆ ಆ ಒಂದು ಕ್ಷಣ ಅವನು ಹುಟ್ಟಿದ್ದೆ ತಪ್ಪು ಈ ಭೂಮಿ ಮೇಲೆ ಎಂದೆನಿಸದೆ ಇರಲಾರದು. ತನ್ನಂತಿರುವ ಮನುಷ್ಯನನ್ನೇ ಈ ಜನ ಜಾತಿ ಎಂಬ ಹಣೆಪಟ್ಟಿಯನ್ನು ಹಚ್ಚಿ ಜೀವನವನ್ನು ಹಿಂಡುವುದು ಅಸಹನೀಯವಾದ ಹಿಂಸೆ. ವೈದಿಕರ ಒಳಸಂಚಿಗೆ ಬಲಿಯಾದ ಅತಿಶೂದ್ರರು ಸಹಿಸಿಕೊಳ್ಳುತ್ತಲೇ ಬಂದಿರುವ ಸೋಜಿಗ ಕಂಡು ದೇವರಾಯರು ಬೆರಗಾಗಿ ಇದಕ್ಕೊಂದು ಪರಿಹಾರ ಹುಡುಕಬೇಕೇಂದು ತನ್ನೊಳಗೇ ಒಂದು ಗಟ್ಟಿಯಾದ ಸಂಕಲ್ಪ

ಮಾಡಿಕೊಂಡೆ. ತನಗಾದ ಅವಮಾನದ ಪ್ರತೀಕವೆಂಬಂತೆ ನಾನು ಈ ಕ್ಷೌರಿಕ ಅಂಗಡಿಗಳಲ್ಲೇ ಶೇವಿಂಗ್ ಮಾಡಿಸಿಕೊಳ್ಳಬೇಕು ಎಂದು ನಿರ್ಧಾರಕ್ಕೆ ಬಂದು ಮುಂದಿನ ಅಂಗಡಿಯವನಿಗೆ ತನ್ನ ಅಡ್ಡ ಹೆಸರು ಇಂಗಳೆ ಎಂದು ಹೇಳಿದಾಗ ಆತ ಮರುಮಾತಾಡದೆ ದಾಡಿ ಬೋಳಿಸಿದ್ದನ್ನು ನೋಡಿ ಎಲ್ಲಿಲ್ಲದ ಸಂತೋಷ. ಏನೋ ಒಂದು ಹೊಸ ಸಂಶೋಧನೆ ಮಾಡಿದಂತೆ ದೇವರಾಯ ಸ್ವಾತಂತ್ರ್ಯ ಪೂರ್ವದ 'ಜೂಳಿಗಮಾನ್ಯ ಪದ್ಧತಿ' ಯು ಜೀವಂತವಿದ್ದ ಕಾಲದಲ್ಲಿಯೇ ಒಂದು ಹೊಸ ಪ್ರಯೋಗಕ್ಕೆ ಕೈ ಹಾಕಿ ಯಶಸ್ಸುಗಳಿಸುತ್ತಾರೆ. ಕರ್ನಾಟಕದ ದಲಿತರ ಬದುಕಿನಲ್ಲಾದ ಮೊದಲ ಬದಲಾವಣೆ. ಅಡ್ಡ ಹೆಸರುಗಳೀಗ ಜಾತಿಸೂಚಕವಾಗದೆ, ಸ್ಥಳನಾಮಗಳು, ದಲಿತರಿದ್ದ ಜಮೀನ್ದಾರರುಗಳ ಹೆಸರು ಪಡೆದುಕೊಂಡಾಗ ಪುಳಕಿತರಾಗದೆ ಇರಲಿಲ್ಲ. ಈ ಐತಿಹಾಸಿಕ ಘಟನೆಯಿಂದ ದಲಿತರ ಬದುಕಿನಲ್ಲಿ ಹೊಸ ಬೆಳಕು ಬಂದಂತಾಯಿತು. ಗ್ರೀಕ್ ಪುರಾಣದಲ್ಲಿ ಬರುವ ನಾಯಕ Prometheus ನಂತೆ ಶತಮಾನಗಳಿಂದ ಕತ್ತಲ ಕೂಪದಲ್ಲಿಯೇ ಕತ್ತಲಾಗಿ ಸಮಾಜದ ಅವಕೃಪೆಗೆ ಪಾತ್ರರಾಗಿ, ಪ್ರಕೃತಿಯ ಯಾವ ಜೀವರಾಶಿಯಲ್ಲಿಯೂ ಇರದ ವೈರುಧ್ಯವನ್ನು ತನ್ನೊಳಗಿಟ್ಟು ಕೊಂಡಿರುವ ಮನುಕುಲದ ಕರಾಳ ಕತೆಯಂತಿರುವ ದಲಿತರ ಬದುಕಿನ ಹೊಸಬೆಳಕು ದೇವರಾಯ.

ಡಾ. ಬಾಬಾಸಾಹೇಬ್, ಫುಲೆ, ಶಾಹುಮಹಾರಾಜರು ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ತಮ್ಮ ಹೋರಾಟವನ್ನು ಆರಂಭಿಸಿದ್ದರು. ಮನುಸ್ಮೃತಿಯನ್ನು ಚಾಚೂತಪ್ಪದೆ ಪರಿಪಾಲಿಸುತ್ತಾ ಬಂದಿದ್ದ ಪೇಶ್ವೆಗಳು ಅವರ ನಂತರ ಆ ವ್ಯವಸ್ಥೆಯನ್ನು ಕಾಪಾಡಿಕೊಂಡೇ ಬಂದಿದ್ದ ವೈದಿಕ ಪರಂಪರೆ ಒಟ್ಟಾರೆ ಜನಾಂಗದ ಒಂದು ಭಾಗವಾದ ದಲಿತರನ್ನು, ಗುಲಾಮಗಿರಿಗಿಂತಲೂ ನಿಕೃಷ್ಟವಾಗಿ ನಡೆಸಿಕೊಂಡು ಬಂದಿತ್ತು. ರಸ್ತೆ, ನೀರು, ದೇವಸ್ಥಾನ, ಸಾರ್ವಜನಿಕ ಪ್ರದೇಶಗಳಲ್ಲಿ ಅಡ್ಡಾಡುವುದು ನಿಷೇಧಿಸಿತ್ತು. ಮನುಷ್ಯ ಕಂಡನಾಗರಿಕತೆಗಳಲ್ಲಿಯೇ ಎಲ್ಲೂ ಕಂಡುಬರದ ಸಹಮಾನವರನ್ನೇ ಹೀನಾಯವಾಗಿ ನಡೆಸಿಕೊಳ್ಳುವ ಇಂಥ ಕೃತ್ಯಗಳು ಭಾರತದ ಸಾಮಾಜಿಕ ಜೀವನದಲ್ಲಿ ರೂಢಿಯಲ್ಲಿರುವುದು ಒಂದು ಸೋಜಿಗವೇ ಸರಿ. ಒಂದು ವರ್ಗದ ಜನರು ಮಾತ್ರ ಅಜ್ಞಾನ, ನಿರಕ್ಷರತೆ, ಬಡತನ, ದಾರಿದ್ರ್ಯ, ಮೂಢನಂಬಿಕೆ, ರೋಗ.ರುಜಿನಗಳಿಗೆ ತಳ್ಳಲ್ಪಟ್ಟು ಅರ್ಥವೇ ಇಲ್ಲದ ಅಸಹ್ಯ ಬದುಕನ್ನು ನಡೆಸಿಕೊಂಡು ಬಂದಿರುವುದನ್ನು ಕಂಡ ದೇವರಾಯ ನೊಂದುಕೊಂಡೆ ತಮ್ಮ ಅಭಿಯಾನವನ್ನು ಆರಂಭಿಸಿದರು. ಅವಮಾನ ಸಹಿಸಿಕೊಂಡೇ ಐದನೇ ತರಗತಿ ಮುಗಿಸಿ ಬಡತನದ ಬೇಗೆಯು ಮುಂದಿನ ಶಿಕ್ಷಣವನ್ನು ನುಂಗಿಹಾಕಿದರೂ ಕ್ರಾಂತಿಯ ಕಿಡಿ ಮಾತ್ರ ಎದೆಯೊಳಗೆ ಪ್ರಜ್ವಲಿಸುತ್ತ

ಆತನ ಜವಾಬ್ದಾರಿಯನ್ನು ಹೆಚ್ಚಿಸಿತ್ತು . ಸವರ್ಣೀಯರ ಅಮಾನವೀಯ ವರ್ತನೆಗೆ ಬೇಸರಗೊಂಡು ರಾಜೀನಾಮೆ ಕೊಟ್ಟು, ಕರ್ನಾಟಕ, ಮಹಾರಾಷ್ಟ್ರದಾದ್ಯಂತ ಸುತ್ತಿ, ಅಂಬೇಡ್ಕರ್‌ರವರೊಂದಿಗೆ ಸಂಪರ್ಕ ಸಾಧಿಸಿದರು. ಹಳ್ಳಿ ಹಳ್ಳಿ ಸುತ್ತಿ ತಮ್ಮ ಇಂಥ ಹೀನಾಯ ಸ್ಥಿತಿಯ ಹಿಂದಿನ ಸಾಮಾಜಿಕ ಸಂಚನ್ನು ಬಯಲುಮಾಡುತ್ತಾ ಸಾಗಿದರು. ಹಳ್ಳಿಯ ದೀನದಲಿತರನ್ನು ಭೇಟಿ ಮಾಡಿದ ಸಂದರ್ಭದಲ್ಲಿ "ನಿಮ್ಮ ಮಕ್ಕಳು ನಿಮ್ಮಂತೆ ಹೇಲು ಉಚ್ಚೆ ಬಾಚಬೇಕೆ?" ಅಸಾಧ್ಯವಾದ ಬರ್ಬರ ಬದುಕನ್ನು ಬದುಕಿದ್ದ ಜನರಲ್ಲಿ ಸ್ವಾಭಿಮಾನ ತುಂಬತ್ತ ಅವರ ಬದುಕಿಗೊಂದು ಭರವಸೆಯನ್ನು ಹುಡುಕುವ ಪ್ರಯತ್ನ ಮಾಡತೊಡಗಿದರು. ಅವರ ಪ್ರಯತ್ನದ ಫಲದಿಂದಲೇ ದಲಿತರಿಗಾಗಿ ಶಾಲೆಗಳು, ಬೋರ್ಡಿಂಗ್‌ಗಳು, ಧಾರವಾಡ ಟೀಚರ್ಸ್ ಟ್ರೈನಿಂಗ್ ಕಾಲೇಜುಗಳು ಸ್ಥಾಪಿಸಲ್ಪಟ್ಟವು. 1925 ನವೆಂಬರ್‌ನಲ್ಲಿ 'ಬಹಿಷ್ಕೃತ ಹಿತಕಾರಿಣಿ' ಎಂಬ ಎರಡು ದಿನಗಳ ಸಮ್ಮೇಳನವನ್ನು ಏರ್ಪಡಿಸಿ ಡಾ. ಬಾಬಾಸಾಹೇಬರನ್ನು ಅಧ್ಯಕ್ಷತೆ ವಹಿಸುವಂತೆ ಕೋರಿದರು. ಕರ್ನಾಟಕ ದಲಿತರ ಹಕ್ಕಿಗಾಗಿ ಮೊದಲು ದನಿ ಎತ್ತಿದವರು ದೇವರಾಯ. ದಲಿತರ ಭೂಮಿಯನ್ನು ಸರ್ಕಾರ ಕಸಿದುಕೊಳ್ಳುವ ಸೂಚನೆ ಬಂದೊಡನೆ, ಇಡೀ ಬೆಳಗಾವಿಯಲ್ಲಿ ತಿರುಗಾಡಿ ಜನರನ್ನು ಸಂಘಟಿಸಿ ಸರ್ಕಾರಿ ಭೂಮಿಯನ್ನು ದಲಿತರಿಗೆ ದಕ್ಕುವಂತೆ ಮಾಡಿದರು.

ಇಷ್ಟೆಲ್ಲಾ ಪ್ರಜ್ಞಾವಂತ ದೇವರಾಯ, ಬಡತನವನ್ನೇ ಹಾಸಿ ಬಡತನವನ್ನೇ ಹೊದ್ದು ಬೆಳೆದಿದ್ದರ ಫಲವೇನೋ ಎಂಬಂತೆ ಪುಣೆಯ ಕಾಂಬಳೆ ಎಂಬ ಸ್ನೇಹಿತನ ಮಾತಿಗೆ ಮರುಳಾಗಿ ಮನಿರೇನ್ ಎಂಬ Doubling companyಯ ಏಜೆಂಟರಾಗಿ ಆ ಭಾಗದ ಜನರ ಹಣವನ್ನು ಕಂಪನಿಗೆ ಸಂಗ್ರಹಿಸಿದರು. ಕಮಿಷನ್ ಹೆಚ್ಚಿದಂತೆ ಕಾರು ಬಂತು. ಮುಂದೊಂದು ದಿನ ಕಂಪನಿ ಬಾಗಿಲು ಮುಚ್ಚಿದಾಗ ದೇವರಾಯ ಹಣ ಕೊಟ್ಟವರಿಗೆ ಮುಖ ತೋರಿಸುವ ಧೈರ್ಯಸಹ ಮಾಡಲಿಲ್ಲ. ಹಣ ಹಿಂತಿರುಗಿಸುವುದು ದುಸ್ತರವಾದಾಗ ಪೋಲೀಸರು ಕೇಸ್ ದಾಖಲಿಸಿಕೊಂಡು ವಿಚಾರಣೆ ನಡೆಸಿದರು. ಜೊತೆಗೆ ಸಂಗ್ರಹಿಸಿದ ಹಣವನ್ನು ವಾಪಾಸ್ ಕೊಡಬೇಕು ಇಲ್ಲ ಕಾನೂನು ಕ್ರಮ ಎದುರಿಸಬೇಕಾದೀತೆಂದು ಹೆದರಿಸಿದರು. ಒಬ್ಬ ಮನುಷ್ಯನ ಜೀವಿತದ ಇಂತಹ ಅಸಹಾಯಕ ಸಂದರ್ಭಗಳನ್ನು ಕಾಯುತ್ತಾ ಕುಳಿತಿರುವ ಯಾವುದೇ ಧರ್ಮದ ಜನ ಮಾಡುವಂತೆಯೇ ಕ್ರಿಶ್ಚಿಯನ್ ಪಾದ್ರಿ ಮತಾಂತರ ಗೊಳ್ಳುವಂತೆ ಮಾಡಿ ಆರೋಪದಿಂದ ಮುಕ್ತವಾಗುವಂತೆ ನೋಡಿಕೊಂಡ. ಅನಂತರದ ದಿನಗಳಲ್ಲಿ ತನ್ನ ಜನರಿಗಾಗಿ ಕ್ರಿಶ್ಚಿಯನ್ ಧರ್ಮವನ್ನು ತ್ಯಜಿಸುತ್ತಾರೆ.

ದಲಿತರಲ್ಲಿಯ ಮೂಢ ನಂಬಿಕೆ ಹೋಗಲಾಡಿಸಲು ಬರಿ ಭಾಷಣದಿಂದ ಸಾಧ್ಯವಾಗದು ಎಂದು ಮನಗಂಡು ಸ್ವತಃ ಅವರೇ ನಾಟಕ ತಂಡವೊಂದನ್ನು ಕಟ್ಟಿ ಜನರಲ್ಲಿ ಆ ಮೂಲಕ ಹೊಸ ಸಾಧ್ಯತೆಯೊಂದನ್ನು ಸಮಾಜದ ಮುಂದಿಟ್ಟರು.

ಹೀಗೆ ದಲಿತ ಜನಾಂಗಕ್ಕಾಗಿ ತನ್ನ ಜೀವಮಾನವನ್ನೇ ಮುಡಿಪಿಟ್ಟ ದೇವರಾಯ ಇಂಗಳೆಯರ ಜೀವನವೇ ಒಂದು ಸೈದ್ಧಾಂತಿಕ ಹೋರಾಟದಂತಿತ್ತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಅನಂತರ ದಲಿತರಿಗೆ ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಂಡು ರಾಜಕೀಯ ನಾಯಕರಾಗಬಹುದಿತ್ತು. ಆದರೆ ಅದ್ಯಾವುದರ ಗೋಜಿಗೂ ಹೋಗದೆ ಬಾಬಾಸಾಹೇಬರೆ ಚುನಾವಣೆಗೆ ನಿಲ್ಲುವಂತೆ ಕೇಳಿಕೊಂಡರೂ ತಮಗಿಂತ ಹೆಚ್ಚು ಕಲಿತ ವರಾಳೆ ಅವರನ್ನು ನಿಲ್ಲಿಸಿ ತಾವೇ ಅಡ್ಡಾಡಿ ಪ್ರಚಾರ ಮಾಡಿ ಗೆಲ್ಲಿಸಿದರು. ಜೀವನದುದ್ದಕ್ಕೂ ಹೋರಾಟ, ತ್ಯಾಗವನ್ನೇ ಮಾಡುತ್ತ ದಲಿತರ ಬದುಕಿನಲ್ಲೊಂದು ಆಶಾಕಿರಣವಾಗಿ ಹೊರಹೊಮ್ಮಿದ ದೇವರಾಯರ ಕುರಿತ ಸರಜೂ ಅವರ ಈ ಪುಸ್ತಕ ಒಂದು ಐತಿಹಾಸಿಕ ದಾಖಲೆಯಾಗಿ ಉಳಿದಿದೆ. ಇಲ್ಲಿ ಸರಜೂ ತೋರಿರುವ ತಾಳ್ಮೆ, ಕ್ರೋಢೀಕರಿಸಿರುವ ದಾಖಲೆ, ಕಾದಂಬರಿಯ ಶೈಲಿಯಲ್ಲಿ ನೀಡಿರುವ ವಿವರಣೆಯಿಂದಾಗಿ ಇದೊಂದು ಮಹತ್ವದ ಕೃತಿಯಾಗಿದೆ. ಇವರು ದಾಖಲಿಸಿರುವ ಘಟನೆಗಳು ತಮ್ಮಷ್ಟಕ್ಕೆ ತಾವೇ ಐತಿಹಾಸಿಕ ಮಹತ್ವ ಪಡೆದುಕೊಂಡುಬಿಟ್ಟಿದೆ. ಲೇಖನದಲ್ಲಿ ಬಳಸಿಕೊಂಡಿರುವ ಭಾಷೆ ಬೆಳಗಾಂ ಭಾಗದ ಕನ್ನಡ ಉಪಭಾಷೆಯಾಗಿದ್ದು ಸೂಕ್ತವಾಗಿ ದುಡಿಸಿಕೊಂಡಿದ್ದಾರೆ.

ಅವರ ಎರಡನೆಯ ಕೃತಿ ಅಂಬೆ. ಸರಜೂ ಒಬ್ಬ ಉತ್ತಮ ಸ್ತ್ರೀಸಂವೇದಿ ಬರಹಗಾರರು ಎಂಬುದನ್ನು ನಿರೂಪಿಸಿದೆ. ಒಬ್ಬ ನಾಟಕಕಾರನಾಗಿ ಆ ಕೃತಿಯನ್ನು ಓದುತ್ತಾ ಹೋದಂತೆ ನನ್ನ ಸ್ಮೃತಿಪಟಲದ ಮೇಲೆ ಅಂಬೆಯ ಪಾತ್ರ ಅಭಿನಯಗೊಳ್ಳುತ್ತಿರುವಂತೆ ಭಾಸವಾಗತೊಡಗಿತು. ಅಂಬೆ Ibsonನ ನೋರಾ, ಅಲ್ಲಾ, ಅವಳು ಗ್ರೀಕ್‌ನ 'ಮೀಡಿಯಾ' ತನ್ನ ಪ್ರಿಯಕರ ಮತ್ತೊಬ್ಬ ರಾಜಕುಮಾರಿಯನ್ನು ಪ್ರೇಮಿಸಿದನೆಂದು ತಿಳಿದೊಡನೆ ಮತಿಭ್ರಮಣೆಗೊಂಡು ಕೋಪೋದ್ರಿಕ್ತಳಾದ ಮೀಡಿಯ ಅವನಿಗೆ ಪ್ರಿಯವಾದ ಎಲ್ಲಾ ವಸ್ತುಗಳನ್ನೂ ನಾಶಗೊಳಿಸುತ್ತ ಕೊನೆಗೆ ತನ್ನೊಡಲೊಳಗೆ ಬೆಳೆದ ಅವನ ಮಕ್ಕಳನ್ನೇ ಕೊಲೆ ಮಾಡುವ ಮಾನಸಿಕ ಅತಿರೇಕಕ್ಕೆ ಹೋಗುತ್ತಾಳೆ . ಅದೇ ರೀತಿ ಅಂಬೆಯೂ ಕೂಡ.

ಅಂಬೆ : ದಾಸಿ, ಇದು ಸ್ವಯಂವರವಲ್ಲ. ಒಂದು ರೀತಿಯ ಹರಾಜು. ನಮ್ಮ ತಂದೆಯು ಮೂವರನ್ನೂ ಹರಾಜಿಗೆ ಒಡ್ಡಿದ್ದಾರೆ... ನಾಳಿನ

ಸ್ವಯಂವರದಲ್ಲಿ ನೀನೇ ಖುದ್ದಾಗಿ ನೋಡುವಿಯಂತೆ. ಎಂಥೆಂಥ ರಾಜರುಗಳು ಬಂದಿರುತ್ತಾರೆಂದು ಸ್ಮಶಾನಕ್ಕೆ ಕೆಲವೇ ಅಡಿ ದೂರವಿರುವ ರಾಜರುಗಳಿಂದ ಹಿಡಿದು ಹತ್ತಿಪ್ಪತ್ತು ಸಲ ಮದುವೆಯಾದವರು ಬಂದಿರುತ್ತಾರೆ. ಈ ಮುದುಕರ ವೈಭವದೆದುರು, ಯುವಕರಾದವರು ಅಥವಾ ಸಣ್ಣ ರಾಜ್ಯದ ಅಧಿಪತಿಗಳಾದವರ ಪಾಡೇನು? ಅವರು ಅಲ್ಲಿ ಮಾತನಾಡುವ ಹಾಗಿಲ್ಲ. ಮಾತಾಡಿದರೋ ಸ್ವಯಂವರವೇ ಯುದ್ಧರಂಗವಾಗುತ್ತದೆ. ಈ ವೃದ್ಧ ರಾಜರುಗಳಿಗೆ ಸ್ವಯಂವರವೆಂದರೆ ಒಂದು ರೀತಿಯ ಪ್ರತಿಷ್ಠೆಯ ಕಣ. ದಲಿತರಂತೆ ಈ ಹೆಂಗಸರೂ ಕೂಡ ಸಮಾಜದ ಕಟ್ಟಕಡೆಯಲ್ಲಿ ಸಿಲುಕಿದಂತಹ ಗೊಂಬೆಗಳಂತೆ, ಅಲಂಕಾರದ ವಸ್ತುಗಳಂತೆ ಅರಮನೆಯ ನಾಲ್ಕು ಗೋಡೆಗಳ ನಡುವೆಯೇ ಬದುಕಿದ್ದವರು. ಮೊಟ್ಟ ಮೊದಲನೆಯದಾಗಿ ಇದು ತಪ್ಪು. ಎಂದು ವಾದಿಸಿ ಅಂಬೆ ಅರವತ್ತರ ಆಸುಪಾಸಿನ ತನ್ನ ತಂದೆ ನಾಗಕನ್ಯೆಯನ್ನು ಸ್ವಯಂವರದಲ್ಲಿ ಗೆದ್ದು ತಂದಾಗ ಅಂಬೆ ಸಹಿಸದೆ ತಂದೆಯನ್ನೇ ಹಿಯಾಳಿಸುತ್ತಾಳೆ.

ಅಂಬೆ : ಭೂಮಿಯನ್ನು ಆಕ್ರಮಿಸಿಕೊಂಡಂತೆ ಹೆಣ್ಣುಗಳನ್ನು ಆಕ್ರಮಿಸಿಕೊಳ್ಳುತ್ತಾ ಹೋಗುವುದು ನಿಮಗೆ ಚಟವಾಗಿಬಿಟ್ಟಿದೆ. ಹೆಣ್ಣು ಬರೀ ಆಕ್ರಮಣಕ್ಕೆ ಒಲಿಯುವುದಿಲ್ಲ. ಅರ್ಪಣೆಯೂ ಬೇಕು, ಎಂಬ ಅಂಬೆಯ ಮಾತು ಪುರುಷನ ಹುಸಿಪೌರುಷವನ್ನು ಬಯಲಿಗೆಳೆಯುತ್ತದೆ. ಸ್ಮಶಾನಕ್ಕೆ ಹೋಗಲು ಸಿದ್ಧರಾಗಿರುವ ಕಾಲದಲ್ಲಿ ಬರಿ ಪ್ರತಿಷ್ಠೆಗಾಗಿ ಹದಿಹರೆಯದ ಕನಸಿನ ಭ್ರಮೆಯ ಲೋಕದಲ್ಲಿ ವಿಹರಿಸುತ್ತಿರುವ ಹದಿನಾರರ ನರೆಗೂದಲಿನ ಮುದಿಮುಖವನ್ನು ಅದ್ಯಾವ ಉತ್ಕಟ ಬಯಕೆಯಿಂದ ಪ್ರೀತಿಸಿಯಾಳು? ಹೆಣ್ಣು ಬರಿ ಪೌರುಷಕ್ಕೆ ಬಲಿಯಾಗಲಾರಳು, ಅವಳ ಅಂತರಂಗ ಒಪ್ಪಿದಾಗ. ಅವಳು ತನ್ನನ್ನು ಅರ್ಪಿಸಿಕೊಂಡಾಗ ಅದು ನಿಜವಾದ ಸ್ವಯಂವರವಾದೀತು. ಆದರೆ ಈ ದೇಶದಲ್ಲಿ ವಿರಾಜಮಾನವಾಗಿರುವ ಸ್ಥಾಪಿತ ಹಿತಾಸಕ್ತಿಗಳು ಧರ್ಮದ ಹುಸಿಲೇಪವನ್ನು ಬಳಿದು ಹೆಂಗಸರ ಮನಸ್ಸಿನ ಮೇಲೆ ಅಧಿಕಾರ ಹೇರುತ್ತಾ ಬಂದಿವೆ ಹೊರತು ಅವಳ ಒತ್ತಾಸೆಗೆಂದು ಬೆಂಬಲಕೊಟ್ಟಿಲ್ಲ.

ಅಂಬೆ : 'ಗಂಡು' ಹೆಣ್ಣೆಂಬ ತಾರತಮ್ಯದ ಮಾತುಗಳನ್ನು ಕೇಳಿಕೇಳಿ ರೋಸಿಹೋಗಿರುವ

ಅವಳಿಗೆ ಹೆಣ್ಣಾಗಿ ಹುಟ್ಟಿದ್ದೆ ಮಹಾ ಅಪರಾಧ ಎಂದೆನಿಸಿ ಈ ಮಾತುಗಳನ್ನು ನೇರವಾಗಿ ಅವಳ ದಾಸಿಯ ಹತ್ತಿರ ಪ್ರಸ್ತಾಪಿಸುತ್ತಾಳೆ.

ಅಂಬೆ : "ಸಿಂಹಾಸನದ ಮೇಲೆ ಕೂತರೆ ಜಗತ್ತೇನು ಸರ್ವಸುಖಿಯಾಗಿ ಬದುಕುತ್ತದೆಯೇನು?" ಅಥವಾ ಹುಡುಗಿಯೊಬ್ಬಳು ಸಿಂಹಾಸನದ ಮೇಲೆ ಕೂತರೆ ಜಗತ್ತೇನು ಮುಳುಗಿಹೋಗುತ್ತದೆಯೇನು? ಎಂದು ಕೇಳುವಲ್ಲಿ ಅವಳ ಅಂತರಾಳದಲ್ಲಿ ಮಡುಗಟ್ಟಿದ ಹೆಣ್ತನದ ಅವಮಾನ ಜಾಗೃತಗೊಳ್ಳುತ್ತದೆ. ಆ ಸಿಟ್ಟು ಧರ್ಮಶಾಸ್ತ್ರವನ್ನು ಪ್ರಶ್ನಿಸುವಂತೆ ಮಾಡುತ್ತದೆ.

ಕಾಶಿರಾಜು : "ಪುತ್ರ ಸಂತಾನವಿಲ್ಲದೆಯೇ ಗತಿರ್ನಾಸ್ತಿ ಎಂದು ಧರ್ಮಶಾಸ್ತ್ರಗಳೆ ಹೇಳಿಲ್ಲವೆ". ಧರ್ಮಶಾಸ್ತ್ರವೆಂಬ ಅರ್ಥವಾಗದ ಒಂದು ಚೌಕಟ್ಟಿನ ಭೂತವನ್ನು ತಮ್ಮ ನೆರವಿಗೆ ಬೇಕಾದ ಹಾಗೆ ಬಳಸಿಕೊಳ್ಳುವ ಗಂಡಸರು ಹೆಂಗಸರನ್ನು ಹೆದರಿಸಲು, ಅವರನ್ನು ಅವಮಾನಿಸಿ ಅವರ ಅಸಮರ್ಥತೆಯನ್ನು ಎತ್ತಿ ಹೇಳಲು ಬಳಸುವ ಶಬ್ದಗಳನ್ನು ಕೇಳಿ ದೊಡನೆ ಕೆಂಡಮಂಡಲವಾಗುವ ಅಂಬೆ ಅವಳ ತಂದೆಯ ಮಾತಿಗೆ.

ಅಂಬೆ : "ಅದೆಲ್ಲ ನೀವು ನಿಮ್ಮ ಅನುಕೂಲಕ್ಕಾಗಿ ಮಾಡಿಕೊಂಡ ನಿಯಮ ಸತ್ತ ನಂತರ ಎಲ್ಲರ ಗತಿಯೂ ಒಂದೇ" ಕಾಶಿರಾಜ ನಿರೀಕ್ಷಸದ ಉತ್ತರದಿಂದ ಹೈರಾಣ ಮಾಡಿಬಿಡುತ್ತಾಳೆ. ಅಂಬೆಯ ಪಾತ್ರ ಈಗ ಮಾತನಾಡುವ Feminism Theoryಯಲ್ಲಿಯ ಪಾತ್ರಗಳಂತೆ ಎನಿಸುತ್ತದೆ. "The ultimate disaster of woman is to miss out on getting a husband"

(ಗಂಡ ಸಿಗದೆ ಇರುವುದೆ ಹೆಣ್ಣಿನ ಕೊನೆಯ ದುರಂತ) ಎನ್ನುವಂತೆ ಸಮಾಜ ಹೆಣ್ಣನ್ನು ನಂಬಿಸಿದೆ.

ಅಂಬೆ : "ಹೌದು, ಅವರಿಗೆ ತಾವು ಗೆದ್ದು ತಂದ ವಸ್ತುವನ್ನು ನನ್ನ ಮುಂದೆ ಪ್ರದರ್ಶಿಸಬೇಕಿತ್ತು. ನನ್ನ ಮಾತುಗಳಿಂದ ಅವರ ಸ್ವಾಭಿಮಾನಕ್ಕೆ ಪೆಟ್ಟು ಬಿದ್ದದ್ದು ನನಗೆ ಸಂತೋಷ ತಂದಿದೆ. ಆ ಹುಡುಗಿ... ಕ್ಷಮಿಸಿ... ಆ ನಾಗಕನ್ಯೆ... ಅಲ್ಲಲ್ಲ ನನ್ನ ಹೊಸತಾಯಿ, ಎಳೆ ಗರುವಿನಂತಿದ್ದಾಳಲ್ಲ? ಇನ್ನೂ ಗೊಂಬೆಯ ಜೊತೆ ಆಡವಾಡುವ ವಯಸ್ಸು ಅಲ್ಲಲ್ಲ ಅವಳೇ ಒಂದು ಗೊಂಬೆಯಾಗಿದ್ದಾಳೆ. ಆಕೆ ಈ ವೃದ್ಧನ ಜೊತೆಗೆ ಛೀ... ಛೀ...

ಕಲ್ಪಿಸಲು ಅಸಹ್ಯವಾಗುತ್ತದೆ.".

ಹೆಣ್ಣಿನ ಅಂತರಾಳದೊಳಗಿಳಿದು ಯೋಚಿಸಿ, ತನ್ನನ್ನೇ ಮತ್ತೊಬ್ಬ ಹೆಣ್ಣಿನೊಂದಿಗೆ ಸಮೀಕರಿಸಿ ನೋಡಿ, ಹೇಸಿಗೆ ಅನಿಸಿದ್ದನ್ನು ಅವಳು ಹೇಗೆ ಸಹಿಸಿಯಾಳು ಎಂದು ಆಲೋಚಿಸುತ್ತ ಆ ಗಂಡು ಸ್ವತಃ ತನ್ನ ತಂದೆಯೇ ಆಗಿದ್ದರೂ, ಮುದುಕನೊಬ್ಬ ಮತ್ತೊಬ್ಬ ಹೆಣ್ಣಿಗೆ ಬಾಳ ಸಂಗಾತಿಯಾಗುತ್ತಾನೆ. ಅದು ವಯಸ್ಸಿನ ವೈಪರೀತ್ಯ ಅಜಗಜಾಂತರ ವಿರುವಾಗ ಎಂದು ಯೋಚಿಸಿ ಸಂಕಟಪಡುತ್ತಾಳೆ.

ಸರಜೂರ ಅಂಬೆ ಒಬ್ಬ ಹೊಸ ಹೆಣ್ಣಾಗಿ ಕಾಣುತ್ತಾಳೆ. ಇಡೀ ನಾಟಕದ ಉದ್ದಕ್ಕೂ ಪುರುಷನ ದೌರ್ಬಲ್ಯವನ್ನು ಖಂಡಿಸುತ್ತಾ, ಅವನ ಅನ್ಯಾಯವನ್ನು ಸಹಿಸದೆ ಪ್ರತಿಭಟಿಸುತ್ತಾಳೆ. ಈಗ ಒಂದು ಸಿದ್ಧಾಂತದಂತೆ ಮಾತನಾಡುತ್ತಿರುವ ನಮ್ಮ ಮಹಿಳಾ ಬರಹಗಾರರು ಮಹಾಭಾರತದ ಯುಗದಲ್ಲೇ ಬರುವ ಅಂಬೇಯಂತೆ Feminist ಯಾಕೆ ಗುರುತಿಸಲಿಲ್ಲಾ. ತಂದೆ, ಅವಳನ್ನು ಸ್ವಯಂವರದಲ್ಲಿ ಗೆದ್ದೆನೆಂದು ಬಡಾಯಿಕೊಚ್ಚಿ ಕೊಳ್ಳುವ ಭೀಷ್ಮನಿಗೆ ಅಷ್ಟೇ ಕಠೋರ ನುಡಿಗಳನ್ನು ಹೇಳುತ್ತಾಳೆ.

ಭೀಷ್ಮ: "ಈ ಸ್ವಯಂವರ ಗೆದ್ದಿದ್ದು ನನಗಾಗಿ ಅಲ್ಲ. ಹಸ್ತಿನಾವತಿಯ ಸಾಮ್ರಾಟ ರಾಗಿರುವ ವಿಚಿತ್ರವೀರ್ಯರಿಗಾಗಿ. ನನ್ನ ತಾಯಿ ಸತ್ಯವತಿ ದೇವಿಯವರ ಆಜ್ಞೆಯಂತೆ ನಾನಿಲ್ಲಿ ಬಂದಿದ್ದೇನೆ."

ಅಂಬೆ: ಭೀಷ್ಮನ ಮಾತಿಗೆ ಖಂಡತುಂಡಾಗಿ ಸ್ತ್ರೀ ಜಾತಿಯ ಇಂತಹ ಘೋರ ಅವಮಾನ ಈ ಹಿಂದೆ ಎಂದೆಂದಿಗೂ ನಡೆದಿರಲಾರದು ! ಸ್ವಯಂವರ ಗೆಲ್ಲುವುದು ಅದು ಬಲವಂತದಿಂದ ಒಬ್ಬ ಮದುವೆಯಾಗುವವ ಇನ್ನೊಬ್ಬ!

ಇಡೀ ಭರತ ಖಂಡದಲ್ಲಿಯೇ ಪೌರುಷದ ಪರಾಕಾಷ್ಠತೆಯ ತುತ್ತತುದಿ ಯಲ್ಲಿರುವ ಭೀಷ್ಮ, ಯಾವ ಭೀಷ್ಮನ ಹೆಸರು ಕೇಳಿದರೆ ಸ್ವಯಂವರದಲ್ಲಿ ನೆರೆದ ರಾಜರು ತಕ್ಷಣವೇ ಪಲಾಯನಗೈದಿದ್ದರೋ ಅಂತಹ ಭೀಷ್ಮನ ಜೀವ ಜಾಲಾಡುವ ಅಂಬೆ ಕೊನೆಯ ಪ್ರಯತ್ನವೆಂಬಂತೆ ಅವಳನ್ನು ಹುಲಿಯ ಬಾಯಿಂದ ರಕ್ಷಿಸಿದ ಶಲ್ಯನನ್ನು ಪ್ರೀತಿಸಿರುವುದಾಗಿ ಹೇಳಿದಾಗ ಭೀಷ್ಮನೊಡನೆ ಈ ಸಂಘರ್ಷವನ್ನು ಸರಜೂ ಒಂದು ವಿಭಿನ್ನ ನೆಲೆಯಲ್ಲಿ ನೋಡುವ ಪ್ರಯತ್ನ ಮಾಡಿದ್ದಾರೆ.

ಅಂಬೆ ಇಡೀ ಭರತ ಖಂಡದ ಸ್ತ್ರೀಯರ ಪ್ರತಿನಿಧಿಯಾಗಿ ನಿಲ್ಲುತ್ತಾಳೆ. ಆದರೆ ಅಂಬೆ ಮಹಾಭಾರತದ ಕಾಲಘಟ್ಟದ ಚರಿತ್ರೆಯಲ್ಲಿ ಎಲ್ಲೂ ದಾಖಲಾಗಲಿಲ್ಲ. ಸರಜೂ ಅವರ ಈ ಪ್ರಯತ್ನ ಸ್ತ್ರೀವಾದಿ ಚಿಂತನೆಗೆ ಒಂದು ಹೊಸ ಆಯಾಮವನ್ನು ನೀಡಿದೆ.

... ಒಂದು ಹೆಣ್ಣಿನ ಹೊಟ್ಟೆಯುರಿ, ಅಪಮಾನ ಮತ್ತು ಅತೃಪ್ತಿಯ ಪರಿಣಾಮವೇನಾದೀತೆಂಬುದು ಈ ಭರತ ಖಂಡಕ್ಕೆ ಗೊತ್ತಾಗಲಿ!

ಇಲ್ಲಿ ಹೆಣ್ಣು ಸಹಿಸಿಕೊಂಡು ಬಂದಿರುವ ಪುರುಷ ದಬ್ಬಾಳಿಕೆ, ಅವಳ ಅಂತರಾಳದೊಳಗೆ ಕುದಿಯುತ್ತಿರುವ ಅಸಮಾನತೆಯ ಜ್ವಾಲೆ, ಶೋಷಣೆ, ಇಬ್ಬಂದಿತನ ಇವುಗಳಿಂದಾಗಿ ಅವಳ ಮನಸ್ಸು ಮರಗಟ್ಟಿರುವುದು ವೇದ್ಯವಾಗುತ್ತದೆ. ಸರಜೂ ಬರಿಯ ಕವಿ, ಲೇಖಕ, ಅನುವಾದಕರಷ್ಟೇ ಅಲ್ಲಾ ಒಬ್ಬ ಸಂವೇದನಾಶೀಲ ನಾಟಕಕಾರ ಎಂಬುದನ್ನು ಅವರ ಕೃತಿ 'ಅಂಬೆ' ಖಾತ್ರಿಪಡಿಸುತ್ತದೆ.

ಅವರ 'ಮಹಾವೃಕ್ಷ' 17 ವಿಭಿನ್ನ ನೆಲೆಗಟ್ಟಿನ ಲೇಖನಗಳ ಸಂಕಲನ. ಮಲ್ಲೇಪುರಂ ಹೇಳುವಂತೆ." ಇವರ ಲೇಖನಗಳ ಹಿಂದಿರುವ ಮುಖ್ಯ ಪ್ರೇರಣೆ ಭಾಷೆ, ಸಮಾಜ, ಸಂಸ್ಕೃತಿ, ಇತಿಹಾಸ, ಸಾಮಾಜಿಕ ವಿಜ್ಞಾನ ಮುಂತಾದ ಕ್ಷೇತ್ರಗಳ ಅಪಾರ ತಿಳುವಳಿಕೆ". ಇದು ನಿಜವೂ ಕೂಡ. ಸರಜೂರವರ ನಿಜವಾದ Scholarship (ಪಾಂಡಿತ್ಯ) ಅಡಗಿರುವುದೇ ಈ ಸಂಕಲನದಲ್ಲಿ. ಒಂದು ಭಿನ್ನವಾದ ನೆಲೆಗಟ್ಟಿನ ಮೇಲೆ ನಿಂತು ಸಮಾಜ, ಸಂಸ್ಕೃತಿ, ಬದುಕು, ಭಾಷೆಯನ್ನು ನೋಡುವುದು ಎಲ್ಲರಿಗೂ ಸಾಧ್ಯವಾಗದ ಕೆಲಸ. ಅದಕ್ಕೆ ಸುಧೀರ್ಘವಾದ ಜೀವನಾನುಭವ, ಯಥೇಚ್ಛವಾದ ಅಧ್ಯಯನ, ಸಂಯಮಶೀಲ ಬರೆವಣಿಗೆಯ ಕಲೆ ಬೇಕು. ಈ ಎಲ್ಲಾ ಮಾದರಿಗಳನ್ನೂ ಮಹಾವೃಕ್ಷದಲ್ಲಿ ನಾವು ಕಾಣುತ್ತೇವೆ. 'ಮಹಾವೃಕ್ಷ' ಎಂಬ ಶಿರೋನಾಮೆಯೇ ಸೂಚ್ಯವಾಗಿದೆ. ಮರಕ್ಕೂ, ಹೆಮ್ಮರಕ್ಕೂ, ಮಹಾವೃಕ್ಷಕ್ಕೂ ಅಂತರವಿದೆ ಎಂಬ ಸತ್ಯ ಕನ್ನಡ ಬಲ್ಲ ಪಂಡಿತರಿಗೆಲ್ಲಾ ತಿಳಿದ ವಿಷಯವೇ. Reading maketh a full man. Conference a readman. and Writing and exactman. ಇವು ಅಕ್ಷರಶಃ ನಿಜ. ಸರಜೂ ಈ ಮೂರು ಆಯಾಮಗಳಲ್ಲಿ ಪರಿಪೂರ್ಣತೆಯನ್ನು ಪಡೆದಿದ್ದಾರೆ. ಬೇಕನ್‌ನ ಈ ಮಾತುಗಳಿಗೂ ಸರಜೂರ ಮಹಾವೃಕ್ಷಕ್ಕೂ ಸ್ವಾಮ್ಯವಿದೆ. ಅವರ ಸುದೀರ್ಘವಾದ ಅಧ್ಯಯನ, ಬಿಡುವಿಲ್ಲದ ಬರವಣಿಗೆ ಮತ್ತು ಅವಿರತ ಭೇಟಿಯ ಪ್ರತಿಫಲ ಅನಿಸುತ್ತಿದೆ. ಸರಜೂರ ಭಾಷಾ ಪರ ಕಾಳಜಿಯ ಲೇಖನಗಳು 'ಭಾಷೆ ಬೆಸೆದ ಭಾವನೆ' ಛತ್ರಪತಿ ಶಿವಾಜಿ ಮಹಾರಾಜರು ಕನ್ನಡಿಗರಾಗಿದ್ದಾರೆ.

ಗಡಿ ಕನ್ನಡಿಗರ ಅತಂತ್ರ ಸ್ಥಿತಿ ಮುಂತಾದವು ಕನ್ನಡ ನಾಡು ನುಡಿಯ ಬಗೆಗಿನ ಅವರ ಅದಮ್ಯ ಚೇತನವನ್ನು ಹೊರಹಾಕುವಲ್ಲಿ ಯಶಸ್ವಿಯಾದರೆ, ಕುಮಾರ ಗಂಧರ್ವ ಅವರನ್ನು ಕುರಿತ ಸೂಳೆಭಾವಿಯಿಂದ ದೇವಾಸ್‌ವರೆಗೆ ಲೇಖನ ಶಿವಪುತ್ರಕೊಮಕಾಳಿಮಠ ಗಂಧರ್ವರಾದ ಸ್ವಾರಸ್ಯವನ್ನು ಬಿಚ್ಚಿಡುತ್ತದೆ. ಕಟ್ಟೀಮನಿಯವರ ಸಾಹಿತ್ಯದ ಜೊತೆ ಜೊತೆಗೆ ಪ್ರಗತಿಶೀಲ ಸಾಹಿತ್ಯದ ಕಾಲಘಟ್ಟ ಅದರ ಮುಂದುವರಿದ ಪರಂಪರೆ, ಭಾರತೀಯ ಸಾಹಿತ್ಯ ತೆರೆದುಕೊಂಡ ಪರಿ, ಜಾಗತಿಕ ಮಟ್ಟದಲ್ಲಾದ ಬದಲಾವಣೆ, IPTAದ ಆರಂಭ ಶೋಷಿತರ ದನಿಯಾಗಿ ಅರಳಿದ ಸಾಹಿತ್ಯ, ಕಟ್ಟೀಮನಿ ಅದರ ಉಪಯೋಗದಿಂದ ಕನ್ನಡದ ಶ್ರೇಷ್ಠ ಕಾದಂಬರಿಕಾರರಲ್ಲಿ ಒಬ್ಬರಾದ ಬಗೆಯನ್ನು ಚರ್ಚಿಸಿದರೆ, "ನೀರಕಂಡಲ್ಲಿ ಮುಳುಗುವರಯ್ಯಾ ಮರವ ಕಂಡಲ್ಲಿ ಸುತ್ತುವರಯ್ಯಾ" ವಚನಕಾರರು ಭಾರತದಲ್ಲಿರುವ ಮೂಢನಂಬಿಕೆ, ಮತಮೌಢ್ಯತೆಗಳ ಕುರಿತಾಗಿ ವಚನಗಳಲ್ಲಿ ಟೀಕಿಸಿರುವುದನ್ನು ಸರಜೂ ಮರುಚಿಂತನೆಗೆ ಒಳಪಡಿಸಿದ್ದಾರೆ.

ಅವರ ದಲಿತ ಬಂಡಾಯ ಚಳುವಳಿ, ಚಳುವಳಿಗಳ ವೈಚಾರಿಕ ಸಂಘಟನೆ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಬೆಳಕಿಗೆ ಬಂದ ಎರಡು ಸಾಹಿತ್ಯದ ಪ್ರಕಾರಗಳ ಕುರಿತ ಸುದೀರ್ಘ ಮಾಹಿತಿಯನ್ನು ಒದಗಿಸುವಲ್ಲಿ ಯಶಸ್ವಿಯಾದರೆ, 'ಮಹಾವೃಕ್ಷ' ರವೀಂದ್ರನಾಥ ಠಾಗೋರ್ ಜನರಾಡುವ ಭಾಷೆಯಲ್ಲಿ ಕವಿತೆ ಬರೆಯಲು ಆರಂಭಿಸಿದಾಗ ಸಂಪ್ರದಾಯವಾದಿಗಳು ಆ ಕವಿತೆಗಳನ್ನು ಸಾರಸಗಟಾಗಿ ತಿರಸ್ಕರಿದ್ದರು. ಮಾಹಾಕವಿ ಕುವೆಂಪುರಂತಹವರೂ ಸಹ ಹುರುಳಿಲ್ಲದ ಪಂಡಿತರುಗಳ ಟೀಕೆಗೆ ಗುರಿಯಾಗಿದ್ದಾರೆ. ಆದರೂ ಅವರು ನೋಬೆಲ್ ಪ್ರಶಸ್ತಿಗೆ ಭಾಜನರಾದ ಪರಿಯನ್ನು ವಿವರಿಸಿದ್ದಾರೆ.

ಒಂದು ವಿಭಿನ್ನ ನೆಲೆಯಲ್ಲಿ ಸಾಹಿತ್ಯ ಕೃಷಿ ಮಾಡುತ್ತಾ ಬಂದ ಹಿರಿಯ ಮಿತ್ರರಾದ ಸರಜೂ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಡುವುದರೊಂದಿಗೆ 'Sarojookatakar Style' ಎಂಬಂತೆ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಬಂಡಾಯದ ಮೊದಲ ತಲೆಮಾರಿನ ಜೊತೆಗೆ ಬೆಳೆದು ಪಾಂಡಿತ್ಯಪೂರ್ಣ ಬರವಣಿಗೆ ಮಾಡಿದ ಸಾಹಿತಿಗಳ ಸಾಲಿನಲ್ಲಿ ಸರಜೂ ನಿಲ್ಲುತ್ತಾರೆ. ಉತ್ತರ ಕರ್ನಾಟಕದ ಭಾಗದಲ್ಲಿ ಗಟ್ಟಿಧ್ವನಿಯಾಗಿ ಸರಜೂ ನಿಲ್ಲುತ್ತಾರೆ. ಉತ್ತರ ಕರ್ನಾಟಕ ಭಾಗದ ಗಟ್ಟಿಧ್ವನಿಯಾಗಿ ಸರಜೂ ಸಹೃದಯಿ, ಸೂಕ್ಷ್ಮಗ್ರಾಹಿ ಪತ್ರಕರ್ತ. ಬೆಳಗಾವಿ ಜಿಲ್ಲೇ ಎಂದೊಡನೆ ಸಾಹಿತ್ಯಾಸಕ್ತರ ಗಮನಕ್ಕೆ ಬರುವುದು ಸರಜೂಕಾಟ್ಕರ್ ಮಾತ್ರ. ಈ ಸಂದರ್ಭದಲ್ಲಿ Bacon ಹೇಳಿದ ಮಾತು ನೆನಪಾಗುತ್ತಿದೆ.

"Some books are to be read in parts. Others to be read, but cruisouly. and some few to be read wholly and with diligence and attention. Some books also may be read by deputy, and extracts made of them by others in the less important arguments, and the meaners sort of book. else distiiled books are like.common distilled water. flash thing."

ಆದರೆ ಸರಜೂರ ಪುಸ್ತಕಗಳು ಸಂಪೂರ್ಣವಾಗಿ, ಸಾವಧಾನವಾಗಿ ಆರಂಭದಿಂದ ಹಿಡಿದು ಕೊನೆಯವರೆಗೂ ಮತ್ತು ಬುದ್ಧಿ ಬೆಳವಣಿಗಾಗಿ ಓದಿಸಿಕೊಳ್ಳುವ ಎಲ್ಲಾ ಗುಣಗಳನ್ನು ಹೊಂದಿವೆ. ಈ ಮೂರು ಪುಸ್ತಕಗಳಲ್ಲಿ ಅವರ ಮನೋಧೋರಣೆ ಅವರ ಸಾಹಿತ್ಯಿಕ ನಿಲುವು ಅವರ ಸಿದ್ಧಾಂತ ಪ್ರತಿಯೊಬ್ಬ ಓದುಗನಿಗೂ ಪರಿಚಯವಾಗುವುದು.

❄ ❄ ❄ ❄ ❄

ಪ್ರೊ. ಕೆ.ಎಸ್.ಭಗವಾನ್ ಅನುವಾದದ ದೈತ್ಯ ಪ್ರತಿಭೆ

ಈ ನಾಡು ಕಂಡ ಶ್ರೇಷ್ಠ ಚಿಂತಕರು, ಭಾಷಾಂತರಕಾರರಲ್ಲಿ ಪ್ರೊ.ಕೆ.ಎಸ್.ಭಗವಾನರೂ ಒಬ್ಬರು. ಈ ವ್ಯವಸ್ಥೆಯ ಒಳಸುಳಿಯನ್ನು ಅರ್ಥಮಾಡಿಕೊಂಡು, ಭಿನ್ನ ನೆಲೆಯೊಳಗೆ ನಿಂತು ಆಲೋಚನೆ ಮಾಡಿದ ವಿದ್ವಾಂಸರೂ ಹೌದು. ಭಾಷಾಂತರಕಾರರೂ ಹೌದು. ಪ್ರಸ್ತುತ, ನಾನು ಪ್ರೊ.ಭಗವಾನ್ ಅವರ ಭಾಷಾಂತರದ ಕುರಿತಂತೆ ಬರೆಯುತ್ತಿರುವುದರಿಂದ ಭಾಷಾಂತರ.ಯಾಂತ್ರಿಕವಾಗಿ ಉತ್ಪನ್ನವಾಗಬಹುದಾದೊಂದು 'ತಯಾರಿ'ಮಾದರಿ ಅಲ್ಲ, ಭಾಷಾಂತರ ಮೂಲಭಾಷೆಯನ್ನು ಭಾಷಾಂತರಿಸಹೊರಟ ಭಾಷೆಗೆ ಅರ್ಥವನ್ನು ಅನುವಾದಿಸುತ್ತೇವೆ. ಬರಿ ಅರ್ಥವನ್ನಷ್ಟೇ ಅಲ್ಲ. ಇದನ್ನೇ ಕುವೆಂಪುರವರು "ಭಾಷಾಂತರಕಾರ್ಯ ಲಘುವಾದುದಲ್ಲ ಅದೂ ಕೂಡ ಸ್ವತಂತ್ರ ಕೃತಿಯಂತೆ ಪ್ರತಿಭಾ ಮೂಲವಾದದ್ದು. ಉತ್ತಮ ಭಾಷಾಂತರ ಎಲ್ಲೋ ಕೆಲವು ಅಧಿಕಾರಿ ಚೇತನಗಳಿಗೆ ಮಾತ್ರ ಸಾಧ್ಯ. " ಈ ಮಾತು ಪ್ರೊ.ಕೆ.ಎಸ್.ಭಗವಾನ್ ಅವರಿಗೆ ಅನ್ವಯವಾಗುತ್ತದೆ. ಏಕೆಂದರೆ ತಮ್ಮ ಸಮಕಾಲೀನ ಅನುವಾದಕರುಗಳಿಗಿಂತ ಭಿನ್ನರೀತಿಯಲ್ಲಿ ಆಲೋಚಿಸಿ ಭಾಷಾಂತರಸುವುದನ್ನು ಅವರ ಷೇಕ್ಸ್‌ಪಿಯರ್‌ನ ಹಾಮ್ಲೇಟ್, ಜ್ಯೂಲಿಯಸ್‌ಸೀಜರ್, ನಿಮಿಸ್ಟ್, ಒಥೆಲೊ, ಮಹಾರಾಜ ಲಿಯರ್ ಮುಂತಾದ ಅನೇಕ ನಾಟಕಗಳಿಂದ ತಿಳಿಯಬಹುದು. ಮೈಸೂರಿನ ಪ್ರತಿಷ್ಠಿತ ಮಹಾರಾಜ ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರು, ವಿಭಾಗದ ಮುಖ್ಯಸ್ಥರು ಆಗಿಕೆಲಸ ಮಾಡುತ್ತಿದ್ದ ಇವರು ಹುಡುಗರ ಮೆಚ್ಚಿನ ಮೇಷ್ಟ್ರು. "ಎಷ್ಟೋ ಹುಡುಗರು ಭಗವಾನ್ ಅವರು ಕಣ್ಣು ಮುಚ್ಚಿ ಷೇಕ್ಸ್‌ಪಿಯರ್‌ನ ನಾಟಕ ಆರಂಭಮಾಡಿದ್ರೆ ನಮ್ಮನ್ನ ಆ ನಾಟಕದ ಒಳಗೆ ಕರ್ಕೊಂಡ್ಹೋಗಿ ಮೀಯಿಸಿಬಿಡ್ತಾರೆ. ಸ್ವತಃ ಅವರು ಧ್ಯಾನಾವಸ್ಥೆಯ ಪರಮಾವಧಿಯನ್ನ ತಲುಪಿ, ಹ್ಯಾಮ್ಲೇಟ್, ಸೀಜರ್ ನಾಟಕಗಳ ಒಳ ಜಗತ್ತಿನೊಳಗೆ ಕರೆದೊಯ್ದು ಒಂದು ಹೊಸ ಜಗತ್ತನ್ನು ಪರಿಚಯಿಸಿ ಹೊಸ ಸಂಸ್ಕೃತಿಯ ವಿಹಂಗಮ ನೋಟದ ಪರಿಚಯ ಮಾಡಿಸುತ್ತಾರೆ" ಎಂದಿದ್ದು ನಿಜ. ಷೇಕ್ಸ್‌ಪೀಯರ್ ಬಗ್ಗೆ ಇವತ್ತು ಕರ್ನಾಟಕದಲ್ಲಿ ಅಧಿಕೃತವಾಗಿ ಯಾರಾದರೂ ಮಾತನಾಡುವವರಿದ್ದಾರೆಂದರೆ ಅವರು ಭಗವಾನ್ ಎಂಬುದು ಜನಜನಿತವಾಗಿದೆ. ನಾನು ಪ್ರೊ. ಸಿ.ನಾಗಣ್ಣ ಅವರೊಂದಿಗೆ ಎಷ್ಟೋ ಸಂದರ್ಭಗಳಲ್ಲಿ ಚರ್ಚೆ ಮಾಡಿದಾಗ ಷೇಕ್ಸ್‌ಪಿಯರ್ Authentic ಆಗಿ ಮಾತನಾಡಿದ್ದನ್ನು ಕೇಳಿದ್ದೇವೆ.

ಒಂದು ಸಂಸ್ಕೃತಿಯ ತುತ್ತತುದಿಯಲ್ಲಿ ನಿಂತ್ಕೊಂಡು ಮತ್ತೊಂದು ಸಂಸ್ಕೃತಿಯ ಒಳಸುಳಿಯ ಸೂಕ್ಷ್ಮತೆಯ ಬಗ್ಗೆ ಮಾತಾಡುವುದು ಬಹಳ ಕಷ್ಟದ ಕೆಲಸ. ಒಬ್ಬ ವಿದ್ವಾಂಸ ತನ್ನದಲ್ಲದ ಬದುಕಿನ ಅನುಭವಗಳನ್ನು ಮತ್ತೊಬ್ಬ ನಾಟಕಕಾರ ಕಟ್ಟಿಕೊಟ್ಟಿದ್ದನ್ನು ಯಥಾವತ್ತಾಗಿ ನಮ್ಮ ಸಂಸ್ಕೃತಿಯಂತೆ ನಮಗೆ ಕಟ್ಟಿಕೊಡುವುದಿದೆಯಲ್ಲ ಅದು ಬಹಳ ತ್ರಾಸದಾಯಕ ಕೆಲಸ. ಕೆ.ಎಸ್.ಭಗವಾನ್ ಆ ಸಂವೇದನೆಯನ್ನು ಅರ್ಥಮಾಡಿಕೊಂಡಿರುವುದರಿಂದಲೇ ಇವತ್ತು ಕರ್ನಾಟಕದ ಅನೇಕ ಅನುವಾದಕರಿಗಿಂತ ಭಿನ್ನರಾಗಿ ನಿಲ್ಲುತ್ತಾರೆ. ಅದ್ರಲ್ಲೂ ಷೇಕ್ಸ್‌ಪಿಯರ್‌ನಂಥ ಮೇಧಾವಿ ನಾಟಕಕಾರನ ನಾಟಕಗಳನ್ನು ವಸ್ತುನಿಷ್ಠವಾಗಿ ಕರಾರುವಕ್ಕಾಗಿ ಮೂಲಕ್ಕೆ ಚ್ಯುತಿ ಬಾರದ ಹಾಗಿ ಒಟ್ಟಾರೆಯಾಗಿ ನಾಟಕವನ್ನು ಓದುಗನ ಮನೋಜಗತ್ತಿನಲ್ಲಿ ನಿರ್ದೇಶಕನ ಆಂತರಿಕ ವಿಹಂಗಮದಲ್ಲಾಗಿರ ಬಹುದು. ಒಂದು ವಿಶಿಷ್ಟ ಛಾಪನ್ನು ಮೂಡಿಸುವಲ್ಲಿ ಯಶಸ್ವಿಯಾಗಿರುವುದು. ಭಗವಾನ್ ಅವರಿಗೆ ಇಂಗ್ಲಿಷ್ ಭಾಷೆಯ ಮೇಲಿರುವ ಪ್ರಭುತ್ವ ಹಾಗೂ ಕನ್ನಡ ಭಾಷೆಯಲ್ಲಿರುವ ಪಾಂಡಿತ್ಯ ಎರಡನ್ನೂ ಅವರ ಅನುವಾದಿತ ಕೃತಿಗಳಲ್ಲಿ ಕಾಣುತ್ತೇವೆ. ನನಗಂತೂ ಅವರೊಬ್ಬ ಸಂಶೋಧಕರಂತೆ ಕಾಣುತ್ತಾರೆ. ೧೬ನೇ ಶತಮಾನದ ಹಳೆ ಇಂಗ್ಲಿಷ್ ಭಾಷೆಯಲ್ಲಿನ ಅದು ಮಹಾಕವಿ ಷೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ ಬಳಸಿರುವ ಕಾವ್ಯಮಯ ಭಾಷೆ ತುಸು ಕಠಿಣ ಆದರೂ, ಕಿಂಗ್‌ಲಿಯರ್, ಹ್ಯಾಮ್ಲೇಟ್, ಮ್ಯಾಕ್‌ಬೆತ್ ಸೀಜರ್ ಮುಂತಾದ ನಾಟಕಗಳನ್ನು ಸೂಕ್ಷ್ಮವಾಗಿ ಗಮನಿಸಿ, ಶಬ್ದ, ವಾಕ್ಯ ಜೋಡಣೆಗಳನ್ನು ಕೂಲಂಕುಷವಾಗಿ ಗಮನಿಸಿ ಯಾವುದು ಸರಿಯೋ ಅದನ್ನು ಒರೆಗೆ ಹಚ್ಚಿಯೇ ಒಪ್ಪಿಕೊಳ್ಳುವ ಜಾಯಮಾನ ಅವರದು. ಆದ್ದರಿಂದ ಅವರೊಬ್ಬ ಸಂಶೋಧಕರಾಗಿ ಕಾಣುತ್ತಾರೆ.

ಅನುವಾದಿತ ನಾಟಕಗಳಲ್ಲಿ ಭಾಷೆಯ ಬಳಕೆ.

ಪ್ರೊ.ಕೆ.ಎಸ್.ಬಿ. ಸಮಕಾಲೀನ ಎಲ್ಲಾ ಭಾಷಾಂತರಕಾರರಿಗಿಂತ ಭಿನ್ನವಾಗಿರುವುದು ಅವರು ಬಳಸಿರುವ ಭಾಷೆಯಿಂದ. ಮೂಲ ನಾಟಕಕಾರ ಷೇಕ್ಸ್‌ಪಿಯರ್‌ನಂತೆ ಭಾಷೆಯ ಅನನ್ಯ ಬಳಕೆ, ಅನುರೂಪವಾದದ ಕನ್ನಡ ನುಡಿಗಟ್ಟುಗಳು, ಉಕ್ತಿಗಳು ಹಾಗೂ ಪದಸಂಪತ್ತನ್ನು ಕನ್ನಡಕ್ಕೆ ಕೊಟ್ಟಿರುವುದರಿಂದ ಪ್ರಮುಖರೆನಿಸುತ್ತಾರೆ. ಭಾಷೆಯನ್ನು ತಮಗೆ ಬೇಕಾದಂತೆ ಬೇಕಾಬಿಟ್ಟಿಯಾಗಿ ಬಳಸದೆ, ಅನುವಾದದ ಚೌಕಟ್ಟಿನೊಳಗೆ ಸೃಜನಾತ್ಮಕ ರೂಪವನ್ನು ನೀಡಿರುವುದು ಅವರ ಬರವಣಿಗೆಯ ಹೆಗ್ಗುರುತು. ಕಾಲ ದೇಶದ ಪರಿಕಲ್ಪನೆ, ಚರಿತ್ರೆಯ ಜ್ಞಾನ, ವಾಸ್ತವದ

ಅರಿವು ಇರುವುದರಿಂದಲೇ ಅವರ ಅನುವಾದಿತ ನಾಟಕಗಳು ಕನ್ನಡ ಸ್ವತಂತ್ರ ನಾಟಕಗಳಂತೆ ಅನಿಸಿಬಿಡುತ್ತವೆ. ಮೂಲ ನಾಟಕಕಾರನಂತೆ ಇವರೂ ಸಹ ಮಾನವ ಸ್ವಭಾವದ ಸೂಕ್ಷ್ಮವ್ಯಾಪಾರಗಳನ್ನು ಕಣ್ಣಿಗೆ ಕಟ್ಟುವಂತೆ ಕಾವ್ಯದ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸಿರುವುದರಿಂದ ಕನ್ನಡ ಸಾಹಿತ್ಯದ ಓದುಗರಿಗೆ ಭಗವಾನ್ ಅವರು ಬಹಳ ಹತ್ತಿರವಾಗುತ್ತಾರೆ. ಸಂಗೀತಗಾರನೊಬ್ಬ ಹಾರ್ಮೋನಿಯಂ ಅನ್ನು ಸರಾಗವಾಗಿ ನುಡಿಸುವಂತೆ ಭಾಷೆಯನ್ನು ಲೀಲಾಜಾಲವಾಗಿ ಬಳಸುತ್ತಾರೆ. ಅದಕ್ಕಾಗಿಯೇ ಪ್ರೊ. ಕಿ.ರಂ. ನಾಗರಾಜು ಅವರು ಮಹಾರಾಜ ಲಿಯರ್ ಅನುವಾದ ಕುರಿತು ಹೀಗೆ ಬರೆಯುತ್ತಾರೆ. "ಅನುವಾದ ಎಂಬುದು ಕೇವಲ ಪ್ರತಿಪಠ್ಯ ನಿರ್ಮಾಣವೆನಿಸದಂತೆ, ಎರಡು ಸಂಸ್ಕೃತಿಗಳ ಒಳ ಹರಿವಿನ ಮುಖ್ಯ ಕ್ರಿಯೆಯ ಭಾಗವೆಂಬಂತೆ ಅವರ ಅನುವಾದಗಳು ಮೈ ಪಡೆದಿವೆ. ಪ್ರೊ. ಭಗವಾನ್ ಅಭಿಜಾತ ಸಾಹಿತ್ಯ ಪರಂಪರೆಯನ್ನು ಸೂಕ್ಷ್ಮನೆಲೆಗಳಲ್ಲಿ ಅಭ್ಯಾಸ ಮಾಡುತ್ತಲೇ ಬಂದಿರುವ ಸಂವೇದನಾಶೀಲ ಮನಸ್ಸನ್ನು ಹೊಂದಿದ್ದಾರೆ. ಶಬ್ದ ಜಗತ್ತು, ಲಯಗಳ ಜೀವಂತಿಕೆ ಒಂದು ಭಾಷೆಯ ಅಥವಾ ಅದರ ಪರಿಕರಗಳು ಆಪ್ತವಾಗುವಂತೆ ಹೊಸ ಗ್ರಹಿಕೆಗಳತ್ತ ಓದುಗ ಚಲಿಸುವಂತೆ ಅವರು ಅನುವಾದಿಸಿದ್ದಾರೆ."

ಇದು ನಿಜವೂ ಕೂಡ, ಅವರ ಹ್ಯಾಮ್ಲೇಟ್, ಲಿಯರ್, ನಾಟಕಗಳನ್ನು ಓದಿದಾಗ ಇದು ಇಂಗ್ಲಿಷ್‌ನಿಂದ ಭಾಷಾಂತರಿಸಿರುವ ನಾಟಕವೇ? ಎನಿಸಿಬಿಡುತ್ತದೆ.

ಉದಾ.

Tragedy	-	ನೋವಿನಾಟ
comedy	-	ನಲಿವಿನಾಟ
As you like it	-	ನಿಮ್ಮಿಷ್ಟ
		ಡೆಸ್ಡಿಮೋನಾ.

ಭಾಷೆಯನ್ನು ಬಳಸಬೇಕು ಎಂದರೆ ಉದ್ದೇಶಪೂರ್ವಕವಾಗಿ ಬಳಸಿದಂತೆ ಕಂಡುಬರುವುದಿಲ್ಲ. ಸರಳ ಭಾಷೆ ಜನಸಾಮಾನ್ಯನಿಗೂ ಅರ್ಥವಾಗುವಂತೆ ಬಳಸಿರುವುದು ಇವರ ವಿಶೇಷವಾಗಿದೆ.

ಡೆಸ್ಡಿಮೋನಾ

ಅದರ ಬಗ್ಗೆ ಹಾಗೆ ಹೇಳುವುದನ್ನು ಕೇಳಿದ್ದೇನೆ,
ಓ. ಈ ಗಂಡಸರು, ಈ ಗಂಡಸರು! ನೀ
ಅಂತಃಸಾಕ್ಷಿಯಾಗಿ ಭಾವಿಸುತ್ತೀಯ, ಹೇಳು

ಎಮಿಲಿಯ, ಅಷ್ಟು ಹೀನತರವಾಗಿ ತಮ್ಮ
ಗಂಡಂದಿರನ್ನು ವಂಚಿಸುವ ಹೆಂಡತಿಯರಿದ್ದಾರೆಯೇ?

ಒಥೆಲೋ.
ಈತ ತನ್ನ ಕೈಯಿಂದಲೇ
ಕೆಂಭಾತೀಯಂತೆ, ತನ್ನ
ಬುಡಕಟ್ಟಿಗಿಂತ ಶ್ರೀಮಂತವಾದ ಮುತ್ತನ್ನೇ
ಎಸೆದುಬಿಟ್ಟ. ಈತ ತನ್ನ ಒದ್ದೆಕಣ್ಣುಗಳಿಂದ
ಅಳುಬುರುಕ ಭಾವನೆಗೆ ಭಾವಪರವಶನಾದರೂ...

ಒಥೆಲೋ ನಾಟಕದ ಈ ಎರಡು ಮಾತುಗಳು ಕನ್ನಡದ ನೈಜ ಕಾವ್ಯದಂತೆ ಕಂಡುಬರುತ್ತವೆಯೇ ಹೊರತು ಅನುವಾದ ಎನಿಸುವುದಿಲ್ಲ. ಶಬ್ದ ಜೋಡಣೆ, ಅಲಂಕಾರ ಗಣ, ಮಾತ್ರೆ, ವ್ಯಾಕರಣದ ದೃಷ್ಟಿಯಿಂದ ನೋಡಿದರೆ ಇವರೊಬ್ಬ ಭಾಷಾ ವಿಜ್ಞಾನಿಯಂತೆ ಕಂಡುಬರುತ್ತಾರೆ.

ಒಂದು ಪಾತ್ರದ ಒತ್ತಾಸೆಯನ್ನು ಹೊರಗೆಡವಲು ಮೂಲ ನಾಟಕಕಾರನ ನುಡಿಗಟ್ಟಿನಂತೆ ಇವರೂ ಸಹ ಸ್ಪಷ್ಟವಾಗಿ ಅನುವಾದಿಸುತ್ತಾರೆ.

.... ಕಾಲಕೀಲು ತಪ್ಪಿದೆ. ಓ! ಹಾಳು ಹಗೆತನವೆ
ಅದನ್ನ ಸರಿಪಡಿಸಲೆಂದೇ ನಾನು ಹುಟ್ಟಿರುವೆ !

ಹೀಗೆ ಹ್ಯಾಮ್ಲೇಟ್ ತನ್ನೊಳಗಿನ ಆತಂಕವನ್ನು ತೋಡಿಕೊಳ್ಳುತ್ತಾನೆ. ಇಲ್ಲಿ ಬರುವ ಪದಪುಂಜಗಳು ಎಷ್ಟು ಸಹಜವಾಗಿ ಮತ್ತು ಸಂದರ್ಭೋಚಿತವಾಗಿ ಬಳಸಲ್ಪಟ್ಟಿದೆ. ಎಂದರೆ ಮೂಲ ನಾಟಕ ಓದದೆ ಈ ನಾಟಕ ಓದಿದರೆ ಕನ್ನಡದ್ದೇ ನಾಟಕವಿದು ಎಂದು ಓದುಗ ಹೇಳುತ್ತಾನೆ. ಇಲ್ಲಿ ಬರುವ ಕಾಲ, ಕೀಲು, ದ್ವಿರುಕ್ತಿ, ಒಳಪ್ರಾಸಗಳಿಂದ ಕೂಡಿದ ಪದಬಳಸಿರುವುದು ತಿಳಿಯುತ್ತದೆ. ಡಾ.ಜಿ.ಎಸ್. ಶಿವರುದ್ರಪ್ಪ ಹೇಳುವಂತೆ "ಷೇಕ್ಸ್‌ಪಿಯರ್‌ನ ನಾಟ್ಯಭಾಷೆಯೊಳಗೆ ನಿಶ್ಚಿತವಾದ ಅರ್ಥದ ಪದರಗಳನ್ನು, ಮಾರ್ಗ ಹಾಗೂ ದೇಸಿಯತೆಗಳಲ್ಲಿ ಅದು ಪಡೆದುಕೊಳ್ಳುವ ನೆಳಲು ಬೆಳಕುಗಳನ್ನು ಅದರ ರೂಪಕಗಳಲ್ಲಿ ಹುರುಪುಗೊಳ್ಳುವ ಕವಿತೆಯ ಮೋಡಿಯನ್ನು ಮತ್ತು ಇಡೀ ನಾಟಕದ ಹಿನ್ನೆಲೆಗಿರುವ ಐತಿಹಾಸಿಕ, ಸಾಂಸ್ಕೃತಿಕ ಸಂದರ್ಭಗಳನ್ನು ... ಈ ಹ್ಯಾಮ್ಲೇಟ್ ಕನ್ನಡಕ್ಕೆ ಒಂದು ವಿಶಿಷ್ಟವಾದ

ಕೊಡುಗೆಯಾಗಿದೆ." ಎನ್ನುವುದರಲ್ಲಿ ಸ್ಪಷ್ಟತೆ ಇದೆ. ಒಂದಿನ ಎಲ್ಲಾ ಅನುವಾದಿತ ಕೃತಿಗಳಿಗಿಂತ ಭಿನ್ನವಾಗಿರುವ ಕೃತಿಗಳನ್ನು ಪ್ರೊ. ಭಗವಾನ್ ನೀಡಿರುವುದು ಗಮನಿಸಬೇಕಾದ ಅಂಶವಾದರೆ ದೇಸೀಯ ಹಿನ್ನೆಲೆಯಲ್ಲಿ ಷೇಕ್ಸ್‌ಪಿಯರ್‌ನ ನಾಟಕಗಳನ್ನು ಭಾಷಾಂತರಿಸಿರುವುದು ಮತ್ತೊಂದು ವೈಶಿಷ್ಟ್ಯ. ಡಾ.ಜಿ.ಎಸ್.ಎಸ್. ಇದನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಪ್ರೊ. ಭಗವಾನ್ ಅವರದು ಹುಣಸೂರು ಪ್ರದೇಶದ ನೈಜ ನುಡಿಗಟ್ಟು ಅಲ್ಲಿಯ ಸಾಂಸ್ಕೃತಿಕ ತಾಜಾತನ ಅವರ ನಾಟಕಗಳಲ್ಲಿ ಇಣುಕಿರದೆ ಇರಲು ಸಾಧ್ಯವಿಲ್ಲ. ಕವಿ, ಬರಹಗಾರರಿಗೆ ಅರಿವಿಲ್ಲದೆ ತನ್ನ ಪರಿಸರದ ತನ್ನ ಒಡನಾಟ ತನ್ನ ಬರವಣಿಗೆಯೊಳಗೆ ನುಸುಳಿರುತ್ತದೆ.

ಹೊಸ ಶಬ್ದಗಳ ಶೋಧನೆಯ ಬೆನ್ನಹತ್ತಿ. ಇಲ್ಲಿ ಪ್ರೊ. ಶಂಕರಮೊಕಾಶಿ ಪುಣೇಕರ್ ಹೇಳಿರುವ ಮಾತಿನ ಉಲ್ಲೇಖ ಸೂಕ್ತವೆನಿಸುತ್ತದೆ.

"...ಪ್ರೊ. ಭಗವಾನ್ ಷೇಕ್ಸ್‌ಪಿಯರ್‌ನನ್ನು ತಳದವರೆಗೆ ಸೋಸಿದ್ದಾರೆ."ಇದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಶಬ್ದಸ್ವಾಮ್ಯತೆಗಾಗಿನ ಶೋಧದ ಹಂತವನ್ನು ಗಮನಿಸಿದರೇ ಅವರ ಶೋಧನೆಯ ಕಳಕಳಿ ಅರ್ಥವಾಗುತ್ತದೆ.

ಪಕ್ವತುಟಿ (4-2-22) ಇದು ಮಹಾರಾಜ ಲಿಯರ್‌ನಲ್ಲಿ ಬಳಕೆಯಾಗಿರುವ ಶಬ್ದ. ಹೆಣ್ಣಿನ ಪಕ್ವತೆ ಬಗ್ಗೆ ರೂಪಕವಾಗಿ ಬಳಕೆಯಾಗಿರುವುದನ್ನು ನೋಡುತ್ತೇವೆ. ಈ ಪದದ ಸರಿ-ಅರ್ಥವನ್ನು ಹುಡುಕುತ್ತ ಕಾಳಿದಾಸನ ಮೇಘದೂತದಲ್ಲಿ ಬಳಕೆಯಾಗಿರುವ ಅಂತಹದ್ದೇ ಪದವನ್ನು ಪತ್ತೆಹಚ್ಚಿ ತಮ್ಮ ನಿರೂಪಣೆಯನ್ನು ಸ್ಪಷ್ಟಪಡಿಸಿಕೊಳ್ಳುತ್ತಾರೆ.

'ತನ್ವೀ ಶಾಮ ಶಿಖರದರ್ಶನಾ ಪಕ್ವಬಿಂಬಾಧರೋಷ್ಠಿ'

ಕ್ರಿ. ಶ. ೪೦೦ರಲ್ಲಿ ಕವಿ ಕಾಳಿದಾಸ ಪಕ್ವಬಿಂಬರೋಷ್ಠೀ ಎಂಬುದಕ್ಕೆ ತೊಂಡೆಯ ಹಣ್ಣಿನಂತೆ ಕೆಂಪಾದ ಕೆಳದುಟಿ. ಎಂಬುದನ್ನು ಪರಿಣಾಮಕಾರಿಯಾಗಿ ಬಳಸಿರುವುದನನು ಅವರು ಲಿಯರ್‌ನ ಇಂಗ್ಲಿಷ್ ಪದಗಳ ಸಮೀಕರಣದಿಂದ ತಿಳಿಯುತ್ತಾರೆ.

ಇಂತಹದ್ದೇ ಒಂದು ಪಶ್ನೆ ನನಗೆ ಕಾಡಿದ್ದನ್ನು ಒಮ್ಮೆ ನಾನು ಅವರಲ್ಲಿ ಹೇಳಿದೆ. ನಾನು ಭಾಷಾಂತರ ಮತ್ತು ಭಾಷಾ ವಿಜ್ಞಾನ ಕುರಿತು ಲೇಖನ ಬರೆಯುತ್ತಾ ಇದ್ದೆ. ಇಲ್ಲಿ ನನಗೆ ಎದುರಾದ ಸಮಸ್ಯೆ ಅಂದ್ರೆ, ಭಾಷಾಂತರಿಸುವಾಗ ಅಲ್ಲಿಯ ನುಡಿಗಟ್ಟುಗಳನ್ನು ನೇರವಾಗಿ ಪದಶಃ ಕನ್ನಡದಲ್ಲಿ ಭಾಷಾಂತರಿಸಿದರೆ ಅದರ ಮೂಲಾರ್ಥ ಸರಿಯಾಗಿ ಅರ್ಥವಾಗುವುದೇ ಎಂಬುದಾಗಿತ್ತು. ಅದಕ್ಕೆ ಅವರು ತಾಳ್ಮೆಯಿಂದಲೇ ವಿವರಿಸಿದ್ದರು. ಷೇಕ್ಸ್‌ಪಿಯರ್‌ನ 'ವೆನಿಸಿನ ವರ್ತಕ' ನಾಟಕವನ್ನು

ಭಾಷಾಂತರಿಸುವ ಸಂದರ್ಭದಲ್ಲಿ 'ದ ಕ್ವಾಲಿಟಿ ಆಫ್ ಮರ್ಸಿ' ಕುರಿತು ಉಂಟಾದ ಸಮಸ್ಯೆ ಮತ್ತು ಅದಕ್ಕೆ ಪರಿಹಾರ ಕೊಂಡುಕೊಳ್ಳಲು ನಡೆಸಿದ ಕಸರತ್ತು ಸ್ವಾರಸ್ಯವೆನಿಸಿತು.

ಎನ್ನುವ ಉಕ್ತಿ ಸಾಧಾರಣವಾದದ್ದು. ಆದರೆ ಅವರನ್ನು ಕಾಡಿದ್ದು ಇದರ ಮುಂದಿನ ಪಂಕ್ತಿ 'ಇಟ್ ದ ಆಪೆತ್ ಅನ್ ದ ಜಂಟಲ್ ರೈನ್' ಅನ್ನು ಅನುವಾದಿಸುವಾಗ. ಕ್ವಾಲಿಟಿಗೆ ಗುಣ, ರೈನ್, ಮಳೆ ಎಂದರ್ಥಕೊಡುತ್ತದೆ. ಮಳೆಗೂ, ಗುಣಕ್ಕೂ ಸಂಬಂಧವೇರ್ಪುಡುವುದೇ? ಇದು ಅವರಿಗೆ ಬಹಳವಾಗಿ ಕಾಡಿತ್ತು. ಬೇರೆಯಾರಾದರೂ ಆಗಿದ್ದರೆ, ಹೋಗಲಿಬಿಡಿ, ಓದುವವರು ಹೇಗಾದರೂ ಸುಧಾರಿಸಿಕೊಂಡು ಓದುತ್ತಾರೆಂದು ತಲೆಕೆಡಿಸಿಕೊಳ್ಳದೆ ಯಥವತ್ತಾಗಿ ಭಾಷಾಂತರಿಸಿ ಕೈತೊಳೆದುಕೊಳ್ಳುತ್ತಿದ್ದರು. ಇಂತಹ ಅನೇಕ ಅವಘುಡಗಳನ್ನು ಹೊಂದಿರುವ ಅನುವಾದಗಳನ್ನು ನೋಡಿದ್ದೇವೆ. ಆದರೆ ಪ್ರೊ.ಕೆ.ಎಸ್.ಬಿ. ಅವರ ಕಾಳಜಿ ಮುಖ್ಯವಾಗುತ್ತದೆ. ಅವರ ಜ್ಞಾನದ ಹಸಿವು ಎದ್ದು ಕಾಣುತ್ತದೆ. ಹಿಡಿದ ಕೆಲಸವನ್ನು ಸರಿಯಾಗಿ ಮುಗಿಸಿ ಓದುಗನಿಗೆ ತೃಪ್ತಿಪಡಿಸುವುದೇ ಅವರ ಸದಭಿರುಚಿ. ಹಾಗಾಗಿ ಅವರು ತಮ್ಮ ಶೋಧನೆಯನ್ನು ಮುಂದುವರಿಸುತ್ತಾ, ಇ.ಸಿ.ಪೆಟೆಂಟ್ ಮತ್ತು ಆಕ್ಸ್‌ಫರ್ಡ್ ಡಿಕ್ಸನರಿ ನೋಡಿದಾಗ Quality ಸಾರ, ರಸ ಎಂಬ ಅರ್ಥ ಕಂಡಾಗ, ಮುಂದೆ Rainಗೆ,ಮಳೆ ಎಂಬುದು ಸರಿಯಾದ ಅರ್ಥ ಕಲ್ಪಿಸುತ್ತದೆ. ಅವರು ಅಷ್ಟಕ್ಕೆ ಸುಮ್ಮನಾಗುವುದಿಲ್ಲ. ಅಂತಹದ್ದೇ ಹೋಲಿಕೆ ನಮ್ಮ ತೈತ್ತೇರಿಯ ಉಪನಿಷತ್ತಿನಲ್ಲಿ ರಸೋ ವೈಸಃ (ವಿ.2) ಎಂಬ ಉಕ್ತಿಗೂ ಷೇಕ್ಸ್‌ಪಿಯರ್‌ನ Quality of Mercyಗೂ ಸಂಬಂಧ ಕಲ್ಪಿಸಿ ತಾವು ಭಾಷಾಂತರಿಸಿದ್ದು ಸರಿ ಎಂಬುದಾಗಿ ತೃಪ್ತಿಪಟ್ಟುಕೊಂಡರಂತೆ ಇದನ್ನು ಪ್ರೊಫೆಸರ್ ಖುದ್ದಾಗಿ ಹೇಳಿದರು. ಹೀಗೆ ಒಂದು ಶಬ್ದ, ವಾಕ್ಯದ ಸ್ವಾಮ್ಯವನ್ನು ಬಿಟ್ಟುಬಿಡದೆ ಹೋಲಿಕೆಯನ್ನು ಕಂಡುಹಿಡಿದು ಕನ್ನಡಿಗರಿಗೆ ಒಂದು ಶಬ್ದದ ಪರಿಚಯ ಮಾಡಿಕೊಡುವುದಲ್ಲದೆ ಇಂಗ್ಲಿಷ್ ಪದಕ್ಕೆ ಸರಿಯಾದ ಕನ್ನಡದ ಬಳಕೆ ಮಾಡಿದ್ದಾರೆ.

ಹ್ಯಾಮ್ಲೇಟ್ ನಾಟಕದ ಒಂದು ಸನ್ನಿವೇಶವನ್ನು ವ್ಯಾಸರ ಭಗವದ್ಗೀತೆಯೊಂದಿಗೂ ಸಮೀಕರಿಸಿ ನೋಡಿದ್ದಾರೆ. ಶ್ರೀ ಕೃಷ್ಣ ಅರ್ಜುನನಿಗೆ ಹೇಳುವ ಮಾತೊಂದು ಹ್ಯಾಮ್ಲೇಟ್ ಪಾತ್ರದೊಂದಿಗೆ ತಾಳೆ ಹಾಕಿ ನೋಡುವ ಯತ್ನ ಮಾಡಿದ್ದಾರೆ . ಹೀಗೆ ಇಂಗ್ಲಿಷ್ ಸಾಹಿತಿಯ ಕೃತಿಗೆ ಹೊಸ ಆಯಾಮ ಕೊಡುವುದರ ಜೊತೆಗೆ ಹೊಸ ಸಾಧ್ಯತೆಗಳನ್ನು ಹೊಸಹೊಳವುಗಳನ್ನು ಆಲೋಚಿಸುತ್ತ ಇದುವರೆಗೂ ನಾಟಕಕಾರ ಷೇಕ್ಸ್‌ಪಿಯರ್‌ನ ಅನೇಕ ಕೃತಿಗಳನ್ನು ಕನ್ನಡ

ಭಾಷಾಂತರಕಾರರು ಅನುವಾದಿಸಿದ್ದಾರೆ. ಅವರೆಲ್ಲರ ಭಾಷಾಂತರಗಳಿಗಿಂತ ಭಿನ್ನವಾಗಿರುವುದು. ಇಂಗ್ಲಿಷ್ ನಾಟಕಕಾರ ಷೇಕ್ಸ್‌ಪಿಯರ್‌ನ ಮೂವತ್ತಾರು ನಾಟಕಗಳಲ್ಲಿ ಹೆಚ್ಚು ಕಮ್ಮಿ ಮುಕ್ಕಾಲು ಭಾಗದಷ್ಟು ಕೃತಿಗಳನ್ನು ಕನ್ನಡಕ್ಕೆ ತಂದಿರುವ ಭಗವಾನ್ ಅವರು ಯುವ ಜನಾಂಗಕ್ಕೆ ಸ್ಫೂರ್ತಿಯಾಗಿದ್ದಾರೆ. ಅವರ ಮೂವತ್ತಾರು ಚಿಕ್ಕ ಚಿಕ್ಕ ಅನುವಾದಿತ ನಾಟಕಗಳಂತೂ ಚಿಕ್ಕ ಮಕ್ಕಳಿಗೆ ಬಹು ಉಪಯುಕ್ತ ಪುಸ್ತಕಗಳಾಗಿವೆ.

ಪ್ರೊ. ವಿ.ಕೃ. ಗೋಕಾಕರಿಂದ ಹಿಡಿದು, ಕಂಬಾರ, ಚಂಪಾ, ಡಾ.ಜಿ.ಎಸ್.ಎಸ್., ಶಂಕರಮೊಕಾಶಿ ಪುಣೇಕರ್, ಡಾ.ಪಿ.ಕೆ.ಆರ್. ಮುಂತಾದ ಅನೇಕ ಪಂಡಿತರುಗಳು ಪ್ರೊ. ಭಗವಾನ್ ಅವರ ಅನುವಾದವನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಇದು ಅವರ ಅಂತಃಸತ್ವವನ್ನು ತೋರಿಸುತ್ತದೆ. ಇವರು ಬರೀ ಭಾಷಾಂತರಕಾರರಷ್ಟೇ ಅಲ್ಲ ಈ ನಾಡಿನ ಶ್ರೇಷ್ಠ ಚಿಂತಕರು, ವಿಚಾರವಾದಿಗಳೂ ಹೌದು. ಕೆ.ಎಸ್.ಬಿ. ಅವರ 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ'ಅತ್ಯುತ್ತಮ ಕೃತಿ. ಇವತ್ತು ಮಹಾಕವಿ, ನಾಟಕಕಾರ ಷೇಕ್ಸ್‌ಪಿಯರ್ ಕುರಿತು ನಿಖರವಾಗಿ ಮಾತನಾಡುವವರು ಈ ನಾಡಿನಲ್ಲಿ ಯಾರಾದರೂ ಇದ್ದಾರೆಂದರೆ ಒಬ್ಬರೇ ಪ್ರೊ. ಭಗವಾನ್ ಅವರು. ಇಷ್ಟೆಲ್ಲಾಪಾಂಡಿತ್ಯ ಇದ್ದರೂ, ಸರಳ ಸಜ್ಜನರು, ಸಂವೇದನಾಶೀಲರು ಸದಾ ಯುವಕರನ್ನು ಪ್ರೋತ್ಸಾಹಿಸುತ್ತ, ಸಹೋದ್ಯೋಗಿಗಳ ನಡುವೆ ಸ್ನೇಹದಿಂದ ವರ್ತಿಸಿದವರು. ಅವರು ವಿಭಾಗದ ಮುಖ್ಯಸ್ಥರಾಗಿದ್ದ ಸಂದರ್ಭದಲ್ಲಿ ಅವರ ಕೈಕೆಳಗೆ ಕೆಲಸ ಮಾಡುವ ಸದಾವಕಾಶ ಸಿಕ್ಕಿದ್ದು ನನ್ನ ಸುಕೃತವೆಂದು ಭಾವಿಸಿದ್ದೇನೆ. ಪ್ರೊ. ಭಗವಾನ್ ಅವರ ಆರೋಗ್ಯ ಚೆನ್ನಾಗಿರಲಿ, ಅವರ ಕೀರ್ತಿ ಮತ್ತೊಂದಿಷ್ಟು ಪ್ರಕಾಶಮಾನವಾಗಿ ಹಬ್ಬಲಿ ಎಂದು ಆಶಿಸುತ್ತೇನೆ.

❄ ❄ ❄ ❄ ❄

ಹಗಲೊಳಗೆ ಬೆಳಕಿನ ಹುಡುಕಾಟ

"ಹಾಂಕೆ ಮಾರುಚು ಸೇವಾತೋನ
ಯಾಜೊ... ಆ ಜೋನಿರಾ..."
(ಕೂಗಿ ಕರಿಯುವೆ ಸೇವಾಧಯನಿನ್ನ
ಬಾ. . . ಬಾ ಎಂದು)

ಬಂಜಾರಾ, ವಂಜಾರಾ, ಲಂಬಾಣಿ, ಲಮಾಣಿ, ಸುಗಾಲಿ, ಸುಕಾಲಿ, ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಲಂಬಾಣಿಗರು, ಭಾರತದಲ್ಲಿರುವ ಬುಡಕಟ್ಟುಗಳಲ್ಲಿಯೇ ಅತ್ಯಂತ ದೊಡ್ಡ ಬುಡಕಟ್ಟು. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ರೂಢಿಯಲ್ಲಿರುವ ಜಾತಿವ್ಯವಸ್ಥೆಯ ಸಂಕೋಲೆಯಲ್ಲಿ ಬಾರದೇ ಇರುವ ವಿಶಿಷ್ಟ ಜನಾಂಗದ ಗುಂಪು. ಸಂಸ್ಕೃತ ಮೂಲದಿಂದ ಬಂದಿರುವ ಬಂಜಾರು ಶಬ್ದದ ಅರ್ಥ ಹೀಗಿದೆ: ಬಂಜಾ ಅಥವಾ ವನಿಯಾ ಅಂದರೆ-ಪುರಾತನ ಕಾಲದಿಂದಲೂ ಬಂದಿರುವ ಎತ್ತುಗಳ ಮೇಲೆ ಆಹಾರಧಾ ಮತ್ತು ಇತರೆ ಜನೋಪಯೋಗಿ ಸಾಮಾಗ್ರಿಗಳನ್ನು ಒಂದು ಪ್ರದೇಶದಿಂದ ವ ತ್ತೊಂದು ಪ್ರದೇಶಕ್ಕೆ ಸಾಗಿಸುವವರು ಎಂದರ್ಥ. ಇನ್ನೊಂದು ಮೂಲದ ಪ್ರಕಾರ ಕ್ಷಿಣ ಭಾರತದಲ್ಲಿ ಇದ್ದ ಚಿಕ್ಕ ಚಿಕ್ಕ ಪ್ರಾಂತ್ಯಗಳಿಗೆ ಉಪ್ಪಿನ ಸಾಗಣೆ ಮಾಡುತ್ತಿದ್ದಿದ್ದ ದ ಲಂಬಾಣಿ ಲಮಾಣಿಗರು ಎಂಬ ಪ್ರತ್ಯಯ ಆ ಜನಾಂಗದ ಜೊತೆಗೆ ಸೇರಿಕೊ ದೆ ಎಂಬುದಾಗಿದೆ. ಬಂಜಾರರು ವಾಸವಾಗಿರುವ ರಾಜ್ಯಗಳಲ್ಲಿ ಆಯಾಕಾಲಘಟ್ಟಕ್ಕೆ, ದೇಶಕ್ಕೆ ಮತ್ತು ಆಯಾ ಪ್ರದೇಶದ ಭಾಷೆಯ ಪ್ರಭಾವಕ್ಕೆ ಒಳಗಾಗಿ ವಿಭಿನ್ನ ಹೆಸರುಗಳಿಂ ಕರೆಯಲ್ಪಡುತ್ತಿದ್ದಾರೆ. ಬ್ರಿಟೀಷರು ಭಾರತಕ್ಕೆ ಬರುವ ಪೂರ್ವದಲ್ಲಿ ಸುಮಾರು ಹನ್ನ ಡು ಉಪಜಾತಿಗಳಾಗಿ ಆಯಾ ಪ್ರದೇಶದಲ್ಲಿ ಕೈಗೊಂಡಿದ್ದ ಕಸುಬಿನ ಆಧಾರದ ಮೇ ವಿಭಜಿಸಲಾಗಿತ್ತು. ಒಂದೊಂದು ದಿಕ್ಕಿಗೆ ಹೋದ ಗುಂಪುಗಳು ಕೃತಕವಾಗಿ ಹಾಕಿಕೊಂಡಿ ಡೇರೆಗಳೇ ತಾಂಡಗಳಾಗಿದ್ದವು. ಅವರ ಸಾಂಪ್ರದಾಯಿಕ ತಿರುಗಾಟ ಎತ್ತುಗಳ ಮೇಲೆ, ತ್ತೆ, ಕುದುರೆ, ಒಂಟೆಗಳ ಮೇಲೆ ಸಾಗಿದ್ದರೂ ಎತ್ತುಗಳ ಹಿಂದೆ ಪ್ರಧಾನವಾಗಿತ್ತು. 18 ಹಾಗೂ 19ನೇ ಶತಮಾನಗಳಲ್ಲಿ ಕ್ರಮೇಣವಾಗಿ ಎತ್ತಿನ ಹಾಗೂ ಒಂಟೆಗಳ ಗಾಡಿಗಳನ್ನು ಬಳಸತೊಡಗಿದರು. ತಮ್ಮ ಸಾಂಪ್ರದಾಯಿಕ ತಿರುಗಾಟದಲ್ಲಿ ಬೇರೆ ಬೇರೆ ಗುಂಪುಗಳು ೇಟಿಯಾಗುತ್ತಿದ್ದವು. ಆಗ ತಮ್ಮ ಸಮಾಜದ ಬೇಕುಬೇಡಗಳು-ಕುಶಲೋಪರಿಗಳು ನಡೆಯುತ್ತಿದ್ದವು.

ಬಂಜಾರರು ಯಾವ ದೇಶದವರು, ಇವರ ಮೂಲ ನೆಲೆಯ ಕುರಿತು ಯಾವುದೇ ಸಾಕ್ಷ್ಯಾಧಾರಗಳಿಲ್ಲ. ಆದರೂ ರಾಧಿದಾದಿ, ಮೂಲದಾದ-ಇವರ ಮೂಲಪುರುಷರೆಂದು ಹೇಳಲಾಗುತ್ತಿದೆ.ರಾಧಿದಾದಿ ಎಂದರೆ ಪುರಾಣದಲ್ಲಿ ಬರುವ ಕೃಷ್ಣನ ಪರಮಭಕ್ತೆ ಮತ್ತು ಪ್ರಿಯತಮೆ ರಾಧೆ ಎಂಬ ಪ್ರತೀತಿಯೂ ಇದೆ. ಇವರು ಕಾಡಿನ ನಡುವೆ ಹಸುಗಳನ್ನು ಮೇಯಿಸಿಕೊಂಡು-ಎತ್ತುಗಳ ಮೇಲೆ ಸಾಗಣಿಕೆ ಮಾಡುತ್ತಿದ್ದರು. ಎಂಬ ಐತಿಹ್ಯದಿಂದ ಮೂಲದಲ್ಲಿ ಕೃಷ್ಣನ ಆಪ್ತರೆ ಇರಬಹುದು ಎಂದು ನಂಬಲಾಗಿದೆ. ಶ್ರೀಕೃಷ್ಣ ಭೂಲೋಕವನ್ನು ತೊರೆದ ಸಂದರ್ಭದಲ್ಲಿ ರಾಧಿದಾದಿ ಮತ್ತು ಮೌಲಾದಾದ ಕರೆದು ಬಂಜಾರ ಜನಾಂಗದ ಏಳಿಗೆ-ಅಭಿವೃದ್ಧಿಯ ಜವಾಬ್ದಾರಿ ಹೊರಿಸಿದ ಎಂದು ನಂಬಲಾಗಿದೆ. ಮುಂದೆ ಅವಿವಾಹಿತ, ವಯೋಮಾನ ಮೀರಿದ ನಾಲ್ಕು ಹೆಣ್ಣು ಮಕ್ಕಳನ್ನು ಕಾಡಿನೊಳಗೆ ಬಿಟ್ಟು ಬರಲು ಹೊರಟಿದ್ದ ಬ್ರಾಹ್ಮಣನ ನಾಲ್ಕು ಜನ ಮಕ್ಕಳಿಗೆ ಮದುವೆ ಮಾಡಿಸುತ್ತಾರೆ. ಅವರೆ ಚವ್ಹಾಣ್, ಪಮ್ಮಾರ್, ರಾಥೋಡ್ ಇತ್ಯಾದಿ ಈ ರೀತಿಯ ಕನ್ಯೆಯರನ್ನು ತಮ್ಮ ನಾಲ್ಕು ಜನ ಮೌಖಿಕ ಐತಿಹ್ಯ ಪ್ರಚಲಿತದಲ್ಲಿದೆ. ಇತಿಹಾಸದ ಮತ್ತೊಂದು ದಾಖಲೆಯ ಪ್ರಕಾರ ಘೋರಿ ಮಹ್ಮದ್ ಭಾರತಕ್ಕೆ ಬಂದಾಗ ಆತನೊಂದಿಗೆ ಸುಮಾರು 800 ವರ್ಷಗಳ ಹಿಂದೆ ಭಾರತಕ್ಕೆ ಬಂದರು ಎಂದು ನಂಬಲಾಗಿದೆ. ಯೂರೋಪ್ ಖಂಡದಲ್ಲಿ ಹೇರಳವಾಗಿರುವ ರೋಮ್‌ಜಿಪ್ಸಿಗಳ ಕಲೆ, ಹಾಡು, ಜೀವನಕ್ರಮಗಳೊಂದಿಗೆ ಅತ್ಯಂತ ನಿಕಟ ಸಂಬಂಧ ಮತ್ತು ಹೋಲಿಕೆ ಕಂಡುಬಂದಿರುವುದರಿಂದ ಈ ಎರಡು ಜನಾಂಗದ ಮೂಲ ಒಂದೇ ಆಗಿರಬಹುದು ಎಂದು ಹೇಳಲಾಗುತ್ತಿದೆ. ಹಿಂದೂ ಸಂಪ್ರದಾಯಕ್ಕಿಂತ ಭಿನ್ನವಾದ ಪದ್ಧತಿ ಹೊಂದಿದೆ ಈ ಜನಾಂಗ ಎಂದು ಹೇಳಲಾಗುತ್ತಿದ್ದರೂ, ರಾಣಾಪ್ರತಾಪಸಿಂಹನ ಸೈನ್ಯದಲ್ಲಿ ಸೈನಿಕರಾಗಿದ್ದ ಇವರು ಅವನೊಂದಿಗೆ ಕಾಡಿಗೆ ಹೋದರು ಎಂಬುದಾಗಿ ನಂಬಲಾಗುತ್ತಿದೆ. ಹಿಂದೂಧರ್ಮದಲ್ಲಿರುವ ನಂಬಿಕೆಯ ಪ್ರಕಾರ-ಮಹಾಸತಿಯ ಆಚರಣೆ ಇವರಲ್ಲೂ ಕೂಡ ಇತ್ತು ಎಂಬುದಕ್ಕೆ ಉದಾಹರಣೆ ಎಂದರೆ ಇವತ್ತಿಗೂ ಮದುವೆಯಾದ ಹೊಸದರಲ್ಲಿ ಇಲ್ಲವೆ ಮಗು ಹುಟ್ಟಿದ ಆರಂಭಕ್ಕೆ ಹೊನಾಸತಿಗೆ ಒಣಕೊಬ್ಬರಿ ಗಿಟಕಿನೊಂದಿಗೆ ಹಾಗೂ ಮದುವೆಯಾಗದೆ ಇರುವ ಕನ್ಯೆಯರೇ ಮಾಡಿದ ಗೋಧಿರೊಟ್ಟಿಯ ಎಡೆ ಮಾಡಿ ತಮ್ಮ ಭಾಷೆಯಲ್ಲೆ ಇರುವ ಒಳಂಗ್ [ಶ್ಲೋಕ] ವನ್ನು ಹೆಂಗಸರು ಹೇಳಿ ಪೂಜೆ ಮಾಡುತ್ತಾರೆ.

ಹೀಗೆ ಭಾರತ ದೇಶದಲ್ಲಿರುವ ಬುಡಕಟ್ಟುಗಳಲ್ಲೇ ವರ್ಣಮಯವಾದ ಸಂಸ್ಕೃತಿಯನ್ನು ಹೊಂದಿರುವ ಜನಾಂಗವನ್ನು ಸಿನಿಮಾಜಗತ್ತು, ದಾರಿಯಲ್ಲಿ ದರೋಡೆ ಮಾಡುವ ಕಳ್ಳರಾಗಿ, ಜನರಿಗೆ ನಗಿಸುವ ಮೂರ್ಖರಾಗಿ, ಕ್ಷುಲ್ಲಕ

ಸಂಗೀತಕಾರರಾಗಿ ಚಿತ್ರಿಸಿರುವುದು ಅವಹೇಳನಕಾರಿಯೇ ಸರಿ. ಸಿನಿಮಾದಲ್ಲಿ ಬಿಂಬಿತವಾಗಿರುವುದು ಕಾವ್ಯಾತ್ಮಕ, ಸಾಹಿತ್ಯಕ ಸಂಸ್ಕೃತಿಯೇ ಹೊರತು ಸೈದ್ಧಾಂತಿಕವಾದ ಸಂಸ್ಕೃತಿಯ ಚಿತ್ರಣವಲ್ಲ.

ಶತಮಾನಗಳಿಂದಲೂ, ಅಲೆಮಾರಿ ಜೀವನ ನಡೆಸುತ್ತಾ ತಮ್ಮ ಕುಲಕಸುಬು, ಆಹಾರಧಾನ್ಯ ಮತ್ತು ಶಸ್ತ್ರಾಸ್ತ್ರಗಳ ಸಾಗಣೆ, 18ನೇ ಶತಮಾನದಲ್ಲುಂಟಾದ ಕೈಗಾರಿಕಾ ಕ್ರಾಂತಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಾರಿಗೆಯಲ್ಲುಂಟಾದ ಮಾರ್ಪಾಡಿನಿಂದಾಗಿ ಇತ್ತೀಚಿನ 100 ವರ್ಷಗಳಲ್ಲಿ ಬಂಜಾರರ ವ್ಯಾಪಾರಕ್ಕೆ ದೊಡ್ಡ ಗಂಡಾಂತರವನ್ನೇ ತಂದಿತು. ರೈಲು, ಟ್ರಕ್‌ಗಳು, ಇತರೆ ಆಟೋ ಮೊಬೈಲ್‌ಗಳಲ್ಲಿ ಉಂಟಾದ ಕ್ರಾಂತಿಯಿಂದ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಮಾಗ್ರಿಗಳು ಅತಿವೇಗವಾಗಿ ತಲುಪತೊಡಗಿದವು. ಎತ್ತುಗಳು, ಬಂಡೆಗಳ ಮೇಲೆ ಕೊಂಡ್ಯೊಯುತ್ತಿದ್ದ ಸರಕುಗಳು ತಿಂಗಳುಗಟ್ಟಲೇ ತಡವಾಗುತ್ತಿದ್ದಂತೆ, ಬಂಜಾರರ ವ್ಯಾಪಾರದಲ್ಲಿ ಕುಸಿತ ಕಂಡುಬಂದಿತು.

ಈ ದೇಶದ ಪ್ರಭುಗಳು ಹಾಗೂ ಪ್ರಬಲ ವ್ಯಾಪಾರಿಗಳಾಗಿದ್ದ ಬ್ರಿಟಿಷರು ಬದಲಾವಣೆ ಗಾಳಿ ಬೀಸುತ್ತಿದ್ದಂತೆ ಬಂಜಾರರ ನೆರವು ಪಡೆಯುವುದನ್ನು ನಿಲ್ಲಿಸಿದರು. ಮಾರ್ಪಾಡಿನಿಂದಾಗಿ, ಅಲೆಮಾರಿ ಬಂಜಾರರು, ಗುಂಪು ಗುಂಪಾಗಿ ತಂಡಗಳಾಗಿ ಒಂದು ಕಡೆ ನೆಲೆಸಲು ಆರಂಭಿಸಿದರು. ಎರಡನೆಯ ಜಾಗತಿಕ ಯುದ್ಧಕಿಂತ ಮೊದಲು ಅರೆನಿವಾಸಿಗಳಾಗಿದ್ದ ಬಂಜಾರರು ಯುದ್ಧದ ಪ್ರತಿಕೂಲ ಪರಿಸ್ಥಿತಿಯಿಂದ ಭಾರತ ಖಂಡದಲ್ಲಿದ್ದ ರಾಜರುಗಳಾಳುತ್ತಿದ್ದ ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದರೂ ಅಲ್ಲೇ ಶಾಶ್ವತವಾಗಿ ನೆಲೆ ನಿಲ್ಲಲು ಆರಂಭಿಸಿದರು. ಜಾಗತಿಕ ಯುದ್ಧದ ಅನಂತರ ಭಾರತದಲ್ಲಿ ಉದಯಿಸಿದ ಹೊಸ ಸೂರ್ಯ-ಬಂಜಾರರಿಗೆ ಯಾವ ಭರವಸೆಯನ್ನು ತರದಿದ್ದರೂ ವ್ಯಾಪಾರವನ್ನೇ ನಂಬಿಕೊಂಡಿದ್ದ ಬಂಜಾರರು-ಬದುಕು ದುಸ್ತರವಾದಾಗ ಆತ್ಮಗೌರವ ವನ್ನು ಬಿಟ್ಟು, ಬದುಕಲು ಆ ಕ್ಷಣಕ್ಕೆ ಸಿಕ್ಕ ಕೆಲಸವನ್ನು ಮಾಡತೊಡಗಿದರು.

ನಗರವಾಸದಿಂದ ದೂರ ತಮ್ಮದೇ ಗುಂಪಿನಲ್ಲಿ ಇದ್ದು ರೂಢಿಮಾಡಿಕೊಂಡಿದ್ದ ಇವರು ತಂಡೋಪತಂಡವಾಗಿ, ಕಾಡುಗಳ ನಡುವೆ, ನದಿಗಳ ತೀರದಲ್ಲಿ, ಬೆಟ್ಟಗಳ ಇಳಿಜಾರಿನಲ್ಲಿ, ದನಕರುಗಳಿಗೆ ಆಹಾರ ಸಿಗುವ ಮತ್ತು ಅರಣ್ಯ ಮೂಲದಿಂದ ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಬಂಜಾರರು ಕಾಡಿನ ನಡುವೆ ವಾಸಮಾಡಲು ಮತ್ತೊಂದು ಕಾರಣ, ಡಕಾಯ್ತಿ,

ಸುಲಿಗೆ ಮಾಡಲು ಎಂಬುದಾಗಿ ಬ್ರಿಟೀಷ್ ಸರ್ಕಾರ ನಂಬಿತ್ತು. ಆದ್ದರಿಂದ 1871ರಲ್ಲಿ 'ಅಪರಾಧಿ ಬುಡಕಟ್ಟು' ಎಂದು ಕ್ರಿಮಿನಲ್ ಆಕ್ಟ್ ಜಾರಿಗೊಳಿಸಿತ್ತು. ಬಂಜಾರರು ಸಮಾಜದ ಮುಖ್ಯವಾಹಿನಿಯ ಜೊತೆಗೆ ಬೆರೆಯದಂತೆ ಒಳಸಂಚನ್ನು ಮಾಡಿತು.

ಕಳೆದ 100 ರಿಂದ 150 ವರ್ಷಗಳಿಂದ ಭಾರತದಲ್ಲಿ ಎಷ್ಟೋ ಬದಲಾವಣೆ ಕಂಡರು ಭರತಖಂಡವನ್ನು ತಮ್ಮ ಆರಾಧ್ಯ ದೈವವೆಂದು ತಿಳಿದು ಈ ದೇಶದ ಸಂಸ್ಕೃತಿಗೆ ವಿಶಿಷ್ಟವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಬದಲಾವಣೆಯ ಅಲೆ ಸುನಾಮಿಯ ಅಲೆಗಳನ್ನು ಸೃಷ್ಟಿಸಿದರು, ಇಡೀ ಜನಾಂಗಕ್ಕೆ ಇರುವ ತಮ್ಮ ಭಾಷೆ (ಗೋರಬೋಲಿ) ಯನ್ನು ಹಾಗೆ ಉಳಿಸಿಕೊಂಡು ಬಂದಿರುವುದು ಒಂದು ವಿಶೇಷವೇ ಸರಿ. ವಿಭಿನ್ನ ಸಂಪ್ರದಾಯ, ಆಚರಣೆ, ಸಾಂಸ್ಕೃತಿಕ ಬದುಕು ಮತ್ತು ಜನಪದಕಲೆಯಲ್ಲೂ ಭಿನ್ನತೆಯನ್ನು ಕಾಪಾಡಿಕೊಂಡು ಬಂದಿರುವ ಈ ಜನಾಂಗ 18ನೇ ಶತಮಾನ ದಿಂದೀಚಿಗೆ ಕೊನೆಗೊಂಡ ಮೂಲ ಕಸುಬನ್ನು ಬಿಟ್ಟು, ತಾವು ವಾಸವಾಗಿರುವ ರಾಜ್ಯದ ಭಾಷೆಯನ್ನೇ ಕಲಿತರು. ಸಂವಿಧಾನಾತ್ಮಕವಾಗಿ ಗುರುತಿಸಲ್ಪಟ್ಟಿರುವ ಭಾರತದ ಎಲ್ಲಾ ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದ ಇವರದು ತಮ್ಮ ಮೂಲದೆಸೆಯನ್ನು ಬಿಡದ ಬುಡಕಟ್ಟು ಜನಾಂಗವಾಗಿದೆ.

ತಮ್ಮತನವನ್ನು ಬರೀ ಹಾಡು, ನೃತ್ಯ, ಭಾಷೆಯಲ್ಲಷ್ಟೇ ಪ್ರಕಟಿಸದೆ, ಎಲ್ಲಾ ವರ್ಣಮಯ ಉಡುಪು ವಿನ್ಯಾಸಕ್ಕೆ ಖ್ಯಾತನಾಮರಾಗಿರುವ ಬಂಜಾರರು, ತಮ್ಮಲ್ಲಿ ರೂಢಿಯಲ್ಲಿರುವ ಕಸೂತಿಗೆ ಹೆಸರುವಾಸಿ. ಹೆಣ್ಣು ಮಕ್ಕಳು ತಮ್ಮ ಸೀರೆಯನ್ನು ತಾವೇ, ಕಸೂತಿಯ ನಾಜೂಕು ಕೆಲಸದಿಂದ ಹಿಡಿದು ಗಾಜಿನ ತುಂಡು, ಹಳೆ ನಾಣ್ಯ ಗಳನ್ನು ಒಪ್ಪ ಓರಣದಿಂದ ಸೀರೆ ಹಾಗೂ ಕುಬುಸದ ಮೇಲೆ ಹೊಲೆಯುತ್ತಿದ್ದರು.

❋ ❋ ❋ ❋ ❋

ನನ್ನ ಗುರುಗಳು ಡಾ. ವೀಣಾ ಶಾಂತೇಶ್ವರ

ಅಂತರತಮ ನೀ ಗುರು
ಹೇ ಆತ್ಮತಮೊ ಹಾರಿ

ಕುವೆಂಪು

ಕರ್ನಾಟಕ ಕಂಡ ಶ್ರೇಷ್ಠ ಶಿಕ್ಷಕರಲ್ಲಿ ನನ್ನ ವಿದ್ಯಾಗುರುಗಳು ಆದ ಪ್ರೊ. ವೀಣಾ ಶಾಂತೇಶ್ವರ ಅವರು ಒಬ್ಬರು ಈಗಲೂ ನನಗೆ ಚನ್ನಾಗಿ ನೆನಪಿದೆ. ಕರ್ನಾಟಕ ಕಾಲೇಜಿನ ಲೈಬ್ರರಿ ಕೆಳಗಿನ ದೊಡ್ಡ ಕೊಠಡಿಯಲ್ಲಿ ಅವರು (Prosody) ಕ್ಲಾಸಸ್ ತೆಗೆದುಕೊಳ್ಳುತ್ತಿದ್ದದ್ದು. ಇಂಗ್ಲಿಷ್ ವಿಭಾಗದ ಆಗಿನ ಮುಖ್ಯಸ್ಥರಾಗಿದ್ದ ಪ್ರೊ. ಕೆ.ಎಸ್. ನಾರಾಯಣಚಾರ್ ಅವರ ಹತ್ತಿರ ದೂರು ನೀಡಿದ್ದೆವು. ನಮಗೆ ಬೇರೆಯಾರು ಬೇಡಾ ಪ್ರೊ. ವೀಣಾ ಶಾಂತೇಶ್ವರ ಮೇಡಂ ಅವರೇಬೇಕೆಂದು. ಇದು ಅವರ ಬೋಧನಾ ಕೌಶಲ್ಯಕ್ಕೆ ಒಂದು ನಿದರ್ಶನವೇ ಸರಿ. ಭಾಷಾ ಪ್ರಾವೀಣ್ಯತೆ, ಭಾಷೆಯ ಮೇಲಿನ ತಮ್ಮ ಹಿಡಿತ, ಸರಳ ನಿರೂಪಣಾಶೈಲಿ, ಗಂಭೀರವಾದ ನಿಲುವು ನಮ್ಮೆಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿತ್ತು. ನಾವು ದ್ವಿತೀಯ ವರ್ಷದಲ್ಲಿದ್ದಾಗ, ಇಂಗ್ಲೀಷ್ ಸಾಹಿತ್ಯದ ಇತಿಹಾಸವನ್ನು ಬೋಧನೆ ಮಾಡುತ್ತಿದ್ದರು. ಡಾ. ಜಾನ್‌ಸನ್ ಯುಗ, ರೊಮ್ಯಾಂಟಿಕ್ ಯುಗದಲ್ಲಿ ಬರುವ ವರ್ಡ್ಸ್‌ವರ್ತ್, ಕೀಟ್ಸ್, ಶೆಲ್ಲಿ, ಬೈರನ್ ಮುಂತಾದ ಅನೇಕ ಕವಿಗಳಲ್ಲಿ ಆಸಕ್ತಿ ಬರಲು ಅವರ ಆಗಿನ ಬೋಧನೆಯೇ ಕಾರಣ.

ಬಿ.ಎ. ದ್ವಿತೀಯ ವರ್ಷದಲ್ಲಿ ನಾನೊಂದು ಪ್ರಶ್ನೆಯನ್ನು ತಪ್ಪು ಬರೆದಿದ್ದೆ. ಅದು ಅವರೇ ಪಾಠಮಾಡುತ್ತಿದ್ದ ವಿಷಯದಲ್ಲಿ. ಆಗ ಅದನ್ನು ಅವರ ಬಳಿ ಕೇಳಿ ಅನುಮಾನ ಪರಿಹರಿಸಿಕೊಳ್ಳಲು ನಾನು ಮತ್ತು ನನ್ನ ಸ್ನೇಹಿತ ಚಂದ್ರಪ್ಪಸುಣಗಾರ ಅವರ ಮನೆಗ ಹೋದೆವು. ಬಹಳ ವಾತ್ಸಲ್ಯದಿಂದ ಒಳಗೆ ಕರೆದು ಆತ್ಮೀಯವಾಗಿಯೇ ಅನುಮಾನವನ್ನು ಬಗೆಹರಿಸಿದರು. ಆ ಘಟನೆಯ ಅನಂತರ ನಮ್ಮ ನೆಚ್ಚಿನ ಮೇಷ್ಟ್ರು ಅಂದ್ರೆ ಪ್ರೊ. ವೀಣಾಶಂತೇಶ್ವರ ಅವರೇ. ಇನ್ನೊಂದು ಮಹತ್ವದ ಘಟನೆಯನ್ನು ನಾನು ನೆನಪು ಮಾಡಿಕೊಳ್ಳಲೇಬೇಕು. ನಾನು ಹುಟ್ಟಿ ಬೆಳೆದ ಪರಿಸರ ಅಭ್ಯಾಸಕ್ಕೆ ಆಯ್ಕೆ ಮಾಡಿಕೊಂಡ ಇಂಗ್ಲೀಷ್ ಸಾಹಿತ್ಯ ಒಂದಕ್ಕೊಂದು ತಾಳ ಮೇಳವಿಲ್ಲದಂತವು. ಇತ್ತೀಚಿಗೆ ಬೆಳಕುಕಂಡ ಕುಗ್ರಾಮದಿಂದ ಆರಂಭವಾದ ಕಲಿಕೆಯ ಹೋರಾಟ

ಡೋಲಾಯಮಾನವಾಗಿಯೇ ಸಾಗುತ್ತ ಹೇಗೊ ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ಪದವಿಗೆ ಸೇರಿದ್ದು ಹರಸಾಹಸವೇ. ಬಿ.ಎ. ಮೊದಲವರ್ಷಕ್ಕೆ ಕಾನ್ವೆಂಟ್ ವಿದ್ಯಾರ್ಥಿಗಳು ಇಂಗ್ಲೀಷ್‌ನಲ್ಲಿ ಉಲಿಯುವುದನ್ನು ನೋಡಿಯೇ ದಂಗಾಗಿದ್ದ ನಮ್ಮಂತಹವರು ಐಚ್ಛಿಕ ವಿಷಯವನ್ನೇ ಬದಲಾಯಿಸಿಕೊಳ್ಳುವ ಆಲೋಚನೆಯಲ್ಲಿದ್ದೆವು. ಆದರೆ ಕಠಿಣ ಪರಿಶ್ರಮ ಮತ್ತು ಶ್ರದ್ಧೆಯಿಂದ ಹಾಗೂ ಮೇಡಂ ಅವರ ಪ್ರೋತ್ಸಾಹದಿಂದ ಕಷ್ಟವಾದರೂ ಸರಿ ಮಾಡಿಯೇ ತೀರಬೇಕೆಂದು ನಿಶ್ಚಯಿಸಿ ಮುಂದುವರೆದು ಬಿ.ಎ. ಪ್ರಥಮ ವರ್ಷದಲ್ಲಿ ಎಲ್ಲರಿಗಿಂತಲೂ ಹೆಚ್ಚು ಅಂಕ ಪಡೆದು ತರಗತಿಯ ಕಾರ್ಯದರ್ಶಿಯಾಗಿದ್ದೆ. ಯಾವುದೋ ಒಂದು ಕಾರ್ಯಕ್ರಮವನ್ನು ರೂಪಿಸಬೇಕಿತ್ತು. ಇಂಗ್ಲೀಷ್ ಭಾಷೆ ಹೊಸದು ಏನೋ ತಪ್ಪು ಉಚ್ಚಾರ ಮಾಡಿದೆ. ಸಭೆಯೊಳಗೆ ನನ್ನ ತಪ್ಪನ್ನು ಹೇಳದೆ ಸಭೆಯನಂತರ ಇಂತಹ ತಪ್ಪು ಮಾಡಿದೆ, ಅದನ್ನ ತಿದ್ದಿಕೋ"ಎಂದು ತಿದ್ದಿದರು. ನನಗೆ ಅವರ ಮೇಲೆ ಮತ್ತೊಂದಿಷ್ಟು ಗೌರವ ಹೆಚ್ಚಿತು.

ಮುಂದೆ ನಾನು ಎಂ.ಎ ಮುಗಿಸಿ ಉದ್ಯೋಗಕ್ಕಾಗಿ ಅಲೆದಾಡುತ್ತಿದ್ದೆ. ಯಾವುದೋ ಒಂದು ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿ ಯಾವುದೋ ಒಂದು ಕಾರಣಕ್ಕೆ ಸಂಸ್ಥೆಯನ್ನು ಬಿಟ್ಟು ಪರದಾಡುತ್ತಿದ್ದ ಸಂದರ್ಭದಲ್ಲಿ ನನ್ನ ಬಹುದಿನದ ಕನಸಾಗಿದ್ದ Ph.D ಪದವಿಗ ಸೇರಲು ಆಗ ಇಂಗ್ಲೀಷ್ ವಿಭಾಗದಲ್ಲಿದ್ದ ಎಲ್ಲ ಪ್ರೊಫೆಸರ್‌ಗಳನ್ನು ಭೇಟಿಯಾಗಿ ನನ್ನ ಇಂಗಿತವನ್ನು ತೋಡಿಕೊಂಡೆ. ಅವರೆಲ್ಲಾ ತಮ್ಮಲ್ಲಿ ಸೀಟು ಖಾಲಿ ಇಲ್ಲಿ ಎಂಬ ನಕರಾತ್ಮಕ ಉತ್ತರವನ್ನು ಕೊಟ್ಟರು. ನನಗೆ ಪಿ.ಎಚ್.ಡಿ ಬದುಕಲಿಕ್ಕೆ ಅನಿವಾರ್ಯವಾಗಿತ್ತು. ಆಗ ನೆರವಿಗೆ ಬಂದವರು ಪ್ರೊ. ವೀಣಾ ಶಾಂತೇಶ್ವರ ಅವರು. ನನ್ನ ಮೇಲಿನ ವಿಶ್ವಾಸದಿಂದಲೋ ಏನೋ, ನಾನು ನೇರವಾಗಿ ಕೇಳಿದಾಗ ಬೇರೆಯವರಂತೆ ಢಾಂಬಿಕತನದಿಂದ, "ಇಲ್ಲಾ ಕಣ್ರೀ ಖಾಲಿ ಇಲ್ಲಾ ಅನ್ನುತ್ತೆ, ನೋಡೋಣ ಒಂದು ವಾರಬಿಟ್ಟು ಬನ್ನಿ" ಎಂದು ಅಲೆದಾಡಿಸದೆ ಒಂದು ಮಾತಿಗೆ ಪಿಹೆಚ್.ಡಿ. ಗೆ ಮಾರ್ಗದರ್ಶನ ಮಾಡಲು ಒಪ್ಪಿಕೊಂಡರು. ನನಗೆ ಹೋದ ಜೀವ ಬಂದಂತಾಗಿತ್ತು. ಪಿ.ಹೆಚ್.ಡಿ. ಗೆ ಸೇರಿಕೊಂಡ ಕೆಲವೇ ದಿನಗಳಲ್ಲಿ ಕೆ.ಸಿ.ಡಿ. ಮುಂದಿನ ಗಣಪತಿ ದೇವಸ್ಥಾನದ ಮೆಟ್ಟಿಲ ಮೇಲೆ ಆಲೋಚಿಸಿ ಹೇಳಿದ ವಿಷಯವೆ ನನ್ನ ಮಹಾಪ್ರಂಬಂಧದ ವಿಷಯವಾಯಿತು. ಇಂತಹ ಸೂಕ್ಷ್ಮ ಆಲೋಚನಾ ಶಕ್ತಿಯ ಪ್ರೊಫೆಸರ್ ನನ್ನ ಮಾರ್ಗದರ್ಶಕರಾದದ್ದು ನನ್ನ ಸುಕೃತವೇ ಸರಿ.

ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡ ಕೆಲವೇ ತಿಂಗಳಲ್ಲಿ ಕಾರವಾರ ಆಕಾಶವಾಣಿಯಲ್ಲಿ ನೌಕರಿಯೂ ಸಿಕ್ಕಿತ್ತು. ಅನಂತರ ನಾನು ಅವರ

ಅಪ್ಪಣೆಯನ್ನು ಪಡೆದು ಬಾಹ್ಯ ಅಭ್ಯರ್ಥಿಯಾಗಿ ಸಂಶೋಧನೆ ಮುಂದುವರೆಸಿದೆ. ಕಾರವಾರದಿಂದ ಬಂದು ಅವರ ಮಾರ್ಗದರ್ಶನ ಪಡೆದು ಸಂಶೋಧನೆ ಮಾಡುತ್ತಿದ್ದೆ. ಆಗ ಅವರು ಬೋಧನೆಯಿಂದ ಆಡಳಿತದ ಕಡೆಗೆ ಸ್ಥಾನ ಬದಲಿಸಿ ಕರ್ನಾಟಕ ಕಾಲೇಜಿನ ದಿಟ್ಟ ಪ್ರಾಂಶುಪಾಲರಾಗಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದರು. ನಾನು ಹೋದಾಗಲೆಲ್ಲಾ ಎಷ್ಟೇ ಕೆಲಸಗಳಿದ್ದರೂ ಐದು ಹತ್ತು ನಿಮಿಷಗಳಲ್ಲಿ ನನ್ನನ್ನು ಒಳಗೆ ಬಿಡುವಂತೆ ತಮ್ಮ ಕಾವಲುಗಾರರಿಗೆ ಹೇಳಿದ್ದರು. ಅದರಂತೆ ದೂರದ ಕಾರವಾರದಿಂದ ಬಂದ ನನಗೆ ಅವರನ್ನು ಭೇಟಿ ಮಾಡುವ ಮುಕ್ತ ಅವಕಾಶ ಕಲ್ಪಿಸಿ ನನ್ನ ಮಹಾಪ್ರಬಂಧದ ಕುರಿತು ಚರ್ಚೆ ಮಾಡುತ್ತಿದ್ದರು. ತಪ್ಪನ್ನು ತಿದ್ದಿ, ಮತ್ತೆ ಹೊಸದರ ಹುಡುಕಾಟಕ್ಕೆ ನನ್ನ ಅಣಿಮಾಡುತ್ತಿದ್ದರು. ಎಷ್ಟೋ ಸಲ ನಾನೇ ಅವರಿಗೆ ಬೇಸರ ಮಾಡಿದ್ದೇನೆ. ಆದರೆ ಯಾವತ್ತೂ ಸಂಯಮ ಕಳೆದುಕೊಂಡು ನನ್ನನ್ನು ಅನುಚಿತ ವರ್ತನೆಯಿಂದ ನೋಯಿಸಿಲ್ಲ. ನನ್ನ ಪ್ರತಿಯೊಂದು ಏಳಿಗೆಯಲ್ಲೂ ಅವರು ಸಂತೋಷವನ್ನು ಅನುಭವಿಸಿದ್ದಾರೆ. ಅವರ ಮಗ ಏನನ್ನಾದರೂ ಸಾಧಿಸಿದರೆ ಖುಷಿಪಡುವಂತೆ ನನ್ನ ಯಶಸ್ಸಿನಲ್ಲೂ ಖುಷಿಪಟ್ಟಿದ್ದಾರೆ, ಪ್ರೋತ್ಸಾಹಿಸಿದ್ದಾರೆ ಹುರಿದುಂಬಿಸಿ ಬದುಕಿನ ಎಲ್ಲಾ ಸಾರದ ಸತ್ವವನ್ನು ಧಾರೆ ಎರೆದಿದ್ದಾರೆ. ಇಂತಹ ಒಬ್ಬ ನಿಸ್ವಾರ್ಥ ಮಹಾನ್ ವ್ಯಕ್ತಿ ನನ್ನ ಗುರುಗಳು ಎನ್ನುವುದು ನನಗೆ ಹೆಮ್ಮೆಯ ವಿಷಯ.

ಪ್ರೊಫೆಸರ್ ಜನಪರ ಕಾಳಜಿ, ಎಲ್ಲಾ ಎಲ್ಲೆಗಳನ್ನು ಮೀರಿ ಮನುಜ ಮತಕ್ಕಾಗಿ ತುಡಿಯುವ ಅವರ ಮನಸ್ಸು ಎಂಥವರನ್ನು ತಲೆದೂಗುವಂತೆ ಮಾಡುತ್ತದೆ. ಸ್ವಯಂ ಸಂವೇದನಾಶೀಲ ಲೇಖಕಿಯಾಗಿರುವ ಅವರು ಮಹಿಳಾವಾದದ ಚಳುವಳಿಯ ಮುಂದಾಳಾಗಿ ಕರ್ನಾಟಕದ ಉದ್ದಗಲಕ್ಕೂ ಚಿರಪರಿಚಿತರಾಗಿದ್ದರು ಈ ದೇಶದ ಉದ್ದಗಲಕ್ಕೂ ಸಂಚರಿಸಿ ಎಷ್ಟೋ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಾಗ್ಯೂ ಅದರ ಅಹಂ ಕಿಂಚಿತ್ತೂ ಇಲ್ಲದೆ ಸರಳ ಸಜ್ಜನಿಕೆಯಿಂದ ನಮ್ಮಂಥ ಪಾಮರರು ಬರೆದಿದ್ದನ್ನು ಮೆಚ್ಚಿ ಪ್ರಶಂಸಿಸುವ ಮೇಧಾವಿತನ ಅವರಲ್ಲಿದೆ.

ನಾನು ಎಷ್ಟೋ ಸಲ ಅವರ ಮನೆಗೆ ಹೋಗಿದ್ದೇನೆ. ಹೋದ ತಕ್ಷಣ ಪ್ರೊಫೆಸರೇ ಖುದ್ದಾಗಿ ಉಪಚರಿಸಿದ್ದಾರೆ. ನನಗನಿಸಿತು, "ಏನಪ್ಪ ಇಷ್ಟೊಂದು ಖ್ಯಾತನಾಮರಾಗಿರುವ ಪ್ರೊಫೆಸರ್, ಇಷ್ಟೊಂದು ಸರಳವಾಗಿ, ಮನೆಗೆ ಬಂದ ಅತಿಥಿಗಳನ್ನು ಆತ್ಮೀಯವಾಗಿ ಉಪಚರಿಸುತ್ತಾರಲ್ಲ" ಎಂದು. ದೊಡ್ಡವರು ಯಾವಾಗಲೂ ಸಣ್ಣ ಸಣ್ಣ ವಿಚಾರಗಳನ್ನು ಮಾಡುವುದಿಲ್ಲ. ದೊಡ್ಡ ಆಲೋಚನೆಗಳನ್ನೇ ಮಾಡುತ್ತಾರೆ. ಸುಮಾರು 1988ನೇ ಇಸವಿಯಿಂದ ಅವರ ಮತ್ತು ನನ್ನ ಗುರು ಶಿಷ್ಯ ಸಂಬಂಧ

ಇವತ್ತಿಗೂ ಹಾಗೆ ಅಪ್ಯಾಯಮಾನವಾಗಿದೆ. ಪ್ರತಿಯೊಬ್ಬ ವ್ಯಕ್ತಿ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕಾದರೆ ಆತನ ಬೆನ್ನಹಿಂದೆ ಆತನಿಗೆ ಶುಭಕೋರುವ ಗಾಡ್‌ಫಾದರ್ ಬೇಕು. ನನ್ನ ಚಿಂತನೆಗಳಿಗೆ ನನ್ನ ಯಶಸ್ಸುಗಳಿಗೆ ಸ್ಪಂದಿಸದೆ ನಾನು ಏನು ಮಾಡುತ್ತಿದ್ದೇನೆಂದು ಅರ್ಥ ಸಹ ಮಾಡಿಕೊಳ್ಳದ ಮುಗ್ಧ ತಂದೆ ತಾಯಿಗಳ ಪಡೆದ ನಾನು; ನಿಜವಾದ ಕಾಳಜಿಯನ್ನಿಟ್ಟು ನನಗೆ ಯಶಸ್ಸು ಬರಲೆಂದು ಶುಭಕೋರುವ ನನ್ನ ಗುರುಗಳಿಗೆ ಚಿರಋಣಿಯಾಗಿದ್ದೇನೆ. ಶುದ್ಧ ಮನಸ್ಸು, ನಿರ್ಮಲ ಭಾವನೆ ಪ್ರತಿಯೊಬ್ಬರನ್ನೂ ಪ್ರೀತಿಸುವ ಹೃದಯವುಳ್ಳ ಗುರುಮಾತೆ ಡಾ. ವೀಣಾ ಶಾಂತೇಶ್ವರ ಯಾವತ್ತು ವಿದ್ಯಾರ್ಥಿಗಳ ಮನಸ್ಸಿಗೆ ನೋವಾಗುವಂತೆ ನಡೆದುಕೊಳ್ಳಲಿಲ್ಲ. ಆ ಕಾಲದ ಬರಹಾಗಾರ್ತಿಯರಲ್ಲಿ ಮುಂಚೂಣಿಯಲ್ಲಿದ್ದರೂ ಎಂದು ತಾನು ಶ್ರೇಷ್ಠ ಬರೆಹಾಗಾರ್ತಿ ಎಂದು ಅಹಂ ಪಡಲಿಲ್ಲ. ಸರಳ ಸಜ್ಜನಿಕೆ, ಜನಪರ ಕಾಳಜಿ, ದಿಟ್ಟ ನಿಲುವು, ತಾನು ಸರಿಯಿದ್ದಾಗ ಯಾರಿಗೂ ಹೆದರದ ಎದಗಾರಿಕೆ ನಮ್ಮ ಅನೇಕರಿಗೆ ಮಾದರಿಯಾದ ಅಂಶಗಳು. ತಮ್ಮ ಪಾಠಕ್ಕೆ ಸಂಬಂಧಿಸಿದ ವಿಷಯವನ್ನಲ್ಲದೆ ವಿಷಯ ಪಲ್ಲಟಮಾಡದೆ ವಿದ್ಯಾರ್ಥಿಗಳ ಮನದಾಳಕ್ಕೆ ಮುಟ್ಟುವ ವಾಗ್ಝರಿಯನ್ನುಹೊಂದಿದ್ದ ನಮ್ಮ ಮೇಡಂ ನಮಗಿಂದಿಗೂ ಅಚ್ಚುಮೆಚ್ಚು.

ಅವರ ಆದರ್ಶಗಳನ್ನು ಮೌಲ್ಯಗಳನ್ನು ಅವರ ಪಾಠದ ವೈಖರಿಯನ್ನು ಅನುಸರಿಸುತ್ತಾ ಸಮಯ ಬಂದಾಗ ಅವರ ಅಪರೂಪದ ಕೃತಿಗಳನ್ನು ವಿಮರ್ಶೆ ಮಾಡುತ್ತಾ ಕರ್ನಾಟಕ ಕಾಲೇಜಿನಲ್ಲಿ ಕಳೆದ ದಿನಗಳನ್ನೂ ಮೆಲಕು ಹಾಕುತ್ತೇನೆ, ಆಗಾಗ ಸಮಯ ಸಿಕ್ಕಾಗ. ಆದರೆ ನನ್ನ ಅಂತರಂಗದಲ್ಲಿ ಶಾಶ್ವತವಾಗಿ ಅಚ್ಚೊತ್ತಿರುವ ನನ್ನ ಸ್ಫೂರ್ತಿಯ ಸೆಲೆ ನನ್ನೆಲ್ಲಾ ಯಶಸ್ಸಿಗೆ ಕಾರಣಕರ್ತರು ಆದ ಪ್ರೊ. ವೀಣಾ ಶಾಂತೇಶ್ವರ ಮಾತ್ರ ಇವತ್ತಿಗೂ ನನಗೆ ಅರ್ಜುನನ ದ್ರೋಣರಿಗಿಂತ ಏಕಲವ್ಯನ ದ್ರೋಣರಾಗಿದ್ದಾರೆ.

❄ ❄ ❄ ❄ ❄

ನಮ್ಮನೆ ನೆನೆಕೊ - ಒಂದು ಸಾಂಸ್ಕೃತಿಕ ಕಥನ

ಕರ್ನಾಟಕ ಕಂಡ ಶ್ರೇಷ್ಠ ಚಿಂತಕರಲ್ಲಿ ಹಿ.ಶಿ. ರಾಮಚಂದ್ರೇಗೌಡ [illegible]ರು. ಅವರ ಅಭಿನಂದನಾ ಗ್ರಂಥ ಪ್ರಕಟವಾಗ್ತಿರೋದು ನಾನು ದೆಹಲಿಗೆ ಹೊ[illegible] ದಿನ ತಿಳಿಯಿತು. ಅವರ ಸಾಂಸ್ಕೃತಿಕ ಸಂವಾದವನ್ನೊಳಗೊಂಡ 'ನಮ್ಮನೆ ನೆನಕೊ'ಕೃತಿಯ ಕುರಿತು ಬರೆಯಲೂ ಕೇಳಿಕೊಂಡರು. ನಾನು ರೈಲಿನಲ್ಲಿ ಒಂದಿಷ್ಟು ಓದಿ ದೆಹಲಿಯಲ್ಲಿ ಕುಳಿತು ಬರೆಯೋಣ ಎಂದುಕೊಂಡಿದ್ದೆ. ಆದರೆ ರೈಲಿನಲ್ಲಿ ಓದಲು ಆಗಲೇ ಇಲ್ಲಾ. ಕರ್ನಾಟಕದ ಹದವತ್ತಾದ ಹವಾಮಾನದಲ್ಲಿ ಬದುಕಿದ ನಮಗೆ ದೆಹಲಿಯ ಚಳಿ ನಿಜವಾಗಿಯೂ ಮೈಚಳಿ ಬಿಡಿಸದೆ ಇರಲಾರದು. ರಜಾಯಿಯನ್ನು ಹೊದ್ದು ಗೌಡರ ವಿಚಾರಪೂರ್ಣವಾದ ಕೃತಿ ನಮ್ಮನೆ ನೆನಕೊ ಓದಿದಾಗ ನಿಜವಾಗಿಯೂ ಮೈ ಕಾವೇರತೊಡಗಿತು. ಕನ್ನಡದಿಂದ ಹೊರಟು ಭಾರತದ ವಿಕಸ್ವಾವ್ಯವಾದ ಸಂಸ್ಕೃತಿಯನ್ನು ದೂರದಲ್ಲೆಲ್ಲೋ ಕುಳಿತು ಯಾವಾಗಲೋ ಒಮ್ಮೆ ಒಂದು ಮೂರು ತಿಂಗಳ ಕಾಲ ಬಂದು ಅಧ್ಯಯನ ನಡೆಸಿ ತನಗೆ ಕಂಡಿದ್ದೇ ಅಂತಿಮ ಎಂದು ಬರೆಯುವ ಬ್ರಿಟಿಷ ಜನಪದಕಾರನನ್ನೋ, ಅಮೇರಿಕಾ, ಆಸ್ಟ್ರೇಲಿಯಾ ಯಾವುದೋ ಜಗತ್ತಿನ ಭಾಗದ ಪಂಡಿತ್‌ನ ದೃಷ್ಟಿಕೋನಕ್ಕಿಂತ ವಿಭಿನ್ನವಾಗಿದೆ. ಗೌಡರು ಪ್ರಸ್ತುತವಾಗುವುದೆಂದರೆ ಅವರ ಅಪಾರವಾದ ಅಧ್ಯಯನ ಅರಿವನ್ನು ವಿಸ್ತೃತಗೊಳಿಸುತ್ತಾ ಹೋಗಿರುವುದು ಮತ್ತು ತಮ್ಮ ಅನುಭವದ ಮೂಲೆಯಿಂದ ಮೂಡಿಬಂದ ಮಾತುಗಳನ್ನು ದಾಖಲಿಸುತ್ತಾ ಹೋಗಿರುವುದರಿಂದ. ಈ ಕೃತಿಯನ್ನು ಮೊದಲು ಓದಿರುವ ಬಿಳಿಮಲೆಯವರು 'ಸಂಸ್ಕೃತಿನಿಷ್ಟ' ಕಲೆಯೊಂದರ ಬಗೆಯನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಮಂಗಳೂರಿನಿಂದ ಬಂದ ಕೆಲ ವಿದ್ಯಾರ್ಥಿ ಮಿತ್ರರ ಜೊತೆಗ ಯಕ್ಷಗಾನದ ಕುರಿತು ಚರ್ಚೆ ಮಾಡುತ್ತಿದ್ದೆ. ಹಾಗೆ ಮಾತಾನಾಡುತ್ತಿರುವಾಗ ಒಂದು ವಿಷಯವನ್ನು ಅವರು ಹೊರಹಾಕಿದರು. ಯಕ್ಷಗಾನ ಈಗ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಹೊಸನೆಲೆಯನ್ನು ಹುಡುಕುತ್ತಿದ್ದರು. ಸಾಧ್ಯತೆಯಲ್ಲಿ ಮುಂಗಾರುಮಳೆಯಂಥ ಸಿನಿಮಾದ ಸನ್ನಿವೇಶವನ್ನು ಅಳವಡಿಸಿಕೊಂಡು ವಿಸ್ತೃತಗೊಳಿಸುತ್ತಿರುವುದು ವಿಪರ್ಯಾಸವೋ, ಆತಂಕವೋ ಹಿ.ಶಿ. ತಮ್ಮ ಅನುಭವದ ಸಮರ್ಪಕವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಹಳೆಯದನ್ನೇ ಹೊಸರೀತಿಯಲ್ಲಿ ಕಟ್ಟಿಕೊಡುವಲ್ಲಿ ಅವರ ಪಾಂಡಿತ್ಯ ಅಡಗಿದೆ. ಹೇರಳವಾದ ಉದಾಹರಣೆಗಳು, ನುಡಿಗಟ್ಟುಗಳು ಇಲ್ಲಿ ಬಳಕೆಯಾಗಿವೆ.

"ಆಧುನಿಕ ಮತ್ತು ಬಂಡಾಯ ಸಾಹಿತ್ಯ ಚಿಂತನೆಯ ಹಿನ್ನೆಲೆಯಿಂದ ನೋಡಿ, ಜನಪದ ಸಾಹಿತ್ಯ ಮತ್ತು ಅದರ ಆಶಯಗಳನ್ನು ಹಳೇ ಪೇಪರ್‌ನಂತೆ ತೂಕ ಹಾಕುವ ಪ್ರವೃತ್ತಿ ಕೆಲವರಲ್ಲಿ ಇದೆ. ಜಾನಪದ ಪರಂಪರೆ ಜ್ಞಾನದ ಆಳಕ್ಕೆ ನಾವು ಹೋಗಿಯೇ ಇಲ್ಲವಲ್ಲ, ಕೋಳಿ ಬಚ್ಚಲು ಕೆರೆದಂತೆ ನಮ್ಮ ಜ್ಞಾನವನ್ನು ಕೆರೆದುಕೊಳ್ಳುತ್ತೇವೆ. ಇಲ್ಲವೆ ಪುರೋಹಿತ ಜ್ಞಾನವನ್ನು ಕೆರೆದುಕೊಳ್ಳುತ್ತೇವೆ.....ದೇವಸ್ಥಾನದ ಜ್ಞಾನವೂ ನಮ್ಮ ಕಾಮತ್ ಹೋಟೆಲ್‌ಗಳ ಊಟವು ಎರಡು ಒಂದೆ."

ಇಲ್ಲಿ, ನಾವು ಗುರುತಿಸುವುದೆಂದರೆ, Apporpriate work in a appropriate placeಹಾಗಾಗಿಯೇ ಒಂದು intellectual ಬರಹವಾಗಿ ಹಿ.ಶಿ.ಯವರ ಎಲ್ಲಾ ಲೇಖನಗಳು ಕಂಡು ಬರುತ್ತವೆ.

"ಮೂಲದಲ್ಲಿ ಪರಿಸರ ಅಖಂಡ ಹಾಗೂ ಅಸ್ಖಲಿತವಾಗಿತ್ತು. ಅದನ್ನು ಮನುಷ್ಯನೆಂಬ ಪ್ರಾಣಿ ಒಡೆದ, ಅದು ವಿಕಾಸ ಪ್ರಕ್ರಿಯೆಯ ಅನಿವಾರ್ಯತೆಯಾಗಿತ್ತು. ಮೂಲದಲ್ಲಿ ನಿಸರ್ಗ ಪರಿಸರ ಒಡೆದುಕೊಂಡು ನಿಸರ್ಗಪದ ಮತ್ತು ಜನಪದ ಗಳಾದವು. ನಿಸರ್ಗಪದವನ್ನು ಹಸಿ ಎಂದೂ ಜನಪದವನ್ನು ಸಂಸ್ಕೃತಿ ಪರಿಸರವೆಂದು ಕರೆಯಲಾಯಿತು"

ಮನುಷ್ಯ ಮತ್ತು ಪರಿಸರ, ಭೌತಿಕ, ಜೀವಪರಿಸರ ಮತ್ತು ಮಾನವ ನಿರ್ಮಿತ ಪರಿಸರಗಳ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿರುವುದು ಸ್ಪಷ್ಟವಾಗುತ್ತದೆ. ಇಂಗ್ಲೀಷ್ ಕವಿಯೊಬ್ಬ ಹೇಳುವಂತೆ

"God made country. man made town".

ದೇವರು ಹಳ್ಳಿ ಸೃಷ್ಟಿಸಿದ, ನಿಶ್ಚಲ, ನಿರ್ಮಲ, ಸುಜಲವಾದ ಹಳ್ಳಿಗಳು ಮನುಷ್ಯನ ದುರಾಶೆಗೆ ಬಲಿಯಾಗಿ ಒಂದೊಂದೆ ಆಯಾಮವನ್ನು ದಾಟುತ್ತಾ ಗಾಲಿಯಿಂದ ಹಿಡಿದು ಬಂದೂಕಿನ ಗೋಲಿಯವರೆಗೆ ಮನದೊಳಗಿನ ಕ್ಲೀಷೆಯ ಸಂಕೇತವಾಗಿ, ಲಾಭಕೋರತನವನ್ನು ಸಂಕೇತವಾಗಿ" ನಾನೆಂಬುದನ್ನು ಸ್ಥಾಪಿಸಬೇಕೆಂಬ ಸ್ಥಾಯಿಭಾವನವನ್ನು ವ್ಯಕ್ತಪಡಿಸುತ್ತಾ ಸುಂದರವಾದ ಹಳ್ಳಿಗಳೆಲ್ಲಾ ಮಾಯವಾಗಿ ಕಾಂಕ್ರಿಟ್‌ಕಾಡನ್ನೊಳಗೊಂಡ ನಗರಗಳಾದವು. ಅನಾಗರಿಕತೆಯತ್ತ ಊರ್ಧ್ವಮುಖಿ ಯಾಗಿರುವ ಮಾನವ ಮಿತಿಮೀರಿದ ಮತಿಹೀನ ಆಲೋಚನೆಗೆ ಹಿಡಿದ ಕೈಗನ್ನಡಿ. ಗೌಡರು ಸಂಗ್ರಹಿಸಿರುವ ಕತೆಗಳನ್ನು ಗಮನಿಸಿದರೆ ಅವರ ಅನುಭವದ ಎಲ್ಲೆ ವಿಶಾಲವಾಗಿದೆ ಎಂಬುದಾಗಿ ತಿಳಿಯುತ್ತದೆ. 'ದೆವ್ವ ನಮ್ಮದೆ ಒಂದು ವ್ಯಕ್ತಿತ್ವ'ದಲ್ಲಿ ಎಂಥೆಂತ ಸ್ವಾರಸ್ಯಮಯವಾದ ಕತೆಗಳನ್ನೂ ಬಿಚ್ಚಿದ್ದಾರೆ. ಅಲ್ಲದೇ ಅವುಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಲು ಪ್ರಯತ್ನಿಸುತ್ತಾರೆ. ಅವರ ವಿಚಾರವನ್ನು

ಓದಿದಾಗ ನಮ್ಮೂರ ಪೂಜಾರಪ್ಪನನ್ನು ಆಲದ ಮರದ ಅಗಸಿ ಪೆಳಿ ಹತ್ತಿರ ಎಳ್ಕೊಂಡು ಹೋದ ದೆವ್ವ;ಟಗರಾಗಿ, ಮೊಲವಾಗಿ ದಾರಿಯನಡಕ್ಕೆ ಬಂದ ದೆವ್ವ. ಕುಡಿದು ಕೆರಿ ಏರಿಮೇಲೆ ಬರುವಾಗ ನಮ್ಮೂರ ಓರೀಕನೊಬ್ಬನ್ನು ಅಪ್ಪಗಟ್ಟಿ ಕುಸ್ತಿ ಆಡಿದ ದೆವ್ವ ಪೂಟರೆ ಹುಣಸಿಮರದಲ್ಲಿ ಕೋಡಿ ಮೂಲೆಯಲ್ಲಿ ಇರಬಹುದಾದ ದೆವ್ವಗಳೆಲ್ಲಾ ನೆನಪಾದವು. ನಾನು ಚಿಕ್ಕವನಿರುವಾಗ ಮುಂಜಾನೆ ಐದು ಗಂಟೆಗೆದ್ದು ಕೊಟ್ಟಿಗೆ ಗೊಬ್ಬರ ಹೊಲಕ್ಕೆ ಹೇರುವಾಗ ತುಂಬಿದ ಚಕ್ಕಡಿ ಎಳಿಯದ ಎತ್ತುಗಳಿಗಾಗಿ, ನಾಲ್ಕು ಎತ್ತು ಕಟ್ಟಿ ಎಳೆಸುವ ಸಂದರ್ಭ ನಾನು ಚೆಲ್ಲಾರ ಹೊಡಿತ್ತಿದ್ದೆ. ಆಗ ನಮ್ಮೂರ ಮುಂದಿನ ಈಚಲಲ್ಲಿ ದೆವ್ವ ಬೀಡಿ ಸೇದ್ತಿರೋದಾಗಿ, ನಮಗಿಂತ ಮುಂಚೆಗೆ ಹೋಗಿದ್ದ ಬಂಡಿಯವ ಹೇಳಿ ಹೆದರಿಸಿದ್ದು ನೆನಪಾಯ್ತು. ನಮ್ಮ ಗ್ರಾಮೀಣರಲ್ಲಿ ಮನೆಮಾತಾಗಿರುವ ಈ ಎಲ್ಲಾ ವಿಷಯಗಳ ಸಾರವನ್ನು ಕತೆಗಳಂತೆ ಹೇಳಿ ಈ ಲೇಖನವನ್ನು ರಸವತ್ತಾಗಿಸಿದ್ದಾರೆ. ಒಂದು ವಿಷಯಕ್ಕೆ ಪೂರಕವಾದ ವಸ್ತುಗಳನ್ನು ಸಂಗ್ರಹಿಸಿ ಒಟ್ಟಿಗೆ ಹೆಣೆಯುವ ಕೆಲಸದಲ್ಲಿ ಗೌಡರು ಸಿದ್ಧಹಸ್ತರು. ಯಾವ ಕತೆಯು ಅರ್ಥಕೆಡದ ಹಾಗೆ ಹೇಳುತ್ತಾ ಓದುಗರನ್ನು ಕೌತುಕರನ್ನಾಗಿ ಮಾಡುವ ಬರೆವಣಿಗೆಯಲ್ಲಿ ಸಿದ್ಧಹಸ್ತರು. ಯಾವ ಕತೆಯು ಅರ್ಥಕೆಡದೆ ಹೇಳುತ್ತಾ ಓದುಗರನ್ನು ಕೌತುರನ್ನಾಗಿ ಮಾಡುವ ಬರೆವಣಿಗೆ ಅವರದು.

ಕುತೂಹಲ ಕೆರಳಿಸುವ ಒಲೆಮೊಸಳಿ, ಚೌಡಿ, ಗಾಳಿದುರ್ಗಿ, ಅಜ್ಜಮ್ಮ ಗುದ್ದಮ್ಮ, ತಲಪಟರಾಯ ಮುಂತಾದ ದೇವತೆಗಳ ಹೆಸರು ಕೇಳಿದ್ದೆ. ಆದರೆ ಒಲೆಮೊಸಳಿ ಬಗ್ಗೆ ಓದಿದ್ದೇ ಮೊದಲು. ಒಲೆ ಮೊಸಳಿಯ ಪರಿಕಲ್ಪನೆಯೇ ವಿಚಿತ್ರ ವಾದದ್ದು. ಒಲೆಯ ಮೂರು ಮೂಲೆಗಳಲ್ಲಿ ಒಂದು, ಅಪರೂಪಕ್ಕೊಮ್ಮೆಮ್ಮೆ ಮುರಿಯುವುದು ಸಹಜ ನಮ್ಮ ಜನಪದರು ಅದು ಒಲೆಮೊಸಳಿಯ ಕೆಲ್ಸ ಅವರಿಗೆ ಶಾಂತಿ ಮಾಡಬೇಕು ಎಂದು ನಂಬುವುದು ಒಂದು ಗ್ರಾಮೀಣ ಸ್ಥಳ ಪುರಾಣದಂತಹ ಕತೆಯೇ ಸರಿ.

ಎಲ್ಲಾ ಆಯಾಮಗಳ ಸವಿವರ ಹೊಂದಿರುವ ನಮ್ಮನೆ ನೆನಕೊ ಜನಪದ ಸಾಹಿತ್ಯದ ಆಕರ ಗ್ರಂಥ ಎನ್ನುವುದಕ್ಕಿಂತ ಒಂದು ಸಾಂಸ್ಕೃತಿಕ ಕಥನವೇ ಸರಿ. ಜನಪದ ಬದುಕಿನ ಎಲ್ಲಾ ಕೋಣೆಯನ್ನು ಸಂಪೂರ್ಣವಾಗಿ ಆವರಿಸಿಕೊಂಡಿದೆ. ಗೌಡರು ಹೇಳುವಂತೆ ವಿಜ್ಞಾನಕ್ಕೂ ಮೂಲ ಜನಪದವೆ. ಎಲ್ಲಾ ಶಾಸ್ತ್ರಗಳಿಗೆ ಅಡಿಪಾಯ ವಾಗಿರುವ ಜನಪದ ಹೊಸ ಆಕಾರ ಪಡೆದುಕೊಳ್ಳುತ್ತಿದೆಯೋ ವಿಕಾರಗೊಳ್ಳು ತ್ತಿದೆಯೋ ಎಂಬುದನ್ನು ತಿಳಿಯುವುದು ಕಷ್ಟವಾಗುತ್ತಿದೆ. ಜಾಗತೀಕರಣ ವಸಹತುಶಾಹಿ ಆಡಳಿತದಂತಹ ಗಂಡಾಂತರಕ್ಕೆ ಸಿಲುಕಿವೆ. ಹಿ.ಶಿ. ರಾಮಚಂದ್ರೇ

ಗೌಡರು ಜನಪದಕ್ಕೆ ಹೊಸ ಆಯಾಮವನ್ನು ನೀಡಲು ಪ್ರಯತ್ನಿಸಿದ್ದಾರೆ. ಬಹಳ ಸರಳವಾಗಿಯೇ ತಮ್ಮ ವಿಚಾರಗಳ ಚಿಂತನ ಮಂಥನ ಮಾಡುತ್ತಾ ಹೋಗಿರುವ ಗೌಡರದು ಜನಪದವಾದ ನಿಲುವು 'Other-make it yours' ಸಿದ್ಧಾಂತ ನಂಬಿರುವ ಪಂಡಿತರ ವರ್ಗಕ್ಕೆ ಸೇರದೆ Antheticated ವಿಷಯಗಳನ್ನು ಹರವುತ್ತಾ ತಮ್ಮದಲ್ಲದವುಗಳನ್ನು ತಮ್ಮದೆಂದು ವಾದಿಸುವ ಹುಸಿ ಸಾಹಸಕ್ಕೆ ಇಳಿಯದೆ ಜನಪದರ ಅನುಭವಗಳನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ.

ಇಲ್ಲಿರುವ ಲೇಖನಗಳು, ವಿಭಿನ್ನ ಅನುಭವದ ಹಿನ್ನೆಲೆಯಲ್ಲಿ ಬರೆಯಲ್ಪಟ್ಟವುಗಳು. ಪ್ರತಿಯೊಂದು ಒಂದೊಂದು ಪ್ರತ್ಯೇಕ ತಳಹದಿಯ ಮೇಲೆ ನಿಂತಿವೆ. ಒಂದೊಂದು ಲೇಖನ ಕೂಡ ಒಂದೊಂದು ಜನಪದ ಇತಿಹಾಸವನ್ನು ಹೇಳುವ ಪ್ರಯತ್ನ ಮಾಡುತ್ತವೆ. ಮೂಲಬದುಕು ಇಷ್ಟೊಂದು ವಿಕಾರಗೊಂಡಿರಲಿಲ್ಲಾ, ಜನಪದರಲ್ಲಿ ಜಾತಿ ಧರ್ಮಕ್ಕೆ ಸ್ಥಾನವಿಲ್ಲ ಇದು ಜಾತ್ಯಾತೀತವಾದದ್ದು. ಜಾತ್ಯಾತೀತ ಹಿನ್ನೆಲೆಯಲ್ಲಿ ಬಾಳಿಬದುಕಿದ ಜನರು ಯಾರದೋ ಸಂಚಿಗೆ ಬಲಿಯಾಗಿ ಬದಲಾವಣೆಯ ಹೊಸ ಆವಿಷ್ಕಾರದಲ್ಲಿ ಬೇಯುತ್ತಿರುವುದೊಂದು ದುರಂತ. ಈ ಎಲ್ಲಾ ಎಲ್ಲೆಗಳನ್ನು ಮೀರಿ ಬದುಕಿನ ಒಳಅರಿವಿನ ನೋಟವನ್ನು ಒಳಗೊಂಡಿರುವುದೇ ನಮ್ಮನೆ ನೆನೆಕೊ.

❄ ❄ ❄ ❄ ❄

'ಬೇಂದ್ರೆಯವರ ಕಾವ್ಯದಲ್ಲಿ ವರ್ಡ್ಸ್‌ವರ್ತ್‌ಕವಿಯ ಹೊಳವುಗಳು'

ಕರುನಾಡು ಕಂಡ ಕೆಲವೇ ಕೆಲವು ಶ್ರೇಷ್ಠೋತ್ತಮರ ಸಾಲಿನಲ್ಲಿ ವರಕವಿ ಬೇಂದ್ರೆಯವರ ಹೆಸರು ಸೇರ್ಪಡೆಯಾಗಿದೆ. ಅಂತರಂಗದ ಮೃದಂಗದಿಂದಹೊರಡುವ ಅಂತತೊಂತ ನಾದವನ್ನು ಆಲಿಸುವ ಒಳತೋಟಿಯ ಹೃದಯದ ಕವಿಗೆ ಇಡೀ ಪ್ರಕೃತಿಯೇ ಪಾಠಶಾಲೆ. ಸಂಗೀತ ಸೂಸುವ ಸಂಮ್ಮೋಹಿನಿ, ಇಂಗ್ಲೀಷ್ ಮಹಾಕವಿ ವಿಲಿಯಂ ವರ್ಡ್ಸ್‌ವರ್ತ್‌ನಂತೆ ಪ್ರಕೃತಿಯಲ್ಲಿ ವಿಭಿನ್ನ ಆಯಾಮವನ್ನು ಕಾಣುವ ಪ್ರಯತ್ನ ಮಾಡಿದ್ದಾರೆ. ಕನ್ನಡದ ದೇಸಿ ಪದ್ಧತಿಯ ನುಡಿಗಟ್ಟುಗಳಿಗೆ ವಾಘ್ರೂಢಿಗಳಿಗೆ ಧಾಟಿ ಲಯಗಳಿಗೆ ಇಂಥ ಜೀವಂತಿಕೆಯು ಇರಬಹುದೆಂದು ನಾಗರೀಕರಿಗೆ, ಶಿಕ್ಷಿತ ಜನರಿಗೆ ತಿಳಿಯದ ಕಾಲದಲ್ಲಿ ಬೇಂದ್ರೆಯವರ ಎದೆಯೊಳಗೆ ಆಲೋಚನೆಯ ವಾಗ್ಝರಿ ಕವಿತೆಯ ಮೂಲಕ ಸಾಲುಸಾಲುಗಳಾಗಿ ಹೊರಹೊಮ್ಮಿದವು.

ವರ್ಡ್ಸ್‌ವರ್ತ್‌ನಂತೆ ಕವಿ ಬೇಂದ್ರೆ ಕೂಡ 'ಜನತೆಯ ಕವಿ', ನಾನು ಬಡವಿ ಆತ ಬಡವ' 'ಒಲವೆ ನಮ್ಮ ಬದುಕು'ಬರೆದ ಕವಿಗೆ ಸಾಮಾನ್ಯರೂ ಒಂದು ದಿನ ಅಗ್ರಪೂಜೆ ಮಾಡಿಯಾರು ಎಂಬ ಸತ್ಯ ತಿಳಿದಿರಲಿಲ್ಲ. ಜೀವನದಲ್ಲಿ ಪರಿಪಾಲಿಸಿದ ಸಂಯಮ ಸಾಮ್ಯವಾದಕ್ಕೂ ಮುಂದಿನ ಮಜಲಿನಂತಿರುವ ಸಮನ್ವಯವಾದದ ಹೊಳವನ್ನು ಮಿಂಚಿಸುತ್ತದೆ. ಕಾವ್ಯವು ಚಿರನವ್ಯವಾಗಿ ಉಳಿಯಬೇಕಾದರೆ ಯಾವ ತಪಸ್ಸಿನ ತಳಹದಿಯ ಮೇಲೆ ಅದನ್ನು ಕಟ್ಟಬೇಕೋ ಅದನ್ನು ಬೇಂದ್ರೆ ಕಟ್ಟಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕವಿ ಬೇಂದ್ರೆಯವರ ಕಾವ್ಯ ಸತ್ವವನ್ನು ಇಂಗ್ಲೀಷ್ ಕವಿ ವರ್ಡ್ಸ್‌ವರ್ತ್‌ನ ಕಾವ್ಯದೊಂದಿಗೆ ಸಮೀಕರಿಸಿ ತೌಲನಿಕ ಅಧ್ಯಯನ ನಡೆಸುವ ಯೋಜನೆ ಇದಾಗಿದೆ. ವರ್ಡ್ಸ್‌ವರ್ತ್‌ಕವಿ ಪ್ರಕೃತಿಯನ್ನೇ ತನ್ನ ಆರಾಧ್ಯ ದೈವವೆಂದು ತಿಳಿದು ತನ್ನ ಕವಿತೆಗಳು ಸಾಮಾನ್ಯ ಜನರಿಗೂ ಕೂಡ ತಲುಪಬೇಕು ಎಂದು ನಂಬಿದ್ದವರು. ಹಾಗಾಗಿಯೇ ಕವಿತೆಯನ್ನು "ಕವಿತೆಯೆಂದರೆ ಅಡೆತಡೆಗಳಿಲ್ಲದೆ ಮೂಡುವ ಶಕ್ತಿಯುತವಾದ ಭಾವನೆಗಳು"ಎಂದಿರುವುದು. ತನಗೆ ಬೇಕೆಂದಾಗ ಅವುಗಳನ್ನು ಬರಮಾಡಿಕೊಳ್ಳುವ ಶಕ್ತಿ ಕವಿಗಿದೆ ಎಂಬುದಾಗಿ ಕೂಡ ನಂಬಿದ್ದರು. ಅದನ್ನು ಜನಸಾಮಾನ್ಯರ ಭಾಷೆಯೊಳಗೆ ಬರೆದು 18ನೇ ಶತಮಾನದ ರೊಮ್ಯಾಂಟಿಕ್ ಸಾಹಿತ್ಯ ಚಳುವಳಿಯ ನೇತಾರರಾದರು. ಬೇಂದ್ರೆಯವರ ಕವಿತೆಗಳನ್ನು

ಓದಿದಾಗ ನನಗೆ ಅನಿಸಿದ್ದು ಅದೇ. ಎಲ್ಲೋ ಒಂದು ಹಂತದಲ್ಲಿ ಈ ಇಬ್ಬರೂ ಮಹಾನ್ ಕವಿಗಳಲ್ಲಿ ಸಾಮ್ಯತೆ ಇದೆ ಎಂದು.

ಈ ಇಬ್ಬರು ಕವಿಗಳ ಕಾವ್ಯವನ್ನು ಶಾಸ್ತ್ರೀಯ ಅಧ್ಯಯನ ಮಾಡುವುದು ಪ್ರಕೃತಿಯ ಪ್ರಭಾವದ ಸ್ಪಷ್ಟೀಕರಣ

ಜನರ ಕವಿಗಳು (People's poet) ಎಂಬ ವಾದಕ್ಕೆ ಪುಷ್ಟಿ ನೀಡುವುದು.

ಅಧ್ಯಯನ ಮೂಡಿಬಂದ ಚಿಂತನೆಗಳನ್ನು ದಾಖಲಿಸಿ ಪುಸ್ತಕದ ರೂಪದಲ್ಲಿ ಪ್ರಕಟಿಸುವುದು ನನ್ನ ಯೋಜನೆಯ ಪ್ರಮುಖ ಹಂತವಾಗಿದೆ.

❉ ❉ ❉ ❉ ❉

ಗ್ರಾಮ ಪಂಚಾಯ್ತಿ ಮತ್ತು ಜನಸಾಮಾನ್ಯರು

ಗ್ರಾಮ ಪಂಚಾಯ್ತಿಯಲ್ಲೇ ಗೆರೆ ಹಾಕಿಕೊಂಡು ಬದ್ಧ ವೈರತ್ವ, ತಳೆಯುವ ನಮ್ಮ ಹಳ್ಳಿಗಳು ಇನ್ನು ಯಾವ ಹಂತಕ್ಕೆ ತಲುಪುತ್ತವೋ, ಮೊನ್ನೆ ಹಾಗೆ ಎರಡು ಚುನಾವಣೆ ಕಂಡಂತೆ ನನ್ನ ಹಳೆಯ ಗೆಳೆಯನೊಬ್ಬನ ಕೂಡ ಮಾತಾಡ್ತ ಇದ್ದೆ. ಈ ದೇಶದ ಸಂಖ್ಯೆಯಲ್ಲಿ ಕಡಿಮೆ ಇರುವ ಮೇಲ್ಜಾತಿ ಜನ ಎರಡನೆಯ ಸ್ಥಾನದಲ್ಲಿರುವ ಭೂ ಹಿಡುವಳಿದಾರರು. ಒಂದು ಹಳ್ಳಿಯೊಳಗೆ 5-6 ಕುಟುಂಬಗಳಿರುವ ಇವರುಗಳೆ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿಯನ್ನು ಆಳುತ್ತಾರೆ. ಇದಕ್ಕೆ ಮುಖ್ಯ ಕಾರಣ ಆರ್ಥಿಕ ಸಬಲತೆ. ಬಹುಪಾಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇಬ್ಬರಿರುವ ಒಬ್ಬ ಹಣವಂತನ ಅಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಿರುವ ಈ ವ್ಯವಸ್ಥೆಯ ಒಳಗುಟ್ಟಾದರೂ ಏನಿದ್ದೀತು ? ಹಿಂದುಳಿದ ಬಹುಸಂಖ್ಯಾತರಿಗೆ ಈ ವ್ಯವಸ್ಥೆಯ ಒಳಸುಳಿಗಳು ಅರ್ಥವಾಗುವುದಾದರೂ ಯಾವಾಗ?ಸ್ವಾತಂತ್ರ್ಯ ಬಂದಾಗಿನಿಂದಲೂ Vote bank ಆಗಿರುವ OBC ಗಳಿಗೆ, ಆಸೆ, ಆಮಿಷ, ಲಂಚ, ಮುಂತಾದ ದಾಳಗಳನ್ನು ಎಸೆಯುತ್ತಲೇ ಬಂದಿರುವ ಜನರು ಅವರನ್ನು ನಂಬಿಸುವ ರೀತಿ ಬಹಳ ನಾಜೂಕಾದದ್ದು. ಪರಿಶಿಷ್ಟಜಾತಿಯವನ ಹಟ್ಟಿಗೆ ನೇರ ಪ್ರವೇಶ ಮಾಡಿ, "ಏನಯ್ಯ, ಮಾಚಯ್ಯ, ಮಂಜಯ್ಯ, ನಂಜಯ್ಯ ಏನೋ ನಿಮ್ಮನ್ನ ನಂಬಿ ನಮ್ಮ ಮನೆಯೋರನ್ನ ಎಲೆಕ್ಷನ್ನಿಗ ನಿಲಿಸಿವ್ನೀ. ನೀವೆಲ್ಲಾ ನನ್ನ ಹಿಂದೆ ಅದೀರಿ ಅಂತ ನಂಬಗೀವ್ನಿ"ಅಂದಾಗ ನಮ್ಮ ದಲಿತರಿಗೆ ಎಲ್ಲಿಲ್ಲದ ಹುರುಪು, ತಮಗಿಂತಲೂ ಮೇಲ್‌ಸ್ತರದಲ್ಲಿರುವ ಶೂದ್ರನೊಬ್ಬ ತಮ್ಮ ಹಟ್ಟಿವರೆಗೂ ಮಾತಾಡಿಸೋದಕ್ಕೆ ಬಂದಿದ್ದಾನೆಂದರೆ ಕೇಳಬೇಕೆ. ತಲೆ ಕೆರ್ಕೋಂತ ಆತನಿಗೆ ವಿಶ್ವಾಸ ಸೂಚಿಸುತ್ತಾರೆ.

ಪರಿಶಿಷ್ಟ ಪಂಗಡದವರ ಹತ್ತಿರ ಹೋಗಿ. ನೋಡ್ರಪ್ಪ, ನೀವು ಅವನನ್ನ ಬೆಂಬಲಿಸುವುದನ್ನ ಬಿಟ್ಟು ನನ್ನ ಬೆಂಬಲಿಸಲೇಬೇಕು. ಅವನೇನು ನಿಮ್ಮಕುಲಸ್ತನಲ್ಲಾ ನೀವು ಈಗ ನಮ್ಮನ್ನು ಬೆಂಬಲಿಸದಿದ್ದರೆ ಹ್ಯಾಂಗ, ಮುಂದೆ ನಿಮ್ಮನ್ನ ಬೆಂಬಲಿಸ್ತೀವಿ ಎನ್ನು ಗಿಲೀಟ್ ಮಾತುಗಳನ್ನು ನಂಬಿಕೊಂಡೆ ಪರಿಶಿಷ್ಟರು ಹೆಂಡಕುಡಿದ ಕೋತಿಯಂತೆ ಎಗರಾಡುತ್ತಾರೆ. "ಅಲಾಲ, ಆ ನನ ಮಗ, ಮನೆ ಕೋಳಿ ಕೋಯ್ಕಂಡು ತಿಂದ, ಒಂದೀಟ ಸಾರಾರು, ಬಿಟ್ನ, ಅವನಿಗ್ಯಾಕ ಓಟ ಹಾಕಬೇಕು. ಇವರು ಆಟು ಮಾತನಾದ್ರು ಆಡಿಸಿದ್ರು."ಎಂದು ತನ್ನ ವೈರುಧ್ಯ ತೋರುವ ನಮ್ಮವರು ಈ ಸತ್ಯವನ್ನು ಸ್ಪಷ್ಟಪಡಿಸಿದ್ದಾರೆ. ನಮ್ಮ ಓಟ್‌ಬ್ಯಾಂಕುಗಳು ಕೋಳಿಸಾರಿನ ರುಚಿ ತೋರಿಸುವ

ಜನರ ಕೈಯೊಳಗಿದೆ ಎನ್ನುವ ಸತ್ಯವನ್ನು ಅಸಹಾಯಕ ಹಿಂದುಳಿದ ವರ್ಗದ ಅಕ್ಷರಸ್ಥ ಯುವಕರಿಗೆ ನಿಜಾ ತಿಳಿದಿದೆ. ಐವತ್ತು ವರ್ಷಗಳ ಕಾಲ ಇದೇ ದೊಂಬರಾಟ ಆಡುತ್ತಾ ಬಂದಿರುವ ಜನರಿಗೆ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿಯೊಳಗೆ ಮೀಸಲಾತಿ ಕೊಟ್ಟಾಗ ಅವರ ಅಂಡಿಗೆ ಬೆಂಕಿ ಮುಟ್ಟಿಸಿದಷ್ಟು ಬಿಸಿಯಾಗಿದೆ ಎಂದು. ಬಹುಮುಖಿಯಾಗಿರುವ ಸಮಾಜದಲ್ಲಿ ಏಕಮುಖಿ ಅಧಿಕಾರ ಕೇಂದ್ರೀಕೃತವಾದದ್ದೇ ಆದರೆ ಯಾವತ್ತು ಉದ್ಧಾರ ಆಗಲಾರದು. ನಮ್ಮಲ್ಲಿ ಕೆಲಜನರಿದ್ದಾರೆ, ಸೋಲಿಲ್ಲದ ಸರದಾರರು, ಅವರು ಗೆಲ್ಲುವ ಕುದುರೆಯಾಗಿಯೇ ಹುಟ್ಟಿದ್ದಾರೆ ಎಂದು ಭಟ್ಟಂಗಿಗಳು ಪರಾಕ್ ಹಾಕುತ್ತಾರೆ. ಯಾವತ್ತಾದರೂ ಅವರ ಮತಗಳಿಸುವ ಚಾಣಾಕ್ಷತನವನ್ನು ಗಮನಿಸಿದ್ದೀರಾ, ದಲಿತ, ಗೌಳಿ, ಸಿದ್ದಿ, ಗೌಡ, ಪರಿಶಿಷ್ಟಜನಾಂಗ, ಬುಡಕಟ್ಟು ಜನರಲ್ಲಿ ಬಡತನ ಕಿತ್ತುತಿನ್ನುತ್ತಿದೆ. ಬಡತನದ ರೇಖೆಗಿಂತ ಕೆಳಗಿರುವ ಜನ ಒಂದು ಕಡೆ ಅನಕ್ಷರಸ್ಥರು, ಇನ್ನೊಂದುಕಡೆ ಸಮಾಜದ ಅತ್ಯಂತ ಕೆಳಸ್ಥರದಲ್ಲಿದ್ದವರು. ತಿಂಗಳಿಗೊ ಆರು ತಿಂಗಳಿಗೊ ಮೈ ತೊಳೆದು ಹರಿದಿರುವ ಬಟ್ಟೆಗೆ ಸೌಳುಮಣ್ಣು ತಿಕ್ಕಿ ಕೊಳೆ ತೆಗೆಯುವ ಪ್ರಯತ್ನ ಮಾಡುವ ಇವರೆಲ್ಲಿ. ಯಾರದೊ ದುಡ್ಡು ಯಲ್ಲಮ್ಮನ ಜಾತ್ರೆ ಮಾಡೋ, ಖಾದಿಗೆ ಗಂಜಿ ಹಾಕಿ ನೀಟಾಗಿ ಇಸ್ತ್ರಿ ಮಾಡಿಸಿಕೊಂಡು ಕಣ್ಣಿಗೆ ಪ್ರತಿಫಲಿಸುವಂತೆ ಬಟ್ಟೆತೊಟ್ಟು ಅವರಿಗಿಂತ ಮಾರುದೂರದಲ್ಲೇ ಆತ್ಮೀಯತೆ ನಾಟಕವಾಡುವ ಮುಖಂಡನೆಲ್ಲಿ ? ಅವರ ಕೆಟ್ಟವಾಸನೆಯಿಂದ ಕಂಗಾಲಾಗಿದ್ದರೂ, ಕರುಣೆಯ ಕಣ್ಣೀರು ಸುರಿಸುವ ನೆಪಮಾಡಿ "ನನಗೆ ಈ ಬಡವರನ್ನ ಕಂಡರೆ ಕರುಳು ಕಿತ್ತುಬರುತ್ತದೆ, ಈ ಸಮಾಜ ಏಕೆ ಹೀಗೆ ? ಯಾಕೆ ನಾವೆಲ್ಲರು ಒಂದೆ ರೀತಿಯ ಬದುಕನ್ನು ಬದುಕಬಾರದು ಅಂತಹ ಅವಕಾಶ ನಿಮಗೆಲ್ಲಾ ಕೊಡಿಸಿಕೊಡುವ ಸಲುವಾಗಿ ಈಸಲ ಎಲೆಕ್ಷನ್ನಿಗೆ ನಿಂತಿರುವುದು" ಅವನ ಮಾತುಗಳು ಅರ್ಥವಾಗದೆ ವ್ಯರ್ಥ ಹೋಗುತ್ತಿರುವುದ ಕಂಡ ಅವನ ಚೇಲಾಗಳು ಜೋರಾಗಿ ಚಪ್ಪಾಳೆ ತಟ್ಟಿದೊಡನೆ ಏನು ತಿಳಿಯದ ಜನ ಹುಚ್ಚೆದ್ದು ಕುಣಿದಾಡುತ್ತಾರೆ. ಮುಗೀತು, ಒಂದು ಅಲೆ ಏಳುತ್ತದೆ. ಅದೇ ಸರಿಯಾದ ಸಮಯ ಎಂಬಂತೆ ಒಬ್ಬ ಬಡವನನ್ನ ಕರೆದು (ಆದರೆ ಸ್ವಲ್ಪ ನೀಟಾಗಿರುವವನನ್ನು) ಅಪ್ಪಿಕೊಳ್ಳುವ ನಾಟಕವಾಡಿ, ಅವನ ಕೈಗೆ 100 ರೂಪಾಯಿ ಕೊಟ್ಟರು. ಬರಿ ನೋವು, ಅವಮಾನ, ಸಾಮಾಜಿಕ ಹಿಂಸೆಯನ್ನೇ ಅನುಭವಿಸಿದವನಿಗೆ ಅವನ ಪಂಗಡದವನಲ್ಲದವನೊಬ್ಬನು ಸಾಂತ್ವನ ಹೇಳಿದರೆ, ಅವನಿಗೆ ಒಂದಿಷ್ಟು ಸಮಾಧಾನ ಸಿಗುತ್ತದೆ. ಕಳೆದ ಐವತ್ತು ವರ್ಷಗಳಿಂದಲೂ ಭಾರತದ ಗ್ರಾಮೀಣರನ್ನು ಇದೇ ಒಂದು ವಿಕಾರ ಖಿಪಿಯೊಳಗೆ ಇಡುತ್ತಾ, ತಮ್ಮ ಕಂಪನಿ, ಜಮೀನು, ಸ್ವಿಸ್ ಬ್ಯಾಂಕ್ ಬ್ಯಾಲೆನ್ಸ್, ಮಠಗಳಲ್ಲಿಯ

ಇಡಿಗಂಟನ್ನು ಬೆಳೆಸಿಕೊಳ್ಳುತ್ತಲೇ ಬಂದಿರುವ 'ನಾಯಕರು'ಗಳ ಹಕೀಕತ್ತನ್ನು ಓಬಿಸಿಗಳು ತಿಳಿಯುವುದು ಯಾವಾಗ, ನಿಜವಾಗಿಯೂ ಇಡೀ ಭಾರತದ ಅಧಿಕಾರ ಹಿಂದುಳಿದ ವರ್ಗದ ಜನರ ಕೈಗೆನೇ ಸಿಗಬೇಕು. ಆದರೆ ಇವತ್ತು ಉಂಟಾಗಿರುವ ಸ್ಥಿತಿಯೇ ಬೇರೆ. ಗ್ರಾಮ ಪಂಚಾಯ್ತಿ ಅಧ್ಯಕ್ಷತೆಯಿಂದ ಹಿಡಿದು ಪ್ರಧಾನಿವರೆಗೆ ಎಲ್ಲಾ ಕೋಳಿಸಾರಿನ ರಾಜಕೀಯವಾಗಿದೆ. ನಮ್ಮ ಸಂಬಂಧಿಕರ ಊರಿನಲ್ಲೊಬ್ಬ ಟಿಕೇಟ್ ಆಕಾಂಕ್ಷಿ ಜಿಪುಣಾಂದ್ರೆ ಜಿಪುಣ, ಹತ್ತು ಪೈಸೆ ಬಿಚ್ಚೋ‌ಪಾರ್ಟಿ ಅಲ್ಲ, ಅದಕ್ಕೆ ಅಲ್ಲಿಯ ಮುಖಂಡರು ಟಿಕೇಟ್ ಕೊಡದೆ ನಿರಾಶೆ ಮಾಡಿದ್ದಕ್ಕೆ ಮೊದಲನೆಯ ಪಾರ್ಟಿ ಬಿಟ್ಟು ಮತ್ತೊಂದು ಪಾರ್ಟಿ ಸೇರುವ ಯೋಜನೆ ಹಾಕಿಕೊಂಡು ಅವನ ಜಮೀನಿನಲ್ಲಿ ಕೆಲಸ ಮಾಡುವ ಆಳುಗಳು, ಅವನ ಹತ್ತಿರ ಸಾಲ ಪಡೆದು ಕಾಫಿ ಎಸ್ಟೇಟ್‌ಗಳಲ್ಲಿ ಕೆಲಸ ಮಾಡುತ್ತಿರುವ ಜನರಿಗೆ ಒಂದು ಕಿವಿಮಾತು ಹೇಳಿದ್ನಂತೆ "ಲೇ, ನಾನು ಒಂದು ಗುಟ್ಟು ಹೇಳ್ತೀನಿ ಕೇಳ್ರೆಲ್ಲ, ಯಾವಾನಾರು ಬರ್ಲಿ, ಐದನೂರು ತಕೊಂಡು ಓಟುಹಾಕಬೇಕು" ಎಂದು ಫರ್ಮಾನು ಹೊರಡಿಸಿದರೆ ಅನಕ್ಷರಸ್ಥರು ಏನೂ ತಿಳಿಯದ ಮುಗ್ಧರು ಏನು ಮಾಡಿಯಾರು. ಮೀಸಲು ಕ್ಷೇತ್ರಗಳಿಂದ ಹಿಡಿದು ಸಾಮಾನ್ಯ ಕ್ಷೇತ್ರಗಳಲ್ಲಿ ಜನರ ಮೇಲೆ ಅಂದರೆ ಹಿಂದುಳಿದವರು ಮೇಲೆ ನಿಯಂತ್ರಣ ಸಾಧಿಸಿದವರು ಶೂದ್ರರಲ್ಲೇ ಮೇಲ್ವರ್ಗದ ಜನರು.

ಮೀಸಲು ಕ್ಷೇತ್ರಗಳಲ್ಲಿ ಅಭ್ಯರ್ಥಿಯಾದರೂ Vote ಬ್ಯಾಂಕನ್ನು ನಿಯಂತ್ರಿಸುವ ಶಕ್ತಿ ಇರುವುದು ಸಾಲ ಕೊಟ್ಟಿರುವ ಜಮೀನ್ದಾರ ಇಲ್ಲ ಕೂಲಿಕೊಡುವ ಹೊಲದ ಒಡೆಯ. ಕೂಲಿಯನ್ನೇ ನಂಬಿ ಬದುಕಿರುವ ಜನರು ಮಾರಿ ಹಬ್ಬಕ್ಕಾಗಿಯೋ ಗುಳದಲಕ್ಕವ್ವ ಗ್ರಾಮದೇವತೆ ಹಬ್ಬಕ್ಕೆಂದು ಕುರಿ, ಕೋಳಿ, ಮಸಾಲೆ, ಸಂತೆ, ಬಟ್ಟೆ ಬರೆ, ರೇಷನ್ ಸಾರಾಯಿ ಅಂತ ಕಡಿಮೆ ಅಂದ್ರು ಹತ್ತು ಸಾವಿರ ಸಾಲ ಮಾಡಿ ಮೂರು ಮೂರು ದಿನ ಉಂಡುಟ್ಟು ಮಜಾ ಉಡಾಯ್ಸಿದ್ರೆ ಮುಗೀತು. ವರ್ಷಗಟ್ಟಲೆ ತೀರಿಸಿದರೂ ತೀರದ ಸಾಲ, ಹಗಲು ರಾತ್ರಿ ಒಂದು ಮಾಡಿ ಮನಿಮಂದಿ ಎಲ್ಲಾ ದುಡಿದು ದುಗ್ಗಾಣಿ ಬಡಿದರು ಸಾಲದ ಹೊರೆ ಹೆಗಲ ಮೇಲೆ ಗಂಟಾಗಿಯೇ ಉಳಿದಿರುತ್ತದೆ. ಹೀಗಾಗಿ ಅವರು ಹ್ಞಾ ಅಂದರೆ ಹ್ಞಾ, ಹ್ಞೂ ಅಂದರೆ ಹೂ ಅನ್ನುವ ಜನ ಈ ದೇಶದೊಳಗೆ ಇರುವವರೆಗೂ ನಿಜವಾದ ಚುನಾವಣೆ, ನಿಜವಾದ ಪ್ರಜಾಪ್ರತಿನಿಧಿ ಬರಲಿಕ್ಕೆ ಸಾಧ್ಯವೇ ಇಲ್ಲಾ. ಸುಮಾರು 50% ಪ್ರತಿಶತದಷ್ಟು ಜನರು ಇನ್ನೂ ನಿರಕ್ಷರ ಕುಕ್ಷಿಗಳು, ಎಷ್ಟೋ ಸಂದರ್ಭಗಳಲ್ಲಿ ಮತಗಟ್ಟೆಗೆ ಮತಹಾಕಲು ಹೋದವರು ಮತಹಾಕದೆ ವಾಪಾಸಾಗುತ್ತಾರೆ. ಅವರಿಗಿಂತ ಮೊದಲೇ ಇನ್ಯಾರೋ ಹಾಕಿರುತ್ತಾರೆ. ಮತ್ತೆ ಕೆಲವರಿಗೆ ಮತಗಟ್ಟೆಗೆ ಹೋಗದಂತೆ ಧಣಿಗಳ

ಅಪ್ಪಣೆಯಾಗುತ್ತದೆ. ಹಣ ಮತ್ತು ಪ್ರಭಾವಗಳೇ ಪ್ರಮುಖ ಪಾತ್ರ ವಹಿಸುತ್ತವೆ. ವಿನಃ ಒಳ್ಳೆಯತನ, ಕಾರ್ಯನಿಷ್ಠೆಗೆ ಬೆಲೆಸಿಗಲಾರದು. ಒಂದು ಚುನಾವಣೆಗೆ ಒಬ್ಬ ಅಭ್ಯರ್ಥಿಗೆ ಸಾಧಾರಣವಾಗಿ ಚುನಾವಣೆಗೆ ಸ್ಪರ್ಧಿಸಲು ಮೂರರಿಂದ ನಾಲ್ಕು ಕೋಟಿ ರೂಪಾಯಿಗಳು ಬೇಕು. ಕರಪತ್ರ ಹಂಚುವ ಹುಡುಗನಿಂದ ಹಿಡಿದು ಓಟು ಹಾಕುವ ಜನರವರೆಗೆ ಪ್ರತಿಯೊಬ್ಬರೂ ಹಣದ ಸುಲಿಗೆಗೆ ನಿಂತರೆ ಅಭ್ಯರ್ಥಿ ಹಣ ಸುರಿದು ಹಣದುಡಿಯುವ ತಂತ್ರ ಉಪಯೋಗಿಸದೆ ಇರುತ್ತಾನೆಯೇ. "ಹೋಗ್ರಿ ನೀವೇನು ಪುಕ್ಸಟೆ ಓಟಹಾಕಿದ್ದೀರಾ. ಒಂದು ಓಟಿಗೆ ಇಷ್ಟೊಂತ ಆ ಪಾರ್ಟಿಯವನ ಹತ್ರ ಮತ್ತೆ ಈ ಪಾರ್ಟಿಯವನ ಹತ್ರ ಲೆಕ್ಕಾಚಾರದ ಮೇಲೆ ನಡೆಯುವ ಈ ಚುನಾವಣೆಗಳು ನಿಜವಾದ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುತ್ತಿವೆಯೇ ? ನಮ್ಮ ಹಿಂದುಳಿದ ಬಂಧುಗಳು ಯೋಚನೆ ಮಾಡಬೇಕು. ದಿನಕ್ಕೊಂದು ಪಕ್ಷ, ಘಳಿಗೆಗೊಬ್ಬ ರಾಜಕಾರಣಿ ನಿಮಿಷಕ್ಕೊಂದು ಪಾರ್ಟಿ ಬಿಡುವ, ಪಾರ್ಟಿ ಸೇರುವ ಜೂಟಾಟದ ನಡುವೆ ಯಾರು ಮಾಸ್ ಲಿಡರ್ರು, ಯಾರು ಕ್ಯಾಷ್‌ಲೀಡರ್ರು ಅನ್ನೋದೆ ತಿಳೀತಾ ಇಲ್ಲ. ಇವತ್ತು ಈ ಪಾರ್ಟಿಯೊಳಗಿರೋ ಒಬ್ಬ ರಾಜಕಾರಣಿ ನಾಳೆ ಮುಂಜಾನೆ ಅದೇ ಪಾರ್ಟಿಯೊಳಗೆ ಇರಲು ಸಾಧ್ಯವಿಲ್ಲ. ಈ ಸಾಫ್ಟ್‌ವೇರ್ ಇಂಜಿನೀಯರ್‌ಗಳು ಕಂಪನಿಯಿಂದ ಕಂಪನಿಗೆ ಹೈಜಂಪ್ ಮಾಡುವಂತೆ ಯಾವ ಪಾರ್ಟಿಯವನು ಹೆಚ್ಚು ಆಫರ್ ಮಾಡುತ್ತಾನೋ ಆ ಆ ಪಾರ್ಟಿಗೆ ಜಿಗಿಯುವುದು. ಅಲ್ಲಿ ಇವನು ಜೂನಿಯರ್ ಲೀಡರ್, ಸೀನಿಯರ್‌ಗಳದ್ದೇ ಉಪಟಳ, ನಾಲ್ಕುದಿನ ಹೊಂದಿಕೊಳ್ಳಲು ಪರದಾಡಿ ಮತ್ತೆ "ಹಳೇಗಂಡನ ಪಾದವೇ ಗತಿ" ಅಂತ ವಾಪಾಸ್ ಬಂದು ಹೊಗಳಿ ಹೊನ್ನ ಶೂಲಕ್ಕೇರಿಸಿ ಹಳೆ ಪಾರ್ಟಿ ಸೇರಿಕೊಂಡು ಎರಡೆರಡು ಲಾಭ ಮಾಡಿಕೊಳ್ಳುವುದು. ಈ ತಾತ್ವಿಕ ವಿಚಾರಗಳು ನಮ್ಮ ಜನರಿಗೆ ಅರ್ಥವಾಗುವುದು ಯಾವಾಗ ಸಾರಾಯಿ ಇದೆಯಲ್ಲಾ ಅದು ಯಾವ ರೀತಿ ದೊಂಬರಾಟವನ್ನು ಮಾಡಿಸಿಬಿಡುತ್ತದೆ. "ಆರ್ಕ್ಯೊಟ್ರೆ ಅತ್ತೆ ಕಡೆ ಮೂರ್ಕ್ಯೊಟ್ರೆ ಸೊಸೆ ಕಡೆ" ಅನ್ನೋ ಜನರು ಎಲ್ಲಿವರೆಗೆ ಇರುತ್ತಾರೋ ಅಲ್ಲಿಯವರೆಗೆ ನಿಜವಾದ ನಾಯಕ ಉದ್ಭವಿಸಲು ಸಾಧ್ಯವಿಲ್ಲ. ಆಳಬೇಕಾದವರು ಆಳಿಸಿಕೊಳ್ಳುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಸಹನೀಯವಾದದ್ದು, ಎಲ್ಲೋ ಮೂಲೆ ಸೇರಬೇಕಾಗಿರುವ ಜನ ತಾವೇ ಬುದ್ಧಿವಂತರು ಎಂದು ಪೋಸ್‌ಕೊಡುತ್ತ ನಂಬಿಸುವ ತಂತ್ರ ಉಪಯೋಗಿಸಿ ಅಧಿಕಾರವನ್ನು ಅನುಭವಿಸುತ್ತಿ ರುವುದು ಶೂದ್ರರ, ಹಿಂದುಳಿದವರ ಅಲ್ಪಸಂಖ್ಯಾತರ ಬೆನ್ನು ಬಲದಿಂದಲೆ. ಈ ಗುಟ್ಟನ್ನು ಕೆಳಗಿರುವ ಜನರು ಅರಿಯುವುದು ಅನಿವಾರ್ಯವಾಗಿದೆ.

ಚುನಾವಣೆ ಎಂಬ ಮಾಯಾಕನ್ನಡಿ

ಪ್ರಜಾಪ್ರಭುತ್ವ ಗ್ರೀಕ್ ವಿಚಾರವಾದಿಗಳು ಹಾಗೂ ಸ್ವಾತಂತ್ರ್ಯಪ್ರಿಯ ಜನರು ಜಗತ್ತಿಗೆ ಕೊಟ್ಟ ಅತಿದೊಡ್ಡ ಕೊಡುಗೆಯಾಗಿದೆ. ಕ್ರಿ.ಪೂ.ದಲ್ಲಿ ರೋಮ್ ಸಾಮ್ರಾಜ್ಯವನ್ನುಆಳುತ್ತಿದ್ದ ಜ್ಯುಲಿಯಸ್‌ಸೀಜರ್ ಪ್ರಜಾಪ್ರಭುತ್ವದ ತತ್ವದ ಮೇಲೆ ರಾಜನಾಗಿ ಆಳುತ್ತಿದ್ದ ಸಂದರ್ಭದಲ್ಲಿಯೇ ಬ್ರೂಟಸ್ ಅನಂತರ ವಿಚಾರವಾದಿಗಳು ಪ್ರಜಾಪ್ರಭುತ್ವಕ್ಕೆ ಯಾರೇ ಅಡ್ಡಿ ಉಂಟುಮಾಡಿದರೂ ಶಿಕ್ಷಾರ್ಹರು ಎಂದು ಸೀಜರ್‌ನ ಕಗ್ಗೊಲೆಯಲ್ಲಿ ಪಿತೂರಿಗಾರರ ಪರವಹಿಸುತ್ತಾನೆ. ಪ್ರಜಾಪ್ರಭುತ್ವದ ಆಶಯವೇ ಅಂತಹದ್ದು. ರಾಜನ ಗುಲಾಮಗಿರಿಯಿಂದ ಸರ್ವಾಧಿಕಾರಿಯ ಹಿಂಸೆಯನ್ನು ತಾಳಿಕೊಂಡು ಪರಕೀಯರ ದಬ್ಬಾಳಿಕೆಗಿಂತ, ನೂರುಪಾಲು ಒಳ್ಳೆಯದಾಗಿರುವ ಪ್ರಜಾಪ್ರಭುತ್ವ ಇವತ್ತು ನಿಜವಾದ ಅರ್ಥದಲ್ಲಿ ಉಳಿದುಕೊಂಡಿದೆಯೇ ? ಯಾರು ಈ ಪ್ರಜಾಪ್ರಭುತ್ವವನ್ನು ಉಳಿಸಬೇಕಾದವರು ? ಜ್ಯೂಲಿಯಸ್ ಸೀಜರ್ ಪ್ರಜಾಸತ್ತಾತ್ಮಕವಾಗಿ ಪ್ರಜೆಗಳ ಒಳಿತಿಗಾಗಿ ರೋಮ್‌ಸಾಮ್ರಜ್ಯವನ್ನು ವಿಸ್ತರಿಸಿ ಬೇರೆ ರಾಷ್ಟ್ರಗಳ ಸಂಪತ್ತನ್ನು ಕೊಳ್ಳೆಹೊಡೆದು ರಾಜ್ಯದ ಖಜಾನೆಯನ್ನು ತುಂಬಿದರೂ ಪ್ರತಿಯೊಬ್ಬ ಪ್ರಜೆಯ ಹೆಸರಲ್ಲಿ ರಾಜ್ಯದ ಆಸ್ತಿಯನ್ನು ಹಂಚಿದರೂ ಪಿತೂರಿಗಾರರ ಒಳಸಂಚಿಗೆ ಬಲಿಯಾಗುತ್ತಾನೆ. ಭಾರತದ ಸಂದರ್ಭದಲ್ಲಿ ಇಡೀ ಜಗತ್ತಿನಲ್ಲಿಯೇ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದರೂ ಪ್ರಜಾಪ್ರಭುತ್ವದ ನಿಜವಾದ ಅರ್ಥವನ್ನು ಗ್ರಹಿಸಿಕೊಂಡಿದ್ದರು. ವಿದ್ಯಾವಂತರು ಅವಿದ್ಯಾವಂತರು ಒಂದೇ ರೀತಿಯ ಆಲೋಚನೆಯಲ್ಲಿ ತೊಡಗಿದ್ದಾರೆ. ಪ್ರಜಾಪ್ರಭುತ್ವದ ಮೂಲ ಆಶಯವಾದ ಸ್ವಾತಂತ್ರ್ಯವನ್ನು ಬಹಳ ಜನರು ಸ್ವೇಚ್ಛಾಚಾರವೆಂದು ತಿಳಿದುಕೊಂಡಿರುವುದು ಪ್ರಜಾಪ್ರಭುತ್ವಕ್ಕೆ ದೊಡ್ಡ ಗಂಡಾಂತರ. ರಾಜ್ಯಶಾಸ್ತ್ರದ ವಿದ್ಯಾರ್ಥಿಗಳೇ ರೂ ರಾಜ್ಯಶಾಸ್ತ್ರವನ್ನು ಓದಿ ಪ್ರಜಾಪ್ರಭುತ್ವವನ್ನು ಅರ್ಥಮಾಡಿಕೊಂಡಿದ್ದಾರೆನ್ನು ದು ಮೂರ್ಖತನ. ನಾವೆಲ್ಲರೂ ಹಕ್ಕಿನ ಕುರಿತೆ ಇವತ್ತಿನವರೆಗೂ ಮಾತಾಡುತ್ತಾ ಬಂದಿದ್ದೇವೆ. ಕರ್ತವ್ಯದ ಕುರಿತು ಆಲೋಚನೆಯನ್ನು ಕೂಡ ಮಾಡುವುದಿಲ್ಲ. ಈ ಹಿನ್ನೆಲೆಯಲ್ಲಿ ಚುನಾವಣೆ ಎಂಬ ಐದುವರ್ಷದ ಜಾತ್ರೆಯಲ್ಲಿ ಸ್ವತಂತ್ರವಾಗಿ, ನಿಭೀತ ಮತಚಲಾವಣೆಯಾಗಿ ಯೋಗ್ಯ ವ್ಯಕ್ತಿಯ ಆಯ್ಕೆಯಾಗುವುದೆಂದು ಎಣಿಸಲಾದಿತ್ತೆ. ಚುನಾವಣೆಯಲ್ಲಿ ಯೋಗ್ಯವ್ಯಕ್ತಿಗಳ

ಆಯ್ಕೆಯಾಗುತ್ತಿಲ್ಲ. ಆರ್ಥಿಕವಾಗಿ ಎಲ್ಲರಿಗಿಂತಲೂ ಪ್ರಬಲನಾದ ಆಯಾರಾಜ್ಯ ಅಥವಾ ಕೇಂದ್ರ ಸರ್ಕಾರದಲ್ಲಿ ಉನ್ನತ ಹುದ್ದೆಯನ್ನು ಸಿಕ್ಕಾಪಟ್ಟೆ ಅನುಭವಿಸಿ "ಹೊರಗೆ ಬೆಳಕು ಒಳಗೆ ಕೊಳಕು" ಎಂಬಂತೆ ಜನಾನುರಾಗಿ ಎಂದು ಸಬೂಬು ಹೇಳಿ ಕೋಟಿಗಟ್ಟಲೆ ಅವ್ಯವಹಾರ ಮಾಡಿರುವ ಅಧಿಕಾರಿಗಳು ಚುನಾವಣೆಯ ಅಭ್ಯರ್ಥಿಗಳಾಗುತ್ತಿರುವುದು ಮತ್ತೊಂದು ವಿಪರ್ಯಾಸ.

ಚುನಾವಣೆ ಎನ್ನುವ ಮಾಯಾಕನ್ನಡಿಯಲ್ಲಿ ಕಾಣುವುದಾದರೂ ಏನು ? ಜಾತಿ, ಒಳಜಾತಿ, ಪಂಗಡ, ಒಳಪಂಗಡಗಳ ವರ್ಗೀಕರಣ, ಹರಿದು ಹಂಚಿಹೋಗುವ ಗ್ರಾಮೀಣ ಬದುಕು. ಕಲಹದ ಕೂಪದಲ್ಲಿ ಬೀಳುವ ಸಂಸಾರಗಳು, ಏಷ್ಟೇ ಬಂದೋಬಸ್ತ್ ಮಾಡಿ ತಡೆಯಲು ಹವಣಿಸಿದರೂ ಮತದಾರನ ಮನೆಗೆ ಬಂದು ಸೇರುವ ಬಣ್ಣದ ಟಿ.ವಿ.ಗಳು ಸೀರೆ ಪಂಚೆಗಳು, ಸಾವಿರದ ನೋಟುಗಳು, ಉಡುಗೊರೆಗಳು, ಹೆಂಡದ ಬಾಟಲುಗಳು, ಮಾಂಸದೂಟದ ಪಾರ್ಟಿಗಳು, ಒಂದೇ, ಎರಡೇ, ನಾನಾ ನಮೂನೆಯ ಒಳಮುಸುಕಿನ ಕ್ರಿಯೆಗಳು ನಡೆಯುತ್ತಲೇ ಇರುತ್ತವೆ. ಹೊರನೋಟಕ್ಕೆ ಪ್ರತಿಯೊಬ್ಬ ಅಭ್ಯರ್ಥಿ ಬಡವನಂತೆ ನಟನೆ ಮಾಡುತ್ತಾ ಆಸ್ತಿಯ ವಿವರ ನೀಡುವಾಗ ಉಪಾಯದಿಂದ ಸುಳ್ಳನ್ನು ಸತ್ಯವೆಂಬಂತೆ ಪ್ರತಿಪಾದಿಸಿ ಕೋಳಿ, ಕುರಿ, ಭೂರಿ ಭೋಜನ ಮಾಡಿ ಚುನಾವಣೆ ಆರಂಭವಾಗುವ ದಿನದಿಂದ ಕತ್ತಲರಾತ್ರಿಯವರೆಗೆ ಗ್ರಾಮೀಣ ಜನರನ್ನು ದಿಕ್ಕುತಪ್ಪಿಸಿ 'ಏಕ್‌ದಿನ್‌ಕಾ ಬಾದ್‌ಶಾ'ಗಳನ್ನಾಗಿ ಮೆರೆಸಿ ಐದು ವರ್ಷಗಳ ಕಾಲ ಅವಿರತವಾಗಿ ರಸ್ತೆರಿಪೇರಿ, ರಸ್ತೆ ನಿರ್ಮಾಣ, ಬಡವರಿಗೆ ಗಂಗಾಕಲ್ಯಾಣ, ಭಾಗ್ಯಜ್ಯೋತಿ, ಮಳೆಹಾವಳಿಗೆ ಬಂದ ಪರಿಹಾರ, ಬರಗಾಲಕ್ಕೆ ಬಂದ ಪರಿಹಾರ ಎಲ್ಲೆಂದರಲ್ಲಿ ಮೂಗುದಾರವಿಲ್ಲದ ಗೂಳಿಗಳು ಬೇಲಿಯೇ ಎದ್ದು ಹೊಲ ಮೇಯುವಂತೆ ಬೇಕಾಬಿಟ್ಟಿಯಾಗಿ ಬಡವರ ಬೂಸವನ್ನು ಮೇಯುವ ಪ್ರತಿನಿಧಿಗಳು 'ಕೋತಿ ತಾನು ತಿಂದು ಮೇಕೆ ಬಾಯಿಗೆ ಒರಿಸಿದಂತೆ'ತಾವು ಮಾಡಿದ ಫಲಗಳಿಸಿದ ಪಾಪದ ಧನದ ರಾಶಿಯಿಂದ ಒಂದಿಷ್ಟು ಪುಡಿಗಾಸನ್ನು ಹಂಚಿ ಪ್ರತಿಯೊಂದು ಮತವನ್ನು ಖರೀದಿಸಿಬಿಡುತ್ತಾನೆ. ಇದು ಯಾವ 'ಫೇರ್ ಅಂಡ್ ಫಿಯರ್‌ಲೆಸ್'ಚುನಾವಣೆಯಾಯ್ತು. ಹಣ ಮತ್ತು ಗೂಂಡಾಗಿರಿಯೇ ಪ್ರಧಾನ ಪಾತ್ರವಹಿಸುವ ಅನೇಕ ಕ್ಷೇತ್ರಗಳಲ್ಲಿ ಚುನಾವಣೆಯಾಯ್ತು. ಹಣ ಮತ್ತು ಗೂಂಡಾಗಿರಿಯೇ ಪ್ರಧಾನ ಪಾತ್ರವಹಿಸುವ ಅನೇಕ ಕ್ಷೇತ್ರಗಳಲ್ಲಿ ಚುನಾವಣೆಗೆ ಯಾವ ಪಾವಿತ್ರತೆಯೂ ಇರುವುದಿಲ್ಲ. ಇಲ್ಲಿ 'ಚುನಾವಣೆ' ಎಂಬ ಒಂದು ವ್ಯವಸ್ಥೆಗೆ ಯಾವ ಅರ್ಥವೂ ಇರುವುದಿಲ್ಲ. ಬಡವರನ್ನು ನಿರ್ಗತಿಕರನ್ನು ಹೆದರಿಸಿ ಬಲಿಷ್ಠನಾದ ಶ್ರೀಮಂತನಿಗೆ ಮತಚಲಾಯಿಸುವಂತೆ ಅವನ ಚೇಲಾಗಳು ಮಾಡಿಬಿಡುತ್ತಾರೆ.

ಭಾರತದಂತಹ ಜಾತಿ ವ್ಯವಸ್ಥೆಯ ನಡುವೆ ನಲುಗಿಹೋಗಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಬಲವಾದ ಜಾತಿಗಳು ದುರ್ಬಲವಾದ ಜಾತಿಗಳನ್ನು ಹಿಂಡಿ ಹಿಪ್ಪೆಮಾಡಿಬಿಡುತ್ತವೆ. ಅಲ್ಪಸಂಖ್ಯಾತ ಜಾತಿಗಳು, ಭೂ ಹಿಡುವಳಿಯನ್ನು ವಂಶಪಾರಂಪರ್ಯವಾಗಿ ಹೊಂದಿದ್ದು ಅವರೇ ಈ ಪ್ರಜಾಪ್ರಭುತ್ವದಲ್ಲಿ ಅಧಿಕಾರದ ರುಚಿಯನ್ನು ನೋಡುತ್ತಾ ಬಂದಿದ್ದಾರೆ. ಮೀಸಲಾತಿಯ ಆಧಾರದ ಮೇಲೆ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಲು ಅಂಬೇಡ್ಕರ್ ಅವರ ವೈಚಾರಿಕ ಮುಂದಾಲೋಚನೆಯಿಂದ ಕೆಳಸ್ತರದ ಕೆಲವೇ ಬೆರಳೆಣಿಕೆಯಷ್ಟು ಜನರು ಈ ಅನುಕೂಲವನ್ನು ಪಡೆದುಕೊಂಡಿದ್ದಾರೆ. ಅವರಲ್ಲೂ ಮೊದಲು ನಾಯಕತ್ವದ ಪಟ್ಟಕ್ಕೆ ಏರಿದವರು ವಂಶಪಾರಂಪರ್ಯವಾಗಿ 30-40 ವರ್ಷಗಳ ಕಾಲ ತಾವು, ತಮ್ಮ ಮಕ್ಕಳು, ತಮ್ಮ ಕುಟುಂಬದ ಉಳಿದ ಸದಸ್ಯರುಗಳು ಮಾತ್ರ ಚುನಾವಣೆಯಲ್ಲಿ ಭಾಗವಹಿಸಿ ಚುನಾಯಿತ ನಾಯಕರೆಂಬ ಡಂಬಾಚಾರದ ಮಾತುಗಳನ್ನು ಹೇಳುತ್ತಿರುವುದು ಹೊಸದೇನಲ್ಲ. ಒಂದು ಸಾರಿ ಒಂದು ಪಕ್ಷದಲ್ಲಿ ಪ್ರವೇಶ ಪಡೆದರೆ ಆಯ್ತು. ಬೇಡವೆಂದರೂ ಒತ್ತಾಯದಿಂದ ಹಣ ಕೊಟ್ಟು ಕೆಲಸವನ್ನು ಮಾಡಿಸಿಕೊಳ್ಳುವ ಜನಸಾಮಾನ್ಯ ಸುಧಾರಿಸುವುದು ಯಾವಾಗ ?.

ಐವತ್ತು ವರ್ಷಗಳ ಚುನಾವಣೆಯ ಇತಿಹಾಸದಲ್ಲಿ ಎಷ್ಟೆಲ್ಲಾ ಬದಲಾವಣೆಗಳಾಗಿವೆ. ಸ್ವಾತಂತ್ರ್ಯ ಬಂದ ಹೊಸದರಲ್ಲಿ ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ವಿರುದ್ಧ ಹೋರಾಡಿದ ನಾಯಕರುಗಳೇ ಚುನಾವಣೆಯಲ್ಲಿ ಪಾಲ್ಗೊಂಡು ಮೊದಲ ಪ್ರಜಾಪ್ರಭುತ್ವ ಸರ್ಕಾರ ಜಾರಿಗೆ ಬಂತು. ಆಗ ಯಾರದೇ ಬೆದರಿಕೆ ಇಲ್ಲದೆ ನಿರ್ಭೀತ ಮತ್ತು ಪ್ರಾಮಾಣಿಕ ಚುನಾವಣೆ ನಡೆದಿತ್ತು. ಈಗಿನಂತೆ ಪ್ರಚಾರದ ಭರಾಟೆ ಹಿಂದಿನ ಬಾಗಿಲಿನಿಂದ ಪ್ರವೇಶ ಪಡೆಯುವ ಎಲ್ಲಾ ಕಸರತ್ತು ಆವಾಗ ಇರಲಿಲ್ಲಾ. ಅವತ್ತಿನ ಕಾಲ ಹಾಗಿತ್ತೊ, ಅಥವಾ ಜನರು ಪ್ರಾಮಾಣಿಕವಾಗಿದ್ದರೋ, ಯಾರ ಹಂಗಿಗೂ ಒಳಗಾಗದೆ, ತಾವೇ ಕೈಯಿಂದ ಹಣ ಖರ್ಚು ಮಾಡಿಕೊಂಡು ತಮ್ಮ ಪ್ರತಿನಿಧಿಗಳನ್ನು ಆರಿಸುತ್ತಿದ್ದರು. ಆ ಪ್ರತಿನಿಧಿಗಳು ಸಹ ಜನರ ಪ್ರಾಮಾಣಿಕತೆಗೆ ಬೆಲೆಕೊಟ್ಟು ಅವರ ಪ್ರತಿನಿಧಿತ್ವವನ್ನು ಮಾಡಿದ್ದ ಉದಾಹರಣೆಗಳು ನಮ್ಮೆದುರಿಗಿವೆ. ರಾಷ್ಟ್ರೀಯ ನಾಯಕರು ಬಂದರೆ ನೂರಾರು ಮೈಲಿಗಳ ದೂರದಿಂದ ಅವರನ್ನು ನೋಡಲು ಜನ ಸಾವಿರಗಟ್ಟಲೆ ಸೇರುತ್ತಿದ್ದರು. ಅವರು ಏನು ಹೇಳುತ್ತಾರೆಂಬುದನ್ನು ಕೇಳಲು ಉತ್ಸುಕರಾಗಿದ್ದರು. ಇವತ್ತು ತಮ್ಮಷ್ಟಕ್ಕೆ ತಾವೇ ನಾಯಕರುಗಳು, ಅವಕಾಶವಾದಿ ರಾಜಕಾರಣದಲ್ಲಿ ಸಿದ್ಧಹಸ್ತರು. ತಮಗೆ ಮುಂದೆ, ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಅಥವಾ ಗ್ರಾಮ ಪಂಚಾಯ್ತಿ ಮಟ್ಟದ ನಾಯಕತ್ವ ಸಿಗಬೇಕು,

ಸಮಿತಿಯಲ್ಲಿ, ನಿಗಮದಲ್ಲಿ ಸದಸ್ಯತ್ವ ಹೀಗೆ ನಾನಾ ರೀತಿಯ ಆಲೋಚನೆಗಳ ಸಹಿತ ಸಹಾಯಮಾಡುವ ಮರಿನಾಯಕರುಗಳು ತಮಗೆ ಭರವಸೆ ನೀಡಿದ ಸ್ಥಾನ ಸಿಗದಿದ್ದರೆ ಈಗ ಈ ಪಕ್ಷದಲ್ಲಿದ್ದವರು ನಾಳೆ ಬೆಳಗಾಗುವುದರೊಳಗೆ ಮತ್ತೊಂದು ಪಕ್ಷದ ಬಾಗಿಲು ತಟ್ಟುತ್ತಿರುತ್ತಾರೆ. ಈ ಅನುಕೂಲಸಿಂಧು ರಾಜಕಾರಣ ಕೆಳಸ್ತರದ ನಾಯಕರಲ್ಲಿ ಮಾತ್ರ ಇಲ್ಲ. ಐದಾರು ವರ್ಷಗಳ ಕಾಲ ಫೀಲ್ಡ್‌ನಲ್ಲಿರುವ ನಾಯಕರುಗಳು ಚುನಾವಣೆ ತಯಾರಿಮಾಡಿಕೊಂಡು ಸೀಟು ಸಿಗದಿದ್ದರೆ, ಇದ್ದಕ್ಕಿದ್ದಂಗೆ ಪಕ್ಷಾಂತರ ಮಾಡುತ್ತಾರೆ. ಈಗಂತೂ, ಯಾರು ಯಾವಾಗ ಯಾವ ಪಕ್ಷದಲ್ಲಿರುತ್ತಾರೆ, ಎಷ್ಟು ದಿನ ಇರುತ್ತಾರೆ ಎಂಬುದು ನಿಶ್ಚಯವಿಲ್ಲ.

ಮಳೆಯಾಧಾರಿತ ವ್ಯವಸಾಯ ಪದ್ಧತಿಯನ್ನು ಹೊಂದಿರುವ ಭಾರತದಲ್ಲಿ ಮಳೆಗಾಲ ಬಂದು ಸರಿಯಾಗಿ ಬೆಳೆಬಂದರೆ ಈ ದೇಶದ ಮುಕ್ಕಾಲು ಭಾಗದ ಜನರಿಗೆ ಹೊಲಗಳಲ್ಲಿ ಕೂಲಿ ಮಾಡಲು ಕೆಲಸ ಸಿಗುತ್ತದೆ. ವರ್ಷದ 365 ದಿನಗಳಲ್ಲಿ ಕೂಲಿ ಕೆಲಸ ಸಿಗುವ ದಿನಗಳೆಷ್ಟು? ಜೂನ್ 15 ರ ನಂತರ ಮಳೆ ಆರಂಭವಾಗಿ ಬಿತ್ತನೆ ಆರಂಭವಾಗುವುದು ಮೃಗಶಿರ ಮಳೆಯ ಆರಂಭಕಾಲದಲ್ಲಿ. ಅಷ್ಟರೊಳಗೆ ಹೊಲ ಪೂರ್ತಿ ಹಸನಾಗಿ ಬಿತ್ತನೆಗೆ ಸಿದ್ಧವಾಗಿದ್ದರೆ ಪರವಾಗಿಲ್ಲ. ಜೂನ್ ತಿಂಗಳ ಆರಂಭದ ಮಳೆಗಳು ಕೈಕೊಟ್ಟರೆ, ಮುಂಗಾರು ಬಿತ್ತನೆ ಕೆಲಸ ಆರಂಭವಾಗುವುದೇ ಇಲ್ಲ. ಈ ಸ್ಥಿತಿಯಲ್ಲಿ ಬಿತ್ತನೆ, ಕಳೆತೆಗೆಯುವ ಹಾಗೂ ಕೊಯ್ಲು ಮಾಡುವ ಸಂದರ್ಭವನ್ನು ಲೆಕ್ಕ ಹಾಕಿಕೊಂಡರೆ ಸುಮಾರು 90ರಿಂದ 120 ದಿನಗಳ ಕಾಲ ಕೆಲಸ ಸಿಗಬಹುದು. ಉಳಿದ ಸಮಯವನ್ನು ಮತ್ತು ಅದನ್ನೇ ನಂಬಿರುವ ಬಡ ರೈತರ ಕೂಲಿ ಹೇಗೆ ಜೀವನ ! ಕಳೆಯಬೇಕು? ಈ ಚುನಾವಣೆಗಳು ಬಂದರೆ ಒಂದು ಪಾರ್ಟ್‌ಟೈಂ ಕೂಲಿ ದೊರೆತಂತಾಗುತ್ತದೆ. ಇಲ್ಲದಿದ್ದರೆ ಹಳ್ಳಿಯ ಯುವಕರು, ಕೆಲಸವಿಲ್ಲದೆ ಕಟ್ಟೆಯ ಮೇಲೆ ಕುಳಿತು ಚೌಕಾಬಾರ, ಹುಲಿ ಮನೆ ಆಟ ಆಡುತ್ತಾರೆ.

❄ ❄ ❄ ❄ ❄

ಬೀಜಗೊಬ್ಬರ ಮತ್ತು ಗುಂಡು

ಭಾರತದ ಆರ್ಥಿಕತೆ ಹಳ್ಳಿಯನ್ನು ಅವಲಂಬಿಸಿದೆ. ಅಂಥ ಹಳ್ಳಿಗಳ ಅಭಿವೃದ್ಧಿಯೆಡೆಗೆ ನಮ್ಮ ನಾಯಕರು ಭರವಸೆಗಳ ಸುರಿಮಳೆಗರೆಯುತ್ತಾರೆಯೇ ವಿನಃ ಅಭಿವೃದ್ಧಿ ಎನ್ನುವುದು ಅವುಗಳ ಪಾಲಿಗೆ ಒಂದು ಮರೀಚಿಕೆಯಾಗಿಯೇ ಉಳಿಯಿತು. ಕವಿಗಳ, ವಿಚಾರವಾದಿಗಳ ಹಾಗೂ ಬರಹಗಾರರ ಕಲ್ಪನೆಯ ಕೂಸಾಗಿರುವ 'ಇಟೋಪಿಯನ್‌ಸ್ಟೇಟ್' ನಿರ್ಮಾಣವಾಗಲೇ ಇಲ್ಲ. ಬಾಯಿಗೆ ಬಂದ ಆದರ್ಶಗಳು ಭೂಮಿಯಲ್ಲಿ ಫಲಿತಗಳಾಗಿ ಹೊರಹೊಮ್ಮಲಿಲ್ಲ.

ಜಾಗತಿಕ ಶೋಷಣೆ ಎನ್ನುವುದು ಈಗ ರೈತನನ್ನು ಗುರಿಯಾಗಿರಿಸಿಕೊಂಡು ದಾಪುಗಾಲಿನಲ್ಲಿ ಮುನ್ನಡೆಯುತ್ತಾ ಸಾವುನೋವುಗಳನ್ನು ಬಿತ್ತತೊಡಗಿದೆ. ಬಿತ್ತಿದ ಬೀಜಗಳು ಮೊಳಕೆಯೊಡೆಯುವ ಭರವಸೆಗಳು ಇಲ್ಲ. ಮೇಲೆ ಮಳೆಯ ಆಟ ಕೆಳಗೆ ವಿಜ್ಞಾನಿಗಳ ಕಾಟ. ಈ ನಡುವೆ ಸಿಕ್ಕ ರೈತ ಬದುಕು ಕಳೆದುಕೊಂಡು ಒಕ್ಕಲು ಸಂಸ್ಕೃತಿಯ ವಿನಾಶದ ಸೂಚನೆ ಎಂಬಂತೆ ಸಾವಿಗೆ ಶರಣಾಗುತ್ತಿದ್ದಾನೆ.

ಅನಾದಿಕಾಲದಿಂದಲೂ ಸಾವಯವಕೃಷಿಯನ್ನು ನಂಬಿದ ರೈತ ತಾನೇ ಬೆಳೆದ ಜೋಳ, ರಾಗಿ ಅಥವಾ ಯಾವುದೇ ಧಾನ್ಯಗಳ ಬೀಜವನ್ನು ತಾನೇ ಸಂಸ್ಕರಣೆ ಮಾಡಿಕೊಳ್ಳುತ್ತಿದ್ದ. ಸಂಪೂರ್ಣವಾಗಿ ಕೊಯ್ಲಿಗೆ ಬಂದ ಜೋಳದಿಂದ ಒಳ್ಳೆಯ ಆರೋಗ್ಯಕರವಾದ ತೆನೆಗಳನ್ನು ಆಯ್ದು ಸರಿಯಾಗಿ ಒಣಗಿಸಿ ತನ್ನದೇ ವೃತ್ತಿ ಪರಂಪರೆಯ ಅನುಭವದ ಹಿನ್ನೆಲೆಯಲ್ಲಿ ಸಂಸ್ಕರಿಸಿಕೊಳ್ಳುತ್ತಿದ್ದ. ಬಹುತೇಕ ಬಿತ್ತನೆ ಬೀಜಗಳಾದಂಥ ಸಜ್ಜೆ, ನವಣೆ, ಸಾಮ್ಕೆ, ಅಲಸಂದೆ, ಹೆಸರು, ಉದ್ದು, ಸ್ಯಾವಗಿ ಜೋಳ, ಹುರಳಿ, ಕೆಂಪು ದೊಡ್ಜೋಳ, ರಾಗಿ, ಶೇಂಗ, ಹತ್ತಿ ಬೀಜ, ಕೊತ್ತಂಬರಿ ಬೀಜ, ಈರುಳ್ಳಿ ಬೀಜ, ಬೆಂಡೆ, ಮೆಣಸಿನಕಾಯಿ ಮುಂತಾದ ಅನೇಕ ವಿಧವಾದ ಬೀಜಗಳನ್ನು ಯಾರ ನೆರವಿಲ್ಲದೆ ತಾನೇ ಸಂಸ್ಕರಿಸಿಕೊಳ್ಳುತ್ತಿದ್ದ ರೈತ ಇಂದು ಅದಕ್ಕೂ ಅಕ್ಷರ ಬಲ್ಲ ದರೋಡೆಕೋರರನ್ನು ಆಶ್ರಯಿಸಬೇಕಾಗಿದೆ.

ಭತ್ತದ ತಳಿಗಳಾದ ಜಯ, ಹೈಯರ್ ಟ್ವೆಂಟಿ ಮುಂತಾದವುಗಳನ್ನು ಮನೆಯಲ್ಲಿ ಸಂಸ್ಕರಿಸಿಡಲಾಗುತ್ತಿತ್ತು. ನಮ್ಮ ತಾಯಿ ಬಿತ್ತುವ ದಿನ ಬಂದಾಗ ತೆಲಿ ಸಾಲಿಗೆ ಸಜ್ಜೆ, ಅಕ್ಕಡಿ ಸಾಲಿಗೆ ತೊಗರಿ ಜೊತೆಗೆ ಅಲಸಂದಿ, ಹೆಸರು, ಉದ್ದು, ಹರಳು, ಅಲ್ಲಲ್ಲಿ ಎಳ್ಳು, ಅವರೆಕಾಯಿ ಬೀಜಗಳನ್ನು ಹೇರಳವಾಗಿ ಬಿತ್ತುತ್ತಿದ್ದರು. ತನ್ನ

ಕುಟುಂಬಕ್ಕೆ ಬೇಕಾದ ಬೆಳೆಗಳನ್ನು ಮಿಶ್ರಬೆಳೆಗಳಾಗಿ ಬೆಳೆದು ವರ್ಷಪೂರ್ತಿ ಬಳಸಿಕೊಳ್ಳುತ್ತಿದ್ದರು. ರೈತರು ತಮ್ಮ ಮನೆಗೆ ಬೇಕಾದ ಮೆಣಸಿನ ಬೀಜಗಳನ್ನ ಮುಂಗಾರು ಆರಂಭವಾಗುವ ಮುಂಚೆ, ಪೂರ್ವ ದಿಕ್ಕು ಕೆಂದೂಳನ್ನು ರಂಗನ್ನಾಸಿಕೊಳ್ಳುತ್ತಿದ್ದ ಕಾಲವನ್ನು ನೋಡಿ ಅವರವರ ಕಣಗಳ ಮೂಲೆಯಲ್ಲಿ ಮಡಿ ಮಾಡಿಕೊಂಡು ಬೆಳೆಗೆ ಅಣಿಮಾಡಿಕೊಳ್ಳುತ್ತಿದ್ದರು. ಮುಂಗಾರು ಆರಂಭವಾದ ಮೇಲೆ ಮೃಗಶಿರ ಮಳೆಗೆ ಸರಿಯಾಗಿ ಜೋಳದ ಬಿತ್ತನೆ ಮುಗಿದಿರಬೇಕು ಎನ್ನುವ ಲೆಕ್ಕಚಾರ ಹಾಕಿಕೊಂಡು ಮೃಗಶಿರ ಮಳೆಗೆ ಮುಂಚೆ ಜೋಳ ಬಿತ್ತನೆ ಮಾಡುತ್ತಿದ್ದರು.

ಒಂದು ವಾರ ತಡವಾದರೆ ಜೋಳಕ್ಕೆ ಬೆಳೆ ಕಸ ಬಿದ್ದು ತೆನೆ ಒಡೆಯುವುದಿಲ್ಲ ಎನ್ನುವ ಅನುಭವ ಜನ್ಯ ಲೆಕ್ಕಚಾರದಿಂದ ಎಲ್ಲವನ್ನೂ ಕರಾರುವಕ್ಕಾಗಿ ವೈಜ್ಞಾನಿಕ ಪದ್ಧತಿಯಂತೆ ವ್ಯವಸಾಯವನ್ನು ಮಾಡಿ ಇಳುವರಿ ಪಡೆಯುತ್ತಿದ್ದ. ಮನೆಗೆ ಬೇಕಾದಷ್ಟು ಹಸಿ, ಒಣ ಮೇಣಸಿನಕಾಯಿ, ಸಾಮಾನ್ಯ ತರಕಾರಿಗಳಾದಂಥ ಸೋರೆಕಾಯಿ, ಹೀರಿಕಾಯಿ, ಬೆಂಡೆಕಾಯಿ, ಜವಳಿಕಾಯಿ, ಹಿಂಗಾರಿನಲ್ಲಿ ಅಷ್ಟಿಷ್ಟು ಹತ್ತಿಯನ್ನು, ಬಿಳಿ ಜೋಳವನ್ನು, ಗೋಧಿ, ಕರಿಕಡ್ಲೆ ಮುಂತಾದ ದವಸ ಧಾನ್ಯಗಳನ್ನು ಹೇರಳವಾಗಿ ಬೆಳೆಯುತ್ತಿದ್ದ. ಆಗ ಅವನಿಗೆ ಬೇಕಾದ ಬೀಜ ಗೊಬ್ಬರ ಎಲ್ಲವನ್ನೂ ತಾನೇ ಪೂರೈಸಿಕೊಳ್ಳುತ್ತಿದ್ದ. ಮನೆಯಲ್ಲಿ ಮೂಲ ತಳಿಗಳ ಹಸುಗಳ ಹಿಂಡು, ಎಮ್ಮೆ, ಎತ್ತುಗಳ ಹಿಂಡು, ಜೊತೆಗೆ ಕುರಿ, ಮೇಕೆ, ಕೋಳಿ ಮುಂತಾದ ವ್ಯವಸಾಯಕ್ಕೆ ಪೂರಕವಾದ ಪ್ರಾಣಿಗಳನ್ನು ಸಾಕುತ್ತಿದ್ದ. ಪ್ರಾಣಿಗಳ ಸಗಣಿ ಮತ್ತು ಗಂಜಲನ್ನು ಬಳಿದು ತಿಪ್ಪೆ ಮಾಡಿ ದನಗಳು ತಿನ್ನದೆ ಉಳಿದ ಹುಲ್ಲು, ಸೊಪ್ಪುಸದೆಯನ್ನು ತಿಪ್ಪೆಯಲ್ಲಿ ತುಳಿದು ಮೇಲೆ ಮಣ್ಣು ಹಾಗಿ ಮುಚ್ಚಿ ಕಾಂಪೋಸ್ಟ್ ಗೊಬ್ಬರ ತಯಾರಿಸುತ್ತಿದ್ದ. ಭತ್ತದ ನಾಟಿ ಮಾಡುತ್ತಿದ್ದ ಪೂರ್ವದಲ್ಲಿ ಕೆಲವರು ಗದ್ದೆಗೆ ಗೋಮಾಳಗಳಲ್ಲಿ ಬೆಳೆಯುತ್ತಿದ್ದ ಬತ್ತಿ ತಪ್ಪಲನ್ನು ಚಕ್ಕಡಿಯಿಂದ ಹೇರಿ ಕೆಸರಲ್ಲಿ ತುಳಿದು ಕೊಳೆಯಲು ಒಂದು ವಾರ ಬಿಟ್ಟು ರಾಡಿ ಹೊಡೆದು ನಾಟಿ ಮಾಡುತ್ತಿದ್ದ ಕಾಲ ಬಹಳ ಬೇಗ ಬದಲಾಯಿತು. ಸ್ವಾತಂತ್ರ್ಯ ಸಿಕ್ಕ 35-40ವರ್ಷಗಳವರೆಗೆ ಜನಸಂಖ್ಯೆ ಹೆಚ್ಚುವುದಕ್ಕಿಂತ ಪೂರ್ವದಲ್ಲಿ ಹಾಗೂ ನಮ್ಮ ಕೃಷಿ ವಿಶ್ವವಿದ್ಯಾನಿಲಯುಗಳು ಹೈಬ್ರಿಡ್ ತಳಿಗಳನ್ನು ಬೇಕಾಬಿಟ್ಟಿ ಕಂಡುಹಿಡಿಯುವುದಕ್ಕಿಂತ ಮೊದಲು ರೈತನಿಗೆ ಜೀವವಿರೋಧಿ ರಾಸಾಯನಿಕ ಗೊಬ್ಬರದ ಬಳಕೆ ಗೊತ್ತಿರಲಿಲ್ಲ. ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಕಾಲಿಟ್ಟ ಮೇಲೆ ಹಾಗೂ ರೈತ ತನ್ನ ಸಾಂಪ್ರದಾಯಿಕ ವ್ಯವಸಾಯದ ಜಾಡನ್ನು ಬಿಟ್ಟು ರಾಸಾಯನಿಕ ಗೊಬ್ಬರದ ಕಂಪೆನಿಗಳ ಲಾಭದಾಸೆಗೆ ಬರಿ ಕಮರ್ಷಿಯಲ್ ಬೆಳೆಗಳನ್ನು

ಬಿತ್ತನೆ ಮಾಡಲು ಪ್ರೋತ್ಸಾಹಿಸಿದ ನಂತರವೇ ರಾಸಾಯನಿಕ ಗೊಬ್ಬರವೆಂಬ ರಾಕ್ಷಸನ ಹಾವಳಿ ಹೆಚ್ಚಾದದ್ದು. ಆರಂಭದಲ್ಲಿ ಬೂದಿ, ಯೂರಿಯಾ ಇವೆರಡೇ ರಸಗೊಬ್ಬರಗಳು ಹೇರಳವಾಗಿ ಬಳಕೆಯಾಗುತ್ತಿದ್ದು. ಈಗ ಹೆಸರನ್ನು ನೆನಪಿನಲ್ಲಿಟ್ಟುಕೊಳ್ಳಲೂ ಸಾಧ್ಯವಿಲ್ಲದಷ್ಟು ರಸಾಯನಿಕ ಗೊಬ್ಬರಗಳು, ಕೀಟನಾಶಕಗಳು ಮಾರುಕಟ್ಟೆಗೆ ಬಂದಿವೆ.

ಈ ಗೊಬ್ಬರಗಳ ಜೊತೆ ಜೊತೆಗೆ ನಾನಾ ನಮೂನೆ ಬೀಜಗಳನ್ನು ಮಲ್ಟಿ ನ್ಯಾಶನಲ್ ಕಂಪನಿಗಳು ಮಾರುಕಟ್ಟೆಗೆ ಬಿಟ್ಟು ಅವುಗಳ ಪೇಂಟೆಂಟ್ ಮಾಡಿಕೊಂಡು ದಂಧೆಯಲ್ಲಿ ತೊಡಗಿವೆ. ಇವೆಲ್ಲವುಗಳಿಗೆ ಪೂರಕ ಎಂಬಂತೆ ಫಲವತ್ತತೆಯನ್ನು ಸಂಪೂರ್ಣವಾಗಿ ಕಳೆದುಕೊಂಡ ಭೂಮಿ; ಕಾಯಿಲೆಯಿಂದ ನರಳುವ ರೋಗಿಯ ದೇಹ ಇಂಗ್ಲೀಷ್ ಔಷಧಿ ಕೊಟ್ಟರೆ ಮಾತ್ರ ಸ್ಪಂದಿಸುವಂತೆ ರಸಾಯನಿಕ ಗೊಬ್ಬರ ಕೊಟ್ಟರೆ ಮಾತ್ರ ಭೂಮಿಯಡಿಯಲ್ಲಿ ಮಲ್ಟಿ ನ್ಯಾಷನಲ್ ಬೀಜ ಮೊಳಕೆಯೊಡೆಯುವ ಪರಿಸ್ಥಿತಿ ಬಂದಿದೆ. ಪರಿಸ್ಥಿತಿ ಹೀಗಿರುವಾಗ ಮಳೆರಾಯನ ಆಗಮನವನ್ನು ಜಾತಕಪಕ್ಷಿಯಂತೆ ಕಾಯುವ ರೈತರಿಗೆ ಮುಂಗಾರು ಆರಂಭವಾಯಿತೆಂದರೆ ಸೊಂಟದ ನರ ಛಳ್ ಎನ್ನುತ್ತದೆ. ಬೀಜ, ಗೊಬ್ಬರ ಜೋಡಿಸಬೇಕು; ಯಾವುದೋ ಒತ್ತಡಕ್ಕೆ ಸಿಲುಕಿ ವ್ಯವಸಾಯಕ್ಕೆ ಉಪಯೋಗವಾಗುವ ಕಮತವನ್ನು ಬಿಟ್ಟು, ಬಾಡಿಗೆ ಎತ್ತುಗಳನ್ನುಆಶ್ರಯಿಸಿರುವ ರೈತನಿಗೆ ಮಳೆಯೊಂದು ವರದಾನ. ಮೊದಲೇ ದರ್ಲಿ ಉದ್ದಿ, ಕಸ ಆರಿಸಿ ಮಾಗಿ ಕಾಲಕ್ಕೆ ಉದುರಿದ ಹಿಂಗಾರೀ ಮಳೆಗಳಾದ ಮಿರ್ಗಾನೊ, ಸ್ವಾತಿ-ಇಸ್ಯಾತಿನೋ ಯಾವುದೋ ಒಂದಕ್ಕೆ ರಂಟೆ ಬಿಟ್ಟು ಹದ ಮಾಡಿ ಬಿಟ್ಟ, ಜಮೀನು ಬಿಸಿಲಿಗೆ ಕಾದ ಹಂಚಾಗಿರುತ್ತದೆ. ಮುಂಗಾರು ಆರಂಭವಾದೊಡನೆ ಮೊದಲನೆ ಮಳೆಗೆ ಹರಗಿ ಮೇರಿಯ ಸುತ್ತಲಿನ ಮಳೆಗೆ ಕಣ್ಣು ಇಟ್ಟು ಕಾಯುತ್ತಿರುತ್ತಾನೆ. ಎರಡನೇ ಮಳೆ ಹನಿ ಹೊಡೆಯುತ್ತಿದ್ದಂತೆ ಬಿತ್ತನೆ ಪ್ರಕ್ರಿಯೆ ಆರಂಭವಾಗುತ್ತದೆ. ಲಾಭದ ಬೆಳೆಗಳಾದ ಮೆಕ್ಕೆ ಜೋಳ, ಸೂರ್ಯಪಾನ, ಡಿ.ಸಿ.ಎಚ್ ಹತ್ತಿ ಮುಂತಾದ ಹೊಸ ಹೈಬ್ರಿಡ್ ತಳಿಗಳನ್ನು ಬಿತ್ತಿ ಅದಕ್ಕೆ ರಸಾಯನಿಕ ಗೊಬ್ಬರದ ವಾಸನೆ ತೋರಿಸಿದ ಮೇಲೆ ನೆಮ್ಮದಿಯ ಉಸಿರನ್ನು ಬಿಡುತ್ತಾನೆ. ಸಾಂಪ್ರದಾಯಕ ಕೃಷಿ ಬಿತ್ತನೆ ಕಾಲದಲ್ಲಿ ಆತ ತನ್ನ ಮನೆಯ ಬೀಜವನ್ನು ಬಿತ್ತಿ ಒಂದು ವರ್ಷ ಒಂದು ಹೊಲಕ್ಕೆ ತಿಪ್ಪೆಗೊಬ್ಬರ ಕಡಿದರೆ ಮತ್ತೊಂದು ವರ್ಷ ಮತ್ತೊಂದು ಹೊಲಕ್ಕೆ ಕಡಿಯುತ್ತಿದ್ದ. ಈ ನಡುವೆ ಊರ ಪಕ್ಕ ಕೆರೆ ಇದ್ದರೆ ಅಥವಾ ಹೊಂಡವಿದ್ದರೆ ನೀರು ಸಂಪೂರ್ಣ ಖಾಲಿ ಆದಮೇಲೆ ಹೊಂಡದ ತಿಳಿ ಮಣ್ಣನ್ನು ಹೊಲಕ್ಕೆ ಹೇರುತ್ತಿದ್ದ. ಈಗ ಕಾಲ ಬದಲಾಗಿದೆ. ದನ, ಕರುಗಳು, ಎತ್ತುಗಳು

ಕಡಿಮೆಯಾಗಿವೆ. ಕಾರಣ ವೈಜ್ಞಾನಿಕವಾಗಿ ಆವಿಷ್ಕಾರಗೊಂಡ ಟ್ರಾಕ್ಟರ್‌ಗಳು ನಮ್ಮ ದೇಸೀತಳಿ ಎತ್ತುಗಳು, ಹಸುಗಳು, ಅವಲಂಬಿಸುತ್ತಿದ್ದ ರೈತನನ್ನು ಅವುಗಳಿಂದ ದೂರ ಮಾಡಿವೆ. ಹಾಗೂ ದನಕರುಗಳಿಗೆ ನೀರು, ಮೇವಿನ ಅಭಾವ ಊರ ಮುಂದಿನ ಗೋಮಾಳಗಳು ಒತ್ತುವರಿಯಾಗಿ ಹಣ ಇದ್ದವರ, ರಾಜಕೀಯ ಶಕ್ತಿ ಇರುವವರ ಪಾಲಾಗಿವೆ. ಪ್ರಕೃತಿ ಒಂದನ್ನೊಂದು ಅವಲಂಬಿಸುವ ಸೂತ್ರವನ್ನಾಧರಿಸಿ ತನ್ನನ್ನಾಶ್ರಯಿಸಿದ ಜೀವಿಗಳನ್ನು ಉಳಿಸಿರುತ್ತದೆ. ಅಂಥ ಅವಲಂಬನೆಯ ಸಾಧ್ಯತೆಗಳು ಭೂಮಿಯ ಮೇಲೆ ಕಡಿಮೆಯಾಗುತ್ತಾ ಸಾಗಿದಂತೆ ಸಾಕುವ ಪ್ರಾಣಿಗಳ ಸಂಖ್ಯೆ ಕೂಡ ಕಡಿಮೆಯಾಗುತ್ತದೆ. ಮೇಕೆ ಸಾಕಲು ಮೆಳೆ ಅಥವಾ ಕಾಡು ಬೇಕು. ಅವಿಲ್ಲದೆ ಅವುಗಳ ಸಂತತಿ ಇಲ್ಲ. ಹುಲ್ಲಿಲ್ಲದೆ ಕುರಿ ಹಸುಗಳು ಇಲ್ಲ. ಹೀಗೆ ಅವುಗಳು ಬದುಕಲು ಬೇಕಾದ ಪರಿಸರವನ್ನು ಒದಗಿಸಿಕೊಡುವಲ್ಲಿ, ವಿಫಲರಾದಂತೆ ಅವುಗಳ ಸಂಖ್ಯೆ ಕೂಡ ಕಡಿಮೆಯಾಗುತ್ತಾ ಸಾಗುತ್ತಿರುತ್ತದೆ. ಹೀಗಾಗಿ ಐದು ನೂರರಿಂದ ಸಾವಿರದವರೆಗೆ ಹಿಂಡುಹಿಂಡಾಗಿ ಮೈದಾನದಲ್ಲಿ ಕಾಣಸಿಗುತ್ತಿದ್ದ ದನಕರುಗಳ ಸಂಖ್ಯೆ ಇಪ್ಪತ್ತಕ್ಕೋ ಮೂವತ್ತಕ್ಕೋ ಬಂದು ನಿಂತುಬಿಟ್ಟಿದೆ.

ಬಹುತೇಕ ರೈತರು ಅತೀ ಸಣ್ಣ ಹಿಡುವಳಿದಾರರು. ಮೊನ್ನೆ ಮೊನ್ನೆ ಹಾವೇರಿಯಲ್ಲಿ ನಡೆದ ಗೋಲಿಬಾರ್‌ನಲ್ಲಿ ಸಿಕ್ಕು ಗುಂಡೇಟು ತಿಂದವರಲ್ಲಿ ಅನೇಕರು ವರ್ಷವಿಡೀ ಕೂಲಿ ಮಾಡಿಕೊಂಡು ಇರುವ ತುಂಡು ಭೂಮಿಯಲ್ಲಿ ಯಾವುದಾದರೂ ಒಂದು ವಾಣಿಜ್ಯ ಬೆಳೆ ಬೆಳೆಯುವ ಕನಸನ್ನು ಕಂಡವರು. ದೊಡ್ಡ ಹಿಡುವಳಿದಾರರು ತಮ್ಮ ಕೈಯಲ್ಲಿ ಹಣ ಇದ್ದಾಗಲೇ ಟನ್‌ಗಟ್ಟಲೆ ರಾಸಾಯನಿಕ ಗೊಬ್ಬರ ಖರೀದಿ ಮಾಡಿಕೊಂಡು ತಮ್ಮ ದಾಸ್ತಾನು ಮಳಿಗೆಗಳಲ್ಲಿ ತುಂಬಿಕೊಳ್ಳುತ್ತಾರೆ. ಕಾಳಸಂತೆಯಲ್ಲಿ ಒಂದಕ್ಕೆರಡು ಬೆಲೆ ಏರಿಸಲು ರಾಸಾಯನಿಕ ಗೊಬ್ಬರದ ಮಾಲೀಕರು ತಮ್ಮ ದಾಸ್ತಾನು ಮಳಿಗೆಗಳಲ್ಲಿ ನಿಟ್ಟಿನ ಮೇಲೆ ನಿಟ್ಟು ಒಟ್ಟಿಕೊಂಡು ಭದ್ರವಾಗಿ ಬಾಗಿಲನ್ನು ಮುಚ್ಚಿ ಈ ಗಲಭೆಗಳಿಗೆ ಕಾರಣಕರ್ತರಾಗುವ ರೈತವಿರೋಧಿಗಳು. ಬರಿ ಲಾಭವನ್ನೇ ತನ್ನ ಬಂಡವಾಳ ಮಾಡಿಕೊಂಡ ಈತ ರೈತರ ಆತಂಕವನ್ನು ಹೇಗೆ ತಾನೇ ಅರ್ಥ ಮಾಡಿಕೊಂಡಾನು. ಇರೋ ತುಂಡು ಜಮೀನನ್ನು ಬಾಡಿಗೆ ಕೊಟ್ಟು ಮತ್ತೊಬ್ಬ ರೈತನ ಸಹಾಯದಿಂದ ಬಿತ್ತಲು ಸಜ್ಜು ಮಾಡಿರುವ ಜಮೀನು ಮಳೆ ಬಿದ್ದ ಒಂದೆರಡು ದಿನಗಳಲ್ಲಿಯೇ ಬಿತ್ತನೆ ಮಾಡದಿದ್ದರೆ ನೆಲ ಮತ್ತೆ ಒಣಗಿ ಸ್ವಸ್ಥಿತಿಗೆ ಬಂದುಬಿಡುತ್ತದೆ. "ಕೈಯಾನ ಬೀಜ ಮುಂದೆ, ಉಡಿಯಾನ ಬೀಜ ಹಿಂದೆ" ಎಂಬ ಗಾದೆಯಂತೆ ಪರದಾಡುವ ರೈತನ ಭಾವನೆಗಳ ಜೊತೆಗೆ ಆಟವಾಡಿದರೆ ಅವನು ಸಹಜವಾಗಿಯೇ ಕೆರಳುತ್ತಾನೆ. ಮುಂಗಾರು ಮಳೆ ಅಲ್ಪ ಸ್ವಲ್ಪ ಪ್ರಮಾಣದಲ್ಲಿ

ಬೀಳುವ ದಾವಣಗೆರೆ, ಹಾವೇರಿ, ಬಳ್ಳಾರಿ, ಧಾರವಾಡ, ಚಿತ್ರದುರ್ಗದ ಹಲವು ಭಾಗಗಳು, ಶಿವಮೊಗ್ಗ ಇವೇ ಮುಂತಾದ ಜಿಲ್ಲೆಗಳಲ್ಲಿ ಮೇ-ಜೂನ್ ತಿಂಗಳ ಅವಧಿಯಲ್ಲಿ ಬಿತ್ತನೆ ಆರಂಭವಾಗುತ್ತದೆ. ಪ್ರತಿ ವರ್ಷ ಸುಸೂತ್ರವಾಗಿ ಸಾಗುವ ಬಿತ್ತನೆ ಈ ಸಾಲಿನಲ್ಲಿ ರೈತನನ್ನು ಆತಂಕಕ್ಕೀಡುಮಾಡಿದೆ. ಬೀಜ ಗೊಬ್ಬರದ ಸಲುವಾಗಿ ಗುಂಡೇಟು ತಿಂದು ಆಸ್ಪತ್ರೆಯನ್ನು ಸೇರಿದ ರೈತ ವಾಸ್ತವವನ್ನು ಅರ್ಥಮಾಡಿಕೊಳ್ಳಲಾರ. ದಾವಣಗೆರೆ ಜಿಲ್ಲೆಯಲ್ಲಿಯೂ ಸಹ ಇದೇ ಉದ್ವಿಗ್ನವಾತಾವರಣ ಉಂಟಾಗಿತ್ತು. ರೈತರು ದಳ್ಳಾಳಿಗಳ ಹತ್ತಿರ ಮೂರರಿಂದ ಐದು ರೂಪಾಯಿ ಬಡ್ಡಿ ಸಾಲ ಪಡೆದು ಸಾಲದ ಬಡ್ಡಿಗಾದರೂ ವ್ಯವಸಾಯ ಮಾಡಿಯೇ ತೀರಬೇಕೆಂಬ ಹಠ ತೊಟ್ಟು ಬಡಿದಾಡುತ್ತಿರುವಾಗ ಕಾಣದ ಕೈಯೊಂದು ತನ್ನ ಕರಾಳ ರೂಪವನ್ನು ಸಾವಿನ ರೂಪದಲ್ಲಿ ಪ್ರಕಟಿಸುತ್ತಿದೆ. ಎಲ್ಲಿಯವರೆಗೆ ರೈತನ ಭಾವನೆಯನ್ನು ಅರ್ಥಮಾಡಿಕೊಳ್ಳುವುದಿಲ್ಲವೋ, ಲಾಭಕ್ಕಾಗಿ ರಾಸಾಯನಿಕ ಗೊಬ್ಬರವನ್ನು ಒಂದಕ್ಕೆರಡು ದರದಲ್ಲಿ ಮಾರಾಟ ಮಾಡುವುದು ನಿಲ್ಲುವುದಿಲ್ಲವೋ ಭೂಮಿಯನ್ನೇ ನಂಬಿರುವ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಿಲ್ಲ. ಅದೆಲ್ಲಕ್ಕಿಂತ ಮುಖ್ಯವಾಗಿ ರಾಜಕೀಯದಾಟಕ್ಕೆ ದಾಳವಾಗಿ ಹರಿದು ಹಂಚಿಹೋಗಿರುವ ಶೇ.75 ರೈತ ಸಮುದಾಯ ಒಗ್ಗಟ್ಟಿನಿಂದ ಪ್ರತಿಕ್ರಿಯಿಸಿದರೆ ಗುಂಡಿನೇಟು ತಿನ್ನುವ ಪ್ರಮೇಯ ಬರುವುದಿಲ್ಲ.

❋ ❋ ❋ ❋ ❋

ಲಂಬಾಣಿಭಾಷೆ ಮತ್ತು ವೈಶಿಷ್ಟ್ಯ

ಬಂಜಾರ, ವಂಜಾರ, ಲಂಬಾಣಿ, ಲಮಾಣಿ, ಸುಗಾಲಿ, ಸುಕಾಲಿ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಲಂಬಾಣಿಗರು ಭಾರತದಲ್ಲಿರುವ ಬುಡಕಟ್ಟುಗಳಲ್ಲಿಯೇ ಅತ್ಯಂತ ಪ್ರಬಲವಾದ ದೊಡ್ಡ ಬುಡಕಟ್ಟು. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ರೂಢಿಯಲ್ಲಿರುವ ಜಾತಿ ವ್ಯವಸ್ಥೆಯಲ್ಲಿ ಬಾರದ ಅನೇಕ ಬುಡಕಟ್ಟುಗಳಲ್ಲಿ ಇದು ಒಂದು. ಭಾಷಾಪಂಡಿತರ ಪ್ರಕಾರ 'ಬಂಜಾರ' ಶಬ್ದ ಸಂಸ್ಕೃತ ಮೂಲದಿಂದ ಬಂದಿದ್ದು ಅದರ ಅರ್ಥ ಹೀಗಿದೆ; "ಬಂಜಾ ಅಥವಾ ವನಿಯಾ ಅಂದರೆ ಪುರಾತನ ಕಾಲದಿಂದಲೂ ಬಂದಿರುವ ಎತ್ತುಗಳ ಮೇಲೆ ಆಹಾರಧಾನ್ಯ ಇತರೆ ದಿನೋಪಯೋಗಿ ಸಾಮಗ್ರಿಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಸುವವರು." ಇನ್ನೊಂದು ಮೂಲದ ಪ್ರಕಾರ ದಕ್ಷಿಣ ಭಾರತದಲ್ಲಿ ಆಗ ಇದ್ದ ಚಿಕ್ಕ ಚಿಕ್ಕ ಪ್ರಾಂತ್ಯಗಳಿಗೆ ಉಪ್ಪಿನ ಸಾಗಾಣೆ ಮಾಡುತ್ತಿದ್ದರಿಂದ ಲಂಬಾಣಿ ಲಮಾಣಿಗರು ಎಂಬ ಪ್ರತ್ಯಯ ಆ ಜನಾಂಗದ ಜೊತೆಗೆ ಸೇರಿಕೊಂಡಿದೆ.

ಬಂಜಾರರು ವಾಸವಾಗಿರುವ ರಾಜ್ಯಗಳಲ್ಲಿ ಆಯಾಕಾಲಘಟ್ಟಕ್ಕೆ, ಪ್ರದೇಶಕ್ಕೆ ಮತ್ತು ಆಯಾ ಪ್ರದೇಶದ ಭಾಷೆಯ ಪ್ರಭಾವಕ್ಕೆ ಒಳಗಾಗಿ ವಿಭಿನ್ನ ಹೆಸರುಗಳಿಂದ ಕರೆಯಲ್ಪಡುತ್ತಿದ್ದಾರೆ. ಬ್ರಿಟೀಷರು ಭಾರತಕ್ಕೆ ಬರುವ ಪೂರ್ವದಲ್ಲಿ ಸುಮಾರು ಹನ್ನೆರಡು ಉಪಜಾತಿಗಳಾಗಿ, ಆಯಾ ಪ್ರದೇಶಗಳಲ್ಲಿ ಕೈಗೊಂಡಿದ್ದ ಕಸುಬಿನ ಆಧಾರದ ಮೇಲೆ ವಿಭಜಿಸಲಾಗಿತ್ತು. ಒಂದೊಂದು ದಿಕ್ಕಿಗೆ ಹೋದ ಗುಂಪುಗಳು ಕೃತಕವಾಗಿ ಹಾಕಿಕೊಂಡಿದ್ದ ಡೇರೆಗಳೇ ಮುಂದೆ ತಾಂಡಾ (ತಂಡ) ಗಳಾದವು. ಅವರ ಸಾಂಪ್ರದಾಯಿಕ ತಿರುಗಾಟ ಎತ್ತು, ಕತ್ತೆ, ಕುದುರೆ, ಒಂಟೆಗಳ ಮೇಲೆ ಸಾಗಿದ್ದರೂ ಎತ್ತುಗಳ ಹಿಂಡೆ ಪ್ರಧಾನವಾಗಿತ್ತು. 18 ಮತ್ತು 19 ನೇ ಶತಮಾನಗಳಲ್ಲಿ ಕ್ರಮೇಣವಾಗಿ ಎತ್ತಿನ ಹಾಗೂ ಒಂಟೆಗಳ ಗಾಡಿಗಳನ್ನು ಬಳಸತೊಡಗಿದ್ದರು. ತಮ್ಮ ಸಾಂಪ್ರದಾಯಿಕ ತಿರುಗಾಟದಲ್ಲಿ ಬೇರೆ ಬೇರೆ ಗುಂಪುಗಳು ಭೇಟಿಯಾಗುತ್ತಿದ್ದವು. ಆಗ ತಮ್ಮ ಸಮಾಜದ ಬೇಕುಬೇಡಗಳು, ಕುಶಲೋಪರಿಗಳು ವಿನಿಮಯಗೊಳ್ಳುತ್ತಿದ್ದವು.

ಲಂಬಾಣಿಗಳು ತಮ್ಮ ಭಾಷೆಯನ್ನು 'ಗೋರಬೋಲಿ' ಎಂದು ಕರೆಯುತ್ತಾರೆ. ಈ ಗೋರಬೋಲಿಗೆ ಲಿಪಿ ಇಲ್ಲ. ಲಂಬಾಣಿ ಭಾಷೆ ಇಂಡೋ ಆರ್ಯನ್ ಭಾಷಾಪ್ರಭೇದಕ್ಕೆ ಸೇರುತ್ತದೆ. ಈ ಮೊದಲೇ ಹೇಳಿದಂತೆ ಅನೇಕ ಪ್ರಾಂತ್ಯಗಳಲ್ಲಿ

ಸುತ್ತಿದವರಾದ್ದರಿಂದ ಪ್ರತಿಯೊಂದು ಪ್ರಾದೇಶಿಕ ಭಾಷೆಯೂ ಗೋರ್‌ಬೋಲಿಯ ಮೇಲೆ ಪ್ರಭಾವ ಬೀರಿವೆ. ಹೀಗೆ ಅನ್ಯಭಾಷೆಯ ಪ್ರಭಾವಕ್ಕೊಳಗಾಗಿ ಬಳಕೆಯಲ್ಲಿರುವ ಶಬ್ದಗಳನ್ನು ಈ ಕೆಳಗೆ ಗಮನಿಸಬಹುದು.

ಉದಾಹರಣೆಗೆ:

ಅವನು ಓದಿದ್ದಾನೆ. ಊ ಓದ ಮೇಲೋಚ

'ಓದು' ಎಂಬ ಶಬ್ದವನ್ನು ಯಥಾವತ್ತಾಗಿ ಕರ್ನಾಟಕದಲ್ಲಿ ವಾಸಿಸುತ್ತಿರುವ ಲಂಬಾಣಿಗರು ಬಳಸಿಕೊಂಡರೆ

ಆಂಧ್ರದ ಲಂಬಾಣಿಗರು ತೆಲುಗಿನ 'ಸದವು' ಎಂಬ ಶಬ್ದವನ್ನು 'ಊ ಸದವ ಮೇಲೋಚ' ಎಂದು ಬಳಸುತ್ತಾರೆ.

ಹಾಗೆಯೇ ತಮಿಳಿನಲ್ಲಿ ಓದುವುದಕ್ಕೆ 'ಪಡಿ'ಎಂಬ ಶಬ್ದವನ್ನು ತಮ್ಮ ಭಾಷೆಯ ಮಧ್ಯದಲ್ಲಿ ಯಥಾವತ್ತಾಗಿ ಬಳಸುತ್ತಾರೆ.

1921ರ ಗಣತಿಯ ಅನಂತರ ಡಾ. ಗ್ಯಾರಿಸನ್ ಅವರು ಕೈಗೊಂಡ ಭಾಷಾ ಸಂಶೋಧನೆಯಲ್ಲಿ ಹೀಗೆ ಹೇಳುತ್ತಾರೆ: "ಭಾರತದಲ್ಲಿ 179 ಭಾಷೆಗಳು ಮತ್ತು 544 ಉಪಭಾಷೆಗಳು ಇವೆ" ಲಂಬಾಣಿ ಭಾಷೆಗೆ ಸಂಬಂಧಿಸಿದಂತೆ ಬುಡಕಟ್ಟುಗಳು ತಮ್ಮ ಉಪಭಾಷೆಯನ್ನು ಕಳೆದುಕೊಂಡು ಆಯಾ ಪ್ರದೇಶದ ಭಾಷೆಗಳನ್ನೇ ರೂಢಿಮಾಡಿಕೊಂಡಿವೆ. ಅದರಂತೆ, ಅನ್ಯ ಭಾಷಿಗರು ಹೆಚ್ಚಿರುವ ಪ್ರದೇಶದಲ್ಲಿ ನೆಲೆಸಿರುವ ಲಂಬಾಣಿಗರೂ ಕೂಡ ಆ ಭಾಷೆಯ ಪ್ರಭಾವಕ್ಕೊಳಗಾಗಿ ತಮ್ಮ ಭಾಷೆಯನ್ನು ಸಂಪೂರ್ಣವಾಗಿ ಮರೆತು ಆ ಪ್ರದೇಶದ ಭಾಷೆಯನ್ನು ಕಲಿತಿದ್ದಾರೆ. ಆದರೆ ಅವರೇ ನೆಲೆಸಿರುವ ತಾಂಡಾಗಳಲ್ಲಿ ತಮ್ಮ ಭಾಷೆಯನ್ನು ಯಶಸ್ವಿಯಾಗಿ ಉಳಿಸಿಕೊಂಡಿದ್ದಾರೆ."

ಲಂಬಾಣಿ ಭಾಷೆಯು ಅನ್ಯ ಭಾಷೆಗಳ ಪ್ರಭಾವಕ್ಕೊಳಗಾಗಿದೆ. ಅವರು ಉತ್ತರ ಭಾರತದಲ್ಲಿ ವಾಸವಾಗಿದ್ದ ಕಾರಣಕ್ಕಾಗಿ ಹಿಂದಿ ಭಾಷೆಯ ಪ್ರಭಾವಕ್ಕೆ ಒಳಗಾಗಿದ್ದರೆ ದಕ್ಷಿಣ ಭಾರತಕ್ಕೆ ಬಂದು ನೆಲೆಸಿದ ಮೇಲೆ ಅಲ್ಲಿಯ ದ್ರಾವಿಡ ಭಾಷೆಗಳ ಪ್ರಭಾವಕ್ಕೊಳಗಾಗಿ ತಮ್ಮ ಸಾಹಿತ್ಯ, ಹಾಡು ರಚನೆಯ ಸಂದರ್ಭಗಳಲ್ಲಿ ಆ ಭಾಗದ ಭಾಷೆಗಳನ್ನೇ ಬಳಸಿಕೊಂಡಿದ್ದಾರೆ. ಎಡ್ಗರ್ ಥರ್ಸ್ಟನ್ ಪ್ರಕಾರ, "ಉತ್ತರ ಕೆನರಾದ ಲಂಬಾಣಿಗರು, ತಮ್ಮ ಉಪಭಾಷೆಯನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ಅವರು ಮಾತನಾಡುವಾಗ ಮಾರ್ವಾರಿ, ಉರ್ದು, ಗುಜರಾತಿ, ಮರಾಠಿ, ಕನ್ನಡ ಶಬ್ದಗಳನ್ನು ಹೇರಳವಾಗಿ ಬಳಸುತ್ತಾರೆ. ಅವರಲ್ಲಿ ಅನೇಕರು ದ್ವಿಭಾಷಿಗರು ಅಥವಾ ಅನೇಕ ಭಾಷೆಗಳನ್ನು ಮಾತನಾಡುವವರೂ ಸಹ ಇದ್ದಾರೆ."

ಅವರು ಸ್ವಸ್ಥಾನವನ್ನು ಬಿಟ್ಟು ಮಾಳ್ವಾಕ್ಕೆ ಬಂದ ಅನಂತರ ನಿಮ್ಹಾಡ ವಾಸಿಗಳಾದರು. ಆಗ ನಿಮ್ಹಾ ಭಾಷೆಯ ಶಬ್ದಗಳನ್ನು ತಮ್ಮ ಭಾಷೆಯಲ್ಲಿ ಬಳಸಲು ಆರಂಭಿಸಿದರು. ನಿಮ್ಹಾ ರಾಜಸ್ತಾನದಲ್ಲಿ ಬಳಕೆಯಲ್ಲಿರುವ ಒಂದು ಭಾಷೆ. ಹಾಗೆಯೇ ಲಂಬಾಣಿ ಭಾಷೆಯೂ ಸಹ ರಾಜಸ್ತಾನದಲ್ಲಿ ಮಾತನಾಡುವ ಅನೇಕ ಉಪಭಾಷೆಗಳಲ್ಲಿ ಒಂದಾಗಿದೆ. ಅಂತೆಯೇ ಜಗತ್ತಿನ ಯಾವುದೇ ಮೂಲೆಯಲ್ಲಿ ಲಂಬಾಣಿಗರು ವಾಸವಾಗಿದ್ದರೂ ಯಾವುದೇ ಭಾಷೆಯ ಪ್ರಭಾವಕ್ಕೆ ಒಳಗಾಗಿದ್ದರೂ ತಮ್ಮ ಜನರೊಂದಿಗೆ ವ್ಯವಹರಿಸುವಾಗ ಗೋರ್‌ಬೋಲಿಯನ್ನೇ ಬಳಸುತ್ತಾರೆ. ಆ ಮಟ್ಟಕ್ಕೆ ಇಂದಿಗೂ ತಮ್ಮ ಸ್ವಂತಿಕೆಯನ್ನು ಉಳಿಸಿಕೊಂಡಿದ್ದಾರೆ.

ಲಂಬಾಣಿ ಭಾಷೆಯ ವಿಶೇಷವೆಂದರೆ ಇಲ್ಲಿ ಬಳಕೆಯಾಗುವ ವಚನಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಏಕವಚನ ಮತ್ತು ಬಹುವಚನ ಏಕರೂಪದಲ್ಲಿಯೇ ಬಳಕೆಯಾಗುತ್ತವೆ ಉದಾಹರಣೆಗೆ:

ಬಳದ=ಎತ್ತು=ಎತ್ತುಗಳು,

ಝಾಡ್=ಮರ=ಮರಗಳು

ಝಾಡಿ=ವನ=ವನಗಳು

ದಾಂತ್=ಹಲ್ಲು=ಹಲ್ಲುಗಳು

ಬಾಟಿ=ರೊಟ್ಟಿ=ರೊಟ್ಟಿಗಳು

ವ್ಯಾಕರಣದಲ್ಲಿ ಅನೇಕ ಕಡೆಗಳಲ್ಲಿ ಲಿಂಗಗಳ ವ್ಯತ್ಯಾಸ ಕಂಡುಬರುವುದಿಲ್ಲ.

ಉದಾಹರಣೆಗೆ:

ಉ ಪಿರೋಚ - ಅವನು ಕುಡಿಯುತ್ತಿದ್ದಾನೆ.

ಉ ಪಿರೀಚ - ಅವಳು ಕುಡಿಯುತ್ತಿದ್ದಾಳೆ.

ಓ ಪಿರೇಚ - ಅವರು ಕುಡಿಯುತ್ತಿದ್ದಾರೆ.

ಅನೇಕ ಕಠಿಣ ಪದಗಳು ಮರಾಠಿ ಭಾಷೆಯ ಪ್ರಭಾವದಿಂದಾಗಿ ಸೇರಿಕೊಂಡಿವೆ ಎಂದು ಪ್ರೊ. ಡಿ.ಬಿ. ನಾಯ್ಕ ಅಭಿಪ್ರಾಯಪಡುತ್ತಾರೆ.

ಕಾಡ - ತೆಗೆ

ಖಾಡ್ - ತೆಗ್ಗು

ಗೋಡ	-	ಗೋಡೆ
ಘೋಡಾ	-	ಕುದುರೆ

ಲಂಬಾಣಿ ಭಾಷೆಯಲ್ಲಿ ಎರಡೇ ಲಿಂಗಗಳು ರೂಢಿಯಲ್ಲಿದ್ದು ನಪುಂಸಕ ಲಿಂಗ ಬಳಕೆಯಾಗುವುದಿಲ್ಲ.

ಬೇಟಾ	-	ಮಗ
ಬೇಟಿ	-	ಮಗಳು
ಮಿಟಗ	-	ಗಂಡುಕಪ್ಪೆ
ಮಿಟಗಿ	-	ಹೆಣ್ಣುಕಪ್ಪೆ
ಬೆಂಸಾ	-	ಕೋಣ
ಬೇಸಿ	-	ಎಮ್ಮೆ
ಬಳದ್	-	ಎತ್ತು
ಗಾವಡಿ	-	ಹಸು

ಈ ಭಾಷೆಯಲ್ಲಿ ಒಂದೇ ವಸ್ತು ಅಥವಾ ಪ್ರಾಣಿಗೆ ಹಲವು ಶಬ್ದಗಳು ಬಳಕೆಯಾಗುತ್ತವೆ.

ಉದಾ:

ಖಾಡು, ಢೋರ್, ಜಂಗಾನಿ	=	ಹಸುಗಳು
ಡುಂಗ್ರಾ, ಗಟ್ಲಾ, ದಡಿಯಾ	=	ಬೆಟ್ಟ
ಬೀರ್, ತಾಂಡ್ರಿ, ಗೋಣ್ಣಿ, ಬೋಡಿ	=	ಹೆಂಡತಿ
ಮಿಂಡಿ, ಬಕ್ರಿ, ಗೋರ್ಲಿ	=	ಕುರಿ
ಬಣವಿ, ಸಮ್ರಿ	=	ಬಣವೆ

ಹೀಗೆ ಒಂದು ವಿಶಿಷ್ಟವಾದ ಹಿನ್ನೆಲೆಯನ್ನು ಹೊಂದಿರುವ ಭಾಷೆ ಭಾರತದ ಅನೇಕ ಬುಡಕಟ್ಟು ಭಾಷೆಗಳು ಕಣ್ಮರೆಯಾಗುತ್ತಿರುವಂತೆ ಇದೂ ಸಹ ಅಳಿವಿನ ಅಂಚಿನಲ್ಲಿದೆ. ಬದಲಾಗುತ್ತಿರುವ ಬದುಕಿನ ಶೈಲಿ, ಕೆಲಸದ ವಾತವರಣ, ಆರ್ಥಿಕ ಪರಿಸ್ಥಿತಿ, ಹೆಚ್ಚುತ್ತಿರುವ ಜಾಗತಿಕ ಪ್ರಭಾವ, ನಾಗರಿಕ ಬದುಕಿನ ಲಾಲಸೆ, ಪ್ರಾದೇಶಿಕ ಭಾಷೆಯ ಒತ್ತಡ, ವಿದೇಶಿ ಭಾಷೆಯ ವ್ಯಾಮೋಹ, ರಾಷ್ಟ್ರಭಾಷೆಯ

ಪ್ರಭಾವದಿಂದಾಗಿ ಗೋರ್‌ಬೋಲಿಯ ಅನೇಕ ಶಬ್ದಗಳು ಬಳಕೆಯಾಗುತ್ತಿಲ್ಲ. ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ತಂದೆತಾಯಂದಿರು ಸಾಮಾನ್ಯವಾಗಿ ತಮ್ಮೊಳಗೆ ಮಾತನಾಡುವಾಗ ಲಂಬಾಣಿ ಭಾಷೆಯನ್ನು ಬಳಸುತ್ತಿದ್ದು, ತಮ್ಮ ಮಕ್ಕಳೊಂದಿಗೆ ಮಾತನಾಡುವಾಗ ಪ್ರಾದೇಶಿಕ ಅಥವಾ ವಿದೇಶಿ ಭಾಷೆಯನ್ನು ಮಾತನಾಡುವುದರಿಂದ ಮುಂದಿನ ಪೀಳಿಗೆ ಕ್ರಮೇಣವಾಗಿ ಲಂಬಾಣಿಯನ್ನು ಮರೆಯುತ್ತಿದೆ.

ಕೇವಲ ಈ ರೀತಿಯ ಸಂವಾದ ಗೋಷ್ಠಿಗಳು, ದಾಖಲೆಗಳನ್ನು ಭಾಷೆಯನ್ನು ಉಳಿಸಿಕೊಳ್ಳಲಾಗುವುದಿಲ್ಲ. ಅದನ್ನು ಉಳಿಸಲು ಆಯಾ ಬುಡಕಟ್ಟಿನ ಜನರಲ್ಲಿ ಜಾಗೃತಿಯನ್ನು ಮೂಡಿಸುವುದು ಹಾಗೂ ಬಹುಭಾಷೆಯನ್ನು ಕಲಿತರೂ ತಮ್ಮ ಮೂಲಭಾಷೆಯನ್ನು ಉಳಿಸಿಕೊಳ್ಳುವಂತೆ ಪ್ರೇರೇಪಿಸಿದಾಗ ಅಳಿವಿನಂಚಿನಲ್ಲಿರುವ ಇಂಥ ಸಾವಿರಾರು ಉಪಭಾಷೆಗಳು ಉಳಿದುಕೊಂಡಾವು. ಆಗ ಮಾತ್ರ ಭಾರತ ತನ್ನ ವೈವಿಧ್ಯತೆಯನ್ನು ಉಳಿಸಿಕೊಳ್ಳಲು ಸಾಧ್ಯವಾದೀತು. ಪೌರಾತ್ಯ ರಾಷ್ಟ್ರಗಳಂತೆ ಏಕತಾನತೆಯಿಂದ ಹೊರ ಬರಲು ಸಾಧ್ಯವಾದೀತು. ನಮ್ಮ ಸರ್ಕಾರಗಳು ಭಾಷೆಯ ಉಳಿವಿಗೆ ಹೊಸ ನೀತಿಗಳನ್ನು ಮಾಡಿ, ಪ್ರಸ್ತುತ ವ್ಯಯಿಸುತ್ತಿರುವ ಹಣದ ಪ್ರತಿಶತ 01 ಹಣವನ್ನು ಅಳಿವಿನಂಚಿನಲ್ಲಿರುವ ಈ ಭಾಷೆಗಳಿಗೆ ವ್ಯಯ ಮಾಡಿದಲ್ಲಿ ಈ ಭಾಷೆಗಳು ಉಳಿದುಕೊಂಡವು.

❋ ❋ ❋ ❋ ❋

ಬರೆವಣಿಗೆ ಮತ್ತು ಸಿದ್ಧಾಂತಗಳು

ಬರವಣಿಗೆ ಯಾವತ್ತೂ ಪ್ರಜ್ಞಾಪೂರ್ವಕವಾದ ಕ್ರಿಯೆ ಅಲ್ಲ. ಯಾವುದೇ ಒಂದು ಒತ್ತಡದ ನಡುವೆ ರೂಪ ತಳೆಯುವ ಬರೆವಣಿಗೆ ಇದೇ ಸಮಯ, ಸಂದರ್ಭದಲ್ಲಿ ಬರವಣಿಗೆ ಉಂಟಾಗುತ್ತದೆ ಎಂದು ಊಹೆ ಕೂಡ ಮಾಡಲಾಗುವುದಿಲ್ಲ. ಎದೆಯೊಳಗಿನ ತುಡಿತ ಮತ್ತು ಮಿಡಿತ, ಸೂಕ್ತವಾದ ಸಂದರ್ಭವನ್ನು ಆಯ್ದುಕೊಂಡು ಲೇಖಕ ಬರೆಯುತ್ತಾನೆ. ಅವನ ಬರೆವಣಿಗೆಯ ಅನಂತರ ಅದನ್ನು ಓರೆಗೆ ಹಚ್ಚಿ ಈ ಕೃತಿಯ ಆಳ, ಅಗಲ ಇಷ್ಟೇ ಎಂದು ಕಂಡು ಹಿಡಿಯುವ ಹರಸಾಹಸ ಮತ್ತು ಈ ಕೃತಿ ಇಂತಹದ್ದೊಂದು ಸಿದ್ಧಾಂತವನ್ನೊಳಗೊಂಡಿದೆ ಎಂದು ತಾಳೆ ಮಾಡಲಾಗುತ್ತದೆ. ಜಗತ್ತಿನ ಒಂದು ವಾದದ ಪ್ರಕಾರ ಬರೆದಿದ್ದೆಲ್ಲವೂ ಬರೆವಣಿಗೆ ಎಂದೆನಿಸಿದರೆ ಅದರಲ್ಲೂ ಯಾವುದು ಸಾಹಿತ್ಯ ಎಂಬ ಸಾಹಿತ್ಯವನ್ನು ಸತ್ಯವನ್ನು ಅರಿಯುವ ಒಳಮನಸ್ಸು ಓದುಗನದಾಗಬೇಕು. ಹೊಸ ಶತಮಾನದ ಅವಿಷ್ಕಾರ ಎಂಬಂತೆ ಈ ಶತಮಾನದ ಚಿಂತಕರು ಸಾಹಿತ್ಯಕ್ಕೆ ವಿಶಾಲಾರ್ಥವನ್ನು ಕೊಡುವ ಉದಾರತೆಯನ್ನು ತೋರಿರುವ ಹಿನ್ನೆಲೆಯಲ್ಲಿ ಹೇಳುವುದಾದರೆ, ಒಂದು ಅಂಗಡಿಯೊಳಗೆ ತೆಗೆದುಕೊಳ್ಳುವ ಬಟ್ಟೆ ಒಗೆಯುವ ಯಂತ್ರದ ಖರೀದಿಯ ಅನಂತರ ಅಂಗಡಿಯವನು ದರ ಕುರಿತಾದ ಸಾಹಿತ್ಯವನ್ನು ನಿಮಗೆ ಕೊಡಲೇಬೇಕು. ಆ ಸಾಹಿತ್ಯವು ನೀವು ಕೊಂಡಂತಹ ವಸ್ತುವಿನ ಮಾಹಿತಿಯ ಜೊತೆಗೆ ಅದರ ಬಳಕೆಯ ಫಲಕವನ್ನೊಳ ಗೊಂಡಿರುತ್ತದೆ. ಇದನ್ನು ಸಾಹಿತ್ಯ ಎಂದು ಕರೆಯುವುದಾದರೆ ಸಂಪ್ರದಾಯಕವಾಗಿ ಬರೆಯಲ್ಪಟ್ಟ ಚಂಪೂಕಾವ್ಯ, ಮಹಾಕಾವ್ಯವನ್ನು ಸಾಹಿತ್ಯವೆಂದು ಕರೆಯುತ್ತೇವೆ. ಇದರ ಗುಣಲಕ್ಷಣಗಳು ಹೀಗಿವೆ. ಎಂತಲೂ, ಇದು ಗದ್ಯ ಇದರೊಳಗೆ ಪದ್ಯದ ಪ್ರವೇಶವಿಲ್ಲ ಎಂದು ಹೇಳುವಲ್ಲಿ ಸಾಹಿತ್ಯದ ನಿರ್ದಿಷ್ಟತೆಯನ್ನು ತಿಳಿಸಿದಂತಾಗುತ್ತದೆ. ಫ್ಯಾನಿನ ಅಂಗಡಿಯವನು ಕೊಟ್ಟ ಫ್ಯಾನಿನ ಮಾಹಿತಿ ಪುಸ್ತಕವು ಇಲ್ಲಿನ ಭಾರತೀಯ ಸಂಚಾರಿ ನಿಗಮದವರು ಕೊಟ್ಟ ಫೋನುಸಂಖ್ಯೆಗಳ ಕೈಪಿಡಿಯೊಂದು ಕತೆಯಂತೆ ಕುತೂಹಲ ಹುಟ್ಟಿಸಿ ಓದಲು ಪ್ರೇರೇಪಿಸುವುದಿಲ್ಲ.

ಸಮಾಜ ಮುಖಿಯಾದ ಬರವಣಿಗೆ ಕವಿಗೆ ಅರಿವಿಲ್ಲದೆ ಅವನೊಳಗೆ ನಡೆಯುವ ಕ್ರಿಯೆ. ಪಂಪ, ರನ್ನ, ಕುಮಾರವ್ಯಾಸ, ಜನ್ನ, ಆಂಡಯ್ಯ ರನ್ನ ನಮ್ಮ ಕನ್ನಡ ಬರವಣಿಗೆಯ ಮೂಲ ಪುರುಷರೆಂದು ಗುರುತಿಸುವ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ

ಉಗಮದ ಸ್ಥಿತ್ಯಂತರ ತಿಳಿಯುವ ಕೆಲಸಮಾಡಬೇಕು. ಭಾಷೆಯ ಹುಟ್ಟು ಮತ್ತು ಬೆಳವಣಿಗೆ ಆಯಾ ಪರಿಸರವನ್ನು ಅವಲಂಬಿಸಿರುವಂತಹದ್ದು. ನಾನು ಮನೆಯೊಳಗೆ ಆಡುವ ಭಾಷೆ ಲಿಪಿ ಇಲ್ಲದ ಬಂಜಾರಿ ಅಥವಾ ಗೋರ್‌ಬೋಲಿ. ಈ ಭಾಷೆಯ ಉಗಮ, ಮೂಲ ಯಾವುದೂ ಗೊತ್ತೇ ಇರದ ಸತ್ಯಗಳು. ಆದರೂ ಭಾಷೆಯನ್ನು ಸ್ಪಷ್ಟವಾಗಿ ಮತ್ತು ಉದ್ದೇಶ ಈಡೇರುವುದಕ್ಕಾಗಿ ಉಪಯೋಗಿಸುತ್ತಿದ್ದೇವೆ.

ಹೀಗೆ ಭಾಷೆಯೊಂದು ಉದ್ದೇಶಿತ ಕ್ರಿಯೆಯನ್ನು ನಡೆಸಲು ಸಹಾಯಕ ವಾಗುತ್ತದೆ. ಸಾಹಿತ್ಯದ ಸಂದರ್ಭ ಬಂದಾಗ ಆಯಾ ಕಾಲಘಟ್ಟಗಳ ಚಿಂತನೆಗಳನ್ನು, ಜನಜೀವನವನ್ನು ಪ್ರತಿಬಿಂಬಿಸಲು ಸಹಾಯಕವಾಗುತ್ತದೆ. ಬರವಣಿಗೆಯ ಉಗಮ ಕ್ಕಿಂತಲೂ ಮೂಲದಲ್ಲಿ ಭಾಷೆ ನೆಲೆಸಿತ್ತು ಮತ್ತು ತನ್ನ ಕ್ರಿಯೆಯನ್ನು ಮಾಡುತ್ತಲೇ ಬಂದಿದೆ. ಆರಂಭದಲ್ಲಿ ಭಾಷೆ ಸಾಹಿತ್ಯ ಇವತ್ತಿನ ಚಿಂತನೆಗಳಂತೆ ಯಾವುದೇ ಒಂದು ಸೈದ್ಧಾಂತಿಕ ನೆಲೆಗಟ್ಟನ್ನು ಹೊಂದಿರಲಿಕ್ಕಿಲ್ಲ. ಕನ್ನಡದ ಮೇಲೆ ಸಂಸ್ಕೃತದ ಪ್ರಭಾವ ಹೇರಳವಾಗಿ ಬೀರಬಹುದು. ತೆಲಗು ಮಲೆಯಾಳಂ ತಮಿಳುಗಳಿಗಿಂತ ಕನ್ನಡ ಸಂಸ್ಕೃತದ ಪ್ರಭಾವಕ್ಕೆ ಹೆಚ್ಚು ಒಳಗಾಗಿದೆ ಎಂದು ಪಂಡಿತರ ಲೆಕ್ಕಚಾರವೇ ಆಗಿದೆ. ಇಲ್ಲಿ ನನಗೆ ಭಾಷೆಗಿಂತ ಸಾಹಿತ್ಯ ಮುಖ್ಯ. ಆದರೆ ಭಾಷೆಯ ಹುಟ್ಟಿಲ್ಲದೆ, ಭಾಷೆಯ ಚಿಂತನೆ ಇಲ್ಲದೆ ಸಾಹಿತ್ಯದ ಚಿಂತನೆ ಸಾಧುವಲ್ಲ.

ಪಂಪಕವಿ ಬರೆಯುವಾಗ,ವಚನಕಾರರು ಬರೆಯುವಾಗ ಅಥವಾ ದಾಸರು ಯಾವುದೇ ರೀತಿಯ ಸೈದ್ಧಾಂತಿಕ ನಿಯಮಗಳು ಬದ್ಧತೆಗಳು ಇರಲಿಲ್ಲ ಅದಕ್ಕಾಗಿಯೇ ಆದಿ ಕವಿ ಪಂಪನ ಕಾವ್ಯ ಇವತ್ತಿಗೂ ಪ್ರಸ್ತುತವಾಗಿದೆ. ಅಂದೇ ಪಂಪ ಹೇಳಿದ ಮಾತು

"ದೇಶಿಯೊಳ್‌ಪುಗುವುದು
ಪೊಕ್ಕು ಮಾರ್ಗ ತಳ್ವುದು"

ಎಂಬ ಮಾತು "ದೇಶಿಯವಾದವನ್ನು" ಸೃಷ್ಟಿಕರಿಸುತ್ತದೆ. ಸಂಸ್ಕೃತ ಭಾಷೆಯೇ ಪ್ರಧಾನ ಪಾತ್ರವಹಿಸುತ್ತಿದ್ದ ಕಾಲ. ಕನ್ನಡ ಭಾಷೆ ಜನಸಾಮಾನ್ಯರಾಡುವ ಆಡುನುಡಿ ಯಾಗಿದ್ದ ಸಂದರ್ಭದಲ್ಲಿ ಬರಹಗಾರನೊಬ್ಬ ತನ್ನ ಬರೆವಣಿಗೆಯಲ್ಲಿ ಕನ್ನಡದಲ್ಲಿ ಬರೆಯಲು ಹೇಗೆ ಸಾಧ್ಯ? ಅವನು ಎರಡು ಸಾಧ್ಯಗಳನ್ನು ಮಾಡಬಹುದಾಗಿತ್ತು. ಒಂದು ದೇಶಿಯವಾದ ನುಡಿಗಟ್ಟನ್ನು ಸಮೃದ್ಧಿಯಾಗಿ ಬಳಸಿಕೊಂಡು ಅದರಲ್ಲೇ ಬರೆಯುವುದು ಅಥವಾ ತನ್ನ ಬರೆವಣಿಗೆ ಲ್ಯಾಟೀನ್ ಭಾಷೆಯನ್ನು ಬಳಸಿದಂತೆ ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ, ಲೋಹಿಯಾವಾದ ಮುಂತಾದ ಅನೇಕ ಸಿದ್ಧಾಂತಗಳನ್ನಾಧರಿಸಿ ಕತೆ, ಕಾದಂಬರಿ, ಕವಿತೆ, ನಾಟಕ, ವೈಚಾರಿಕ ಲೇಖನಗಳನ್ನು

ಬರೆದಿರುವ ಸಾಹಿತಿಗಳುಂಟು. ಆದರೆ 21ನೇ ಶತಮಾನದ ಆರಂಭದ ಕಾಲಘಟ್ಟದಲ್ಲಿ ವಿಜ್ಞಾನ, ವೈಚಾರಿಕತೆಯ ನಟ್ಟನಡುವೆ, ಜಗತ್ತು ಕೈ ಅಳತೆ ದೂರದಲ್ಲಿರುವ ಸನ್ನಿವೇಶದಲ್ಲಿ ಬದುಕಿರುವ ನಾವುಗಳು ಈಗ ಯಾವ ಸಿದ್ಧಾಂತವನ್ನು ಅನುಸರಿಸಿ ಬರೆಯುತ್ತಿರುವ ಕವಿತೆ, ನಾಟಕ, ಕಾದಂಬರಿ, ಕವಿತೆಗಳನ್ನು ಓದಲು ಇಷ್ಟಪಡುತ್ತೇವೆ ಅಥವಾ ಹೊಸದಾಗಿ ಬಂದ ಕವಿತೆ, ಕತೆಯನ್ನು ಯಾವ ಸಿದ್ಧಾಂತಕ್ಕೆ ಫಿಕ್ಸ್ ಮಾಡಲು ಹವಣಿಸುತ್ತಿದ್ದೇವೆ. ಜಾಗತಿಕ ಯುದ್ಧಗಳ ಅನಂತರ ತತ್ತರಿಸಿಹೋದ ಜಗತ್ತು ಮಾನವೀಯತೆ ಕುರಿತು ಪರಿತಪಿಸುತ್ತಿತ್ತು. ನೊಬೆಲ್ ಬಹುಮಾನ ಪಡೆದ ಸುಮಾರು ಬರೆಹಗಾರರೆಲ್ಲರೂ ಮಾನವೀಯತೆಯನ್ನು ಕೇಂದ್ರಬಿಂದುವಾಗಿಸಿಕೊಂಡು ಬರೆದಂತಹವರು. ಬರ್ನಾಡ್ ಷೊನಿಂದ ಹಿಡಿದು ಸಾಮ್ಯುವೆಲ್ ಬ್ಯಾಕೆಟ್ ನಂತಹವರು, ಡಬ್ಲ್ಯು.ಬಿ. ಎಟ್ಸ್‌ನಂತಹ ಕವಿಗೆ ಹೊಸ ಪೀಳಿಗೆಯ ಬೇಜಾವ ಬ್ದಾರಿತನ, ಕುಡಿಯುವುದು, ತಿನ್ನುವುದು ಹಣವ್ಯಯಮಾಡುವುದು, ಅನೈತಿಕವಾಗಿ ಬದುಕುವುದು ಅಷ್ಟೇ ಬದುಕು, ಆದರ್ಶ, ಮೌಲ್ಯ ನ್ಯಾಯನೀತಿ, ಯಾವುದು ಇಲ್ಲವೇ ಇಲ್ಲ. ಈಗ ಏನಾಗುತ್ತಿದೆ? ಗುರು-ಹಿರಿಯರ ನಡುವೆ ತಾಳಮೇಳವಿಲ್ಲ, ಪ್ರಜಾಪ್ರಭುತ್ವದ ತಿಕ್ಕಲುತನ ಪ್ರತಿಯೊಬ್ಬನಿಗೂ ಸ್ವಾತಂತ್ರ್ಯದ ಗುಲಾಮಗಿರಿಯಲ್ಲಿ ವೈಯಕ್ತಿಕ ಗೌರವಕ್ಕೆ ಸ್ಥಾನಮಾನವಿಲ್ಲ. ನಾವು ಹಿರಿಯರೆಂದು ಬೇರೆಯವರಿಂದ ಗೌರವವನ್ನು ನಿರೀಕ್ಷಿಸುವುದು ತಪ್ಪೋ ಅಥವಾ ಕಿರಿಯರು ನಾವು ಪ್ರಜಾಪ್ರಭುತ್ವದಲ್ಲಿ ಬದುಕಿದ್ದೇವೆ, ಯಾರ ಹಂಗು ನಮಗಿಲ್ಲ ಎಂದು ಸ್ವೇಚ್ಛಾಚಾರದಿಂದ ತೇಲಾಡುತ್ತಿರುವ ಬದುಕಿಗೆ ನಿಶ್ಚಿತವಾದ ಗುರಿಯಿಲ್ಲ. ಪಾಠಮಾಡಲು ಶಿಷ್ಯರನ್ನು ಹುಡುಕಿಕೊಂಡು ಹೋಗುವ ಮೇಷ್ಟ್ರುಗಳು, ಕಾಟಾಚಾರಕ್ಕೆ ಕಾಲೇಜಿಗೆ ಬಂದು ಸೈಕಲ್ ಸ್ಟ್ಯಾಂಡಿನಲ್ಲಿ ಅಂಡಲೆಯುತ್ತ ಕ್ಲಾಸಿನೊಳಗೆ ಬರದ ವಿದ್ಯಾರ್ಥಿಗಳು "ಯಾರು ಯಾರಿಗೆ ಹಿತವರಯ್ಯ ಇಲ್ಲಿ" ಇಂಥ ಸಂಕ್ರಮಣಾವಸ್ಥೆಯಲ್ಲಿರುವ ಈ ಕಾಲಘಟ್ಟ ದಲ್ಲಿ ಹೊಸದೊಂದು ಸಿದ್ಧಾಂತದ ಹುಡುಕಾಟದಲ್ಲಿ ಬದುಕಿರುವ ಅನೇಕ ಪಂಡಿತರಿಗೆ ಸಿದ್ಧಾಂತದ ಮಾದರಿಸಿಗುವುದಾದರೂ ಹೇಗೆ ಬರವಣಿಗೆಯೊಳಗೆ ಒಂದು ಸಿದ್ಧಾಂತ ಅಡಗಿರುತ್ತದೆ. ಯಾವುದೇ ರೆಡಿಮೇಡ್ ಸಿದ್ಧಾಂತಕ್ಕೆ ನಮ್ಮ ಬರವಣಿಗೆಯನ್ನು ಫಿಕ್ಸ್ ಮಾಡಲು ಆಗುವುದಿಲ್ಲ. ಹೀಗಾಗಿ ಪ್ರತಿಯೊಂದು ಬರವಣಿಗೆ ಒಂದು ಸೈದ್ಧಾಂತಿಕ ನೆಲೆಯಲ್ಲೇ ಇರುತ್ತದೆ.

❋ ❋ ❋ ❋ ❋

ಹೊಸ ಸಿದ್ಧಾಂತದ ಹುಡುಕಾಟದಲ್ಲಿ

ಮಳೆಬಂದು ಇಳೆಕೊಳೆ ತೊಳೆದು ತಂಪಾದ ಅನಂತರ ಅಡರುವ ಕಾವು ವಿಪರೀತವಾದದ್ದು. ಸೂರ್ಯನ ಕಿರಣಗಳು ಬಲಿಯುತ್ತಿದ್ದಂತೆ ಕಾವಿನ ಧಗೆ ಹೆಚ್ಚುತ್ತಾ ಭೂಮಿ ಮೇಲಿನ ಮಾನವನ ಬದುಕು ಅಸಹನೀಯವಾಗುತ್ತದೆ. ಆಗ ಜನರು ಹವಾನಿಯಂತ್ರಿತ ಕೊಠಡಿಗಳಲ್ಲಿ, ಕೃತಕ ಗಾಳಿಗಳನ್ನು ಎರಚುವ ಫ್ಯಾನ್‌ಗಳು, ತಂಪು ಪಾನೀಯಗಳು, ನಾನಾ ನಮೂನಿಯ ಕೃತಕತೆಗೆ ಮಾರು ಹೋಗುವಂತೆ ಇಂದು ಹೊಸ ಸಿದ್ಧಾಂತ ಹುಡುಕಾಟದಲ್ಲಿ ಪಂಡಿತರು ತೊಡಗಿದ್ದಾರೆ.

ಒಬ್ಬ ಮೂರುಕಾಸಿನ ಪೇಪರ್‌ನಲ್ಲಿ ಬರೆಯುವವ ಎಲೆ ಅಡಿಕೆ ಅಗೆಯುತ್ತ ಸಿಕ್ಕ ಸಿಕ್ಕ ಜಾಗದಲೆಲ್ಲಾ ಹೊಲಸುಮಾಡುವ ಭಟ್ಟನೊಬ್ಬ ದಲಿತ ಕವಿಗಳ ಬಂಡಾಯ ಕವಿಗಳ ಕಾವ್ಯವನ್ನು ಬಹಳ ನಿಕೃಷ್ಟವಾಗಿ ಟೀಕೆ ಮಾಡಿದ್ದು ಇವತ್ತಿಗೂ ನನಗೆ ನೆನಪಿದೆ. ಗೋವಾದ ಪಣಜಿಯಲ್ಲಿ ನಡೆದ ಕವಿಗೋಷ್ಠಿಗೆ ಆಯ್ಕೆಯಾಗಿದ್ದ ದಲಿತ, ಬಂಡಾಯದ ತಲೆಮಾರಿನ ಕವಿಯೊಬ್ಬರು ಭಾಗವಹಿಸಿದ್ದನ್ನು ಸಹಿಸಿಕೊಳ್ಳಲಾಗದ ಭಟ್ಟ ಮತ್ತೊಬ್ಬ ಪೀತ ಪತ್ರಿಕೆಯ ವರದಿಗಾರ ಹೆಗಡೆ ಪಿರಿಯೊಬ್ಬನ ಜೊತೆಗೆ ಸೇರಿ ಹೀನಾಯವಾಗಿ ಮಾತನಾಡಿದ. ಅದು ಪ್ರಚಾರದಾಸೆಗೆ ಸರ್ಕಾರದವರು ಕೊಡಿಸಿದ ಗೋವಾದ ಸೋವಿರೇಟಿನ ಹೆಂಡವನ್ನು ಕಂಠಮಟ್ಟ ಕುಡಿದು, ಕೋಳಿ, ಕುರಿ, ದನದಮಾಂಸವನ್ನು ಒಂದು ಬಿಡದೆ ಎಗ್ಗಳಾಗಿ ಹೊಡೆದು, ಮಾಡಲು ಕೆಲಸವಿಲ್ಲದೆ "ಇವನ್ಯಾವ ಕವಿನೋ, ನಮ್ಮಪ್ಪ ಬರಿತವ್ರೇ, ಅದೆಂತಕಾವ್ಯ, ಇದೆಂಥ ಕಾವ್ಯ" ಇಂತಹ ಏನೇನೊ ಅವಾಚ್ಯ ಶಬ್ದಗಳಿಂದ ನಿಂದಿಸಿದ. ಇದು ಒಟ್ಟು ಅವಿದ್ಯಾವಂತನಂತಹ ವಿದ್ಯಾವಂತನ ಮಾತು ಬಿಡಿ. ಆದರೆ, ಪ್ರಖ್ಯಾತ ವಿಮರ್ಶಕರಂತೆ ಮೂರು ನಾಲ್ಕು ದಶಕಗಳ ಕಾಲ ಬೇಕಾದವರನ್ನೇ ಹೊಗಳಿ ಬರೆದ ಕುರ್ತು ಕೋಟಿಯವರು ದಲಿತ ಬಂಡಾಯವೆಂದರೆ ಏಣ್ಣೆ ಸೀಗೆಕಾಯಿಯಂತೆ ಮುಖಸಿಂಡರಿಸಿ 'ಅದೇನ' ದಲಿತ ಬಂಡಾಯನೋ ಏನೋ ಬರೆವಣಿಗೆಯೊಳಗೊಂದು ಅರ್ಥವಿಲ್ಲ ಮಣ್ಣು ಇಲ್ಲಾ" ಎಂದು ಹೇಳಿದ್ದನ್ನ ನಾನೇ ಸ್ವತಃ ಕೇಳಿದ್ದೇನೆ. ಅದು ಅಲ್ಲದೆ ಕೆಲವು ನವೋದಯ, ಪ್ರಗತಿಶೀಲದ ಅನಂತರ ಯಾವ ಗುಂಪೆಂದು ಗುರುತಿಸಿಕೊಳ್ಳದ ಹಂಡಬಂಡ ಬರಹಗಾರರು "ಓ ನೀವಾ ಬಂಡಾಯಗಾರರು ಬಿಡಿಯಪ್ಪ ಇದು ನಿಮ್ಮದೇ ದೇಗುಲ" ಎಂದು ಹಿಯಾಳಿಸುವುದನ್ನು ನಿಲ್ಲಿಸಿಲ್ಲ.

ಇನ್ನೂ ಕೆಲವರು ಈಗ ಯಾರ ಸರದಿ ? ದಲಿತ ಸಾಹಿತ್ಯದ ಅವಧಿ ದೇವನೂರ ಮಹದೇವ, ದಲಿತ ಕವಿ ಸಿದ್ದಲಿಂಗಯ್ಯ, ದೇವಯ್ಯ ಹರವೆ, ಮೂಡ್ನಾಕೂಡು ಚಿನ್ನಸ್ವಾಮಿ ಮುಂತಾದ ಬರಹಗಾರರ ಪಾಶ್ಚಾತ್ಯ ಮತ್ತು ಆಫ್ರಿಕಾದ ಕಪ್ಪು ಜನರು ಅವಮಾನ, ಹಿಂಸೆ, ಅಸಮಾನತೆಯನ್ನು ನುಂಗಿ ಅಗ್ನಿಯನ್ನು ಎದೆಯೊಳಗಿನಿಂದ ಶಬ್ದಗಳಾಗಿ ಹೊರ ಉಗುಳಿದಂತೆ ಬರೆದರೆ ಬಂಡಾಯದ ಮುಂಚೂಣಿಯಲ್ಲಿದ್ದ ಬರಗೂರ ರಾಮಚಂದ್ರಪ್ಪ, ಚಂಪಾ, ಕಾಳೇಗೌಡ ನಾಗವಾರ, ರಂಜಾನ್‌ದರ್ಗಾ, ಮೋಹನ ಕುರಡಗಿ, ಸರಜೂ ಕಾಟ್ಕರ್, ಸತೀಶ್ ಕುಲಕರ್ಣಿ, ಸಿದ್ದನಗೌಡ ಪಾಟೀಲ ಅವರ ಸಮಕಾಲೀನ ಬರಹಗಾರರು ಕುವೆಂಪು ಅವರು ಆಶಯದ ಮೇಲೆ ಹೊಸ ಕ್ರಾಂತಿಯನ್ನೇ ಆರಂಭಿಸಿದರು. ಆಗ ಬರೆಯುತ್ತಿದ್ದ ಎರಡನೇ ತಲೆಮಾರಿನ ಕವಿಗಳು ಲೇಖಕರು ಬಂಡಾಯ ದಲಿತರ ಒಳಸುಳಿಯಲ್ಲಿ ನುಸುಳಿದವರು. ಇದೇ ಕಾಲಘಟ್ಟದಲ್ಲಿ ಅತ್ಯಂತ ಪ್ರಬಲವಾಗಿ ಹೊರಹೊಮ್ಮಿದ ಸ್ತ್ರೀ ಚಿಂತನೆ ಮೂರನೆಯ ಆಶಯ. ಮೊದಲನೇ ತಲೆಮಾರಿನಲ್ಲೇ ಬಹಳ ದಿಟ್ಟವಾಗಿ ಸಮಾಜದ ಯಾವ ಮುಲಾಜಿಗೂ ಅಂಜದೆ ಅಳುಕದೆ ಬರೆದ ವೀಣಾಶಾಂತೇಶ್ವರ, ಬಿ.ಟಿ. ಲಲಿತಾನಾಯಕ. ವೈದೇಹಿ, ಬಿ.ಟಿ. ಜಾಹ್ನವಿ, ಗೀತಾನಾಗಭೂಷಣ್, ಸಾರಾ ಅಬೂಬಕರ್, ಷರೀಫ್ ಮೊದಲಾದವರು ದಿಟ್ಟ ಮಹಿಳೆಯ ಬದುಕಿನ ಎಳೆಎಳೆಯನ್ನು ಸಾಹಿತ್ಯದ ಸರಮಾಲೆಯಾಗಿ ಪೋಣಿಸಿರುವುದನ್ನು ಕಾಣುತ್ತೇವೆ.

ಈ ಮೂರು ಪ್ರಕಾರಗಳ ನಡುವೆ ತಮ್ಮ ಪಾಡಿಗೆ ತಾವು ಯಾವ ವಾದಕ್ಕೂ ವ್ಯಾದಿಗಳಾಗದೆ ಬರೆಯುತ್ತಿರುವ ಅನೇಕ ಕವಿಗಳು ಲೇಖಕರು ಕತೆಗಾರರು ತಮ್ಮ ಪಾಡಿಗೆ ತಾವು ಬರೆಯುತ್ತ ಸಮನ್ವಯರು ಎಂದು ಗುರುತಿಸಿಕೊಂಡು ಬರೆಯುತ್ತಲಿದ್ದಾರೆ. ಇವರು ಆಗಾಗ್ಗೆ, ದಲಿತ-ಬಂಡಾಯ-ಸ್ತ್ರೀವಾದದ ಕಾಲ ಮುಗಿದು ಹೋಯಿತು. ಈಗ ಈ ಸಾಹಿತ್ಯ ಅಪುಸ್ತಕವೆಂದು ಹೇಳುತ್ತ ವಿಕೃತ ಸಂತೋಷವನ್ನು ಅನುಭವಿಸುವುದು ಉಂಟು. ಈ ಎಲ್ಲವುಗಳ ತಾಕಲಾಟದಲ್ಲಿ ಪಾಶ್ಚಾತ್ಯರ ಅನೇಕ ಸಿದ್ಧಾಂತಗಳು ನಮ್ಮ ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ ಅವುಗಳಲ್ಲಿ, ರಚನಾ ಸಿದ್ಧಾಂತ ಬೇಕನ್ ಉಳಿದಿದ್ದು ಇಂಗ್ಲೀಷ್‌ನಲ್ಲಿ ಸಮೃದ್ಧಿಯಾಗಿ ಬರೆದ ಕೆಲವೇ ಕೆಲವು ಪ್ರಬಂಧಗಳಿಂದಾಗಿ. ದೇಶಿಯ ಪರಿಕರಗಳನ್ನು ಸೃಷ್ಟಿಸಿಕೊಂಡು ಬರೆಯುವ ಬರವಣಿಗೆ ನಿಜವಾಗಿಯೂ ಬಹಳ ನೈಜ ಮತ್ತು ಹರಿತವಾಗಿರುತ್ತದೆ. ಹದಿನೆಂಟನೇ ಶತಮಾನದವರೆಗೂ ಕೆಲ ಕವಿಗಳು ನಂಬಿದ್ದ ಶಾಸ್ತ್ರೀಯವಾದ ಭಾಷೆಯನ್ನು ಬಳಸಿ ಕಾವ್ಯ ಬರೆದರೆ ಅದಕ್ಕೊಂದು ಮೆರಗು ಬರುತ್ತದೆಂದು ನಂಬಿಕೊಂಡಿದ್ದು ಕೆಲವು ಪ್ರಖಾಂಡ ಪಂಡಿತರಿಗೆ ಜನಸಾಮಾನ್ಯರ ಭಾಷೆಯಲ್ಲಿರುವ

ಹರಿತ ತಿಳಿಯಲೇ ಇಲ್ಲ. ಇದನ್ನು ಮೊದಲಬಾರಿಗೆ ತೋರಿಸಿದ್ದು ಇಂಗ್ಲೆಂಡಿನ ಕವಿ ವಿಲಿಯಂ ವರ್ಡ್ಸ್‌ವರ್ತ್. ಕಾವ್ಯ ಆಡುನುಡಿಯಲ್ಲಿದೆ. ನವೋದಯ, ನವ್ಯದ ಕವಿಗಳು ನವಿರಾಗಿ ಪ್ರೀತಿ, ಪ್ರೇಮ, ಪ್ರಣಯ-ಕಾಡು-ಬೆಟ್ಟಗಳನ್ನು ವಿವರಿಸಿದ್ದು ಹೆಚ್ಚಾಯ್ತು.

ತಟ್ಟೆದ ತಾಲಿಪಿಟ್ಟಿನಲ್ಲಿ ಅವಳ ಬೆರಳು ಗುರುತುಗಳು
ಬೇಯಿಸಿ ನೀಡುವಾಗ ಅವಳು ನಕ್ಕಳು
ಕಂಡವರ ಹಸಿವಿನಲ್ಲಿ ಬೆರಳುಗಳು ಇಳಿವಾಗ
ಹಿಟ್ಟ ನಾದಿದಳು ಒತ್ತಿದಳು
ಏನು ಅಂದುಕೊಂಡಿತೊ ಬೊಗಸೆ

ಜಿ.ಕೆ. ರವೀಂದ್ರಕುಮಾರ ಅವರ ಈ ಕವನದ ಸಾಲುಗಳು ದಲಿತ-ಬಂಡಾಯದ ಕಾವ್ಯದ ಕೆಲವು ಸಾಲುಗಳನ್ನು ನೋಡಿದಾಗ

ನಿಮ್ಮೆದೆಯ ಮೇಲೆ ಅವನ ಹೆಜ್ಜೆ ಗುರುತಿಗೆ ಕಾರಣ
ಅವನ ಕೆನ್ನೆಯ ಮೇಲೆ ನಿಮ್ಮಕ್ಕ ಬೆರಳು ಗುರುತು
ಇತಿಹಾಸದ ದೋಣಿಯಲ್ಲಿ ಹೊಸ ಕಥೆಯಲ್ಲಿ
ಬಿತ್ತಿ ಕೊಂಡದ್ದೇ ಬೆಳೆಯುತ್ತದೆ.
ಬೆಳೆದದ್ದು ಬಾಳಾಗಿದ್ದರೆ ಮಾತ್ರ ಉಳಿಯುತ್ತದೆ.

ಮೋಹನ್‌ನಾಗಮ್ಮನವರ್ ಅವರ ಪದ್ಯದ ಸಾಲುಗಳಾಗಲಿ, ದಲಿತಕವಿಗಳಾದ ಸಿದ್ದಲಿಂಗಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಮುಸ್ಲಿಂ ಸಂವೇದನೆಯ ಕವಿಗಳಾದ ನಜೀರ್ ಚಂದಾವರ್, ನಜೀರ್, ನಧಾಪ್, ಪೀರ್‌ಭಾಷ, ಶ್ರೀಮತಿ ಶರೀಫಾ ಮುಂತಾದವರು ಮತ್ತು ಮಾಸ್ಕೇರಿ ಎಂ.ಕೆ. ನಾಯಕ, ಹೊಸ ಸಂವೇದನಗಳನ್ನೊಳಗೊಂಡ ಯುವ ಕವಿಗಳು ಈ ಜಗತ್ತಿನ ವಾಸ್ತವಿಕ ಸತ್ಯವನ್ನು ಅರ್ಥೈಸಿಕೊಂಡು ಬರೆಯುತ್ತಿರುವುದು ಹೊಸ ಆಲೋಚನೆಯ ಹರಿವನ್ನು ವಿಸ್ತರಿಸಿದೆ. R.J. ರಿಜ್ ಎಂಬ ಆಂಗ್ಲಭಾಷಾ ವಿಮರ್ಶಕನೊಬ್ಬ ಸಾಹಿತ್ಯದ ವಿಸ್ತೃತೆಯನ್ನು ಹೇಳುವಾಗ ಬಹಳ ಸಾಮಾನ್ಯವಾದ ರೀತಿಯಲ್ಲಿ ಅರ್ಥೈಸಿದ್ದಾನೆ"ಸಾಹಿತ್ಯ ಎಂಬುದು ಬರೆವಣಿಗೆಯ ಎಲ್ಲಾ ಪ್ರಕಾರ" ಬರೆವಣಿಗೆಯ ರೂಪದಲ್ಲಿರುವ ಪ್ರತಿಯೊಂದೂ ಸಾಹಿತ್ಯವೆ. ಆದರೆ ಓದುಗ ಯಾವುದು ನಿಜವಾದ ಸಾಹಿತ್ಯ ಎಂಬುದನ್ನು ಕಂಡುಕೊಳ್ಳುತ್ತಾನೆ ಎಂದು ಹೇಳುತ್ತಾನೆ. ಮುಂದುವರಿದು ನೀವು ನಿಮ್ಮ ಅಡಿಗೆ

ಮನೆಗೆ ಬೇಕಾಗಿರುವ ರೆಫ್ರಿಜರೇಟರ್ ಖರೀದಿಸುತ್ತೀರಾ ಆಗ ಅಂಗಡಿಯವನಿಗೆ ರೇಫ್ರಿಜರೇಟರ್ ಕುರಿತಾದ ಸಾಹಿತ್ಯ ಕೊಡಿ ಎಂದು ಅದರ ಬ್ರೋಷರ್ಸ್ ಕೇಳುವುದಿಲ್ಲವೇ? ರೀಜ್ ಅದು ಕೂಡ ಸಾಹಿತ್ಯವೆ ಡಾಕ್ಟರ್ ಬರೆದುಕೊಟ್ಟ ಚೀಟಿ, ಒಂದು ದೊಡ್ಡದಾದ ಫಲಕವನ್ನು ಕುಕ್ಕರಹಳ್ಳಿ ಕೆರೆಹತ್ತಿರ ಗಂಗೋತ್ರಿಯ ಕೂಡು ರಸ್ತೆಯಲ್ಲಿರುವ ಸಿಗ್ನಲ್ ಸಮೀಪ ಏರ್‌ಟೆಲ್ ಕಂಪನಿಯವನು ಹಾಕಿರುವ ಜಾಹಿರಾತು ಕೂಡ ಸಾಹಿತ್ಯವೆ.

ಆದರೆ.... ಯಾವುದು ನಿಜವಾದ ಸಾಹಿತ್ಯ ಎಂಬ ಪರೀಶೀಲನೆ ಸೂಕ್ಷ್ಮ ಸಂವೇದಿಯಾದ ಓದುಗ ಗ್ರಹಿಸಿಕೊಳ್ಳುತ್ತಾನೆ.

ಈ ವಾದಕ್ಕೆ ಯಾವ ಸಿದ್ಧಾಂತವು ಬೇಕಾಗಿಲ್ಲ. ಆದರೆ ಸಾಹಿತ್ಯ ಪ್ರಕ್ರಿಯೆ ಮನಸ್ಸು ಮತ್ತು ಮಸ್ತಕಕ್ಕೆ ಸಂಬಂಧಿಸಿದ್ದು. ಬರೆವಣಿಗೆಯನ್ನು ಕುರಿತು ಹಿರಿಯ ಲೇಖಕರಾದ ಸುಧಾಕರ ಅವರು ಹೀಗೆ ಅರ್ಥೈಸಲಿಕ್ಕೆ ಪ್ರಯತ್ನಿಸುತ್ತಾರೆ : "ಹಾಲಿನ ಕೊಪ್ಪರಿಕೆಯಲ್ಲಿ ಹಾಕಿ ಬೆಲ್ಲ ಮಾಡುವಾಗ, ಕುದ್ದು ಕುದ್ದು ಉಕ್ಕಲು ಬರುತ್ತದೆ ಅದನ್ನ ಹಾಗೆಯೇ ಬಾನಿಗೆ ಸುರಿದರೆ ಬೆಲ್ಲ ಆಗುವುದೆ? ದೊಡ್ಡಕ್ಕಲು ಆದ ಮೇಲೆ ಸಣ್ಣುಕ್ಕಲು ಕುದಿಯುತ್ತಾ, ಗೆಜ್ಜೆಯಂತೆ ಇಲ್ಲಿ ಕೊತ ಕೊತ ಕುದಿಯುವಂತೆ ನಮ್ಮ ಅನುಭವಗಳು ಸಹ ತಲೆಯೊಳಗೆ ಹದಕ್ಕೆ ಬರಬೇಕು" ನಮ್ಮ ಆಡುನುಡಿಯಲ್ಲಿ ಒಂದು ಒಗಟನಿಟ್ಟು ಹೇಳಿದ ಈ ಮಾತು ಅನುಭವ ಜನ್ಯ. ಒಬ್ಬ ಬರಹಗಾರ ತನ್ನ ಮನಸ್ಸನ್ನು ದೃಷ್ಟಿಯನ್ನು ಸಮಾಜಕ್ಕೆ ತೆರೆದುಕೊಳ್ಳಬೇಕು. ಯಾರು ಜನರ ನಡುವೆ ಏಕಾಂತತೆ ಯನ್ನು ಪಡೆಯುತ್ತಾನೆ, ಏಕಾಂತದಲ್ಲಿ ಜನ ನಿಭಿಡ ಅನುಭವ ಪಡೆಯುತ್ತಾನೋ ಅವನೇ ನಿಜವಾದ ಲೇಖಕ. ಸಂವೇದನಾಶೀಲನಾದ ಅವನು 'ಕಿರಿಯದರಲ್ಲಿರಲಾರದೇ ಹಿರಿಯರ್ಥ' ಇದನ್ನ ಕರಗತ ಮಾಡಿಕೊಳ್ಳಬೇಕು. ಹೇಳಬೇಕಾದ್ದನ್ನು ಒಂದೇ ಒಂದು ಪದದಲ್ಲಿ ಹೇಳಿ ಬಿಡುವ ಸಾಮರ್ಥ್ಯ ಹೊಂದಬೇಕು. ಶಬ್ದಗಳ ಜೊತೆಗೆ ಆಟವಾಡಬೇಕು. ಈ ಅನುಭವದ ಲೇಖಕನಿಗೆ ಜೀವನಾನುಭವ ಅಥವಾ ಓದಿನಿಂದ ಲಭಿಸುತ್ತದೆ. ಯಾವ ವ್ಯಕ್ತಿಗೆ ತನ್ನ ಬಾಲ್ಯದ ಎಲ್ಲಾ ಘಟನೆಗಳು ಚೆನ್ನಾಗಿ ನೆನಪಿವೆಯೋ, ಯಾವ ವ್ಯಕ್ತಿ ಭಾಷೆಯ ಮೇಲೆ ಹಿಡಿತವನ್ನು ಹೊಂದಿಹನೋ, ಯಾವ ವ್ಯಕ್ತಿಗೆ ಅಭಿವ್ಯಕ್ತಿಸುವ ಸಾಮರ್ಥ್ಯವಿದೆಯೋ ಅವನೊಬ್ಬ ಉತ್ತಮ ಲೇಖಕನಾಗಬಲ್ಲ. ಚಿನ್ನಿದಾಂಡು, ಗೋಲಿ-ಗಜ್ಜುಗ, ಮರಕೋತಿ, ಕಬ್ಬಡ್ಡಿ, ಬುಗರಿ, ಗುಡ್, ಗುಡ್, ಚನ್ನಕ್ಕಿ ಅಂಡೋಲ್ ಪಂಡೋಲ್, ಕಣ್ಣಾಮುಚ್ಚಾಲೆ, ಲಗೋರಿಯಂಥ ಪಕ್ಕಾ ಗ್ರಾಮೀಣ ಆಟಗಳು ಏನೆಲ್ಲಾ ಕಲಿಸಿಲ್ಲ ನಮಗೆ.

ಯಾವ ನಿಯಮವಿಲ್ಲದೆ ಕಬ್ಬಡಿಯಾಡುವವನು ಚಂದ್ರನ ಬೆಳಕಲ್ಲಿ ಒಲಿಯೊಳಗಿನ ಬೂದಿಯನ್ನು ತಂದು ಅಡ್ಡಗೆರೆ ಹಾಕಿ ಇಡಿ ಅರ್ಧ ಊರು ತಲುಪುವವರೆಗೆ ಬೆನ್ನಟ್ಟಿ ಓಡುವವನಿಗೆ ಯಾವ ನಿಯಮ? ಹಾಗೆಯೇ ಕವಿ ಬಯಲು ಆಲಯದೊಳಗೆ ಪ್ರೇರೇಪಿತನಾಗಿ ಬರೆಯುವ ಕಿಚ್ಚನ್ನ ಎದೆಯೊಳಗಿಟ್ಟು ಬರೆಯುತ್ತಾನೆ. ಬರೆಯುವಾಗ ಕವಿ ತನ್ನೊಳಗಿನ ಒತ್ತಡವನ್ನ ಕಡಿಮೆಮಾಡಿಕೊಳ್ಳಲು ತವಕಿಸುತ್ತಾನೆ ವಿನಃ ನಾನು ಈ ಸಿದ್ಧಾಂತಕ್ಕೆ ಬದ್ಧನಾಗಿದ್ದೇನೆ ನನ್ನ ಬರವಣಿಗೆ ಇಟ್ಟಿಗೆ ಕೊಯ್ಯುವ ಪೆಟ್ಟಿಗೆಯಲ್ಲಿ ಮಣ್ಣು ಹಾಕಿ ತೀಡಿದಂತೆ ಒಂದು ಚೌಕಟ್ಟಿನೊಳಗೆ ಎರಕ ಹೊಯ್ಯುತ್ತೇನೆಂದು ಅಂದುಕೊಳ್ಳಲಾರ.

ವಾಸ್ತವವಾಗಿ ಬರವಣಿಗೆ ಒಂದು ಬದ್ಧತೆಯನ್ನು ಪಡೆದುಕೊಂಡಿರುತ್ತದೆ, ಕವಿಯ ಆಲೋಚನಾಕ್ರಮ ಯಾವುದೆಂದು ಓದುಗ ಯಾವುದೇ ಅಡೆತಡೆಯೂ ಇಲ್ಲದೆ ಗುರುತಿಸಿ ಬಿಡುತ್ತಾನೆ. ಆದರೆ ಸಾಮಾನ್ಯ ಓದುಗ ಕೂದಲು ಸೀಳುವ ಕೆಲಸ ಮಾಡಲಾರ. ಆರ್.ಜಿ. ರೀಜ್ ಹೇಳಿದಂತೆ ಯಾವುದು ಸಾಹಿತ್ಯ ಎಂಬುದನ್ನು ಸುಲಭವಾಗಿ ಸಾಮಾನ್ಯ ಓದುಗ ಗುರುತಿಸಬಲ್ಲ. ಉದಾಹರಣೆಗೆ-ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಆಗಲಿ, ರವೀಂದ್ರನಾಥ ಟಾಗೋರ್‌ರವರ ಗೀತಾಂಜಲಿ ಯಾಗಲಿ ಮಾಸ್ತಿಯವರ ಕಾದಂಬರಿಗಳು, ಡಿ.ವಿ.ಜಿ. ಯವರ ಮಂಕುತಿಮ್ಮನ ಕಗ್ಗ. ಬಾಣಭಟ್ಟನ ಕಾದಂಬರಿ ಸಂಚಿಹೊನ್ನಮ್ಮನ-ಹದಿಬದೆಯಧರ್ಮ, ಪಂಪಕವಿಯ ವಿಕ್ರಮಾರ್ಜುನ ವಿಜಯ. ಹೀಗೆ ಆಯಾ ಕಾಲಘಟ್ಟದಲ್ಲಿ ಆಗಿಹೋದ ಕವಿ-ಸಾಹಿತಿಗಳ ಕೃತಿಗಳು ಆಯಾ ಕಾಲದ ಬದುಕಿನ ಯಥಾವತ್ತು ಚಿತ್ರಣಗಳ ಸಮ್ಮಿಶ್ರಣವಾಗಿರುತ್ತದೆ. ಸೊಫೋಕ್ಲಸ್, ಯೂರಿಪಿಡಿಸ್ ಬರೆದ ರುದ್ರನಾಟಕಗಳು ಇವತ್ತಿಗೂ ಯಾಕೆ ಪ್ರಸ್ತುತವಾಗಿವೆ ಎಂದರೆ ಸಾಮಾಜಿಕ ಬದುಕಿನ ಒಳಸುಳಿಗಳ ಯಥಾವತ್ತಾದ ವಿವರಣೆಗಳು ಈ ನಾಟಕಗಳು ಕಟ್ಟಿಕೊಡುವುದರಿಂದ ಇವತ್ತಿನ ಓದುಗ ಸೊಫೊಕ್ಲಸ್‌ನನ್ನು ಓದಿದಾಗೊಮ್ಮೆ ಪುಳುಕಿತನಾಗುತ್ತಾನೆ. ಇಲ್ಲಿ ಯಾವ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ ಎಂಬುದು ಮುಖ್ಯವಾಗುವುದಿಲ್ಲ ಓದುಗನಿಗೆ ರಚನಾವಾದವಾಗಲಿ-ರಚನೋತ್ತರವಾದ, ಮಾರ್ಕ್ಸವಾದ ? ಕಲೆಗಾಗಿ ಕಲೆ ಎಂಬ ಸಿದ್ಧಾಂತ, ಭರತ ಮುನಿಯ ನಾಟ್ಯಶಾಸ್ತ್ರ.

ಅರಿಸ್ಟಾಟಲ್‌ನ ಪೊಯಟಿಕ್ಸ್ ಓದಿದ ಅನುಭವ ಇರುವುದಿಲ್ಲ ಅವನು ಅಲ್ಲಮನ ವಚನಗಳನ್ನು ಓದಿದಂತೆಯೇ -ಸರ್ವಜ್ಞನ, ಜಾನಪದಸಾಹಿತ್ಯವನ್ನು ಓದಿ ಜೀರ್ಣಿಸಿಕೊಳ್ಳಬಲ್ಲ ನವ್ಯ-ನವೋದಯ, ದಲಿತ-ಬಂಡಾಯದ ಕವಿಗಳನ್ನು ಸಹ ಓದಿ ತಿಳಿದುಕೊಳ್ಳಬಲ್ಲ. ಇಲ್ಲಿ ಎರಡು ಸಾಧ್ಯಗಳು ಸ್ಪಷ್ಟವಾಗುತ್ತವೆ. ಲೇಖಕ

ತನ್ನ ಪಾಡಿಗೆ ತಾನು ಬರೆಯುತ್ತಾನೆ. ವಿಮರ್ಶಕ ಅದನ್ನು ತನ್ನ ಅನುಭವದ ಹಿನ್ನೆಲೆಯಲ್ಲಿ ವಿಮರ್ಶಿಸುತ್ತಾನೆ. ಕಂಡುಕೊಂಡ ಬರವಣಿಗೆಯ ಸತ್ಯಕ್ಕೂ ಸಾಮಾನ್ಯ ಓದುಗ ಕಂಡುಕೊಂಡ ಕೃತಿಯೊಳಗಿನ ಸತ್ಯಕ್ಕೂ ಒಂದು ಸ್ಕೇಲನ್ನು ಅಥವಾ ಬಟ್ಟೆ ಅಳೆಯುವ ಟೇಪು, ಮೀಟರನ್ನ ಇಟ್ಟುಕೊಂಡು ಅಳೆಯಲು ಹೊರಟಿರುವ ವಿಮರ್ಶಕ ಪ್ರತಿಪಾದಿಸಲು ಹೊರಟಿರುವ ಸತ್ಯ ವಿಭಿನ್ನ ನೆಲೆಗಳಿಂದ ಕೂಡಿರುತ್ತದೆ.

❈ ❈ ❈ ❈ ❈

ಲೇಖಕ-ಕೃತಿ
ಓದುಗ - ವಿಮರ್ಶಕ

ಈಗಾಗಲೆ ಲಿಂಬಾಳೆಯವರ 'ಅಕ್ರಮಸಂತಾನ' ನಮ್ಮ ನಡುವಿನ ಘಾಟು ಅಂತಿರೋ ? ಇಲ್ಲ ಕಠಿಣ ಅಂತಿರೋ- ಯಾವುದೋ ಒಂದು ಸತ್ಯವನ್ನು ಸ್ಪಷ್ಟವಾಗಿ ಹೊರಹಾಕಿದೆ. ವಿಮರ್ಶೆಯ ದೃಷ್ಟಿಕೋನ ಇಲ್ಲದೆ ಓದಿದ ನಾನು ಶರಣುಕುಮಾರರ ಎದೆಯೊಳಗಿನ ಬೇಗುದಿಯನ್ನು ಅರಿಯಲು ಮತ್ತು ಪ್ರಶಂಶಿಸಲು ಸಾಧ್ಯವಾಯಿತು. ಆ ಕೃತಿಯನ್ನು ಒಂದು ಕೃತಿಯಾಗಿ ಯಾವ ವಾದಕ್ಕೂ ಸಮೀಕರಿಸದೆ ಕೃತಿಯನ್ನಾಗಿ ಓದಿದರಿಂದ ಹೆಚ್ಚು ಅಪ್ಯಾಯಮಾನವಾಯ್ತು ನನ್ನ ಓದು. ಮಿಲ್ಟನ್ ಕವಿಯ ಬಗ್ಗೆ ಪೂರ್ವಗ್ರಹಪೀಡಿತನಾದ ಡಾ.ಜಾನ್‌ಸನ್, ಏರಿಯೋಪೆಗಾಟಿಕದಿಂದ-ಪ್ಯಾರಡೈಸ್‌ಲಾಸ್ಟ್‌ವರೆಗೂ ಅನುಮಾನದ ದೃಷ್ಟಿಯಿಂದಲೇ ನೋಡಿ ಅವನ ಬರವಣಿಗೆಯ ಮೇಲೆ ಧಾಳಿಮಾಡುತ್ತಾನೆ. ಹೀಗೆ ಪೂರ್ವಗ್ರಹಪೀಡಿತರಾದ ವಿಮರ್ಶಕರಿಂದ ಯಾವ ಕೃತಿಗೂ ನ್ಯಾಯದೊರೆಯದು. ಇವತ್ತಿನ ಜಗತ್ತಿನಲ್ಲಿ ಒಂದು ಕೃತಿಯ ಪ್ರತಿಷ್ಠೆಯನ್ನು ಯಾವ ಮಾನದಂಡದ ಮೇಲೆ ಅಳೆಯಲಾಗುತ್ತಿದೆ, ಯಾರು ನಿಜವಾಗಿಯು ಶ್ರೇಷ್ಠ ಕೃತಿಯನ್ನು ರಚಿಸಿದ್ದಾರೆ ? ಎಂದೆಲ್ಲಾ ಪ್ರಶ್ನೆಗಳಿಗೆ ಉತ್ತರಕೊಡುವವರು ವಿಮರ್ಶಕರು, ಅವರು ಯಾವ ಮಾನದಂಡವನ್ನು ಇಟ್ಟುಕೊಂಡು ಕೃತಿಯನ್ನು ವಿಮರ್ಶಿಸುತ್ತಾರೆ ಮತ್ತು ಆ ಕೃತಿ ಶ್ರೇಷ್ಠವೆನಿಸಿಕೊಳ್ಳುತ್ತದೆ. ಚಾಸರ್ ಬರೆದ ಕ್ಯಾಂಟರ್‌ಬರಿಟೇಲ್ ಆಗಲಿ, ಪಂಪಕವಿಯ ಕೃತಿಗಳು, ಕಾಳಿದಾಸ, ಭಾಸನ ನಾಟಕಗಳು ವಿಲಿಯಂ ಶೇಕ್ಸ್‌ಪಿಯರನ ನಾಟಕಗಳು ಯಾವ ವಿಮರ್ಶೆಗಳಿಗೂ ಒಳಗಾಗದ ಭೂಮಿಯೊಳಗಿನ ಚಿನ್ನದಂತೆ ಪ್ರಖರಿಸಲಿಲ್ಲವೆ ? ಕಾಲ ಬದಲಾದಂತೆ ವಿಚಾರಗಳು ಬದಲಾದವು. ಚಿಂತನೆಗಳು ಬದಲಾದವು-ಸಿದ್ಧಾಂತಗಳು ಹುಟ್ಟಿಕೊಂಡವು. ಆದರೆ ಅವ್ಯಾವು ಹೊಸದಾಗಿ ಹೇಳಿದ್ದಲ್ಲ. ಹಳೆಯದನ್ನೇ ಪುನರುಚ್ಚರಿಸಲಾಗಿದೆ. ಆದರೆ ಸಿದ್ಧಾಂತಗಳು ಒಂದು ಕೃತಿಯ ರಚನೆಗೆ ಮತ್ತು ಕೃತಿಕಾರನಿಗೆ ಎಷ್ಟು ಉಪಯೋಗವಾದೀತು. ಮಾರ್ಕ್ಸವಾದ ಪ್ರಚಲಿತದಲ್ಲಿದ್ದಾಗ, ಲೋಹಿಯಾ ಮತ್ತು ಅಂಬೇಡ್ಕರ್ ಅವರ ಸಿದ್ಧಾಂತಗಳು ಪ್ರಚಲಿತದಲ್ಲಿದ್ದಾಗ ಅವುಗಳನ್ನು ಓದಿಯೋ ಓದದೆಯೋ ಅವುಗಳ

ಆಶಯಕ್ಕನುಗುಣವಾಗಿ ಬರೆದ ಕೃತಿಗಳು ಆ ವಾದದ ಪ್ರತಿಪಾದಕತ್ವದ ಗುಣಗಳನ್ನು ಹೊಂದಿರುತ್ತವೆ. ಎಂ.ಕೆ. ಇಂದಿರಾ ಬರೆಯುವ ಸಂದರ್ಭದಲ್ಲಿ ಯಾವ ಮಹಿಳಾವಾದಿ ಸಾಹಿತ್ಯ ಹುಟ್ಟಿಕೊಂಡಿರಲಿಲ್ಲ. ಅಕ್ಕಮಹಾದೇವಿ ಬರೆಯುವಾಗ ಮಹಿಳಾವಾದದ ಹೆಸರೇ ಇರಲಿಲ್ಲ. ಆದರೆ ಅವರ ಬರವಣಿಗೆಯ ಹರಿವು ಮತ್ತು ವಿಸ್ತೃತಿ ಮಹಿಳಾವಾದದ ಆಶಯವನ್ನು ತಮ್ಮೊಡಲೊಳಗೆ ಬಚ್ಚಿಟ್ಟು ಸತ್ಯದಂತೆ ಇಟ್ಟುಕೊಂಡಿರಲಿಲ್ಲವೆ. ಸಾವಿರಾರು ವರುಷಗಳಿಂದ ವೈಧವ್ಯವನ್ನು ಆಚರಿಸುತ್ತಾ ತನ್ನ ಅನುಕೂಲಸಿಂಧುತ್ವವನ್ನು ಸಾಧಿಸಿಕೊಂಡ ಬ್ರಾಹ್ಮಣ ಪುರಷವರ್ಗ ಅವಿರತವಾಗಿ ಮಹಿಳೆಯ ಮೇಲೆ ಹಿಡಿತವನ್ನು ಸಾಧಿಸುತ್ತ ಶೋಷಣೆ ಮಾಡುತ್ತ ಮನು ಹೇಳಿದ "ನ ಸ್ತ್ರೀಸ್ವಾತಂತ್ರ್ಯಂ ಅರ್ಹತಿ" ಎಂದು ಹೇಳಿದ ಮಾತನ್ನು ಚಾಚುತಪ್ಪದೆ ಪಾಲಿಸುತ್ತ ಹೆಣ್ಣಿನ ದೌರ್ಬಲ್ಯವನ್ನು ಬಂಡವಾಳವನ್ನಾಗಿ ಮಾಡಿಕೊಂಡು ಅಮಾನವೀಯವಾಗಿ ನಡೆದುಕೊಂಡದ್ದು ಇತಿಹಾಸ. ಭಾರತದೇಶದ ಸನ್ನಿವೇಶದಲ್ಲಿ ಮಹಿಳೆ ಮತ್ತು ದಲಿತರು ಅನುಭವಿಸಿದ ನೋವು ಸಂಕಷ್ಟ ಮತ್ಯಾರು ಅನುಭವಿಸಿಲ್ಲ. ಆ ಎಲ್ಲಾ ಹೆಣ್ಣುಗಳ ನೋವಿನ ಪ್ರತೀಕವೆಂಬಂತೆ, ಫಣಿಯಮ್ಮ, ಗಿರಿಬಾಲೆ, ಸದಾನಂದ, ಗೆಜ್ಜೆಪೂಜೆಯಂತ ಕೃತಿಗಳನ್ನು ಇಂದಿರಾ ಬರೆದಿದ್ದಾರೆ. ಸ್ತ್ರೀವಾದದ ಪರಿಕಲ್ಪನೆಯೇ ಇಲ್ಲದೆ, ಈ ಸ್ತ್ರೀವಾದದ ಪರಿಕಲ್ಪನೆ ತೀರ ಇತ್ತೀಚಿನದು ಆದರೆ 12ನೇ ಶತಮಾನದಲ್ಲಿ ಜಗದ ಜಂಜಾಟವ ಜಗಜ್ಜಾಹಿರುಗೊಳಿಸಿದ ಶರಣೆ ಅಕ್ಕಮಹಾದೇವಿ ಮತ್ತು ಅವರ ಸಮಕಾಲೀನ ವಚನಕಾರ್ತಿಯರು ಕಂಡದ್ದನ್ನು ಕಂಡಹಾಗೆ ಬರೆದರು. ಇಲ್ಲಿ ಸಿದ್ಧಾಂತದ ಪ್ರಶ್ನೆಯೇ ಬರುವುದಿಲ್ಲ. ಸಿದ್ಧಾಂತದ ಪ್ರಕಾರ ಯಾವುದೇ ಇದ್ದರೂ "ಬದುಕು ಸ್ತ್ರೀಯರದ್ದು" ಮಹಿಳೆಯರ ಬರವಣಿಗೆಯಲ್ಲಿ ಇದೆಲ್ಲವನ್ನು ನಾವು ಕಾಣಬಹುದು. ಲೇಖಕ ತನ್ನ ಕಾಲದ ಹಂಗನ್ನು ತೊರೆದು ಕಾಲಾತೀತವಾದ ವಿಚಾರಗಳನ್ನು ಕ್ರೋಢಿಕರಿಸುತ್ತಾನೆ- ಅರಿಸ್ಟಾಟಲ್, ಪ್ಲೇಟೋ, ಕುವೆಂಪು, ಶೇಕ್ಸ್‌ಪಿಯರ್ ಹೆಂಗ್‌ವೇ, ನಿರಂಜನ, ಬಸವರಾಜ ಕಟ್ಟೀಮನಿ... ಹೀಗೆ ಸಾವಿರಾರು ಲೇಖಕರು ಬದುಕಿರುವುದು ಕಾಲಾತೀತವಾದ ವಿಚಾರಗಳಿಂದಲೇ. ಟಿ.ಎಸ್. ಈಲಿಯಟ್ ಹೇಳುವಂತೆ ಕವಿ ವೈಯಕ್ತಿಕತೆಯನ್ನುಮೀರಿ ಬರೆಯುವುದೆ ನಿಜವಾದ ಸಾಹಿತ್ಯ. ನಮ್ಮ ವೈಯಕ್ತಿಕ ಅನುಭವಗಳಲ್ಲದೆ ಕಲ್ಪನೆಯಲ್ಲಿ ವಿಹರಿಸುತ್ತಾ ಊಹೆಯನ್ನೇ ಪ್ರಧಾನ ವಾಗಿಟ್ಟುಕೊಂಡು ಬರೆದರೆ ಅದು ಅಷ್ಟೊಂದು ಜನಾಕರ್ಷಣೆಯಾಗಲಾರದು. ಕಾಫ್ಕನ ಮೆಟಾಮಾರ್ಫಸಿಸ್ ಕತೆಯನ್ನು ವಾಸ್ತವ ಜಗತ್ತಿನ ಜಂಜಾಟವನ್ನೆಲ್ಲಾ ಆಧಾರವಾಗಿಟ್ಟುಕೊಂಡು ಈ ಬದುಕಿನ ಜಂಜಾಟವನ್ನು ಬಿಟ್ಟು ಮತ್ತೊಂದು ಬದುಕಿದ್ದರೆ ಹಾಯಾಗಿದ್ದು ಮತ್ತೆ ಮರಳಬಹುದಿತ್ತು. ಇದು ಕಾಲ್ಪನಿಕವೆನಿಸಿದರೂ

ಈ ಜಗತ್ತಿನ ಅತ್ಯಂತ ಶ್ರೇಷ್ಠ ಕತೆಗಳಲ್ಲೊಂದು. ಈ ವಾಸ್ತವಿಕ ನೆಲೆಗಟ್ಟನ್ನೇ ಪ್ರಧಾನ ಆಶಯವಾಗಿಟ್ಟು, ಬದುಕಿನೊಳಗೆ ಪ್ರವೇಶಿಸಿ ಅದರ ನಾನಾ ನಮೂನೆಯ ಕ್ರೌರ್ಯವನ್ನು ಯಾವುದೇ ಲೋಪವಿಲ್ಲದೆ ಬರೆದ ದಲಿತ-ಬಂಡಾಯ-ಮೊದಲು ಆಕರ್ಷಿಸಿದ್ದಕ್ಕಿಂತ ತಿರಸ್ಕರಿಸಲ್ಪಟ್ಟಿತ್ತು. ಆಗಲೂ ಕೆಲಮಂದಿ ಪಂಡಿತರಿಗೆ ಈ ದಲಿತ ಸಾಹಿತ್ಯಾನೂ ಒಂದು ಪ್ರಕಾರನಾ ? ಎನ್ನುವ ಅನುಮಾನವಿದೆ.

"ಏನ್ರೀ ಅದು, ತಮ್ಮ ಕೇರಿಜನರ ಬದುಕನ್ನು, ತಮ್ಮ ತಾಂಡದ ಜನರ ಕುರಿತು ಪುಟಗಟ್ಟಲೇ ಬರಿದು ಪ್ರಕಟಿಸಿಬಿಟ್ರೆ ಆಯ್ತಾ? ಬರಹಗಾರ ತನ್ನ ಅನುಭವವನ್ನು ಕೇಂದ್ರಿಕರಿಸಿ, ಪರಿಪಕ್ವವಾದ ಅನಂತರ ಅದರಿಂದ ಹೊರಬಂದು ಬರೆಯಲು ಆರಂಭಿಸುತ್ತಾನೆ. ಅನುಭವದಿಂದ ತಪ್ಪಿಸಿಕೊಂಡು, ವೈಯಕ್ತಿಕತೆಯನ್ನು ಮೀರಿ ಸಾರ್ವತ್ರಿಕತೆಯ ಆಶಯದೊಂದಿಗೆ ಬರೆಯುತ್ತಾನೆ. ಮರಾಠಿ ದಲಿತ ಆತ್ಮಕತೆಗಳಾದ ಅಕ್ರಮಸಂತಾನ, ಉಚಲ್ಯಾ-ಕೇಂದ್ರ ಸಾಹಿತ್ಯ ಪ್ರಶಸ್ತಿಯನ್ನು ಯಾಕೆ ಪಡ್ಕೊಂಡ್ವು ಅಂದ್ರೆ ಅವುಗಳಲ್ಲಿರುವ ಜಾಗತಿಕ ಗುಣಗಳಿಂದಾಗಿ. ಸಿದ್ದಲಿಂಗಯ್ಯನವರ, ಇಕ್ಕಲ್ರಾ, ಒದಿಲ್ರಾ, ವಾಚ್ಯವಾಗಿದ್ದರೂ, ಸತ್ಯವನ್ನು ಭೇಧಿಸಿ ಹೊಸದೊಂದು ಸತ್ಯದ ಅನ್ವೇಷಣೆಯಾಗಿತ್ತು. ಎಷ್ಟೋ ಕಾಲಗಳಿಂದ ಪಂಡಿತರು ನಂಬಿಕೊಂಡು ಬಂದಿದ್ದ ಕಾವ್ಯದ ಪರಿಕಲ್ಪನೆ ಹುಸಿಯಾಗಿತ್ತು. ಕಾವ್ಯವನ್ನೇಕೆ ಅಟ್ಟದ ಮೇಲಿಟ್ಟ ಪೆಟಾರಿಯೊಳಗಣ ಚಿನ್ನಕ್ಕೆ ಕೊಡುವ ಸ್ಥಾನಮಾನ ಮತ್ತು ಸಾಹಿತ್ಯದ ಇತರೆ ಪ್ರಕಾರಗಳಿಗೆ ಮನೆಹೊರಗಿನ ಒಂದು ಸಣ್ಣಗೂಡಿನ ಸ್ಥಾನಮಾನ? ಅದರಲ್ಲೂ ಪಟ್ಟಭದ್ರ ಹಿತಾಸಕ್ತಿ ಹೊಂದಿರುವ, ಶತಮಾನಗಳಿಂದಲೂ, ಕಾವ್ಯವೆಂದರೆ ಅದೊಂದು ಚೌಕಟ್ಟು, ಹಾಕಿ, ಹೀಗೆ ಇರಬೇಕು ಎಂದು ಕೆಲವು ಜನಪಂಡಿತರು ನಂಬಿದ್ದರು. ಬಹುಶಃ ಟಿ.ಎಸ್. ಇಲಿಯಟ್, ಡಬ್ಲು, ಬಿ.ಯೇಟ್ಸ್, ಜೇಮ್ಸ್ ಜಾಯ್ಸ್ ಮುಂತಾದ ಕವಿಗಳು ಶಾಸ್ತ್ರೀಯ-ನೈಜವಾದವನ್ನು ನಂಬಿದ್ದರು.

ಅವರಿಗೆ ಕಾವ್ಯವೆಂದರೆ ಒಂದು ನಿರ್ದಿಷ್ಟವಾದ ರೂಪವನ್ನು ಅಥವಾ ಸಿದ್ಧಮಾದರಿಯನ್ನು ಹೊಂದಿತ್ತು. "ಆಧುನಿಕೋತ್ತರವಾದ" ನಂಬಿದ ಪ್ರತಿಯೊಬ್ಬ ಬರಹಗಾರನೂ ಸಂರಚನಾಸಿದ್ಧಾಂತವನ್ನು ಸಂಪೂರ್ಣವಾಗಿ ನಿರಾಕರಿಸಿದ್ದಾರೆ. ಹಾಗೂ ಸಂರಚನೋತ್ತರವಾದವನ್ನು ನಂಬಿರುವಂತೆ ಕನ್ನಡ ಭಾಷೆ ಸಂದರ್ಭದಲ್ಲಿ ಈ ಎಲ್ಲಾ ಪ್ರಕ್ರಿಯೆಗಳು ನಡೆಯುತ್ತಲೆ ಇರುತ್ತವೆ. ಬಂಡಾಯ-ಕವಿಗಳು "ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ" ಎನ್ನುವವರಿಗೆ ಡಾ. ಸಿದ್ದಲಿಂಗಯ್ಯ "ಇಕ್ಕಲ್ರಾ, ಒದಿಲ್ರಾ ಆ ನನ್ನ ಮಕ್ಕಳ ಚರ್ಮ ಎಬ್ರಲಾ" ಎಂದು ಬರೆಯುವವರೆಗೂ ಕರ್ನಾಟಕದಲ್ಲಿ ಕಾವ್ಯ ಮಡಿಯಾಗಿತ್ತು. ದಲಿತ-ಶೂದ್ರಾದಿ-

ಮುಸ್ಲಿಂ-ಕ್ರಿಶ್ಚಿಯನ್ ಕವಿಗಳು ಪದ್ಯವನ್ನು ಮುಟ್ಟಿದೊಡನೆ ಮೈಲುಗೆಯಾಗಿ ಹೋಯಿತು ಎಂದು ಕೆಲವರು ಬೊಬ್ಬೆಹಾಕಿದರು. ಕೆ.ವಿ. ಪುಟ್ಟಪ್ಪನವರು ಕಾವ್ಯವನ್ನು ಬರೆದಾಗಲೆ ಆ ಶೂದ್ರಕವಿದೂ ಕಾವ್ಯನಾ ಎಂದು ಅಗ್ರಹಾರಗಳಲ್ಲಿ ಚರ್ಚೆಗಳಾಗಿದ್ದುಂಟು. ಇವತ್ತಿಗೂ ಆ ಮಡಿವಂತಿಕೆಯನ್ನು ಹಾಗೆಯೇ ಕಾಪಾಡಿಕೊಂಡು ಬರಲಾಗಿದೆ. ಈ ಭಾವಗೀತೆ ಹಾಡುವ ಗಾಯಕರು ದುರಾದೃಷ್ಟವಶಾತ್ ನಾಲ್ಕು ಶಾಸ್ತ್ರೀಯ ಪಂಕ್ತಿಗಳನ್ನುಚ್ಚರಿಸಿ, ತಾವೇ ಗಂಧರ್ವರ ತುಂಡುಗಳೆಂದುಕೊಂಡು ಕೆಲವೇ ಕೆಲವು ಕವಿಗಳ ಹಾಡುಗಳನ್ನು ಮಾತ್ರ ಸ್ಪರ್ಶಿಸಿ ಉಸುರುತ್ತಾರೆ. ಅವರಿಗೆ, ಬೇಂದ್ರೆ, ವೆಂಕಟೇಶಮೂರ್ತಿ ಲಕ್ಷ್ಮೀನಾರಾಯಣ್ ಭಟ್ಟ, ಕಾಯ್ಕಿಣಿ, ಬಿ.ಆರ್. ಲಕ್ಷ್ಮಣ್‌ರಾವ್ ಇಂತಹವರೆ ಕೆಲವು ಜನರು ಕವಿಗಳಾಗಿ ಕಾಣುವುದು. ಪುಟ್ಟಪ್ಪನವರು ಇತಿಹಾಸವನ್ನೇ ನಿರ್ಮಿಸಿದರು. ಅವರ ಹಾಡುಗಳನ್ನು ಹಾಡದಿದ್ದರೆ ಉಳಿಗಾಲವಿಲ್ಲವೆಂದು ಹಾಡುತ್ತಾರೆ ವಿನಃ ಮನಃಪೂರ್ವಕ ಹಾಡುವುದಿಲ್ಲ. ಕಾವ್ಯವನ್ನು ಓದುವಾಗ ಹಾಡುವಾಗಲೂ ಮನಸ್ಸಿನ ಮೈಲಿಗೆ ಮಾಡಿಕೊಳ್ಳುವ ಮಂದಿ 21ನೇ ಶತಮಾನದಲ್ಲಿ ಇದ್ದಾರೆ. ಯಾಕೆಂದರೆ, ಶತಕಗಳಿಂದಲೂ ಅಕ್ಷರವಂತರು ಮತ್ತೊಂದು ವರಸೆಗೆ ಕೈ ಹಚ್ಚಿರುತ್ತಾರೆ. ಯಾವುದನ್ನು ವರ್ಜ್ಯ ಎಂದುಕೊಂಡು ಬರುತ್ತಿದ್ದಾರೋ ಆ ರಂಗಗಳಲ್ಲಿ ರಾಜಕೀಯ ಶುರುಮಾಡಿದ್ದಾರೆ. ನಾಟಕ, ಯಕ್ಷಗಾನ, ಜನಪದಕಲೆಗಳು, ಚರ್ಮವಾದ್ಯಗಳು, ಸಿನಿಮಾ ಮುಂತಾದ ಪ್ರದರ್ಶನಕಲೆಗಳು ಕೆಳವರ್ಗದ ಜನರಿಗೆ ಮೀಸಲು ಎಂದುಕೊಳ್ಳಲಾಗಿತ್ತು. ನೃತ್ಯ ಬಹಳ ಹಿಂದಿನಿಂದಲೂ ದೇವಾಲಯದಲ್ಲಿ ದೇವರಿಗೆ ಮೀಸಲಿಟ್ಟ ಕೆಳವರ್ಗದ ಹೆಣ್ಣುಗಳನ್ನು ವೈಭವೀಕರಿಸಲು ಮುಡಿಪಾಗಿಡಲಾಗಿತ್ತು. ಇಂದು, ಅದೊಂದು ಶಾಸ್ತ್ರೀಯ ಚೌಕಟ್ಟು ಪಡೆದು ದೇಶ ವಿದೇಶ ಸುತ್ತಲು-ಹಣಗಳಿಕೆಯ ಸುಲಭದಾರಿಯಾಗಿದೆ. ಹಾಗಾದರೆ-ಯಾವುದು ವೇದ-ಯಾವುದು ಸಿದ್ಧಾಂತ ? ಈ ನಿಯಮಗಳ ಬಗ್ಗೆ ಮಾತನಾಡುವವನೆ ಮೊದಲು ಗೊಂದಲದಲ್ಲಿ ಸಿಲುಕಿರುತ್ತಾನೆ.

ಹೂವು-ಕಾಡು-ನೋಡುವುದಕ್ಕಿಂತ ಮೊದಲು ಕವಿ ತನ್ನ ಸುತ್ತಲ ಬದುಕಿನ ವಿಕೃತ ಸ್ವರೂಪವನ್ನು ನೋಡಿ ಬೆರಗಾಗುತ್ತಾನೆ ಅವನಿಗೆ ಇದು ಬಹು ಮುಖ್ಯ ಅನಿಸುತ್ತೆ. ಅಮೂರ್ತಕ್ಕಿಂತ ಮೂರ್ತವೆ ಮುಖ್ಯ ವಿಷಯವಾಗುತ್ತದೆ. ಅಲ್ಲಮ-ಬಸವ-ಅಕ್ಕಮಹಾದೇವಿ ಮುಂತಾದ ಚಳುವಳಿಗಾರರಿಗೆ ಕಾಯಕ ಹೇಗೆ ಸಂಕೇತವಾಯ್ತೊ ಹಾಗೆ ಬಂಡಾಯ-ದಲಿತ ಕವಿಗಳಿಗೆ 'ಬದುಕು' ಸಂಕೇತವಾಗುತ್ತದೆ. ಇವರಿಗೆ ಪುರಾಣವಾಗಲಿ-ಮಹಾಪುರಾಣವಾಗಲಿ ಮುಖ್ಯವಾಗುತ್ತದೆ. ವಾಸ್ತವ ಜಗತ್ತಿನ

ಉಸಿರುಳ್ಳಿನ ಹೆಚ್ಚು ಕಾಡುತ್ತದೆ ಅಮೂರ್ತ ಜಗತ್ತಿನ ಪರಿಕರಗಳು-ಪರಿಕಲ್ಪನೆಗಳು ಇಹದ ಎದುರಿಗೆ ಸಪ್ಪೆ ಎನಿಸುತ್ತದೆ. ಉದಾಹರಣೆಗೆ ಇಂದ್ರನ ಒಡ್ಡೋಲಗದ ಕಲ್ಪನೆಯಾಗಬಹುದು. ರಂಭ-ಮೇನಕೆಯಾದಿ ಅಪ್ಸರೆಯರು ಸೋಮರಸದೊಂದಿಗೆ ಪಾನ ಮತ್ತರಾಗಿರುವ ದೇವತೆಗಳಿಗೆ ಮನೋರಂಜಿಸುವ ದೃಶ್ಯ ಕಣ್ಣೆದುರಿಗೆ ಕಟ್ಟುವುದಿಲ್ಲ. ಏಕೆಂದರೆ ನಾವ್ಯಾರು ಇಂದ್ರನ ಒಡ್ಡೋಲಗದಲ್ಲಿ ಭಾಗವಹಿಸಿಲ್ಲವಲ್ಲಾ. ಇದು ಚಿಕ್ಕ ಮಕ್ಕಳನ್ನು ರಂಜಿಸುವ ಕತೆಯಾಗಬಹುದೆ ವಿನಃ ಸಾಹಿತ್ಯವಾಗಲಾರದು. ಜೀವನದ ಅನುಭವ ಹೊಂದಿರದ ವ್ಯಕ್ತಿ ಹೇಗೆ ತಾನೆ ಜೀವನದ ಕುರಿತು ಬರೆಯಬಲ್ಲ. ಹಸಿವಿನಿಂದ ಕಂಗೆಟ್ಟು ಊಟಕ್ಕಾಗಿ ಕ್ಷಣಗಣನೆ ಮಾಡಿದವನು ಹಸಿವನ್ನು ವೈಭವೀಕರಿಸುವುದಿಲ್ಲ. ಬಡತನವನ್ನು ವೈಭವೀಕರಿಸದೆ ಬರೆದ ಕಾರ್ಲ್‌ಮಾರ್ಕ್ಸ್ ಇವತ್ತು ಪ್ರಸ್ತುತವಾಗುವುದು ಇದೇ ಕಾರಣಕ್ಕೆ. ಹಾಗೆಯೇ ಸಿದ್ಧಾಂತಗಳು ವಾದಗಳು ಕೂಡ.

❄ ❄ ❄ ❄ ❄

ಕನಕದಾಸರು-ನನಗೆ ತೋಚಿದಷ್ಟು

ಕನಕ ವ್ಯವಸ್ಥೆಯನ್ನು ವಿರೋಧಿಸಿದ ಮೊದಲ ಬಂಡಾಯಗಾರ. 21ನೇ ಶತಮಾನದಲ್ಲಿ ಏನೆಲ್ಲಾ ಬದಲಾವಣೆಗಳನ್ನು ಕಂಡುಕೊಂಡು ಮನುಷ್ಯ, ಕಂಪ್ಯೂಟರ್, ಇ-ಕಾಮರ್ಸ್, ಇ-ಬ್ಯಾಕಿಂಗ್ ಪಡ್ಕೊಂಡವರು ಸಾವಿನಲ್ಲಿ-ಒಂದಾಗುವ ಜನ, ಸುನಾಮಿ ಭೂಕಂಪದಲ್ಲಿ ಗಾಳಿಯಲ್ಲೆದ್ದ ಅಲೆಗಳು ಮನೆಮಠಗಳನ್ನೆ ಇಲ್ಲವಾಗಿಸಿದರೂ ಮನುಷ್ಯನ ಎದೆಯೊಳಗೆ ಅವಿತುಕೊಂಡಿರುವ ಜಾತಿ ಭೂತ ನಾಶವಾಗಲಿಲ್ಲ. ಇನ್ನೂ ಐದಾರು ವರ್ಷಗಳ ಹಿಂದಿನ ಪರಿಸ್ಥಿತಿ ಹೇಗಿದ್ದಿರಬಹುದು.

"ಬೋಕಿಯೊಳಗೆ ಮೂರು ಲೋಕ ಹುಟ್ಟಿತು
ಆ ಕುಲ ಈ ಕುಲ ಎಲ್ಲಿತ್ತು
ಬಲ್ಲವರಿದ್ದರೆ ತಿಳಿದು ಹೇಳಿರಿ
ಮುಲ್ಲಾನ ಮಸೀದಿ ಎಲ್ಲಿತ್ತು"

ಶರೀಫ ಸಾಹೇಬರು ಕೇಳುವ ಮಾತಿದು. ಭಾರತದ ವ್ಯವಸ್ಥೆ ಸಂಕೀರ್ಣವಾದದ್ದು. ಶತಮಾನಗಳಿಂದಲೂ ಅಸಮಾನತೆ, ಅಸ್ಪೃಶ್ಯತೆ, ಮೂಢನಂಬಿಕೆಯಂತಹ ಹಲವು ಪೀಡೆಗಳು ಕಾಡುತ್ತಲೆ ಬಂದಿವೆ. 12ನೇ ಶತಮಾನದಲ್ಲಿ ಬಂದ ಶಿವಶರಣರು ಅಂದಿನ ಬದುಕಿಗೊಂದು ಹೊಸಕಲ್ಪನೆಯನ್ನು ಕೊಡಲು ಹೊರಟಾಗ ಪಟ್ಟಭದ್ರ ಹಿತಾಸಕ್ತಿಗಳು ಅದಕ್ಕೆ ಬಲವಾದ ಕೊಡಲಿ ಪೆಟ್ಟನ್ನು ಕೊಟ್ಟಿರುವುದು ನಮ್ಮ ಕಣ್ಣೆದಿರಿಗಿರುವ ಸತ್ಯ. ದೊರೆ ಬಿಜ್ಜಳ ಕೋಪದಿಂದ ಕಿಡಿಕಾರುವ ತನ್ನ ಮಗನಿಗೆ ಹೀಗೆ ಸಮಾಧಾನ ಪಡಿಸುತ್ತಾನೆ.

ಜಾತಿ-ಮನುಷ್ಯ ಮೈ ಚರ್ಮಸುಲಿದು
ಹೋಯಿತು. ಜಾತಿ ಎಂದರೆ ಹೋದಿತೆ
ಅದು ಶತಮಾನಗಳಿಂದಲೂ ನಮ್ಮ ರಕ್ತದೊಳಗೆ ಬೆರೆತು ಹೋಗಿದೆ.

ಶರಣರದಕ್ಕೇ ಯಾವ ಶಾಶ್ವತ ಪರಿಹಾರ ಹುಡುಕಿ ಕೊಡಲಿಲ್ಲಾ, ಅಂತಹದ್ದರಲ್ಲಿ ಕನಕದಾಸರನ್ನು ಏಕಮುಖಿಯಾದ ಸಮಾಜ ಒಪ್ಪಿಕೊಂಡೀತೆ. ಕನಕರಂತಹ ಸಾತ್ವಿಕ

ಸಾಧುಗಳಿಂದ ನೋಡಬೇಕಾಗಿರುವುದು ಅನಿವಾರ್ಯವಾಗಿದೆ. ಇವತ್ತು ಎದ್ದಿರುವ ಗೋಪುರದ ವಿವಾದ ಪತ್ರಿಕೆಗಳು ವರದಿ ಮಾಡುತ್ತಲಿವೆ. ವಾದವಿವಾದಗಳು ನಡೆಯುತ್ತಲೆ ಇವೆ. ಪರ-ವಿರೋಧ ಏನೇ ಇದ್ದರು ಇಂದಿನ ಬಹುಮುಖಿ ಸಮಾಜದ ಆದರ್ಶರಾಗಿರುವ ಕನಕರು ಶೂದ್ರಾತಿ ಶೂದ್ರರಿಗೆ ಪ್ರಸ್ತುತರು.

ಕವಿ W.H. ಆಡೆಂ ತನ್ನ ಪದ್ಯದಲ್ಲಿ ಹೀಗೆ ಹೇಳುತ್ತಾನೆ "ಆ ನಗರದಲ್ಲಿ ನೋವಿಲ್ಲಾ ಸುಖ ಸಮೃದ್ಧಿ ತುಂಬಿದೆ" ಯಾವಾಗ ಬಂದೀತು ಅಂತಹದೊಂದು ಕಾಲ. ಜಾತಿಯ ಹಿನ್ನೆಲೆಯಲ್ಲಿ ಒಡೆದು ಚೂರು ಚೂರಾಗಿರುವ ಮನಸ್ಸುಗಳನ್ನು ಬೆಸೆಯುವುದಾದರೂ ಯಾವಾಗ ? ಇಲ್ಲಿ ಕನಕನ 'ರಾಮಧಾನ್ಯಚರಿತ್ರೆ' ಯನ್ನು ಉಲ್ಲೇಖಿಸಲೇಬೇಕು. ಮೇಲ್ನೋಟಕ್ಕೆ ಈ ಕಥಾನಕದ ಮೂಲಧಾತು ರಾಗಿಯ ನಿಷ್ಪತ್ತಿ ಹೇಳುವುದಾಗಿ ಕಂಡಿದೆ. ಕೃತಿಯಲ್ಲಿ ಬರುವ ಭತ್ತ ಮತ್ತು ರಾಗಿಯ ಸಂವಾದ- ಪ್ರೊ. ದೇಜಗೌ ಅವರಿಗೆ ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಣ ವರ್ಗ ಹೋರಾಟವಾಗಿ ಕಂಡಿದೆ. ಡಾ. ಎಂ. ಚಿದಾನಂದ ಮೂರ್ತಿಯವರಿಗೆ ಉಳ್ಳವರ-ಇಲ್ಲದವರ ನಡುವಿನ ಸಂಘರ್ಷವಾಗಿ ಕಾಣುತ್ತಿದೆ. ಅದರ ಐತಿಹಾಸಿಕ ಆಧಾರ ವಿಜಯನಗರದ ವ್ಯಾಸರಾಯನ ಮಠದಲ್ಲಿತ್ತೆಂದು ನಂಬಲಾದ ವ್ಯಾಸಕೂಟ-ದಾಸಕೂಟ ಎಂಬ ಎರಡು ಪಕ್ಷ ಅಥವಾ ಪಂಗಡಗಳೇ ಎನ್ನಬಹುದು. ವ್ಯಾಸರಾಯರ ಮಠದಲ್ಲಿ ಸಂಸ್ಕೃತವನ್ನಾಡುತ್ತಿದ್ದ ಮಡಿವಂತ ವರ್ಗ ವ್ಯಾಸಕೂಟ, ಪುರಂದರದಾಸರು, ಕನಕದಾಸರು ಮೊದಲಾದ ದಾಸಶ್ರೇಷ್ಟರು ಕನ್ನಡ ಮಾತನಾಡುತ್ತಿದ್ದವರ ದಾಸ ಕೂಟ. ಸಂಸ್ಕೃತ ಮಾತನಾಡುತ್ತಿದ್ದವರು ಇವರನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದರು. ಇವತ್ತಿನ ಸನ್ನಿವೇಶವನ್ನೇ ನೋಡಿ, ಬ್ರಿಟಿಷರು 1600ರಲ್ಲಿ ಭಾರತಕ್ಕೆ ಬಂದಾಗ ಮೊದಲು ಅವರ ಭಾಷೆಯನ್ನು ಕಲಿತವರು ಸಂಸ್ಕೃತ ಕಲಿತ ಪಂಡಿತರುಗಳೆ, ಆ ಭಾಷೆಯನ್ನು ಇಟ್ಟುಕೊಂಡು ಬ್ರಿಟಿಷರ ವಸಹಾತುಶಾಹಿಗೆ ಸಹಾಯ ಮಾಡುತ್ತಾ ಇವತ್ತು English ಭಾಷೆ ತಮ್ಮ ಜನ್ಮ ಪಿತ ಬ್ರಹ್ಮ ಹುಟ್ಟಿಸುವಾಗಲೆ ತಲೆಯೊಳಗೆ ತುಂಬಿಸಿ ಕಳುಹಿಸಿರುವಂತೆ ಆಡುತ್ತಾರೆ. ಆದರೆ ಇಷ್ಟಂತು ಸತ್ಯ ಸ್ವತಂತ್ರ್ಯ ಪೂರ್ವದಿಂದ ಆ ಜನ ಬ್ರಿಟಿಷರ ಒಡನಾಡಿಗಳಾಗಿದ್ದರಿಂದ, ಹಾಗೂ ಅಕ್ಷರ ಸಂಸ್ಕೃತಿಯ ವಾರಸುದಾರರಂತೆ ಫೋಜನ್ನು ಕೊಡುತ್ತಾ 97% ಜನರಿಗೆ ಅಕ್ಷರಜ್ಞಾನದಿಂದ ವಂಚಿಸುತ್ತ ಬಂದವರು ಸಹಜವಾಗಿಯೇ ಭಾಷೆಯನ್ನು Authoriative ಆಗಿ ಮಾತನಾಡುತ್ತಾರೆ. ಮತ್ತು ನಮ್ಮ ಶೂದ್ರರು ಅಮೇರಿಕಾ, ಇಂಗ್ಲೆಂಡ್ ಎಂಬ ದೇಶಗಳ ಕನಸು ಕಾಣುವ ಮೊದಲು ಆದೇಶಗಳಲ್ಲೂ ತುಂಬಿಕೊಂಡು ಅಲ್ಲಿಯ ಬದುಕನ್ನು ಕಲುಷಿತಗೊಳಿಸಲು ಹವಣಿಸುತ್ತಾರೆ.

ರಾಗಿಯನ್ನು ಶ್ರೇಷ್ಠವೆಂದು ಪ್ರತಿಪಾದಿಸುವ ಕನಕರು ಬಹುಜನ ಸಮುದಾಯದ ಆಹಾರವಾಗಿ ಬಳಕೆಯಲ್ಲಿರುವ ಧಾನ್ಯವೆ ಸರ್ವಶ್ರೇಷ್ಠ ಎಂದು ಪ್ರತಿಪಾದಿಸಿರುವ ಕನಕದಾಸರು ಅಂದಿನ ವ್ಯವಸ್ಥೆಯೊಳಗಿನ ದೋಷವನ್ನು ಹೊರಹಾಕಿದ್ದಾರೆ. ರಾತ್ರೋ ರಾತ್ರಿ ಈ ದೇಶದಲ್ಲಿ ವಿವಾದಗಳು ಆರಂಭವಾಗುತ್ತವೆ. ಪ್ರಖಾಂಡ ಪಂಡಿತರು, ಅಕ್ಷರಸಂಸ್ಕೃತಿಯ ವಾರಸುದಾರರು ಎಂದು ತಿಳಿದಿರುವ ಜನ ತಮ್ಮ ಸಾಮರ್ಥ್ಯ ತಿಳಿದುಕೊಂಡು ಶೂದ್ರರ ಹೆಗಲ ಮೇಲೆ ಬಂದೂಕು ಇಟ್ಟು ಶೂದ್ರರರನ್ನೇ ಗುರಿಯಾಗಿಸುತ್ತಿರುವುದು ಶೋಚನೀಯ.

ನಿಸಾರ ಅಹ್ಮದ್‌ರ ಕುರಿಗಳು ಸಾರ್‌ಕುರಿಗಳು ಪದ್ಯ ಭಾರತದ ಸನ್ನಿವೇಶಕ್ಕೆ ಎಷ್ಟೊಂದು ಪ್ರಸ್ತುತವಿದೆ ಎಂದರೆ ವಿಚಾರಹೀನರು, ಮತಿಹೀನರು ತುಂಬಿಕೊಂಡಿರುವ ಈ ದೇಶದಲ್ಲಿ ದಡ್ಡರನ್ನು ಸೃಷ್ಟಿಸಿ ನೀವು ದಡ್ಡರು ಕಣಯ್ಯ ಎಂದು ನಂಬಿಸಿ ತಾವೇ ಮೇಧಾವಿಗಳು, creamy Layear ಎಂದು ಸುಳ್ಳು ಹೇಳುತ್ತಾ ನಂಬಿಸುತ್ತಲೇ ಇದ್ದಾರೆ. ಇದಕಂಡೇ ಕನಕರು" ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದನೆಲೆಯನ್ನೇನಾದರು ಬಲ್ಲಿರಾ" ಮಹಾತ್ಮ ಬುದ್ಧನಿಂದ ಹಿಡಿದು ಕನಕದಾಸರವರೆಗೆ ಸಂತ ಚಳುವಳಿ, ಶರಣಚಳುವಳಿ ಎಲ್ಲವೂ ಈ ವ್ಯವಸ್ಥೆಯನ್ನು ಖಂಡಿಸುತ್ತಲೇ ಬಂದರೂ ಈ ಜನ ಕೊಚ್ಚೋ ನೀರಾದರೆ ಹೊರತು 'ಅನಿಕೇತನ' ವಾಗಲಿಲ್ಲಾ. ಇದಕ್ಕೆ ಮೂಲಕಾರಣ ಈ ದೇಶದ ಮೂಲನಿವಾಸಿಗಳಾದ ಶೂದ್ರರಿಗೆ ಅತಿ ಶೂದ್ರರಿಗೆ ಸಮಾಜದ ಸ್ತರದಲ್ಲಿ ಸರಿಯಾದ ಅವಕಾಶ ಸಿಗಲಿಲ್ಲ. ಶಿಕ್ಷಣದಿಂದ ವಂಚಿತರಾಗಿ, ಅವಕಾಶಗಳಿಲ್ಲದೆ ಮತ್ತೊಬ್ಬರನ್ನೇ ಅವಲಂಬಿಸಿ ಬದುಕಿದವರಿಗೆ ಸ್ವತಂತ್ರರಾಗಿ ಆಲೋಚನೆ ಮಾಡುವ ಅವಕಾಶ ಸಿಗಲೇ ಇಲ್ಲ. ಶಾಹುಮಹಾರಾಜ, ಬಾಫುಲೆ, ಜಯಚಾಮರಾಜ ಒಡೆಯರ್, ಪೆರಿಯಾರ್, ನಾರಾಯಣಗುರು ಬಾಬಾ ಸಾಹೇಬರಂಥ ತಾರೆಗಳು ಈ ಜನರ ಪರ ನಿಂತು ಹೋರಾಡಿದ್ದರ ಫಲ ಒಂದಿಷ್ಟು ಆಲೋಚಿಸುವ, ವಿರೋಧಿಸುವ ತಲೆಗಳು ಸೃಷ್ಟಿಗೊಂಡಿರುವುದು.

ಈ ಹಿನ್ನೆಲೆಯಲ್ಲಿ ನೋಡಿದಾಗ ಕನಕ ನಮಗೆ ಪ್ರಸ್ತುತರಾಗುತ್ತಾರೆ. ಅವಕಾಶವಂಚಿತನಾಗಿ, ದೇವರ ದರ್ಶನಕ್ಕೂ ಯೋಗ್ಯವಿಲ್ಲ ಎಂದು ಪಟ್ಟಭದ್ರರಿಂದ ಹೇಳಿಸಿಕೊಂಡು ಶೂದ್ರಾತಿ ಶೂದ್ರರಿಗೆ ಮಾದರಿಯಾಗಿರುವುದಂತು ಸತ್ಯ. ಎಷ್ಟೆಲ್ಲಾ ಮುಂದುವರೆದು ವಿಜ್ಞಾನದ ತುತ್ತ ತುದಿಗೆ ಮುಟ್ಟಿರುವ ನಾವು ನಮ್ಮೊಳಗಿನ ಕೊಳಕನ್ನು ಕಡಿಮೆ ಮಾಡಿಕೊಂಡಿದ್ದೇವೆಯೇ ? ಎಂಬ ಪ್ರಶ್ನೆ ಕಾಡದೆ ಇರಲಾರದು. ಒಬ್ಬರನ್ನು ಪ್ರೀತಿಸದಿದ್ದರೂ ಪರವಾಗಿಲ್ಲ ಸಹಿಸಿಕೊಳ್ಳುವುದು ಇವತ್ತಿನ ಅನಿವಾರ್ಯತೆಯಾಗಿದೆ. ಮನುಷ್ಯ ಕುಲ ಭೂಮಿಯ ಮೇಲೆ ಉಳಿಯಬೇಕಾದರೆ ನಮ್ಮ ನೆರೆಹೊರೆಯವರನ್ನು

ನಾವು ಸಹಿಸಿಕೊಳ್ಳಲೇಬೇಕು. ಅದೊಂದೆ ಮಾರ್ಗ ಉಳಿದಿರುವುದು. ಅಂತಹದ್ದರಲ್ಲಿ ಈ ಜನ ಹೊಸವಾದಗಳನ್ನು ಸೃಷ್ಟಿಸಿ ಆರೋಗ್ಯಕರ ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡುತ್ತಾರೆ. ಬಾಬ್ರಿಮಸೀದಿ, ಗೋದ್ರಾ, ಬಾಬಾಬುಡನ್‌ಗಿರಿ, ಹುಬ್ಬಳ್ಳಿಯ ಈದ್ಗಾ, ಮತ್ತೀಗ ಕನಕಗೋಪುರ. ಪ್ರಗತಿಪರ ಚಿಂತನೆ ಮಾಡುವ ಮನಸ್ಸುಗಳು ಆ ಎಲ್ಲಾ ವಿಚಾರಗಳನ್ನು ಕೂಲಂಕುಶವಾಗಿ ಆಲೋಚಿಸಬೇಕು. ನಮ್ಮ ನಡುವಿನ ಅಂತರವನ್ನು ಕಡಿಮೆ ಮಾಡಿಕೊಳ್ಳಲು ದಾಸರು-ಶರಣರು-ಸಂತರು ಮಾಡಿರುವ ಪ್ರಯತ್ನ ನೆನೆಯುವುದು ಇಂದಿನ ಅನಿವಾರ್ಯತೆ ಯಾಗಿದೆ. ಕನಕದಾಸರು ಎಲ್ಲಾ ಗೊಂದಲವನ್ನು ದಾಟಿ ಅತಿ ಎತ್ತರದ ಸ್ಥಾನದಲ್ಲಿ ನಿಂತ ದಾಸಶ್ರೇಷ್ಠರಾಗಿ ಕಾಣುತ್ತಾರೆ. ಅವರು ಅಂದು ಮಾಡಿದ ಸಾಮಾಜಿಕ ವಿಡಂಬನೆ ಇವತ್ತಿನ ಅಂತರವನ್ನು ಕಿಂಚಿತ್ತು ಕಡಿಮೆ ಮಾಡದಿದ್ದರೆ ಅದು ಈ ಸಮಾಜದಲ್ಲಾದ ಬದಲಾವಣೆ ಎಂದೇ ಭಾವಿಸಬೇಕು.

❄ ❄ ❄ ❄ ❄

ಪ್ರಸ್ತುತದಲ್ಲಿ ಕನಕದಾಸರು

ಕನಕದಾಸರು-ದಾಸ ಪರಂಪರೆಯಲ್ಲಿ ಅಗ್ರಗಣ್ಯರು. ಸೈನಿಕ, ದಂಡನಾಯಕ, ದಾರ್ಶನಿಕ ಹೀಗೆ ವ್ಯಕ್ತಿತ್ವದಲ್ಲಿ ಭಿನ್ನತೆಯನ್ನು ಪಡೆದುಕೊಂಡವರು. ಭಾರತದ ಸೂಫಿ ಸಂತರ ಹಿನ್ನೆಲೆಯನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಮಾನವೀಯತೆ ವರ್ಣದ ವಿರುದ್ಧವಾಗಿ ಹೋರಾಡಿ ಜನಜಾಗೃತಿ ಮಾಡಿರುವುದು ಕಂಡುಬರುತ್ತದೆ. ನೆರೆಯ ಮಹಾರಾಷ್ಟ್ರ, ಒರಿಸ್ಸಾ, ದೆಹಲಿ, ಪಂಜಾಬ್, ಆಂಧ್ರ-ಕರ್ನಾಟಕ ದೇಶದಾದ್ಯಂತ- ಭಾರತದ ಸಂತರು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದವರು. ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ಕೊನೆಯವರೆಗೂ ತಮ್ಮ ಹೋರಾಟವನ್ನು ಮಾಡಿದವರು. ಈ ಹಿನ್ನಲೆಯಲ್ಲಿ ಕನಕರು ನಮ್ಮೆಲ್ಲರ ಪ್ರತೀಕ. ಏಕೆಂದರೆ 97 ಪ್ರತಿಶತ ಭಾರತೀಯರನ್ನು ಪ್ರತಿಬಿಂಬಿಸುವ ವ್ಯಕ್ತಿತ್ವ ಕನಕರದ್ದು. ದಾಸಪರಂಪರೆಯನ್ನು ಸ್ವೀಕರಿಸುವ ಪೂರ್ವದಲ್ಲಿ ಸಹಜ ಬದುಕನ್ನು ಬದುಕಿದ ವ್ಯಕ್ತಿ, ಶ್ರೇಣಿಕೃತ ವ್ಯವಸ್ಥೆಯ ನಂಜುಂಡವರು.

ಸಹಜವಾಗಿಯೇ ಕಾವ್ಯ ಪ್ರತಿಭೆಯನ್ನು ಪಡೆದಿದ್ದ ತಿಮ್ಮಪ್ಪನಾಯಕ ವೈರಾಗ್ಯಪರವಾಗಿ ಗುರುಕೃಪೆಯನ್ನು ಪಡೆದು ಹರಿದಾಸ ಕನಕದಾಸರಾಗಿ ಕೀರ್ತನೆಗಳನ್ನು ಜನಮನಕ್ಕೆ ಮುಟ್ಟಿಸುತ್ತ ಸಂಚಾರವನ್ನು ಕೈಗೊಂಡರು. ಬರಿ ಕೀರ್ತನೆಗಳಲ್ಲದೆ ಕೆಲವು ಕಾವ್ಯಗಳನ್ನು ರಚಿಸಿರುವುದು ಕನಕರ ಇನ್ನೊಂದು ವಿಶಿಷ್ಟತೆ. ಮೋಹನ ತರಂಗಿಣಿ, ನಳಚರಿತ್ರೆ, ಹರಿಭಕ್ತಸಾರ-ಈ ನಾಲ್ಕು ಅಭೂತಪೂರ್ವ ಕೃತಿಗಳು ಕನ್ನಡನಾಡಿಗೆ ಅವರ ಕೊಡುಗೆಯಾಗಿವೆ. ಮೊದಲನೆಯದಾದ ಮೋಹನತರಂಗಿಣಿ-ಭಾಗವತದ ಕಥಾವಸ್ತುವುಳ್ಳ ದೀರ್ಘವಾದ ಸಾಂಗತ್ಯಕಾವ್ಯ, 'ರಾಮಧಾನ್ಯ ಚರಿತ್ರೆ' ಕನ್ನಡ ಸಾಹಿತ್ಯದಲ್ಲಿಯೇ ಒಂದು ವಿಶಿಷ್ಟವಾದ ಕೃತಿ . ವಿವಿಧ ಧಾನ್ಯಗಳ ತಾರತಮ್ಯವನ್ನೇ ವಸ್ತುವಾಗಿಟ್ಟುಕೊಂಡು ಒಂದು ರೀತಿಯ ಅಣಕು ಮಾಡಿದಂತೆ ಕಾಣುವ ಈ ಪುಟ್ಟಕೃತಿ, ನರೆದಲೆಗ ಮತ್ತು ನೆಲ್ಲುಗಳು ಮೂದಲಿಕೆಯ ಸಂವಾದದಲ್ಲಿ ಸಾಮಾಜಿಕ ವರ್ಗ ವಿಭೇಧಗಳ ಏರುಪೇರನ್ನು ಸೂಚಿಸುವ ಸಾಂಕೇತಿಕತೆಯನ್ನು ಪಡೆದುಕೊಂಡು ಅರ್ಥಪೂರ್ಣವಾಗುತ್ತದೆ. ಕೊನೆಯಲ್ಲಿ ಸಾಮಾನ್ಯರಿಗೆ ಆಹಾರವಾಗುವ ನೆರೆದಲೆಗನೇ ಗೆದ್ದು ರಾಘವನಿಂದ ಮೆಚ್ಚುಗೆಯನ್ನು ಪಡೆದು ಅದೇ ಮುಂದೆ ರಾಗಿಯಾಗಿ ಪರಿಣಮಿಸುತ್ತದೆ. ಇದು ಕನಕದಾಸರ ಜನಪರ ನಿಲುವನ್ನು

ಬಹುಜನ ಹಿತಾಸಕ್ತಿಯನ್ನು, ಕಾಳಜಿಯನ್ನು ಸ್ಪಷ್ಟಪಡಿಸುತ್ತದೆ.

ನೆಲ್ಲು-ಭತ್ತ ಉಳ್ಳವರ ಆಹಾರ, ಬಡವ-ಬಲ್ಲಿದರು ಹಬ್ಬದಲ್ಲಿ ದೇವರಿಗೆ ನೈವೇದ್ಯಕ್ಕೆ ಮಾತ್ರ ಬೇಯಿಸುತ್ತಾರೆ. ದಿನನಿತ್ಯ ಅನ್ನವನ್ನುಂಡಾರೇ? ರಾಗಿ ಅಂಬಲಿಯೇ ಗತಿ. ಕನಕರು ಸಮಕಾಲೀನ ಸಮಾಜವನ್ನು ಬಹು ಚಿಕಿತ್ಸಕ ಬುದ್ಧಿಯಿಂದ ವೀಕ್ಷಿಸಿದ್ದಾರೆ ಎಂಬುದು ಈ ಕೃತಿಯಿಂದಲೇ ತಿಳಿದುಬರುತ್ತದೆ.

ಕನಕದಾಸರ ಸಾಧಕ ಜೀವನದ ಅರಿವು ಅವರ ಕೀರ್ತನೆಗಳಲ್ಲಿದೆ. ಪುರಂದರದಾಸರಿಗಿಂತ ಕನಕರ ಕೀರ್ತನೆಗಳ ಸಂಖ್ಯೆ ಕಡಿಮೆ ಆದಾಗ್ಯೂ ಅವು ದಾಸಸಾಹಿತ್ಯದಲ್ಲಿ ವಿಶಿಷ್ಟವಾದ ಒಂದು ಸುವರ್ಣ ಸಂಪುಟವಾಗಿ ಪರಿಣಮಿಸಿದೆ. ನೇರವಾದ ನಿಷ್ಕಪಟ ಮನೋಧರ್ಮದ ಸಾಧಕರಾಗಿ ಬೆಳೆದ ಅವರ ಆಧ್ಯಾತ್ಮಿಕ ಯಾತ್ರೆಯ ವಿವಿಧ ಹಂತಗಳನ್ನು ಅವರ ಕೀರ್ತನೆಗಳು ಪ್ರತಿಬಿಂಬಿಸುತ್ತವೆ. ತಮ್ಮ ಸುತ್ತಲಿನ ಪರಿಸರವನ್ನು ಕಣ್ದೆರೆದು ನೋಡಿದ ಅವರು ಜಾತಿಮತಗಳ ತಾರತಮ್ಯಗಳನ್ನು, ಧರ್ಮದ ಆಚರಣೆಯ ಹಿನ್ನೆಲೆಯಲ್ಲಿರುವ ಕುಟಿಲ ಕುಹಕಗಳನ್ನು, ಆಧ್ಯಾತ್ಮಿಕ ಬೂಟಾಟಿಕೆಗಳನ್ನು, ಶೋಷಣೆಯ ಜಾಡ್ಯೆಯನ್ನು ಕಂಡು ಕೆರಳುತ್ತಾರೆ, ಸಿಡಿದು ನಿಲ್ಲುತ್ತಾರೆ. ಅನೇಕ ಕೀರ್ತನೆಗಳಲ್ಲಿ ಕಂಡು ಬರುವ ಅವರ ಕಟುವಾದ ಮಾತುಗಳ ಹಿಂದೆ ಅವರ ವೈಚಾರಿಕ ಮನೋಧರ್ಮ ಕಂಡುಬರುತ್ತದೆ. ಸಾಂಪ್ರದಾಯಿಕ ಚೌಕಟ್ಟಿನೊಳಗಿದ್ದು ಅದನ್ನು ಮೀರುವ ಈ ಮನೋಧರ್ಮ ಮಾನವೀಯ ಮಿಡಿತವನ್ನೂ, ಸಾಮಾಜಿಕ ಪ್ರಜ್ಞೆಯನ್ನು, ಪ್ರತಿಬಿಂಬಿಸುತ್ತದೆ. ಸಾಂಪ್ರದಾಯಿಕವಾದ ಪೌರಾಣಿಕ ನಂಬಿಕೆಗಳೂ ಕಲ್ಪನೆಗಳೂ, ಕಥಾನಕಗಳೂ ಅವರ ಅವರ ಸಾಧನೆಯ ಮಾರ್ಗದಲ್ಲಿ ಇಣುಕು ಹಾಕುತ್ತಿದ್ದರೂ ಅವುಗಳನ್ನು ಮೀರಿ ಆಂತರಿಕ ವಿಕಾಸದ ಅಂತರ್ ದೃಷ್ಟಿಯನ್ನು ಅವಲಂಬಿಸಿ ಅವರ ಭಕ್ತಿಯ ಸಹಜವಾದ ವಿಕಾಸ ಮಾರ್ಗದಲ್ಲಿ ಕೆಲವು ಮೂಲಭೂತವಾದ ಭಾವನೆಗಳ ಅಭಿವ್ಯಕ್ತಿಯನ್ನು ಅನುಭವದ ಅನ್ವೇಷಣೆಯನ್ನು ಕಾಣುತ್ತೇವೆ. ಭಾರತೀಯ ಭಕ್ತಿಪಂಥಗಳ ವಿವಿಧತೆಯಲ್ಲಿ ಕಾಣುವ ಏಕಸೂತ್ರ ಈ ಆಂತರಿಕ ಅಭೀಪ್ಸೆಯ ಮುನ್ನಡೆ.

ಈ ಲೌಕಿಕವನ್ನು ಕುರಿತು ಅತೃಪ್ತಿ ಹೊಂದುವುದೇ ಮೊದಲ ಮೆಟ್ಟಿಲು. ಈ ಲೌಕಿಕ ಭೋಗಭಾಗ್ಯಗಳಲ್ಲಿ ಸರ್ವಸುಖವನ್ನು ಕಾಣುವ ವಿಷಯ , ತೃಪ್ತ ಜೀವನಕ್ಕೆ ಅದರಾಚೆಯ ಆನಂದದ ಅಭೀಪ್ಸೆಯೇ ಮೂಡುವುದಿಲ್ಲ. ಹೊರಗಡೆಯಲ್ಲಿ ಕಾಣುವ ಈ ಲೋಕಸುಖದ ಪರಿಮಿತಿಯ ಪರಿಭಾವನೆಯಿಂದ ಉಂಟಾಗುವ ಅತೃಪ್ತಿಯೇ ಇದರಾಚೆಯ ಸುಖದ ಅನ್ವೇಷಣೆಗೆ ನಾಂದಿಯಾಗುತ್ತದೆ. ಆದ್ದರಿಂದ ಭಕ್ತಿಸಾಧನೆಯ ಮೊದಲ ಮೆಟ್ಟಿಲು ಈ ಸಂಸಾರವನ್ನು ಕುರಿತು ನಶ್ವರತೆಯ ಅರಿವು, ಶಾಶ್ವತತೆಯ

ಹಂಬಲ, ಕನಕದಾಸರ ಅನೇಕ ಕೀರ್ತನೆಗಳಲ್ಲಿ ಈ ಆಂತರಿಕ ತಳಮಳ ಹೋರಾಟಗಳನ್ನು ಕಾಣುತ್ತೇವೆ.

ನೆಚ್ಚದಿಯ ಸಂಸಾರ ನೆಲೆಯಲ್ಲಿವೀ ತಾಯಿ
ಅಚ್ಯುತನ ನಾಮವನು ನೆನೆದು ಸುಖಿಯಾಗೋ

ಈ ಭಾವ, ಸಂಸಾರದ ನೆಲೆಯಿಂದ ಮೇಲಿರುವ ನಿಲುವಿಗೆ ನಾಂದಿಯಾಗುತ್ತದೆ. ಈ ಜಗತ್ತನ್ನು ಬಿಟ್ಟು ಹೋಗುವಾಗ ನಾವು ಅತ್ಯಂತ ಪ್ರಿಯವೆಂದು ತಿಳಿದು ಆರಾಧಿಸಿದುದಾವುದೂ ಬರದು, 'ಏನು ಬರುವುದೋ, ಸಂಗಡೇನು ಬರುವುದೋ' ಇಲ್ಲಿ ಮನಮುಟ್ಟುವಂತೆ ಹೇಳಿ "ಪೊಂದಿಕೊಂಡು ಬರುವ ವಸ್ತು, ಕೀರ್ತಿ ಅಪಕೀರ್ತಿವಿರಡೆ' -ಮತ್ತೆ ಮೆಲುಕು ಹಾಕುವಂತೆ ಮಾಡುತ್ತಾರೆ. ಭಕ್ತಿ ಸಾಧನೆಯಲ್ಲಿ ಮುಂದುವರೆಂದಂತೆ ಪ್ರಾರಂಭದ ಈ ಆರ್ತಭಾವ, ಆತ್ಮಶೋಧನೆ ಆತ್ಮೀಯತೆಗಳ ಕಡೆಗೆ ತಿರುಗಿ ಆತನ ಅಪಾರವಾದ ಕರುಣೆಯಲ್ಲಿ ದೃಢವಿಶ್ವಾಸವನ್ನು ತಳೆಯುತ್ತದೆ. ಅದಕ್ಕೆ ಸಾಧಕವಾದ ಅಂತರಂಗ ಶುದ್ಧಿ, ಸಜ್ಜನ ಸಹವಾಸ ಮೊದಲಾದ ನೈತಿಕ ನಿಷ್ಠೆಯನ್ನು ಹಲವಾರು ಕೀರ್ತನೆಗಳಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿಪಡಿಸಿದ್ದಾರೆ. 'ಇಷ್ಟುದಿನ ವೈಕುಂಠ ಎಷ್ಟು ದೂರ ಎನ್ನುತಲಿದ್ದೆ' ಹಾಡುತ್ತಾ ಇಲ್ಲಿಯೇ ಭಗವಂತನ ದರ್ಶನವಾದುದರ ಉದ್ಗಾರಮಾಡದೆ, 'ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ'-ವಿಶ್ವಾಸದ ದನಿ ತೆರೆದು ಹಾಡಿದ್ದಾರೆ. ಕನಕದಾಸರು ವಿರಕ್ತರಾದ ಮೇಲೆ ಕಾಗಿನೆಲೆಯಲ್ಲೇ ಹೆಚ್ಚು ಕಾಲವಿದ್ದು, ಅಲ್ಲೇ ದೈವಾಧೀನರಾಗಿದ್ದಿರಬೇಕು, ಅವರು ಪರಿವ್ರಾಜಕರಾಗಿ ತಾಳ, ತಂಬೂರಿ ಹಿಡಿದುಕೊಂಡು ದಿವ್ಯ ಕ್ಷೇತ್ರಗಳನ್ನು ದರ್ಶಿಸುತ್ತಾ, ಕೀರ್ತನೆಗಳನ್ನು ಹಾಡುತ್ತ, ಹತ್ತಿರ ಬಂದವರಿಗೆ ಉಪದೇಶ ನೀಡುತ್ತ, ಜಗತ್ತೇ ತನ್ನ ಮನೆ, ಎಲ್ಲಾ ಊರು ತಮ್ಮದೇ, ಚರಾಚರ ಜೀವಿಗಳಲ್ಲೂ ಆದಿಕೇಶವನನ್ನು ಕಾಣುವ ಅವರಿಗೆ ಎಲ್ಲ ನೆಲವೂ ಒಂದೇ, ಭೌಗೋಳಿಕ ಇತಿಮಿತಿ, ಗಡಿಸೀಮೆಗಳು ಅವರಿಗಿರಲಿಲ್ಲ. ಜಾಣತನದ ಬಾಗಿಲು ತೆರೆಯುತ್ತ, ಸಾಹಿತ್ಯ ರಚನೆ ಮಾಡುತ್ತ: ಕುಲವೊಂದೆ, ಮಾನವ ಮತವೊಂದೆ' ಎಂದು ಸಕಲರಿಗೂ ಸಾರುತ್ತ.

"ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ"

ಎಂದು ಮೂಢರಿಗೆ ಪ್ರಶ್ನೆಮಾಡುತ್ತ- ಪರ್ಯಟನ ಮಾಡಿದ ಮಹಾಚೇತನ. ಕುರುಬ, ನಾಯಕ, ದಲಿತ, ಲಿಂಗಾಯಿತ, ಮುಸಲ್ಮಾನ, ಎಲ್ಲರಿಗೂ ಬೇಕಾದ ವ್ಯಕ್ತಿತ್ವ ಪಡೆದುಕೊಂಡಿದ್ದ ಕನಕರು ಇವತ್ತು ಪ್ರಸ್ತುತ. ಕನಕದಾಸರ ಕಾವ್ಯದಲ್ಲಿ ಹೆಚ್ಚಿನ ವಿಶೇಷತೆ ಇರುವುದು ಅವರು ತೋರಿರುವ ಸಮಕಾಲೀನ ಪ್ರಜ್ಞೆ ಹಾಗೂ ಹಾಗೂ ಸಾಮಾಜಿಕ ಪ್ರಜ್ಞೆಯಲ್ಲಿ . ವಚನಕಾರರಿಂದ ಆರಂಭವಾದ ಹೊಸ ಅಲೆಯೊಂದು ಸಮಗ್ರ ಕ್ರಾಂತಿಯನ್ನೇ ಉಂಟು ಮಾಡಿತೆಂಬುದು ಜನ ಜನಿತ ಸಂಗತಿ. ಕಾವ್ಯದ ವಸ್ತು ಭಾಷೆ, ಅಭಿವ್ಯಕ್ತಿ ರೀತಿಯ ಮೇಲೆ ಉಂಟುಮಾಡಿದ ಪ್ರಭಾವ ಅತಿಶಯವಾದುದು. ಕನಕದಾಸರು, ತಮ್ಮ ಕೃತಿಗಳಲ್ಲಿ ಅಷ್ಟೇ ದಟ್ಟವಾಗಿ ಪ್ರಕಟಿಸಿರುವುದು ವಿಶೇಷ ಅಂಶವಾಗಿದೆ. ಹಿಂದಿನ ಕೃತಿಗಳಲ್ಲಿ ಕಾಣದ ಅಥವಾ ತೀರಾ ವಿರಳವೆನ್ನಬಹುದಾದ ಸಮಕಾಲೀನ ಜೀವನದ ಯಥಾವತ್ತದ ಚಿತ್ರಣ ಕನಕದಾಸರಲ್ಲಿ ಅತ್ಯಂತ ಸಹಜವಾಗಿ ಕಂಡು ಬರುತ್ತದೆ. ಸಮಕಾಲೀನ ಮತ್ತು ಪರಂಪರಾಗತ ಮೌಲ್ಯಗಳೆರಡಕ್ಕೂ ಒಟ್ಟೊಟ್ಟಿಗೆ ಸ್ಪಂದಿಸಿ ಸಾಮಾನ್ಯ ಜನತೆಯ ಹಿತಕ್ಕಾಗಿ ದುಡಿದ ಎರಡು ಖಂಡಗಳು ಈ ನಾಡಿನ ಪೂರ್ವ ಚರಿತ್ರೆಯಲ್ಲಿ ಕಂಡು ಬರುವಂತವುಗಳು.

1) ಶರಣರ ಸಮೂಹ
2) ದಾಸರ ಪರಂಪರೆ

ಇವೆರಡು ಹಿಂದು ಹಿಂದಾಗಿ ಈ ಮೌಲಿಕ ಕ್ರಾಂತಿಗಳಲ್ಲಿ ತಮ್ಮನ್ನು ತಾವು ತೊಡಗಿಸಕೊಂಡದ್ದು ಆಂತರಿಕ ಅವಶ್ಯಕತೆ ಮತ್ತು ಸಾರ್ವಜನಿಕ ಒತ್ತಡ ಎರಡೂ ಕಾರಣಗಳಿಂದಾಗಿ. ತಾವು ಕ್ರಾಂತಿಯನ್ನು ಮಾಡುತ್ತಿದ್ದೇವೆಂದು ತಿಳಿದೋ, ತಿಳಿಯದೆಯೋ ಒಟ್ಟಾರೆ ಹನ್ನೆರಡು ಮತ್ತು ಹದಿನೈದನೆಯ ಶತಮಾನಗಳಲ್ಲಿ ಈ ಬದಲಾವಣೆಯ ಬೀಜದ ಅಂಕುರಾರ್ಪಣೆಯಾಯಿತೆನ್ನುವುದು ಒಂದು ಐತಿಹಾಸಿಕ ಸತ್ಯ. ಈ ಬದಲಾವಣೆಯ ಹಿಂದಿರುವ ವ್ಯಕ್ತಿಗಳು ಮತ್ತು ಶಕ್ತಿಯನ್ನು ಗಮನಿಸಿದರೆ ಇದರಲ್ಲಿ ಸಾಮಾಜಿಕವಾಗಿ ಹಿಂದುಳಿದ, ಶೋಷಣೆಗೆ ಒಳಗಾಗದವರದ್ದೇ ಸಿಂಹಪಾಲು. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಪ್ರೋತ್ಸಾಹದಿಂದ ಧೈರ್ಯಪಡೆದ ವಚನಕಾರರು, ಶಿವಶರಣರು ಕುಲವನ್ನು ತಮ್ಮ ದಿಟ್ಟ ನಿಲುವನ್ನು ಪ್ರತಿಪಾದಿಸಿದರು. ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ, ಜಲವೊಂದೆ ಶೌಚಮಜ್ಜನಕ್ಕೇ ಕುಲವೊಂದೇ ತನ್ನತಾನರಿದವರಿಗೆ, ಎಂದ ಅಣ್ಣ ಬಸವ, 'ಮನುಷ್ಯ ಜಾತಿ ತಾನೊಂದೆ ವಲಂ.' ಎಂದ ಆದಿಕವಿ ಪಂಪ, 'ನಡುವೆ ಸುಳಿವ ಆತ್ಮನು ಗಂಡೂ

ಅಲ್ಲ, ಹೆಣ್ಣು ಅಲ್ಲ' ಎಂದ ಮಹಾದೇವಿಯಕ್ಕ, ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ಕನಕದಾಸರ ಕೀರ್ತನೆಗಳನ್ನು ಗಮನಿಸಿದರೆ, ಶಿವ, ವಿಷ್ಣುವಿನ ಕುಲವನ್ನೇ ಪ್ರಶ್ನಿಸುವಷ್ಟು ತಾಕತ್ತು ಅವರಲ್ಲಿದೆ! 'ನೀ ನೆನ್ನೊಂತೊಮ್ಮೆ ಒಡಲುಗೊಂಡು ನೋಡು' ಎಂದು ದೇವರದಾಸಿಮಯ್ಯ ಸವಾಲೆಸೆದಂತೆ ಕನಕರು ತಮ್ಮ ಇಷ್ಟ ದೈವವನ್ನು ಕುಲದ ಒರೆಗಲ್ಲಿಗೆ ತಿಕ್ಕಿ ನೋಡಿದ್ದಾರೆ. ಹಾಗೆ ಆ ದೈವವನ್ನು ಎಲ್ಲರೂ ಒಪ್ಪಿಕೊಂಡಿರು ಾಗ ಅವನ ಭಕ್ತರಾದ ಮಾನವ ಕುಲಕ್ಕೆ ಈ ಕುಲದ ಕಳಂಕವನ್ನು ಅಂಟಿಸುವುದು ಸರಿಯೇ ಎಂಬುದು ಅವರ ಪ್ರಶ್ನೆ. ಜೀವಾತ್ಮ, ಪರಮಾತ್ಮಗಳ ಕುಲವನ್ನು ಯಾರು ಪ್ರಶ್ನಿಸುವುದಿಲ್ಲವೆಂದ ಮೇಲೆ ದೇಹಕ್ಕೆ ಯಾಕೆ ಈ ಬವಣೆ?

ಹುಟ್ಟದ ಯೋನಿಗಳಿಲ್ಲ, ಮುಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ, ಜಲವೆ ಸಕಲ ಕುಲಕ್ಕೆ ತಾಯಲ್ಲವೆ.

ಡಾರ್ವಿನ್ನನ ನಮ್ಮ ಮಣ್ಣಿನ ನಡುವೆ ಅರಳಿದ ಸುಂದರ ಹೂ ಆದ್ದರಿಂದ ಜನರ ನಡುವೆ ಬಾಳಿ ಬದುಕಿ ಜನಪದೀಯ ಸತ್ವವನ್ನು ತಮ್ಮ ಕೀರ್ತನೆಗಳಲ್ಲಿ ಬಳಸಿಕೊಂಡಿದ್ದಾರೆ. ಇವತ್ತಿಗೂ ನಮ್ಮ ಬಳ್ಳಾರಿ ಜಿಲ್ಲೆಜನ, ಹಾವೇರಿಜಿಲ್ಲೆ, ಧಾರವಾಡ ಜಿಲ್ಲೆ, ಅದರಲ್ಲೂ ನನ್ನ ನೆಚ್ಚಿನ ಶಿಗ್ಗಾಂವ ತಾಲ್ಲೂಕಿನ ಭಾಷೆಯ ಸೊಗಡನ್ನು ಕಾಣುತ್ತೇವೆ. ಮಿಣಿ, ಊರೂಟ, ಕುಂಟೆ, ರಂಟೆ, ಗುಂಡು ಮಿಣುಕ ಹಕ್ಕಿ (ಗುಂಡುಮುಳಗ) ಈ ಶಬ್ದಗಳನ್ನು ಓದಿದಾಗ ಜನಸಾಮಾನ್ಯರಿಗೆ ಎಷ್ಟೊಂದು ಅಪ್ಯಾಯಮಾನಆಗುವುದೆಂದರೆ ನಮ್ಮ ಬಾಯೊಳಗಿನ ಶಬ್ದಗಳನ್ನೇ ಇವರು ಕೀರ್ತನೆ ಮಾಡಿರಬಹುದೆಂದು ಖುಷಿಪಡುತ್ತಾರೆ.

ಆದ್ದರಿಂದ ಈತ ನಮ್ಮ ಬಹುಜನರ ಬದುಕಿನ ಭಾಗವಾಗಿ ಗುರುತಿಸಲ್ಪಡು ವುದು. ನಮ್ಮ ಸಂಸ್ಕೃತಿಯ ಪ್ರತೀಕ, ನಮ್ಮ ಒಳ ಅರಿವಿನ ಹರಿಕಾರನಾಗಿ ಎಂದೆಂದಿಗೂ ನಮ್ಮೆದೆಯೊಳಗೆ ಮಿಂಚುತ್ತಿರುವುದು. ಅವರಿಗಿದ್ದ, ಜಾತೀಯತೆ-ಅಸಮಾನತೆಯ ಕುರಿತ ನೋವನ್ನು ಪ್ರಚುರಪಡಿಸಲು ಜನಪದರು ಆಯ್ಕೆ ಮಾಡಿಕೊಂಡಿದ್ದ ಜನಪದ ವಸ್ತು. ಕಾರಣ ತನ್ನ ಸಂದೇಶವನ್ನು ಸಾಮಾನ್ಯ ಜನರಿಗೆ ತಲುಪಿಸುವುದಾಗಿತ್ತು. ಆದ್ದರಿಂದಲೇ ಅವರ ವಿಡಂಬನೆಯೊಳಗೆ ಕಹಿಯಿದೆ ವಿಷವಿಲ್ಲ. ಮೊನಚಿದೆ ನೋವಿಲ್ಲ, ಹರವಿದೆ ದ್ವೇಷವಿಲ್ಲ. ಕಾವಿದೆ ತಾಪವಿಲ್ಲ, ಕೋಪವಿದೆ ವೈರವಿಲ್ಲ. ಚುರುಕಿದೆ ಉರಿಯಿಲ್ಲ. ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಜನರ ನಡುವಳಿಕೆ, ಸಮಾಜದಲ್ಲಿ ಬೇರುಬಿಟ್ಟಿದ್ದ ರೂಢಿಗತ ಸಂಪ್ರದಾಯಗಳು, ಜಾತಿ-ವ್ಯವಸ್ಥೆಗಳು ಬಡವ-ಬಲ್ಲಿದ, ಮೇಲು ಕೀಳೆಂಬ ತಾರತಮ್ಯ, ಹಳಸಲು

ಮೌಲ್ಯಗಳು, ಬದುಕಿನ ಆಡಂಬರ ಮೊದಲಾದ ವಿಚಾರಗಳನ್ನು ವಿಡಂಬಿಸಿರುವ ರೀತಿ ಸತ್ಯವಾದದ್ದು. ಈ ದೇಶದ ಶೂದ್ರರು ಎಷ್ಟೇ ಪ್ರಖಾಂಡ ಪಂಡಿತರಾಗಿರಲಿ, ಸಂತರಾಗಿರಲಿ, ವಿದ್ವತ್‌ಗಳಿಸಿಕೊಂಡವರಾದರೂ ಪಟ್ಟಭದ್ರ ಹಿತಾಸಕ್ತಿಗಳು ಹೇಗೆ ದಮನ ಮಾಡುತ್ತವೆ ಎಂಬ ಸತ್ಯವನ್ನು ಅರಿತುಕೊಳ್ಳದಿದ್ದರೆ ಈ ದೇಶದ ದಲಿತರು, ಶೂದ್ರರು, ಅಲ್ಪಸಂಖ್ಯಾತರು ಅಸ್ತಿತ್ವವನ್ನು ಕಳೆದುಕೊಳ್ಳುವುದುಂಟು ದಿಟ. ನಾಲ್ಕುನೂರು ವರ್ಷಗಳ ಹಿಂದೆ ಮುಸುಕಿನೊಳಗಿನ ಗುದ್ದಾಟವನ್ನು ಸಹಜವಾಗೆ ಎದುರಿಸಿದ ಕನಕರು ವಾದಿರಾಜರಂತಹ ಪರೋಹಿತ ಸ್ಥಾಪಿತ ಹಿತಾಸಕ್ತಿ ಉಳ್ಳ ಮನಸ್ಸುಳ್ಳವರು ಕನಕರೊಂದಿಗೆ ನಡೆದುಕೊಂಡ ರೀತಿ, ಖಂಡನೀಯವೇ ಸರಿ. ಇವತ್ತಿಗೂ ಬಾಯಿಮಾತಲ್ಲೇ ಬಡಾಯಿಕೊಚ್ಚಿಕೊಳ್ಳುತ್ತಿರುವ ಅನೇಕ ಮಠಗಳು, ಕೆಲವು ಸ್ವಾಮಿಗಳು ಗೋದ್ರಾದಿಂದ ಹಿಡಿದು ಬಿಹಾರದವರೆಗೆ, ಆಂಧ್ರದಲ್ಲಿ ಪೋಲಿಸರ ಗುಂಡಿಗೆ ಬಲಿಯಾಗುತ್ತಿರುವ ಬಡವರ ನೋವಿಗೆ ಸ್ಪಂದಿಸುತ್ತಿದ್ದಾರೆಯೇ ? ಪ್ರಶ್ನಿಸಿಕೊಳ್ಳಬೇಕಾಗಿದೆ. ರಾಗ ದ್ವೇಷವನ್ನು ಪರಿಪಾಲಿಸುತ್ತಾ ಹಣವನ್ನು ಕೊಳ್ಳೆ ಹೊಡೆಯುವ ತಾಣಗಳಾಗಿವೆ. ಒಬ್ಬ ಸನ್ಯಾಸಿಯಾದವನು ಎಲ್ಲವನ್ನು ತ್ಯಜಿಸಬೇಕು. ಆದರೆ ಕೆಲವರು ಹಗಲಲ್ಲಿ ಸ್ವಾಮಿಗಳಾಗಿ, ರಾತ್ರಿ ಪ್ಯಾಂಟ್-ಷರ್ಟ್ ಹಾಕ್ಕೊಂಡು ಬಣ್ಣದ ಕನ್ನಡಕ ಹಾಕ್ಕೊಂಡು ಮೆಜೆಸ್ಟಿಕ್‌ಗೆ ವಾಕಿಂಗ್ ಹೋಗುವುದು. ತಮ್ಮ ವೈಯಕ್ತಿಕ ಫಾಯ್ದೆಗಾಗಿ ಹುಡುಗರಿಗೆ ಹುಸಿ ಭರವಸೆ ಮೂಡಿಸಿ ಸಾಮಾಜಿಕ ಸುಧಾರಕರಂತೆ ಪೋಜು ಕೊಡುವ ಸ್ವಾಮೀಜಿಗಳು-ಮಠಗಳು-ನಾಯಕರುಗಳಲ್ಲಿ-ರಾಗ ದ್ವೇಷವನ್ನು ಬಿಟ್ಟು ಬದುಕಿದ್ದ ಕನಕದಾಸರೆಲ್ಲಿ. ಕೋಮುದಳ್ಳುರಿಯಲ್ಲಿ-ಮತಾಂಧತೆಯಲ್ಲಿ, ಅಸಮಾನತೆಯ ಮಡುವಿನಲ್ಲಿ ಮುಳುಗಿರುವ ಈ ದೇಶದಲ್ಲಿ ಮತ್ತೊಬ್ಬ ಕನಕದಾಸ ಹುಟ್ಟಬೇಕಾಗಿದೆ.

ಇಡೀ ದೇಶದ ಉದ್ದಗಲಕ್ಕೂ ಒಂದು ವಿಷಣ್ಣ ವಾತಾವರಣ ಉಂಟಾಗಿ ಒಬ್ಬರನ್ನು ಕಂಡರೆ ಒಬ್ಬರಿಗಾಗುವುದಿಲ್ಲ. ಪಂಡಿತರ ನಡುವೆ ಪಾಮರರ ನಡುವೆ ವೈರುಧ್ಯವಿದೆ. ಒಂದು ಹೊಸ ಬದುಕು ಹೊಸ ಆಶಾಕಿರಣದ ಕನಸುಕಾಣುತ್ತಿರುವ ಯುವ ಜನಾಂಗ ನಿರಾಶೆಯ ಕೂಪದಲ್ಲಿ ತೊಳಲಾಡುತ್ತಿದೆ. ಇಡೀ ಒಂದು ಬದುಕನ್ನು ಕಟ್ಟಿಕೊಡುವ ಸಂತ ಹುಟ್ಟಬೇಕಾಗಿದೆ. ಪ್ಯಾಲೆಸ್ಟೀನ್, ಇರಾಕ್, ಇರಾನ್-ಭಾರತದ ಮೂಲೆ ಮೂಲೆಗಳಲ್ಲಿ-ಜಮ್ಮು ಕಾಶ್ಮೀರ-ಪಾಕಿಸ್ತಾನ-ಶ್ರೀಲಂಕಾದಲ್ಲಿ ನಡೆಯುತ್ತಿರುವ ನರಹತ್ಯೆ ಮಾನವ ಬಾಂಬುಗಳಿಗೆ ಕೊನೆಗಾಣಿಸುವ ಕಾಳಜಿಯ ಮನಸ್ಸುಗಳು ಬೆಳೆಯಬೇಕಾಗಿದೆ. ಗುಜರಾತಿನಲ್ಲಿ ಹಿಂದೂಗಳ ಗಲ್ಲಿಯೊಳಗೆ ಮುಸಲ್ಮಾನರ ಆಟೋರಿಕ್ಷಾಗಳು ಯಾವಾಗ ಪ್ರವೇಶಿಸುವಂತಾಗುತ್ತವೆಯೋ ಆಗ

ಈ ದೇಶದಲ್ಲಿ ಸುಭಿಕ್ಷೆ ಉಂಟಾದೀತು. ದಾಸರು-ಶರಣರು-ಸಂತರು- ಈ ದೇಶದಲ್ಲಿ ನಡೆದ ಸಂಘರ್ಷಕ್ಕೆ ಒತ್ತುಕೊಟ್ಟು-ಮತಾಂಧತೆ ವಿರುದ್ಧ ನಡೆಸಿದ ಹೋರಾಟ ಅಂತಿಂತಹದ್ದಲ್ಲ. ಹೀಗೆ ವರ್ಷಗಳು-ಶತಕಗಳು ಉರುಳಿ ಹೋಗಿವೆ. ಇವತ್ತು ಕುರುಬ ಜನಾಂಗಕ್ಕೆ ಮೀಸಲು ಮಾಡಿರುವ ಮಹಾಮಾನವತಾವಾದಿ ಸಂತ ಕನಕರು ನಡೆಸಿದ ಹೋರಾಟ ಅವಿಸ್ಮರಣೀಯ. ಆದರೆ ಕನಕನ ಕಿಂಡಿ ಕುರಿತು ಎದ್ದಿರುವ ವಾದ, ಪಟ್ಟಭದ್ರರು-ಅಕ್ಷರ ಸಂಸ್ಕೃತಿಯ ವಾರಸುದಾರರು ದಯಪಾಲಿಸಿರುವ ಸತ್ಯವಾದರು ಎಂಥಹದ್ದು ? ಶೂದ್ರನಾದ ಕನಕ ಕೃಷ್ಣನ ಗುಡಿಯೊಳಗೆ ಪ್ರವೇಶ ಮಾಡಿದುದೇ ಆದರೆ ದೇವರು ಮೈಲಿಗೆ ಆಗುವುದಿಲ್ಲವೆ ? ಉಡುಪಿಯಲ್ಲಿ ಹೀಗೆ ರಾಜಕೀಯ ನಡೆದರೆ, ಇವತ್ತಿಗೂ ದಲಿತರೂ ದೇವಾಲಯಗಳಿಂದ ದೂರವಿರುವುದು ನಮ್ಮ ದುರಾದೃಷ್ಟವೇ ಸರಿ.

ಖಾಲಿಪುಕ್ಕಟೆ ಪ್ರಚಾರಕ್ಕಾಗಿ-ಹಿಂದೂ ಮುಂದು ಒಂದು ಎನ್ನುವ ಸಂಘಗಳಿಗೆ. ದಲಿತನೊಬ್ಬ ಒಂದು ಪಕ್ಷದ ಅಧ್ಯಕ್ಷನಾದಂತೆ ತೆಹಲ್ಕಾದಂತಹ ಘಟನೆ ಈ ದೇಶದಲ್ಲಿ ಘಟಿಸುತ್ತದೆ. ಈದ್ಗಾದಂತಹ ಸಮಸ್ಯೆ ಇವತ್ತು ಜೀವಂತವಾಗಿರುತ್ತದೆ. ಕರ್ನಾಟಕದಂತ ರಾಜ್ಯದಲ್ಲಿ ನಕ್ಸಲೀಯರೆಂದು ಹುಸಿ ಎನ್‌ಕೌಂಟರ್‌ಗಳು ನಡೆದು ಹೋಗುತ್ತವೆ. ಇವಕ್ಕೆಲ್ಲ ಕೊನೆಯಾದರೂ ಯಾವಾಗ ? ಶತ ಶತಮಾನಗಳಿಂದಲೂ 'ಮನು' ವಿನ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬಂದಿರುವ ಈ ದೇಶದ ಜನ ಎಲ್ಲಿಯವರೆಗೆ ಸೋಗಲಾಡಿ Secularism ಬಿಡುವುದಿಲ್ಲವೋ ಅಲ್ಲಿಯವರೆಗೆ ಇವೆಲ್ಲವೂ ಸಮಸ್ಯೆಗಳಾಗೆ ಇರುತ್ತವೆ. ಕನಕರಂತಹ ದಾರ್ಶನಿಕನಿಗೆ ಕೃಷ್ಣ ಕಿಂಡಿಯೊಳಗಿಂದ ಕಾಣುತ್ತಲೇ ಇರುತ್ತಾನೆ.

"ನಾನು ನನ್ನ ಗೆಳತಿ ಕೆರೆಯನೀರಿಗೆ ಹೋಗುವಾಗ
ಕುಲವ ಕೇಳಿದರು ಬಹುಮಂದಿ
ಕುಲವ ಕೇಳಿದರು ಬಹುಮಂದಿ ನನ್ನ ಗೆಳತಿ
ಕುಲವೊಂದೆ ನಮ್ಮ ಮನವೊಂದೆ."

ಜನಪದರ ಈ ಹಾಡು ಕನಕರ ವಿಚಾರಕ್ಕೆ ಪೂರಕವಾಗಿದೆ.

❋ ❋ ❋ ❋ ❋

ಅಜಾತ ಶತ್ರು - ಎಂ. ಎಸ್. ಲಮಾಣಿ

ಬಾಗಲಕೋಟೆಯ ಬರಡು ನೆಲದಲ್ಲಿ ಹುಟ್ಟಿ ಕಾಳಿಯ ಉಗಮಸ್ಥಾನದಲ್ಲಿ ವಿಕಾಸಗೊಂಡ ಅಪರೂಪದ ಪ್ರತಿಭೆ ಪ್ರೊ. ಎಂ.ಎಸ್. ಲಮಾಣಿ. ವ್ಯವಸಾಯಗಾರರ ಕುಟುಂಬದಿಂದ ಬಂದ ಅವರು ಅಪ್ಪಟ ಗ್ರಾಮೀಣ ಪ್ರತಿಭೆ. ಭವಿಷ್ಯಕ್ಕಾಗಿ ಆಯ್ದುಕೊಂಡಿದ್ದು ಹಿಂದಿ ಸಾಹಿತ್ಯವನ್ನು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ. ಎಂ.ಎ. ಹಿಂದಿ ಮುಗಿಸಿದ ನಂತರ ಬದುಕನ್ನು ಅರಸುತ್ತಾ ಹೊರಟಿದ್ದು ದಾಂಡೇಲಿಗೆ. ನಗರದಲ್ಲಿಯ ಕೆನರಾ ವೆಲ್ಫೇರ ಟ್ರಸ್ಟ್‌ನ ಕಾಂಪೋಜಿಟ್ ಜ್ಯೂನಿಯರ್ ಕಾಲೇಜೊಂದರಲ್ಲಿ ಹಿಂದಿ ಉಪನ್ಯಾಸಕ ಹುದ್ದೆ. ಸ್ವಪ್ರತಿಭೆಯಿಂದ ಕಿರಿಯ ವಯಸ್ಸಿನಲ್ಲೇ ಪ್ರಾಚಾರ್ಯರಾಗಿ ಬಡ್ತಿ ಪಡೆದ ಅನಂತರ ಹಿಂದಿರುಗಿ ನೋಡದೆ ಯಶಸ್ಸು ಪಡೆಯುತ್ತ ಸಾಗಿದರು. ಕಾಲೇಜಿನ ವಾತಾವರಣವನ್ನು ಸುಧಾರಣೆ ಮಾಡುವುದರಿಂದ ಆರಂಭಿಸಿ ಕಾಲೇಜಿನ ಏಳಿಗೆಗಾಗಿ ಅವಿರತ ಪರಿಶ್ರಮ ಪಟ್ಟು ಇವತ್ತು ಎಲ್.ಕೆ.ಜಿ. ಯಿಂದ ಹಿಡಿದು ಪದವಿ ತರಗತಿಯವರೆಗೆ ತಮ್ಮ ಕಾಲೇಜಿನಲ್ಲೇ ತರಗತಿಗಳನ್ನು ಆರಂಭಿಸಿದ್ದು ಒಂದು ಸಾಧನೆಯೇ ಸರಿ. ವೃತ್ತಿಯಿಂದ ಹಿಂದಿ ಉಪನ್ಯಾಸಕರಾದರೂ ಪ್ರವೃತ್ತಿಯಿಂದ ಅತ್ಯುತ್ತಮ ಕನ್ನಡ ಸಾಹಿತ್ಯ ಪ್ರೇಮಿ.

ಕ್ರಿಯಾಶೀಲತೆಗೆ ಮತ್ತೊಂದು ಹೆಸರೇ ಪ್ರೊ. ಲಮಾಣಿ. ಸದಾ ಚಟುವಟಿಕೆಯಲ್ಲಿ ಭಾಗಿಯಾಗುತ್ತಾ ದಾಂಡೇಲಿಯಂತಹ ಸ್ತಬ್ಧಪರಿಸರ ನಗರದಲ್ಲಿ ಸದ್ದುಗದ್ದಲದಿಂದಲೆ ಮಿಂಚುತ್ತಿರುವ ದೈತ್ಯ ಪ್ರತಿಭೆ. ಹಸನ್ಮುಖಿ, ಜನಪರಕಾಳಜಿ ಹೊಂದಿರುವ, ಸದಾ ಸಹೋದ್ಯೋಗಿಗಳೊಂದಿಗೆ, ಸ್ನೇಹಭಾವದಿಂದಲೇ ಬೆರೆಯುತ್ತಿರುವ ಸಂಸ್ಥೆಯ-ಪ್ರಾಚಾರ್ಯ ಎಂ.ಎಸ್. ಲಮಾಣಿ. ದಿನಕರ ದೇಸಾಯಿಯವರು ಯಾವ ಆಶಯದಿಂದ ಕೆನರಾ ವೆಲ್ಫೇರ್ ಟ್ರಸ್ಟನ್ನು ಸ್ಥಾಪಿಸಿದರೋ ಆ ಆಶಯಗಳನ್ನು ಜೀವಂತವಾಗಿಟ್ಟುಕೊಂಡು ಸಂಸ್ಥೆಯನ್ನು ಬೆಳೆಸುತ್ತಿರುವ ಶ್ರೇಯಸ್ಸು ಎಂ.ಎಸ್.ಎಲ್ ಅವರಿಗೆ ಸೇರುತ್ತದೆ. ಕಾಲೇಜನ್ನು ಮಿನಿವಿಶ್ವವಿದ್ಯಾಲಯದ ಮಾದರಿಯಲ್ಲಿ ಬೆಳೆಸಿದ್ದು ಕಾಳಜಿಪೂರ್ವಕ ದುಡಿಯುವ ಮನಸ್ಸಿರುವಂತಹ ಲಮಾಣಿಯವರಿಂದ ಮಾತ್ರ ಸಾಧ್ಯ. ಅಪಾರ ಶಿಷ್ಯವೃಂದವನ್ನು ಹೊಂದಿರುವ ಅವರು ದಾಂಡೇಲಿಯವರಿಂದ ಮಿನಿ ಇಂಡಿಯಾದಲ್ಲಿ ಆರೋಗ್ಯಕರ ಸಮಾಜದ ಜೊತೆಗೆ ಆರೋಗ್ಯಕರ ಮನಸ್ಸುಗಳನ್ನು ಕಟ್ಟುವ ಕನಸುಗಳನ್ನು ಬಿತ್ತುವ ಕೆಲಸ ಮಾಡುತ್ತಿರುವ ಪ್ರೊ. ಲಮಾಣಿ ಒಬ್ಬ ಉತ್ತಮ

ಸಂಘಟಕರು. ದಾಂಡೇಲಿಯಂತಹ ಊರೊಳಗೆ ಮಾಸ್ಕೇರಿ ಎಂ.ಕೆ. ನಾಯಕರಂತಹ ಕಾಳಜಿಪೂರ್ಣ ಕವಿ ಸಂಘಟನೆಯ ಮುಂಚೂಣಿವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದು. ಎಂ, ಎಸ್. ಅವರು. ಹೀಗೆ ಸಂಘಟನಾ ಚತುರರಾದ ಇವರು ಡಾಂಬಿಕತೆ ಇಲ್ಲದ ಸಜ್ಜನರು. ಸಂಘಟನಾತ್ಮಕ ಹೋರಾಟದಲ್ಲಿ ಬಲವಾದ ನಂಬಿಕೆಯನ್ನು ಹೊಂದಿರುವಂಥ ಧೀಮಂತರು, ಅದಕ್ಕಾಗಿಯೇ ಅವರು ಶಿಷ್ಯರ ನಡುವೆ ಸದಾಕಾಲ ಒಳ್ಳೆಯ ಸಂಬಂಧ ಹೊಂದಿರುವ ಆದರ್ಶ ಶಿಕ್ಷಕರಾಗಿ ಉಳಿದಿರುವುದು. ನೇರನುಡಿ, ನಿಷ್ಠುರವಾದಿ ಸದಾ ಪರರ ಕುರಿತು ಯೋಚಿಸುವ ಎಂ.ಎಸ್. ಅನ್ಯಾಯವನ್ನು ಎಂದೂ ಸಹಿಸಿಕೊಳ್ಳುವುದಿಲ್ಲ. ಹುಟ್ಟು ಹೋರಾಟಗಾರರು, ದೀನದಲಿತರ ಬದುಕಿನ ಬಗ್ಗೆ ಕಳವಳ-ಕಾಳಜಿಯನ್ನು ಹೊಂದಿದ್ದು ಕಲಿತವರ ನೋವಿಗೆ ಸದಾಸ್ಪಂದಿಸುತ್ತ ಇಡೀ ದಾಂಡೇಲಿಯ ಎಲ್ಲ ವರ್ಗದ ಎಲ್ಲಾ ಧರ್ಮ, ಜಾತಿಯ ಜನರಿಗೆ ಚಿರಪರಿಚಿತರು. ಪೇಪರ್ ಮಿಲ್ ಕಾರ್ಮಿಕರು, ಆಡಳಿತ ಮಂಡಲಿಯಿಂದ ಹಿಡಿದು-ದಾಂಡೇಲಿ ಕೂಲಿಕಾರ್ಮಿಕರು, ವರ್ಕಶಾಪ್ ಹುಡುಗರು, ಕಿರಾಣಿ ಅಂಗಡಿಯ ಮಾಲೀಕರವರೆಗೆ ಪ್ರೊ. ಲಮಾಣಿಯವರಿಗೆ ಗೊತ್ತು.

ಬೇಕಾದವರು ಅಧಿಕಾರಿಗಳಾಗಲಿ, ರಾಜಕಾರಣಿಗಳಾಗಿರಲಿ ಅವರನ್ನು ಸಮಾನವಾಗಿಯೇ ಕಾಣುತ್ತಾರೆ. ಆದ್ದರಿಂದ, ಎಂ.ಎಸ್. ದಾಂಡೇಲಿಯ ಅಜಾತ ಶತ್ರುವೇ. ಗಣ್ಯರಿಂದ ಜನಸಾಮಾನ್ಯರವರೆಗೆ ಅಪಾರ ಸ್ನೇಹ ಬಳಗ ಹೊಂದಿರುವ ಭಾವಜೀವಿ. ಇವರು ನಮ್ಮ ನಿಮ್ಮೊಳಗಿರುವ ಅಪರೂಪದ ವ್ಯಕ್ತಿ. ಅನುದಾನಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರ ಹೋರಾಟದಲ್ಲಿ ಮುಂದಾಳು ನಮ್ಮ ಎಂ.ಎಸ್. ಅವರೆ. ಒಬ್ಬ ಸಂವೇದನಾಶೀಲ ಚಿಂತಕ, ಸಾಹಿತ್ಯ ಆರಾಧಕ, ಕಲಾಪೋಷಕರು ಆಗಿರುವರು. ಸನ್ಮಾನ್ಯರು ದಾಂಡೇಲಿಯಿಂದ ಹಿಡಿದು ಇಡೀ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆಯುವ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಯಲ್ಲಿ ಎಡೆಬಿಡದೆ ಪಾಲ್ಗೊಂಡು ಅದರ ಯಶಸ್ಸಿಗೆ ಕಾರಣಕರ್ತರಾದವರು.

ಪ್ರೊ. ಲಮಾಣಿಯವರದು ಒಂದು ಸಾರ್ಥಕ ದಾಂಪತ್ಯ ಬದುಕು. ಅವರ ಶ್ರೀಮತಿ ಪದ್ಮಾವತಿ ರಜಪೂತರು ಸಹ ಅಷ್ಟೇ ಸಜ್ಜನಿಕೆಯುಳ್ಳವರು. ವೃತ್ತಿಯಲ್ಲಿ ಶಿಕ್ಷಕಿಯಾಗಿರುವ ಅವರು ಅಪರೂಪದ ಕವಿಯೂ ಹೌದು. ಗಂಡನ ಹೆಜ್ಜೆಯಲ್ಲೇ ಹೆಜ್ಜೆ ಇಡುತ್ತಾ ಅವರ ಪ್ರತಿಯೊಂದು ಯಶಸ್ಸಿನಲ್ಲೂ ಪಾಲ್ಗೊಳುತ್ತಾ ತೆರೆಯ ಮರೆಯಲ್ಲೇ ಸರ್ವಸ್ವವನ್ನು ಸಾಧಿಸಿರುವ ಸಾಧ್ವಿ. ದುಡಿತ, ಜನಸೇವೆ ಮಕ್ಕಳು ಸಂಸಾರದ ಜಂಜಾಟದಲ್ಲಿ ಸದಾ ಹಸನ್ಮುಖಿಯಾಗಿ ಅತಿಥಿ ಸತ್ಕಾರ ಮಾಡುವ

ಹಿರಿಯಕ್ಕ ಪದ್ಮಾವತಿಯವರು ಎಂ.ಎಸ್.ಅವರಿಗೆ ಅಪರೂಪದ ಜೋಡಿಯೇ ಸರಿ. ಇಬ್ಬರು ಗಂಡು ಮಕ್ಕಳು, ತುಂಬು ಸಂಸಾರ. ಸದಾದಂಪತಿಗಳು ಪರೋಪಕಾರ ಮಾಡುತ್ತಲೇ ಬಂದಿದ್ದಾರೆ. ಯಾವತ್ತು ಕಲಹ ಕಾಣದ ಅರ್ಥಪೂರ್ಣ ಬದುಕು. ಕಷ್ಟ-ಸುಖದಲ್ಲಿ ನೋವು ನಲಿವಿನಲ್ಲಿ ಒಟ್ಟಾಗಿರುವ ಇವರ ಜೋಡಿ ನೂರ್ಕಾಲ ಬದುಕಲಿ ಎಂಬುದು ನಮ್ಮಂತಹ ಅನೇಕ ಸಹೃದಯಿಗಳ ಆಶಯವಾಗಿದೆ. ಆಚಾರ-ವಿಚಾರ ನಡವಳಿಕೆಯಲ್ಲಿ ಅತ್ಯಂತ ಕಳಕಳಿಯುಳ್ಳ ಶ್ರೀಮತಿ ಲಮಾಣಿಯವರು ಈ ಎಲ್ಲಾ ಪ್ರಶಂಸೆಗೂ ಅರ್ಹರು. ಜನೋಪಕಾರಿಯಾದ ಎಂ.ಎಸ್. ಮತ್ತೊಬ್ಬರಿಗೆ ಸಹಾಯ ಮಾಡುವುದಾಗಿ ಭರವಸೆ ಕೊಟ್ಟರೆ ಮುಗಿಯಿತು. ತಮ್ಮ ಶಕ್ತಿ ಮೀರಿ ಪ್ರಯತ್ನ ಮಾಡುತ್ತಾರೆ. ಅವರ ಜನಪರ ಕಾಳಜಿಯನ್ನು ನಾನು ಖುದ್ದಾಗಿಯೇ ನೋಡಿದ್ದೇನೆ. ಒಂದು ಕೆಲಸ ಆಗುತ್ತದೆ ಎಂದರೆ ಮಾತ್ರ ಆಗುತ್ತದೆ ಎನ್ನುತ್ತಾರೆ. ಯಾವ ಕಾರಣಕ್ಕೂ ಮಾಡಲಾಗದ ಕಾರ್ಯವನ್ನು ಒಪ್ಪಿಕೊಳ್ಳುವುದಿಲ್ಲ. ಅಂತಹ ಎಷ್ಟೋ ಉದಾಹರಣೆಗಳಿವೆ. ಆದ್ದರಿಂದಲೇ ಅವರು ದಾಂಡೇಲಿಯಿಂದ ಹಿಡಿದು ಉತ್ತರ ಕನ್ನಡ ಬಾಗಲಕೋಟೆ ಮತ್ತು ರಾಜ್ಯದ ಹಲವು ಕಡೆ ತಮ್ಮ ಆತ್ಮೀಯ ವಲಯದಲ್ಲಿ ಇಂದಿಗೂ ತಮ್ಮದೇ ಆದ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಒಬ್ಬ ವ್ಯಕ್ತಿಗೆ ಸಹಾಯವಾಗುತ್ತದೆ ಎಂದು ಗೊತ್ತಾದರೆ ತಮ್ಮ ಜೇಬಿನಿಂದ ಹಣವನ್ನು ಖರ್ಚು ಮಾಡಿ ಸಹಾಯ ಮಾಡುವ ಪ್ರವೃತ್ತಿ ಅವರದು. ಬಡತನ ಮೂಲದಿಂದ ಬಂದ ಅವರಿಗೆ ಬದುಕಿನ ಎಲ್ಲಾ ಮುಖಗಳ ಪರಿಚಯವೂ ಇದೆ. ಇದ್ದಾಗ ಅಹಂನಿಂದ ಮೆರೆಯುವ ಇವತ್ತಿನ ಎಷ್ಟೋ ಮೇಲಸ್ತರದ ಜನರಿಗೆ ಪ್ರೊಫೆಸರ್ ಒಂದು ಮಾದರಿ. ಒಂದು ಸಣ್ಣ ಅಧಿಕಾರವಿದ್ದರೆ ಅವಕಾಶವಾದಿಯಾಗಿ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವ ಗೋಸುಂಬೆಗಳಿಗೆ ಇವರು ಮಾದರಿಯಾಗಿ ನಿಲ್ಲುತ್ತಾರೆ. ವಿದ್ಯಾರ್ಥಿಗಳ ಯಶಸ್ಸು, ಆರೋಗ್ಯವಾದ ಸಮಾಜ, ಕೋಮು ಸೌಹಾರ್ದತೆ ಕನಸು ಕಂಡ ಈ ವ್ಯಕ್ತಿ ಯಾವತ್ತೂ ಅವಕಾಶವಾದಿಯಾಗಿ ಹಣದ ಹಿಂದೆ, ಅಧಿಕಾರದ ಹಿಂದ ಬೀಳಲಿಲ್ಲ. ಎಷ್ಟೋ ಜನ ಬಡವರಿಗೆ ಬದುಕನ್ನು ರೂಪಿಸಿಕೊಟ್ಟಿದ್ದಾರೆ. ಹಿಂದುಳಿದ ಕೋಮಿನಿಂದ ಬಂದ ವ್ಯಕ್ತಿಯೊಬ್ಬ ಆಶ್ಚರ್ಯಕರ ರೀತಿಯಲ್ಲಿ ಜಾತಿ ಪೀಡಿತ ಈ ಗೋಸುಂಬೆ ಸಮಾಜದಲ್ಲಿ ಪಂಡಿತರು ಪಾಮರರೇ ತುಂಬಿಕೊಂಡು ಅಕ್ಷರ ಸಂಸ್ಕೃತಿಯ ವಾರಾಸುದಾರರು ಎಂದು ಸುಳ್ಳು ಹೇಳುತ್ತಾ ಶತಮಾನಗಳಿಂದಲೂ ಮೆರೆಯುತ್ತಾ ಬಂದ ಸಮಾಜದ ಕಂಟಕ ನಡುವೆ ತಲೆ ಎತ್ತಿ ಮುಗಿಲು ನೋಡುತ್ತಾ ಒಂದು ಅನೋನ್ಯ ಭವಿತವ್ಯದ ಸಮಾಜದ ಕನಸು ಕಂಡ ಧೀಮಂತ ಹೋರಾಟಗಾರ ಪ್ರೊ. ಲಮಾಣಿ ನಮ್ಮಂತಹ ಸಾವಿರ-ಸಾವಿರ ಯುವ ಮನಸ್ಸುಗಳಿಗೆ ಪ್ರೇರಣೆಯಾಗಿ ನಿಲ್ಲಲಿ.

ನನ್ನ ದೃಷ್ಟಿಯಲ್ಲಿ- ಕುವೆಂಪು ಅವರ ಅನಿಕೇತನ

ಜಗದ ಕವಿ, ಯುಗದ ಕವಿ ಕುವೆಂಪು ಕರುನಾಡು ಕಂಡ ಶ್ರೇಷ್ಠರಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವಂತಹವರು. "ಜೈ ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ" ಯಿಂದ ಆರಂಭಗೊಂಡು "ಆಗು ನೀ ಅನಿಕೇತನ"ದವರೆಗೆ ಬೆಳೆದು ನಿಂತವರು. ಒಬ್ಬ ವಿಚಾರವಾದಿಯಾಗಿ, ಕವಿಯಾಗಿ, ಕಾದಂಬರಿಕಾರರಾಗಿ, ಸಣ್ಣ ಕತೆ-ಲಲಿತ ಪ್ರಬಂಧ, ವಿಮರ್ಶೆ-ಹೀಗೆ ಎಲ್ಲಾ ಆಯಾಮುಗಳನ್ನು ದಾಟಿ ಮೇರು ಪರ್ವತವಾಗಿ ನಿಂತ ಬೃಹದ್ರೂಪಿ ಕುವೆಂಪುರವರ ಅನಿಕೇತನ ಇವತ್ತು ತುಂಬಾ ಪ್ರಸ್ತುತ. 'ಅನಿಕೇತನ' ಸಂಕಲನದಲ್ಲಿ ಪ್ರಕಟಿತವಾಗಿರುವ ಈ ಕವನ ವಿಶ್ವಮಾನವ ಆಶಯವನ್ನು ಹೊಂದಿರುವಂತಹುದು. ರುವಾಂಡ, ಹುಟು-ಟುಟು, ಇಸ್ರೇಲ್, ಪ್ಯಾಲೆಸ್ಟೀನ್, ಅಮೇರಿಕಾ, ಭಾರತ-ಶ್ರೀಲಂಕಾ, ಪಾಕಿಸ್ತಾನ, ಪಾಕ್ ಆಕ್ರಮಿತ ಕಾಶ್ಮೀರ ಎಲ್ಲಾ ಕಡೆಗಳಲ್ಲೂ ನರಮೇಧ ನಡೆಯುತ್ತಲಿದೆ. ಇದಕ್ಕೆ ಕಾರಣ ಹುಡುಕುತ್ತಾ ಹೊರಟರೆ ಬಹುಶಃ ಮನುಷ್ಯನ ದುರಾಸೆ, ಆಮಿಷ, ಪ್ರತಿಷ್ಠೆ, ಶ್ರೇಷ್ಠತೆಯ ಪರಕಾಷ್ಠತೆ ಎಂದೆನಿಸಿದರು. ಒಳಸ್ತರದಲ್ಲಿ ತನ್ನ Destructive Nature' ಇದೆಯಲ್ಲಾ ಅದು ಸುಪ್ತವಾಗಿ ಕ್ರಿಯೆ ಮಾಡುತ್ತಿದೆ ಎಂದಿನಿಸದೆ ಇರಲಾರದು.

ಕುವೆಂಪು ಹೇಳಿರುವಂತೆ ಮನೆಯನ್ನು ಕಟ್ಟದಿರು, ಕೊನೆಯನೆಂದು ಮುಟ್ಟದಿರು, ಓ ಅನಂತವಾಗಿರು- ಈ ಹಿನ್ನೆಲೆಯಲ್ಲಿ ಯೋಚಿಸಿದರೆ ಎಲ್ಲ ದಿಕ್ಕು ತೆರೆದುಕೊಂಡು ಬದುಕುವುದು ಅನಿವಾರ್ಯವಾಗಿದೆ. ಇಸ್ರೇಲ್-ಪ್ಯಾಲಸ್ಟೇನ್‌ಗಳ ನಡುವೆ ನರಮೇಧ ಉಂಟಾಗುತ್ತಿರಲಿಲ್ಲ. ಪ್ರತಿದಿನ ಸಾಯುತ್ತಿರುವ ಮುಸಲ್ಮಾನರಾಗಲೀ, ಯಹೂದ್ಯರಾಗಲಿ ಬದುಕುಳಿಯುತ್ತಿದ್ದರೇನೊ. ಅಮೇರಿಕ ಅವೆರಡರ ನಡುವೆ ನಿಂತು ಬೆಂಕಿ ಹಚ್ಚುವುದು ಇರುತ್ತಿರಲಿಲ್ಲ. ಮನೆ ಎಂಬ ಸಂಕೋಚಿತ ಭಾವನೆ ನಮ್ಮನ್ನು ಯಾವ ಹಂತಕ್ಕೆ ಮುಟ್ಟಿಸುತ್ತದೆ ಎಂದರೆ, ಮನೆ-ಮನೆಗೊಂದು ರಕ್ಷಕಗೋಡೆ, ಅದಕ್ಕೊಂದು ಸರಹದ್ದು. ಪಾಕ್-ಭಾರತ, ಭಾರತ-ಚೀನಾ, ಭಾರತ-ಬಾಂಗ್ಲಾದೇಶಗಳ ನಡುವೆ ನಡೆಯುತ್ತಿರುವುದಾದರೂ ಏನು ? ಎಲ್ಲಿಯವರೆಗೆ ಹೀಗೆ ಮುಂದುವರೆದೀತು ಕುವೆಂಪು ಕಾವ್ಯ ಸೃಷ್ಟಿ, ಮಾನವ ಬದುಕಿನ ಪರಿಪೂರ್ಣಗೊಂಡಿದ್ದೆಂಬ ಮಾತು ನಿರ್ವಿವಾದ. 'ಪ್ರೇಮ ಚುಂಬಕ ಶಕ್ತಿಗೆ ಒಳಗಾಗದ ಪ್ರಪಂಚಕ್ಕೆ ಜೀವನವಿಲ್ಲ' ಎನ್ನುವ

ಮಾತಾಗಲಿ 'ಪ್ರೀತಿ-ಪ್ರೇಮದ ಸ್ಪರ್ಶವಿಲ್ಲದವನು ಕತ್ತಲೆಯಲ್ಲಿ ನಡೆಯುತ್ತಾನೆ' ಎಂಬ ಪ್ಲೇಟೋನ ಮಾತು ಎಷ್ಟು ಪ್ರಸ್ತುತ. ಕವಿಯ ಕಣ್ಣಿಗೆ ಇಡೀ ವಿಶ್ವದ ವಿರಾಟ್‌ರೂಪವೇ ಕಾಣುತ್ತದೆ. ಅನಿಕೇತನವನ್ನು ನಾನು Generalize ಮಾಡುತ್ತಿದ್ದೇನೆ ವಿನಃ ಅದನ್ನು ಕುರಿತು ಪಾಂಡಿತ್ಯ ಪೂರ್ಣವಾದ ವಿಮರ್ಶೆಯನ್ನೇನು ಮಾಡುವ ಗೋಜಿಗೆ ಹೋಗುತ್ತಿಲ್ಲ. ಮೇಲಸ್ತರದಲ್ಲಿ ನಿಂತು ನೋಡುವ ಕಿರು ಪ್ರಯತ್ನ ನನ್ನದು.

ಕುವೆಂಪು ಅವರ ವಿಶಾಲದೃಷ್ಟಿ-ಸತ್ಯಂ, ಶಿವಂ-ಸುಂದರಂ ಉಕ್ತಿಯ ಹಿನ್ನೆಲೆಯದ್ದೇ ಆಗಿದೆ. ಶಂಕರ, ವಿವೇಕಾನಂದ, ಟಾಗೋರ್, ಅರವಿಂದರಂಥ ಉನ್ನತ ವಿಚಾರ ಲಹರಿಯು ಅವರಿಗಿತ್ತು. ವಿಶ್ವದ ಆಗುಹೋಗುಗಳ ಬಗ್ಗೆ ಏನು, ಏಕೆ, ಯಾರು, ಯಾವಾಗ, ಹೇಗೆ ಎಂಬೆಲ್ಲಾ ಪ್ರಶ್ನೋಪನಿಷತ್ತುಗಳಿಗೆ ಕುವೆಂಪುರವರಲ್ಲಿ ಉತ್ತರೋಪನಿಷತ್ತುಗಳಿವೆ. ವಿಶ್ವ ವ್ಯಾಪ್ತನಾದ ಆ ಪುರುಷೋತ್ತಮನ ಚೈತನ್ಯವನ್ನು ನಾವಿಲ್ಲಿ ಗುರುತಿಸಬಹುದು. ಅನಿಕೇತನ ಕುವೆಂಪು ಅವರ ಪ್ರಸಿದ್ಧವೂ ಜನಪ್ರಿಯವೂ ಆದ ವಿಶ್ವಮಾನವ ಗೀತೆ. ಅನಿಕೇತನ ಸಂಕಲನದಲ್ಲೇ ಅತ್ಯಂತ ಪ್ರಸ್ತುತ ಕವಿತೆ ಇದಾಗಿದೆ. ರೂಪ, ನಾಮ, ಮತ, ಮನೆಯಂಥ ಎಲ್ಲಾ ಕುರುಹುಗಳನ್ನು ಮೀರಿ ಅನಿಕೇತನವಾಗಿ ವಿಶ್ವಮಾನವನಾಗುವ ಬಯಕೆ ಕವಿಗೆ, ಇದು ಬರಿ ಕವಿಗಷ್ಟೇ ಸೀಮಿತಗೊಳಿಸದೇ ಇಡೀ ಮನುಕುಲಕ್ಕೆ ಸಾರುವ ವಿಶ್ವಮಾನವಗೀತೆ. 'ಅನಿಕೇತನ' ಧ್ವಜವಿಲ್ಲ. ಮನೆಯಲ್ಲಿದ್ದ, ಕುರುಹುಗಳಿಲ್ಲದ ಅತೀತವಾದ ಅಂತ್ಯವಿಲ್ಲದ ದಿಕ್ಕುಗಳಲ್ಲಿ ಸಂಚರಿಸುವ ಬಯಕೆ ಕವಿಗೆ ಭಾವನೆಗೂ ಸೀಮಾತೀತವಾದ ಪರಿಕಲ್ಪನೆ ಇತ್ತು ಎಂಬುದು ಈ ಕವಿಯ ಕವಿತೆ ಸಾಲುಗಳಿಂದ ಸ್ಪಷ್ಟವಾಗುತ್ತದೆ.

ರೂಪರೂಪಗಳನ್ನು ದಾಟಿ
ನಾಮಕೋಟಿಗಳನ್ನು ಮೀಟಿ
ಎದೆಯ ಬಿರಿಯೆ ಭಾವದೀಟಿ

ವರ್ಗವರ್ಣಗಳ ಭೂತ ಎಡಬಿಡದೆ ಮನುಕುಲವನ್ನು ಕಾಡುತ್ತಿರುವ ಸಂದರ್ಭದಲ್ಲಿ Imperialism, ' 'Colour Discrimination' ಗಳಂತಹ ಅನಿಷ್ಠ ಪೀಡೆಗಳು ಇವತ್ತು ನಮ್ಮಗಳ ನಡುವೆ ಪ್ರಚಲಿತದಲ್ಲಿವೆ. ಕಪ್ಪು ನಿಗ್ರೋಗಳು ಕರಿಯ ಅಮೇರಿಕನ್ನನು ಬದುಕಿರುವ ಸಂದಿಗ್ಧ ಸನ್ನಿವೇಶ ಬಹುಶಃ ಕವಿಯ ಮನಸ್ಸನ್ನು ಕಲಕಿದೆ ಅನಿಸುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲಾ ರೂಪಗಳನ್ನು ದಾಟಿ, ನಾಮಕೋಟಿಯನ್ನು ಮೀಟಿ ಎದೆಯೊಳಗೆ ಸೌಹಾರ್ದ ಭಾವನೆ ಮೂಡಲಿ ಎನ್ನುವುದೇ ಕವಿಯ ಆಶಯ.

ನೂರು ಮತದ ಹೊಟ್ಟ ತೂರಿ
ಎಲ್ಲ ತತ್ವದೆಲ್ಲೆ ಮೀರಿ
ನಿರ್ದಿಗಂತವಾಗಿ ಏರಿ,

ಇಲ್ಲಿ ಶರೀಫರ ಒಂದು ಪದ್ಯವನ್ನು ಪ್ರಸ್ತಾಪ ಮಾಡಿದರೆ ಹೆಚ್ಚು ಸೂಕ್ತ ಅಂತ ನನಗೆ ಅನಿಸುತ್ತದೆ.

ಬೋಕಿಯೊಳಗೆ ಮೂರುಲೋಕ ಹುಟ್ಟಿತು

ಆ ಕುಲ ಈ ಕುಲ ಎಲ್ಲಿತ್ತು
ಬಲ್ಲವರಿದ್ದರ ತಿಳಿದು ಹೇಳಿ
ಮುಲ್ಲಾನ ಮಸೀದಿ ಎಲ್ಲಿತ್ತು

ಎನ್ನುವಲ್ಲಿ, ಮತದ ಕಲ್ಪನೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿರುವ ಷರೀಫ್‌ರಾಗಿರಬಹುದು. 'ಕುಲದನೆಲೆಯನೆನಾದರು ಬಲ್ಲಿರಾ ?' ಎಂದು ಕೇಳುವ ಕನಕದಾಸರಾಗಿರಬಹುದು. ಪಂಪಕವಿಯ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಆಶಯ ತಳೆದು ಬರೆದದ್ದನ್ನು ನೋಡಿದಾಗ ಶರಣರ-ಬೌದ್ಧರ ಪ್ರಭಾವದಿಂದ ಕವಿ ಈ ಮಾತುಗಳನ್ನು ಆಡಲಿಕ್ಕೆ ಸಾಧ್ಯವಾಗಿರಬಹುದು ಎಂದು ಎನಿಸದೆ ಇರಲಾರದು. ಇವತ್ತು ನಡೆಯುತ್ತಿರುವ ಸಂಘರ್ಷ ಅದೇ ಲಿಲ್ಪೆ 'WTO' ಮೇಲಿನ ವಿಮಾನ ದಾಳಿಯ ಹಿನ್ನೆಲೆ, ನಮ್ಮ ನೆರೆಯ ಅಫ್ಘಾನಿಸ್ತಾನ ಮೇಲಿನ ದಾಳಿ, ಇರಾಕ್ ಮೇಲೆ ಅಮೆರಿಕಾದ ಆಕ್ರಮಣ ಇವೆಲ್ಲವೂ ಮತದ ಮತಾಂಧತೆಯಿಂದ ಆದವೆ. ಎರಡು ಮಹಾಯುದ್ಧಗಳನ್ನು ಕಂಡು ತಲ್ಲಣಿಸಿದ ಜಗತ್ತು ಈ ಕೋಮು ವೈರುಧ್ಯದಿಂದಲೆ ಮತ್ತೇನಾದರೂ ಮೂರನೇ ಮಹಾಯುದ್ಧವಾಗಿ ಬದುಕು ಭೂಮಿಯ ಮೇಲಿಂದ ಅಳಿಸಿ ಹೋಗಬೇಕಾದರೆ ಈ ಮತದ ಮೌಢ್ಯತೆಯ ಕಾರಣವಾಗುವುದರಲ್ಲಿ ಸಂದೇಹವಿಲ್ಲ. ಜೀಹಾದ್ ಆಗಿರಬಹುದು, ಕ್ರೈಸ್ತರು ಪ್ರತಿಪಾದಿಸುವ ತಾವೇ ಶ್ರೇಷ್ಠ ಜನಾಂಗ, ತಮ್ಮ ದೇವರೇ ಜಗತ್ತಿನಲ್ಲಿ ಶ್ರೇಷ್ಠ ದೇವರೆಂದು ಹೇಳುತ್ತಾ ಮತ್ತೊಬ್ಬರ ಬದುಕಿನ ಜೊತೆಗೆ ಸೆಣಸಾಡುವ-ಸರಸವಾಡುವ ಪ್ರವೃತ್ತಿ ಬೆಳಸಿಕೊಂಡವರಿಗೆ ಇದರ ಅರಿವಾಗಬೇಕಾಗಿದೆ. ಸಿದ್ಧಾಂತ-ತತ್ವಗಳ ಗಡಿಯನ್ನು, ಸೀಮೆಯನ್ನು ಮುರಿದು ದಿಕ್ಕು ದೆಸೆಯಿಲ್ಲದೆ ದಿಗಂತವೇ ಇಲ್ಲದ ಗಡಿಯಾಚೆಗೆ ಏರು ಎಂದು ಕರೆಯಿತ್ತ ಕವಿ ನಿಜವಾಗಿಯೂ ಸರ್ವಶ್ರೇಷ್ಠರೆ ಸರಿ.

ಎಲ್ಲಿಯೂ ನಿಲ್ಲದಿರು
ಮನೆಯನೆಂದು ಕಟ್ಟದಿರು

ಸ್ಥಾವರವಾಗಿ ಸ್ಥಾಪಿತಗೊಳ್ಳದೇ ಜಂಗಮವಾಗಿ ತಿರುಗಾಡುತ್ತಾ ಗೊತ್ತು ಗುರಿಯಿಲ್ಲದೆ ಒಂದು ನಿರ್ದಿಷ್ಟ ಜಗತ್ತಿಲ್ಲದೆ ಇಡೀ ಜಗದ ಜನರ ಜೀವನಾಡಿಯಾಗು ಎನ್ನುವಲ್ಲಿ ಕವಿಯ ಶ್ರೇಷ್ಠತೆ ತಿಳಿಯುತ್ತದೆ. ಒಬ್ಬರ ಕಂಡರೆ ಒಬ್ಬರಿಗೆ ಆಗುವುದಿಲ್ಲ, ಒಬ್ಬರ ಕಂಡರೆ ಒಬ್ಬರಿಗೆ ಹೊಟ್ಟೆ ಉರಿ, ಇಲ್ಲಿ ಯಾರು ಯಾರನ್ನು ಪ್ರೀತಿಸುವುದಿಲ್ಲ. ಪ್ರೀತಿಸುವುದು ಬೇಡ. ಸಹಿಸಿಕೊಂಡರೆ ಸಾಕು ಜಗತ್ತು ಉದ್ಧಾರವಾದರೂ ಆದೀತು. ಸಹಿಸಿಕೊಳ್ಳವಂತಹ ತಾಳ್ಮೆ ವ್ಯವಧಾನ ಕೂಡ ನಮ್ಮ ಜನರಿಗಿಲ್ಲದ ಸಂದರ್ಭ ಒದಗಿದೆ.

Man is endangered Species' ಎಂದು ಈಗಾಗಲೇ ವಿಜ್ಞಾನಿಗಳು, ಬುದ್ಧಿಜೀವಿಗಳು ಮನುಷ್ಯನ ಮನಸ್ಸಿರುವ ಜನರು ಘಂಟಾಘೋಷವಾಗಿ ಸಾರುತ್ತಿರುವ ಈ ಸಂದರ್ಭದಲ್ಲಿ 'ಡೈನಾಸರಸ್' ಯುಗದ ನೆನಪಾಗುತ್ತದೆ. ಅತ್ಯಂತ ಬಲಿಷ್ಠ ಮತ್ತು ಕ್ರೂರ ಪ್ರಾಣಿಯಾದ 'ಡೈನಾಸರಸ್' ತಮ್ಮ ವಿನಾಶಕ್ಕೆ ಹೇಗೆ ತಾವೇ ಕಾರಣವಾದಂತೆ ಮೇಧಾವಿ, ಬುದ್ಧಿವಂತನೆಂದೆನಿಸಿಕೊಂಡಿರುವ ಮನುಷ್ಯ ಪಳಿಯುಳಿಕೆಯಾದಾನು ಎಚ್ಚರಿಕೆ.

ಈ ಹಿನ್ನೆಲೆಯಲ್ಲಿ ನಮ್ಮ ಸೀಮೆಯನ್ನು ಗುರುತಿಸಿಕೊಂಡು ಬದುಕುವುದು ಅನಿವಾರ್ಯವಾಗಿದೆ. ಅಮೇರಿಕಾ ಮುಂದುವರೆದ ರಾಷ್ಟ್ರವೆಂದು ಎಲ್ಲರ ಮೇಲು ತನ್ನ ಹಿಡಿತ ಸಾಧಿಸಲು ಹೊರಟರೆ ಮತ್ತೊಂದು ಇಂಗ್ಲೆಂಡ್ ಆಗುವುದರಲ್ಲಿ ಮರುಮಾತಿಲ್ಲ. ಮನುಕುಲದ ಇತಿಹಾಸದಲ್ಲಿ ಸಾಕ್ಷಿಯಾಗಿ ನಿಂತಿರುವ ಅನೇಕ ನಾಗರಿಕತೆಗಳನ್ನು ನೋಡಿ ಕಲಿಯಬೇಕು.

ಗುಡಿ ಚರ್ಚ್, ಮಸೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯಬನ್ನಿ

ವ್ಯಕ್ತಿ, ವ್ಯಕ್ತಿಗಳ ಅರಿವಿನ ನಡುವೆ ಅಡ್ಡಗೋಡೆಗಳನ್ನು ಮತಾಂಧತೆಯನ್ನು ಮರೆತು ಜಗದ ಮಾನವನ ವೈರಿಗಳಾದ ಬಡತನ ಮೌಢ್ಯತೆಗಳನ್ನು ಹೋಗಲಾಡಿಸಿದರೆ ಮಾತ್ರ ಮನುಕುಲಕ್ಕೆ ಒಳಿತು ಎಂದು ಕವಿ ಸಾರಿದ್ದಾರೆ. ಭಾರತೀಯತೆಗಿಂತಲೂ ಮಿಗಿಲಾದದ್ದು ವಿಶ್ವಭ್ರಾತೃತ್ವ. ಇಂತಹ ಉದಾತ್ತವಾದ ಅಲೋಚನೆ ಮಾಡಿದ ಕವಿಗೆ

ಇಂದು ರಾಷ್ಟ್ರ-ರಾಜ್ಯಗಳ ಜನರು ಕಿತ್ತಾಡುತ್ತಿರುವ ಪರಿಸ್ಥಿತಿ ಏನಾದರೂ ಕಂಡಿದ್ದರೆ. ? ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ಆದ್ದರಿಂದ ಅವರ ಅನಿಕೇತನ ಪದ್ಯ ಬಿಗಡಾಯಿಸುತ್ತಿರುವ ಇವತ್ತಿನ ಪರಿಸ್ಥಿತಿಗೆ ಉತ್ತಮ ಅವರ ಈ ಆಶಯ ಕೋಮು ದಳ್ಳುರಿಯಲ್ಲಿ ಉರಿಯುತ್ತಿರುವ ನಮ್ಮಂತಹವರನ್ನ ಒಂದು ಮಾಡುವಲ್ಲಿ ಸಹಾಯಕವಾಗಿದೆ.

❄ ❄ ❄ ❄ ❄

ಕನಸು ತುಂಬಿದ ಕಂಗಳು ಬೇಕು

We shall build tomorrow
A new clean town,
with no more sorrow
where lovely people walk up and down

-W.H. Auden.

ಆತಂಕವಿಲ್ಲದ ನಿರುಮ್ಮಳ ಬದುಕನ್ನು ಈ ಭೂಮಿಯ ಮೇಲೆ ಕಾಣುವ ಕ್ಷಣಕ್ಕಾಗಿ ತವಕಿಸುತ್ತಿರುವ ಕನಸಿನ ಮಾತುಗಳಿದ್ದವು. ಧರೆ ಹತ್ತಿ ಉರಿದೊಡೆ ನಿಲ್ಲಬಹುದೆ? 12 ಶತಮಾನದಲ್ಲಿ ಶರಣರನ್ನು ಕಾಡಿದ ಈ ಪ್ರಶ್ನೆ. ಇವತ್ತು ಭೂಮಿಯ ಮೇಲೆ ಮನುಷ್ಯ ಪ್ರಾಣಿಯೊಂದು ಹೆಮ್ಮೆ ಪಟ್ಟುಕೊಳ್ಳುತ್ತಿರುವ ಪ್ರತಿಯೊಬ್ಬನನ್ನು ಕಾಡುತ್ತಿದೆ. ಇಸ್ರೇಲ್-ಪ್ಯಾಲೆಸ್ತೈನ್, ಶ್ರೀಲಂಕಾ ತಮಿಳರು, ಹುಟು-ಟುಟು-ನಡುವಿನ ಜನಾಂಗೀಯ ದ್ವೇಷದಿಂದ ಆರಂಭಗೊಂಡು-ಬಾಬರಿ ಮಸೀದಿ ಕೆಡುಹಿದ ಕರಾಳ ದಿನದಂದು ತಾನು ಹುಟ್ಟಿ ಬೆಳೆದು ನನ್ನೊಂದಿಗೆ ಶಾಲೆಯಲ್ಲಿ ಆಟವಾಡಿದ ಗೆಳೆಯ ರಹಮತುಲ್ಲಾ ತನ್ನೂರಾದ ದುಗ್ಗಾವತ್ತಿಯನ್ನು ಬಿಟ್ಟು ಕುಲಬಾಂಧವರಿರುವಲ್ಲಿಗೆ ಹೋದ ದಿನದ ನೆನಪು ಇನ್ನೂ ಹಸಿಹಸಿಯಾಗಿದೆ. ಇಲ್ಲಿ ತಲೆಯೊಳಗೆ ಮೆದುಳಿರುವ ಪ್ರತಿಯೊಬ್ಬರೂ ಸೂಕ್ಷ್ಮವಾಗಿ ಗಮನಿಸಬೇಕು. ನನ್ನ ಮುಸಲ್ಮಾನ ಗೆಳೆಯನನ್ನು ಊರು ಬಿಡಿಸಿದ ಕೋಮುವಾದಿ ಶಕ್ತಿಯ ತಾಕತ್ತು ಎಷ್ಟೊಂದು ಪ್ರಬಲವಾಗಿದ್ದೀತು. ನಾನು ಆಗ ಬಿ.ಎ. ಅಂತಿಮ ವರ್ಷದಲ್ಲಿದ್ದೆ, ಪೊಲೀಸ್ ಬಂದು ಒತ್ತಾಯದಿಂದ ಹಾಸ್ಟೆಲ್ ಬಿಡಿಸಿದರು. ಸ್ಪಷ್ಟವಾಗಿ ಅರ್ಥವಾಗದಿದ್ದರೂ, ಕ್ರಮೇಣ ಕೋಮುವಾದ ಕೆಂಡದುಂಡೆಯಾಗಿ ಹುಬ್ಬಳ್ಳಿಯ ಈದ್ಗಾ ಹಾಗೆಯೇ ಇಡೀ ನಾಡಿನ ಸೂಕ್ಷ್ಮ ಪ್ರದೇಶಗಳು ಪೊಲೀಸರಿಂದ ತುಂಬಿಕೊಂಡಿದ್ದಂತೂ ಸತ್ಯ. ಎಲ್ಲಿಯವರೆಗೆ ಮನುಷ್ಯ ತನ್ನ ಪರಿಮಿತಿಯನ್ನು ಅರ್ಥೈಸಿಕೊಳ್ಳುವುದಿಲ್ಲವೋ, ಎಲ್ಲಿಯವರೆಗೆ ಮನುಷ್ಯನಾಗಿ ವಿಚಾರ ಮಾಡುವುದಿಲ್ಲವೋ ಅಲ್ಲಿಯವರೆಗೆ ಕೋಮುವಾದ ವಿಷಜ್ವಾಲೆಯಾಗಿ, ಕಿಡಿಕಾರಿದವನನ್ನು ಬಿಟ್ಟು ಏನೂ ಅರಿಯದ ಮುಗ್ಧರ ಮನೆಗಳನ್ನು ಸುಟ್ಟು ಕರಕಲಾಗಿಸುತ್ತಲೇ ಹೋಗುತ್ತದೆ. ಹಿಂದೂ ಕೋಮುವಾದ ಮತ್ತು ಮುಸ್ಲಿಂ

ಮೂಲಭೂತವಾದ ಬೃಹದಾಕಾರವಾಗಿ ಬೆಳೆಯುತ್ತಲೇ ಹೋಗುತ್ತವೆ. ಕೋಮುವಾದ ಮತ್ತು ಮೂಲಭೂತವಾದ ಒಂದನ್ನೊಂದು ತಿಂದು ಬದುಕುತ್ತಿರುವ ವಿಷಕಾರಿ ಪ್ರಾಣಿಗಳು. ಇವು ಕೋಮುವಾದಿ ವಿಷವನ್ನು ಆಳವಾಗಿ ಹರಡುತ್ತಿವೆ. ಈ ದೇಶದ ಏಕತೆ ಮತ್ತು ಸಮಗ್ರತೆಗೆ ಅಪಾಯವುಂಟುಮಾಡುತ್ತವೆ. ಈ ದೇಶದಲ್ಲಿ ಕೋಮುವಾದ ಹರಡಲು ಫ್ಯಾಸಿಸ್ಟ್ ಮನಸ್ಸುಗಳು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿವೆ. ಈ ನಗ್ನಸತ್ಯ ಈ ದೇಶದ ದಲಿತರಿಗೆ, ಬಡವರಿಗೆ, ಅಲ್ಪಸಂಖ್ಯಾತರಿಗೆ ಅರಿವಾಗುವುದೇ ಇಲ್ಲ. ಮೂಲಭೂತವಾದ ನಂಬಿರುವ ಜನರಿಗೆ ಬಹುಪಾಲು ದಲಿತರ ಹೀನಾಯ ಬದುಕಿನ ಕ್ಲಿಷ್ಟತೆಯ ಅರಿವು ಆಗುವುದಿಲ್ಲ. ಒಪ್ಪತ್ತಿನ ಊಟಕ್ಕಾಗಿ, ಯಾವುದೋ ಆಮಿಷಕ್ಕೆ ಬಲಿಯಾಗಿ ಪಾಷಂಡಿಗಳ ದಾಳಕ್ಕೆ ಬಲಿಯಾಗುವ ಜನ ನಮ್ಮವರಲ್ಲದೆ ಮತ್ಯಾರು ಅಲ್ಲ. ಅಲ್ಲಿ ಮಸೀದಿ ಕೆಡವಿದಾಗ ಪಿತ್ತ ನೆತ್ತಿಗೇರಿಸಿಕೊಂಡ ಫ್ಯಾಸಿಸ್ಟರು ಯಾರು ಪ್ರಾಣಬಲಿಕೊಡಲಿಲ್ಲ. ತಮ್ಮ ಬದುಕನ್ನು Safegaurd ಮಾಡಿಕೊಳ್ಳುವ ಸಲುವಾಗಿ ಮಾರಿಗುಡಿಗೆ ಹರಿಕೆ ಕೊಡುವಂತೆ ಸಾವಿರಾರು ಕೊಳಚೆ ಪ್ರದೇಶದ ಜನರನ್ನು ಬಲಿಕೊಟ್ಟರು. ಬಾಬರಿ ಮಸೀದಿ ನಂತರ ಬಾಬಾಬುಡನ್‌ಗಿರಿ ಬುಡಕ್ಕೆ ಕೈಹಾಕಿರುವ ಈ ಫ್ಯಾಸಿಸ್ಟ್ ಆತ್ಮಗಳು ಪ್ರೇತಾತ್ಮಗಳಾಗಿ ಈ ದೇಶದ ಜನರ ಬದುಕಿಗೆ ಗ್ರಹಣ ಒಡ್ಡಿದ್ದಾರೆ. ಬಾಬರಿ ಮಸೀದಿಯನ್ನು ಕೆಡುಹಿದ ಮಾರನೆಯ ದಿನದ ಕರಾಳರಾತ್ರಿ ಸಾವಿರಾರು ಬಡ ಮುಸಲ್ಮಾನರಿಗೆ, ಸಾವಿರಾರು ಬಡಕೂಲಿಕಾರರಿಗೆ, ಗುಡಿಸಲೊಳಗೆ ವಾಸಿಸುತ್ತಿದ್ದ ದಲಿತರಿಗೆ ಹಗಲ ಭರವಸೆಯನ್ನು ತರಲೇ ಇಲ್ಲ. ಮಂಡಕ್ಕಿ ಸುಡುವ ಭಟ್ಟಿಯೊಳಗೆ, ಕೊಳಚೆ ಪ್ರದೇಶದ ಚರಂಡಿಗಳಲ್ಲಿ ಎಲ್ಲೆಂದರಲ್ಲಿ ದೀನ ದಲಿತರ ಹೆಣಗಳು ರಾಶಿರಾಶಿಯಾಗಿ ಬಿದ್ದಿದ್ದವು. ಅನಕ್ಷರಸ್ಥ, ಅವೈಜ್ಞಾನಿಕ ಚಿಂತನೆಯಲ್ಲಿ ತೊಡಗಿರುವ ದಲಿತರು ಉಳ್ಳವರ ಜಾಲಕ್ಕೆ ಬಲಿಪಶುಗಳಾಗಿ ಬಿಡುತ್ತಾರೆ. ಒಂದು ಬಾಟಲು ಸಾರಾಯಿ, ಒಂದು ಹೊತ್ತು ಬಾಡಿನ ಊಟಕ್ಕೆ ತಮ್ಮ ಅಸ್ತಿತ್ವವನ್ನೇ ಮಾರಿಕೊಳ್ಳುವ ದಲಿತರು ವಿಚಾರ ಮಾಡದೆ ಹಣಕ್ಕಾಗಿ ಮಾರಿಕೊಳ್ಳುವಂತೆ ಪ್ರೇರೇಪಿಸುವ ಫ್ಯಾಸಿಸ್ಟ್ ಚಿಂತನೆ ಎಷ್ಟೊಂದು ಪ್ರಬಲವಾಗಿದೆ ಎಂದರೆ, ಪ್ರತಿಯೊಬ್ಬ ಬಡವನ ನರನಾಡಿಯನ್ನು ಜಾಲಾಡಿತೊಡಗಿದೆ. ಕೋಮುವಾದ ಎಂತಹ ವಿನಾಶಕಾರಿ ಎಂದರೆ ಉಡಿಯೊಳಗಿನ ಕೆಂಡದಂತೆ ಹೊಗೆಯನ್ನು ಹೊರಬಿಡದೆ ಒಳಗೊಳಗೆ ಜಾತಿಧರ್ಮದ ಭೇಧವಿಲ್ಲದೆ ಪ್ರತಿಯೊಬ್ಬರನ್ನೂ ಸುಟ್ಟುಕೊಲ್ಲುತ್ತಲಿದೆ. ಬಂದೂಕಿನ ನಳಿಗೆಗೆ ಬಲಿಯಾಗುತ್ತಿರುವ ದುರ್ದೈವಿಗಳು ಏನನ್ನೂ ಅರಿಯದ ಮುಗ್ಧರು. ಭಾರತೀಯರ ಮನೋಭಾವನೆ ಗೊತ್ತಿದ್ದ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ.:

I see in my mind's eye the future perfect

India rising out of this chaos and strife, glorious and invincible, with vedanta brain and Islam body-1,

(ಭಾರತದ ಸುಭದ್ರ ಭವಿಷ್ಯ ನನ್ನ ಸೂಕ್ಷ್ಮ ನೋಟಕ್ಕೆ ಗೋಚರಿಸುತ್ತಾ ಇದೆ. ಭಾರತ ತನ್ನ ಸಂದಿಗ್ಧತೆ, ಹೋರಾಟದಿಂದ ಬೆಳೆಯಬೇಕಾದರೆ ಭವ್ಯ ಸೋಲಿನಿಂದ ಪಾರಾಗಬೇಕಾದರೆ ಒಂದೇ ಮಾರ್ಗ ಅದು ವೇದಾಂತದ ಮೆದುಳನ್ನು ಹಾಗೂ ಇಸ್ಲಾಂಮಿಕ್ ದೇಹವನ್ನು ಬಳಸಬೇಕು)

ಇಲ್ಲಿ ಪ್ರಮುಖವಾದ ವಿಷಯವೆಂದರೆ ಎರಡು ಧರ್ಮಗಳನ್ನು ಸಮೀಕರಣ ಗೊಳಿಸುವುದೇ ಆಗಿದೆ. ಕಳೆದ ಶತಮಾನದ ಆರಂಭದಲ್ಲೇ ವಿವೇಕಾನಂದರು ಇದರ ಮಹತ್ವವನ್ನು ಕಂಡುಕೊಂಡಿದ್ದರು.

ಭಾರತವೆಂದರೆ ಕೇವಲ ಕೆಲವೇ ಜನರ ಸ್ವತ್ತಲ್ಲ. ಜಾತ್ಯತೀತವಾದ, ಧರ್ಮಾತೀತವಾದ ಒಂದು ರಾಷ್ಟ್ರ ಎಂಬುದಾಗಿ ವಿವೇಕಾನಂದರು ಮನಗಂಡಿದ್ದರು. ಕೋಮುದಳ್ಳುರಿಯೊಳಗೆ ಉರಿಯುತ್ತಿರುವ ಪೂರ್ವಗ್ರಹಪೀಡಿತ ಮನಸ್ಸುಗಳಿಗೆ ಇವ್ಯಾವು ಅರ್ಥವಾಗುವುದಿಲ್ಲ. ಈ ದೇಶದ ತುಂಬ ಬೇಕಾದಷ್ಟು ಸಮಸ್ಯೆಗಳಿವೆ. ಬೇಕಾಬಿಟ್ಟಿ ಕೆಲಸ ಮಾಡಲು ಬಿದ್ದಿದೆ. ಭೂಮಿಯನ್ನು ಬಿತ್ತಲಾಗದೆ ಮುಗಿಲು ನೋಡುತ್ತಿರುವ ಬಡ ರೈತ, ಓದಿದರೂ ಕೆಲಸ ಸಿಗದ ಕುಶಲ ಮತಿಗಳಲ್ಲದ ವಿದ್ಯಾವಂತರು, ಈ ದೇಶದ ಭೂಮಿಯ ಹಂಚಿಕೆ ಸರಿಯಾಗಿ ಆಗದೇ ಅನ್ಯಾಯಕ್ಕೆ ಒಳಗಾಗಿರುವ ಈ ನಾಡಿನ ದಲಿತರು, ಮಾಡಲು ಕೆಲಸವಿಲ್ಲದೆ ಬದುಕಲು ಯೋಗ್ಯವಾದ ದಾರಿ ಸಿಗದ ಸಾವಿರಾರು ಬಡ ಯುವಕರು ಹಿಂದೂ Fundamentalist ಹಾಗೂ ಮುಸ್ಲಿಂ Fundamentalistಗಳ ಕೈಯಲ್ಲಿ ಮಾನವ ಬಾಂಬುಗಳಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಕೆಲ ಮೂಲಭೂತವಾದಿಗಳು ಈ ದೇಶ ತಮ್ಮ ಅಪ್ಪನ ಆಸ್ತಿ ಎಂದು ತಿಳಿದು ಪ್ರಚೋದನಾಕಾರಿ ಮಾತುಗಳಿಂದ ಮೊದಲೇ ಹಾದಿ ತಪ್ಪಿರುವ ನರನ್ನು ಮತ್ತೊಂದಿಷ್ಟು ಹಾದಿ ತಪ್ಪಿಸುವ ಕೆಲಸದಲ್ಲಿ ತೊಡಗಿದ್ದಾರೆ. ಒಮ್ಮೆ ಬಾಬಾಬುಡನ್‌ಗಿರಿ ಬುಡಕ್ಕೆ ಕೈ ಹಾಕಿದರೆ ಮತ್ತೊಮ್ಮೆ ಮತ್ತೊಂದು ಕರೆಗೆ ಮೈ ತೂರಿಸಿ ದೇಶದ ಜನರ ನೆಮ್ಮದಿ ಹಾಳು ಮಾಡುತ್ತಾರೆ. ಈ ದೇಶದೊಳಗೆ ಬದುಕಿರುವ ಪ್ರತಿಯೊಬ್ಬರು ದೇಶದಲ್ಲಿರುವ ಇಂಚಿಂಚು ನೆಲದ ಮೇಲೆ ಹಕ್ಕು ಹೊಂದಿದ್ದಾರೆ. ಯಾರೊಬ್ಬರ ಸ್ವತ್ತಲ್ಲ, ಕೆಲವರು ಹೆಸರಿಗಾಗಿ ದೇಶವನ್ನು ಬಳಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಮತ್ತೆ ಕೆಲವು ಹೊಟ್ಟೆ ತುಂಬಿಸಿಕೊಳ್ಳಲು ದೇಶದ ಹೆಸರನ್ನು ಬಳಸಿಕೊಳ್ಳುತ್ತಾರೆ. ಇವರೆಲ್ಲಾ ಕಂಟಕಪ್ರಾಯರೇ, ಯಾವುದೇ ಧರ್ಮದ ಮೂಲಭೂತವಾದಿಗಳಾಗಿರಬಹುದು.

ಅವರ್‍ಯಾರಿಗೂ ನನ್ನ ಗೆಳೆಯ ರಹಮತುಲ್ಲಾನ ಕಳವಳ ಯಾವತ್ತೂ ಅರಿವಾಗುವುದೇ ಇಲ್ಲ. ಹತ್ತು ಮಂದಿ ದಡ್ಡರನ್ನು ಸೃಷ್ಟಿಸಿ ಬುದ್ಧಿವಂತನಾಗುವ ಅವಕಾಶವಾದಿಗಳೇ ತುಂಬಿರುವ ಈ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ದಲಿತರ ಹೆಸರು ಬಯಲಿಗೆ ಬರುವುದೇ ಇಲ್ಲ. ಗಿಡಗಳಿಗೆ ನೇಣಾದ ಸಾವಿರಾರು ಜನರು ಇಲ್ಲಿ ಅಮರರಾಗುವುದಿಲ್ಲ. ಎಲ್ಲಿಯವರೆಗೆ ಜನ ಬುದ್ಧಿವಂತರಾಗಿ ವಿಚಾರ ಮಾಡುವುದಿಲ್ಲವೋ, ಎಲ್ಲಿಯವರೆಗೆ ಹೆಂಡಕ್ಕಾಗಿ-ತುಂಡಿಗಾಗಿ ಮಾರಿಕೊಳ್ಳುವ ಬಾಳ್ಯಾವಂತ ? ಪ್ರವೃತ್ತಿಯ ಜನರಿಗೆ ತಿಳುವಳಿಕೆ ಬರುವುದಿಲ್ಲವೋ ಅಲ್ಲಿಯವರೆಗೆ ಇಂತಹ ವಿಕಾರಿಗಳ ಕೈ ಮೇಲಾಗುತ್ತಲೇ ಇರುತ್ತವೆ. ಬಾಂಬು-ಬಂದೂಕು ಸೃಷ್ಟಸಿದವರು ಕೋಮುವಾದವನ್ನು ಸೃಷ್ಟಿಸುತ್ತಲೇ ಬಂದಿದ್ದಾರೆ. ಅವರೇ ದೇಶ ದೇಶಗಳನ್ನು ಎತ್ತಿಕಟ್ಟಿದ್ದಾರೆ.

ಜನಾಂಗ-ಜನಾಂಗಗಳ ನಡುವೆ ವೈಷಮ್ಯದ ವಿಷ ಬೀಜ ಬಿತ್ತುತ್ತಾರೆ. ಧರ್ಮಧರ್ಮಗಳ ನಡುವೆ 'ಜಿಹಾದ್' ಸೃಷ್ಟಿ ಮಾಡುತ್ತಾರೆ. ಎಲ್ಲಿಯವರೆಗೆ? ಜನ ಹುಂಬರಾಗಿ ಒಬ್ಬರನ್ನೊಬ್ಬರು ಧರ್ಮದ ಹೆಸರಿನಲ್ಲಿ ಬಲಿ ತೆಗೆದುಕೊಳ್ಳುವವರೆಗೆ.

ಗಾಂಧಿ ಆತ್ಮ ನೊಂದಿತು
ದುಃಖದಿಂದ ಮುದುಡಿತು
ಹಿಂದೂ-ಮುಸ್ಲಿಂ ಎಲ್ಲ ಇಹರು
ಮಾನವರೆಲ್ಲಿ? ಮಾನವರೆಲ್ಲಿ?

ದೀಪ ಹಚ್ಚಿ ಹುಡುಕಾಡಿದರೂ ಮನುಷ್ಯರು ಕಾಣುವುದಿಲ್ಲಾ, ಹಿಂದೂಗಳಿದ್ದಾರೆ, ಮುಸ್ಲಿಮರು ಇದ್ದಾರೆ, ಕ್ರೈಸ್ತರಿದ್ದಾರೆ. ಇವೆಲ್ಲಾ ಜಂಜಡವನ್ನು ಬಿಟ್ಟು ಬದುಕುವ ಮನುಷ್ಯನನ್ನು ಮನುಷ್ಯನೆಂದು ಪರಿಗಣಿಸುವ ಮನುಷ್ಯನಿಲ್ಲ. ಕೋಮುಸೌಹಾರ್ದತೆಗೆ ಕೊನೆಯ ಘಳಿಗೆಯವರೆಗೆ ಹೋರಾಡಿದ ಗಾಂಧೀಜಿಯ ನಾಡಿನಲ್ಲೇ ಧರ್ಮದ ಹೆಸರಿನಲ್ಲಿ ಗರ್ಭಿಣಿಯರ ಹೊಟ್ಟೆ ಬಗೆದ ಕ್ರೌರ್ಯಕ್ಕೆ ಸಾಟಿಯಾದುದು ಪ್ರಪಂಚದಲ್ಲಿ ಮತ್ತೊಂದಿಲ್ಲ. ಕಮ್ಯುನಿಸ್ಟ್ ಚಿಂತಕ ಸೀತಾರಾಂ ಯೆಚೂರಿ ಒಂದು ಕಡೆ ಹೀಗೆ ಬರೆಯುತ್ತಾರೆ.: 'ಮೇ 1947 ರಲ್ಲಿ ದೇಶದ ವಿಭಜನೆಯು ಸನ್ನಿಹಿತವಾಗುತ್ತಿದೆ, ಎಂದಾಗ ಪಟಾನ್‌ಕೋರ್ಟ್‌ನಲ್ಲಿ ಭಾಷಣ ಮಾಡುತ್ತಾ ಮೌದುದಿ, ತಾವು 'ಅಲ್ಲಾ'ನಿಂದ ಸ್ಥಾಪಿಸಲಾದಂತಹ ಕಾನೂನುಗಳನ್ನು ಆಧರಿಸಿ ಪಾಕಿಸ್ತಾನವನ್ನು ಸಂಘಟಿಸುವುದರಿಂದ ಭಾರತೀಯರು ತಮ್ಮ ರಾಜ್ಯ ಮತ್ತು ಸಮಾಜವನ್ನು ಹಿಂದೂ ದಾಖಲೆಗಳ ಮತ್ತು ಕಾನೂನುಗಳ ಆಧಾರದಲ್ಲಿ ಸಂಘಟಿಸಲು ಒತ್ತಾಯಿಸಿದ್ದರು." ಅವತ್ತು ಮೌದುದಿ-ಗೋಲ್ವಾಲ್ಕರ್ ಬಿತ್ತಿರುವ

ಬೀಜಗಳು ಇವತ್ತು ಹೆಮ್ಮರವಾಗಿ ಫಲಕೊಡುತ್ತಿವೆ. ಇವತ್ತಿನ ಭಾರತೀಯ ಹಿಂದೂ ಕೋಮುವಾದ ಹಾಗೂ ಮುಸ್ಲಿಂ ಮೂಲಭೂತವಾದ ಅಷ್ಟೇ ಅಪಾಯಕಾರಿ. ಈ ದೇಶದ ಬಡವರ -ದೀನ ದಲಿತರ ಬದುಕಿಗೆ ವಿಷದ ಮುಳ್ಳುಗಳಿದ್ದಂತೆ. ಅವುಗಳ ಸಂಬಂಧಗಳ ಸುತ್ತಲು ಮುಳ್ಳು ಬೇಲಿ ಹೆಣೆಯುತ್ತ ಮನಸ್ಸುಗಳನ್ನು ವಿಕಾರಗೊಳಿಸುತ್ತಿವೆ. ಭಾರತೀಯ ಫ್ಯಾಸಿಸ್ಟ್ ಆತ್ಮಗಳು ಪ್ರೇತಾತ್ಮಗಳಾಗಿ ನಮ್ಮ ಜನರನ್ನು ಹಾದಿ ತಪ್ಪಿಸುತ್ತಿವೆ. ಈ ಕುರಿತು ಜಾಗರೂಕರಾಗುವುದು ಅವಶ್ಯವಾಗಿದೆ. ಅವರೇ ಹೇಳಿರುವ ಮತ್ತೊಂದು ಮಾರ್ಮಿಕವಾದ ಮಾತು ಇವತ್ತು ಎಷ್ಟು ಪ್ರಸ್ತುತವಾಗಿದೆ.

ಎಂದರೆ ನಿಜವಾಗಿಯೂ ಪ್ರತಿಯೊಬ್ಬರು ಈ ಮಾತನ್ನ ಯಾವತ್ತು ಮರೆಯದಂತೆ ನೆನಪಿನಲ್ಲಿಟ್ಟುಕೊಳ್ಳಬೇಕಾಗಿರುವಂತಹದ್ದು.'

ಪಂಥೀಯವಾದ ಮತ್ತು ಮತಾಂಧತೆ ಮತ್ತು ಅದರ ಭಯಾನಕ ಧರ್ಮಾಂಧ ಸಂತತಿ ಈ ಸುಂದರ ಭೂಮಿಯನ್ನು ದೀರ್ಘಕಾಲ ಅನುಭವಿಸಿವೆ. ಅವರು ಈ ಭೂಮಿಯನ್ನು ಹಿಂಸೆಯಿಂದ ತುಂಬಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಮಾನವನನ್ನು ರಕ್ತದಿಂದ ತೋಯಿಸಿದ್ದಾರೆ. ನಾಗರೀಕತೆಯನ್ನು ನಾಶಮಾಡಿದ್ದಾರೆ. ಮತ್ತು ಇಡೀ ರಾಷ್ಟ್ರವನ್ನು ನಿರಾಸೆಗೆ ನೂಕಿದ್ದಾರೆ. ಜೀವನದ ಬೆಳವಣಿಗೆ ಮತ್ತು ಕ್ಷೇಮಕ್ಕೆ ಏಕ ಷರತ್ತೆಂದರೆ ಚಿಂತನೆ ಮತ್ತು ಕ್ರಿಯೆಯ ಸ್ವಾತಂತ್ರ್ಯ. ಇದು ಎಲ್ಲಿ ಅಸ್ತಿತ್ವದಲ್ಲಿರುವುದಿಲ್ಲವೋ ಅಲ್ಲಿ ಮನುಷ್ಯ, ಜನಾಂಗ, ರಾಷ್ಟ್ರ ಕೆಳಗೆ ಹೋಗಬೇಕು. ಈ ನಗ್ನಸತ್ಯವನ್ನು ಶತಮಾನಗಳಿಂದಲೂ ಯೋಚನೆ ಮಾಡದೆ ಮೃಗೀಯ ಬದುಕನ್ನ ಬದುಕಿದ ಜನರು ಅರ್ಥಮಾಡಿಕೊಳ್ಳಬೇಕಾಗಿದೆ. ಜೊತೆಗೆ ಅವರು ನಿರಂತರವಾಗಿ ಶೋಷಿಸುತ್ತಾ ಬಂದಿರುವ ನಿಮ್ನ ವರ್ಗ ಎಚ್ಚೆತ್ತುಕೊಳ್ಳಬೇಕಾಗಿದೆ. ಧರ್ಮ ಎಂಬ ಅಫೀಮನ್ನು ಕೊಟ್ಟು ಕೈಯ್ಯೊಳಗೆ ಕೋವಿಯನ್ನಿಟ್ಟು ಕೋಮುವಾದದ ಕಿಡಿಯಿಟ್ಟು ದಲಿತರು, ಬಡವರು ಬಡಿದಾಡಿ ಸಾಯುವುದನ್ನು ಟಿ.ವಿ. ಯಲ್ಲಿ ನೋಡಿ ಮಜಾಪಡೆಯುವ ಫ್ಯಾಸಿಸ್ಟ್ ನಾಯಕರು ತಾವೇ ಕೊಟ್ಟ ಕೋವಿಗಳಿಗೆ ಗುರಿಯಾಗುವ ದಿನ ಬಹಳ ದೂರ ಉಳಿದಿಲ್ಲ. ಇಡೀ ವಿಶ್ವವೇ ಕೋಮು ಧಗೆಯಲ್ಲಿ ಹೊತ್ತಿಕೊಂಡು ಉರಿಯುತ್ತಿದೆ. ಇಸ್ರೇಲ್-ಪ್ಯಾಲಿಸ್ಟಿನ್, ಅಮೇರಿಕಾ ಇ; ಅಫ್ಘಾನಿಸ್ತಾನ, ಇರಾಕ್, ಕ್ಯೂಬಾ ಇತ್ಯಾದಿ. ಭಾರತ-ಪಾಕಿಸ್ತಾನ, ಶ್ರೀಲಂಕಾ-ತಮಿಳರು, ಚೀನಾ-ಬರ್ಮಾ ಇತ್ಯಾದಿ ರಾಷ್ಟ್ರಗಳು. ಏನಾಗಿದೆ ಇವತ್ತಿನ ಸ್ಥಿತಿ ಎಂದರೆ, ಜಾರ್ಜ್ ಬರ್ನಾಡ್‌ಷಾ ಅವರ ನಾಟಕದ ಸಾರಾಂಶದಂತೆ ಪರಿಸ್ಥಿತಿ ನಿರ್ಮಾಣವಾಗಿದೆ. ಅದೇನಪ್ಪಾಂದ್ರೆ, ದೊಡ್ಡ ಶ್ರೀಮಂತ, ಅವನು ಮದ್ದುಗುಂಡಿನ ಫ್ಯಾಕ್ಟರಿಯ ಮಾಲೀಕ. ಅವನ

ಫ್ಯಾಕ್ಟರಿಯಲ್ಲಿ ತಯಾರಾದ ಅಸ್ತ್ರಗಳು ಜನರನ್ನು ಕೊಲ್ಲುವಲ್ಲಿ ಉಪಯೋಗ ಆಗುತ್ತಿವೆ. ಆ ಮೂಲಕ ಕೋಟಿಗಟ್ಟಲೆ ಲಾಭವಾಗುತ್ತಿದೆ. ಅವನ ಮಗಳು ಸಮಾಜ ಸೇವಕಿ ಮನುಷ್ಯನ ಉಳಿವಿಗಾಗಿ ಶತಾಯಗತಾಯ ಹೋರಾಟ ಮಾಡುತ್ತಿದ್ದಾಳೆ. ಅವಳ ಹೋರಾಟಕ್ಕೆ ದಾನಿಯೊಬ್ಬರಿಂದ ಹೇರಳವಾದ ಆರ್ಥಿಕ ನೆರವು ಹರಿದುಬರುತ್ತಿದೆ. ಕಡೆಗೊಮ್ಮೆ ಅವಳು ಆರ್ಥಿಕ ನೆರವು ನೀಡುತ್ತಿರುವ ನಿಯ ಕುರಿತು ತಿಳಿದುಕೊಳ್ಳಲು ಪ್ರಯತ್ನ ಮಾಡಿದಾಗ ನಿಜ ತಿಳಿದು ದುಃಖಿತಳಾಗುತ್ತಾಳೆ. ಯಾರು ಮನುಷ್ಯನನ್ನು ಕೊಲ್ಲುವ ಅಸ್ತ್ರ ತಯಾರಿಸುವ ಕಂಪನಿ ಹೊಂದಿದ್ದಾನೋ ಅವನೇ ಮನುಷ್ಯನ ಕಲ್ಯಾಣಕ್ಕೆ ನೆರವಾಗುತ್ತಿದ್ದಾನೆ. ಇವತ್ತಿನ ಸ್ಥಿತಿಯು ಕೂಡ ಹಾಗೆ ಇದೆ. ಹದಿಹರೆಯದ ದಲಿತ ಹುಡುಗರು ವಿಚಾರ ಮಾಡುವ ಶಕ್ತಿ ಬೆಳೆಸಿಕೊಳ್ಳುವ ಮೊದಲೆ ಯಾವುದೋ ಕ್ಷಣಿಕ ಆಮಿಷಕ್ಕೆ ಬಲಿಯಾಗಿ ಬದುಕನ್ನು ಹಾಳುಮಾಡಿಕೊಳ್ಳುತ್ತಾರೆ. ಹಿಟ್ಲರನ Consantration camp'ನ ಹಾಗೆ ಕೋಮುವಾದಿಗಳು ತಮ್ಮದೇ ಆದ ಗರಡಿಗಳನ್ನು ತಯಾರು ಮಾಡಿಕೊಂಡು ಮೆದುಳು ತುಂಬ ವೈಷಮ್ಯ ತುಂಬುವ ಕೆಲಸ ಮಾಡುತ್ತದ್ದಾರೆ. ಕನಸು ಚಿಗುರುವ ಮೊದಲೇ ಕಮರಿಹೋಗುವ ಎಷ್ಟೋ ಜೀವಿಗಳಿಗಾಗಿ ಅಳುವವರ್‍ಯಾರು ಇಲ್ಲ.

ಒಂದು ಜನಾಂಗದ ಮನಸ್ಸಿನ ಮೇಲೆ ಅತ್ಯಾಚಾರಕ್ಕಿಂತ ಹೀನಾಯವಾದ ಶಿಕ್ಷಣವನ್ನು ನೀಡಲು ಹೊರಟಿರುವ ಭಾರತದ ನಿರುಪಯುಕ್ತ ಮನುಷ್ಯರು ಪ್ರತಿಪಾದಿಸಿರುವ ಕೆಲವು ಹೇಳಿಕೆಗಳು ಹೀಗಿವೆ.: ಮನುವಿನ ಮಕ್ಕಳಾದ್ದರಿಂದ ತಾವು ಮನುಷ್ಯರೆನಿಸಿಕೊಂಡಿದ್ದೇವೆ.(ಮನು ಔರ್ ಮಾನವ್, ಅಧ್ಯಾಯ-3, ಸಂಸ್ಕಾರ ಸೌರಭ ಭಾಗ-4). ಇಸ್ಲಾಮನ್ನು ಸ್ವೀಕರಿಸಲು ನಿರಾಕರಿಸಲು ಬಂದಾ ಬೈರಾಗಿಯ ಗಂಟಲಲ್ಲಿ ಆತನ ಮಗಳ ಹೃದಯ ತುರುಕಲಾಯಿತು. (ಪು.7 ಸಂಸ್ಕಾರ ಸೌರಭ ಭಾಗ). ಇಂತಹ ಪ್ರಚೋದನಕಾರಿ ಹೇಳಿಕೆಗಳನ್ನು ಒತ್ತಾಯದಿಂದ ಎಳೆಯ ಮನಸ್ಸುಗಳ ಮೇಲೆ ಹೇರಿದರೆ ಅವರು ಜಾತ್ಯಾತೀತರಾಗಿ ಬೇಳೆಯುವುದು ಯಾವಾಗ? ಅದು ಒಂದು ಜನಾಂಗದ ಕುರಿತು ಭಾರತದಲ್ಲಿರುವ ಒಂದು ಪ್ರಬಲ ಧರ್ಮ ಕುರಿತು ಈ ರೀತಿ ಹೀನಾಯವಾಗಿ ಬರೆದರೆ ಧರ್ಮಕ್ಕೆ ಅಪಚಾರಮಾಡಿದಂತಾಗುವುದು. ಈಗಾಗಲೇ ಬಿರುಕು ಬಿಟ್ಟಿರುವ ಮನಸ್ಸುಗಳ ನಡುವೆ ಮತ್ತೊಂದಿಷ್ಟು ಬಿರುಕು ಉಂಟುಮಾಡುವಂತಾಗುತ್ತದೆ. ಹೀಗೆ ಪಠ್ಯದಲ್ಲೇ ಕೋಮುವಾದ ಬಿತ್ತನೆಯಾದರೆ ಭವಿಷ್ಯದಲ್ಲಿ ಅದೆಂತಹ ಗಂಡಾಂತರಕಾರಿ ಸಮಾಜ ನಿರ್ಮಾಣವಾದೀತು ಎಂಬುದನ್ನು ಫ್ಯಾಸಿಸ್ಟರು ಯೋಚನೆ ಮಾಡಬೇಕಾಗಿದೆ.

ಹಿಂದೂ ಮೂಲಭೂತವಾಗಲಿ-ಮುಸ್ಲಿಂ ಜಿಹಾದ್ ಆಗಲಿ ಮನುಕುಲಕ್ಕೆ ಯಾವತ್ತೂ ಒಳ್ಳೆಯದನ್ನು ಮಾಡುವುದಿಲ್ಲ. ಬದಲಾಗಿ ಇಡೀ ಭೂಮಂಡಲದ ಮೇಲೆ ಮಾನವ ಕುಲದ ನಾಶಕ್ಕೆ ಪಣತೊಟ್ಟು ನಿಂತಂತೆ ವರ್ತಿಸುತ್ತಿವೆ. ನಮ್ಮೆಲ್ಲರ ಜವಾಬ್ದಾರಿ ಮನುಕುಲದ ಉಳಿವು ಅಷ್ಟೇ ಅಲ್ಲ ಸಂಪೂರ್ಣ ಚರಾಚರ ವಿಶ್ವದ ಅಸ್ತಿತ್ವದ ಕಡೆಗೆ ಗಮನಹರಿಸಬೇಕಾಗಿದೆ. ಕವಿಗಳು, ಸಂತರು, ಚಿಂತಕರು-ಮಾತ್ರ ಈ ಕೆಲಸ ಮಾಡಬಲ್ಲರು. ಮಾನವೀಯ ಸಕಾರಾತ್ಮಕ ಸಂಬಂಧಗಳಿಗೆ ಸರಪಳಿ ಬೆಸೆಯಬೇಕಾಗಿದೆ. ಇಲ್ಲಿ ಪ್ರತಿಯೊಬ್ಬ ಮನುಷ್ಯನ ಮನಸ್ಸು ಆಕಾಶದಷ್ಟು ವಿಶಾಲವಾಗಿರಬೇಕು-ಸಮುದ್ರದಷ್ಟು ಆಳವಾಗಿರಬೇಕು. ಭೂಮಿಯಷ್ಟು ಸಹನಶೀಲವಾಗಿರಬೇಕು. ಇಲ್ಲದಿದ್ದರೆ ಮತ್ತೊಂದು ಹಿರೋಶಿಮಾ, ನಾಗಾಸಾಕಿ ಸೃಷ್ಟಿಯಾಗುವುದರಲ್ಲಿ ಸಂಶಯವಿಲ್ಲ.

ಪಾಕಿಸ್ತಾನಿ ಕವಿ ಓಜಸ್ ಜಿಹಾದ್‌ಗೆ ಹೊರಟ ಜನರನ್ನು ಕುರಿತು ತಮ್ಮ ಒಂದು ಕವಿತೆಯಲ್ಲಿ ಹೀಗೆ ಕೇಳುತ್ತಾರೆ.

ಜೆಹಾದ್ ಹೆಸರಿನಲ್ಲಿ
ಯುದ್ಧಕ್ಕೆ ಹೊರಟ ನನ್ನ ಗೆಳೆಯರೇ,
ಬಂದೂಕನ್ನು ಎತ್ತುವ ಮೊದಲು ನನಗೆ ಕೆಲವು
ಕ್ಷಣಗಳನ್ನು ನೀಡಿರಿ...

ಯಾರ ವಿರುದ್ಧ ಜಿಹಾದ್? ಯಾತಕ್ಕಾಗಿ? ಎಲ್ಲಿಯವರೆಗೆ? ಈ ಪ್ರಶ್ನೆಗಳು ಸಹಜವಾಗಿಯೇ ಉದ್ಭವವಾಗುತ್ತಿವೆ. ಗಡಿಯೊಳಗೆ ತನ್ನ ಶತ್ರುವಲ್ಲದ ಸೈನಿಕನನ್ನು ಅಮಾಯಕವಾಗಿ ಕೊಲ್ಲುವ ಮತ್ತೊಬ್ಬ ಸೈನಿಕ ಯಾವತ್ತೂ ಒಂದು ಕ್ಷಣ ಮನುಷ್ಯನಾಗಿ ಯೋಚಿಸುವುದಿಲ್ಲ. ಏಕೆಂದರೆ ಅವನ ವಿರೋಧಿಯನ್ನು ಕೊಲ್ಲದೆ ಬಿಟ್ಟರೆ ಯಾವುದೆ ಕ್ಷಣದಲ್ಲಿ ಅವನ ಗುಂಡಿಗೆ ಬಲಿಯಾಗುವೆನೆಂಬ ಭಯ ಇದ್ದೇ ಇರುತ್ತದೆ. ಹಾಗೆಯೇ ಯಾಕೆ ಧರ್ಮಯುದ್ಧ ಸಾರಿದ್ದೇನೆ ಎಂದು ಅರಿಯದೆ ನನ್ನ ಜನರು ಹಿಂದೂರಾಷ್ಟ್ರವನ್ನು ವಿರೋಧಿಸುತ್ತಾರೆ ಎಂಬ ಒಂದೇ ಕಾರಣಕ್ಕೆ ನಾನು ಹಿಂದೂಗಳನ್ನು ವಿರೋಧಿಸಬೇಕು ಎಂದಿಲ್ಲ. ಎಲ್ಲಿಯವರೆಗೆ ಈ ತಿಳುವಳಿಕೆ ಜನರಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೆ ನಿರಪರಾಧಿಗಳು ಅಮಾಯಕರು ಸುಕಾಸುಮ್ಮನೆ ತಮ್ಮ ಜೀವನವನ್ನು ಬಲಿಕೊಡುತ್ತಲೆ ಇರುತ್ತಾರೆ.

ಬದುಕನ್ನು ಪ್ರೀತಿಸುವವರು ಮತ್ತೊಬ್ಬರ ಹಿತಾಸಕ್ತಿಯನ್ನು ಗೌರವಿಸುತ್ತಾರೆ. ಬದುಕನ್ನು ಕುರಿತು ಯೋಚನೆಯನ್ನೇ ಮಾಡದ ಜನ ಬದುಕಿನ ಕುರಿತು ಏನು

ತಾನೇ ಹೇಳಿಯಾರು? ಬಂದೂಕಿನ ಅಸ್ತಿತ್ವದಿಂದ ಮನುಷ್ಯ ಕುಲ, ಜೀವರಾಶಿ, ಪ್ರಕೃತಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಾವು. ಬಯಲಾದೀತು ಭೂಮಿ ಮರಳುಗಾಡಿನಂತೆ. ಕೋಮು-ಕೋವಿ ಎರಡನ್ನು ಬಿಟ್ಟು, ಕನಸು ತುಂಬಿರುವ ಕಂಗಳನ್ನು ಪ್ರೀತಿಸಿ.

ಆವ ಕುಲವಾದರೇನು? ಆವನಾದರೇನು?
ಆತ್ಮ ಭಾವವರಿತ ಮೇಲೆ
....
ಕುಲದ ಮೇಲೆ ಹೋಗಬೇಡ ಮನುಜ
ಕುಲವಿಲ್ಲ ಜ್ಞಾನಿಗಳಿಗೆ
....

- ಪುರಂದರ ದಾಸ

❄ ❄ ❄ ❄ ❄

ಮನುಷ್ಯ ಪ್ರೀತಿಯ ಕಳಕಳಿಯೇ ಕಾಟ್ಕರರ ಕಾವ್ಯ

I presently recognised this, that what they (poets) composed not by wisdom, but by nature and because they were impired, like they also say many fine things, but know none of things they say (APOLOGY FOR POETRY - PLATO).

ಕವಿಗಳ ಬಗ್ಗೆ ಒಂದು ಅನುಮಾನದ ದೃಷ್ಟಿಯನ್ನೇ ಇಟ್ಟುಕೊಂಡಿದ್ದ ಪ್ಲೇಟೋ ಹೇಳಿದ ಮಾತುಗಳು ಕವಿಗಳನ್ನು ಕೀಳಾಗಿಸುವ ಒಂದು ಪ್ರಯತ್ನ. ಆದರೆ ಕವಿ ಜನತೆಯ ಪ್ರಜ್ಞೆಯ ಮೂಲ ಭೂತವಾಗಿಬಿಡುತ್ತಾನೆ. ಕವಿತೆಯ ಮೂಲಕ ಜನರಮನದಾಳಕ್ಕೆ ಇಳಿದು ಅವರಲ್ಲಿ ಜಾಗೃತಿಯನ್ನು ಮೂಡಿಸುವ ಪ್ರಯತ್ನ ಮಾಡುತ್ತಾನೆ.ಇಡೀ ಸಮಾಜದ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು 'Utapian state' ಭೂಮಿಯ ಮೇಲೆ ಇಲ್ಲದೊಂದು ಸ್ವರ್ಗದಂತ ನಾಡನ್ನು ಕಟ್ಟುವ ಕನಸು ಕಾಣುತ್ತಾನೆ. ಡಬ್ಲ್ಯೂ. ಹೆಚ್. ಆಡೆನ್ ಕವಿಯ ಸಾಲುಗಳು ಹೆಚ್ಚು ಪ್ರಸ್ತುತ.

ಸುಂದರ

"ನೋವು-ದುಃಖಗಳಿಲ್ಲದ ನಾಡೊಂದನ್ನ
ಕಟ್ಟೋಣ ನಾಳೆ"

ಇಡೀ ಜಗತ್ತಿನ ಸುಖ ಸಮೃದ್ಧಿಯನ್ನು ಬಯಸುವ ಕವಿ ತಾನು ಮಾತ್ರ ಬಡವ.ಇದೇ ಆಶಯವನ್ನು ಹೊಂದಿರುವ ಸರಜೂಕಾಟ್ಕರ್ ನಾಲ್ಕು ದಶಕಗಳಿಂದ ಕಾವ್ಯ ಕ್ರಿಯೆಯೊಳಗೆ ತೊಡಗಿಸಿಕೊಂಡಿದ್ದಾರೆ. ಸಾಮಾಜಿಕ ಪ್ರತಿಭಟನೆಯೇ ಕೇಂದ್ರ ಕಾಳಜಿಯಾಗಿರುವುದರಿಂದ ಸಹಜವಾಗಿಯೇ ಕವಿ ಒಂದು ಸೀಮಿತವನ್ನು ತಲುಪಿದ್ದಾನೆ. ಬಂಡಾಯದ ಕಾಲಘಟ್ಟದಲ್ಲಿಕಾವ್ಯವನ್ನು ಆರಂಭ ಮಾಡಿದ ಎಲ್ಲಾ ಕವಿಗಳು ಒಂದು ಆಶಯಕ್ಕೆ ಬದ್ಧರಾಗಿ ಕಾವ್ಯವನ್ನು ಬರೆಯಲು ಆರಂಭಿಸಿದ್ದರು ಅದೇ ಆಶಯವನ್ನು ಉಳಿಸಿಕೊಂಡೆ ಜಗತ್ತಿನ ಎಲ್ಲಾ ಆಗುಹೋಗುಗಳನ್ನು ಜೀರ್ಣಿಸಿಕೊಳ್ಳುತ್ತಾ ಬಂದಿರುವುದು ಕವಿಯ ನಿಜವಾದ ಕೊಡುಗೆ. ಬಂಡಾಯ ದಲಿತ ಕಾವ್ಯದ ದೊಡ್ಡ ಅಲೆಯೊಂದು ಜಮಾನದ ಜನಸಾಗರದೊಳಗೆ ಇದ್ದಕ್ಕಿದ್ದಂತೆ

ಎದ್ದಾಗ ಎಷ್ಟೋ ಜನರಿಗೆ ಕಾಣಲಾಗಿದ್ದು ನಿಜ. ಈ ಎಲ್ಲಾ ಹಂತಗಳನ್ನು ತಣ್ಣಗೆ ದಾಟಿಕೊಳ್ಳುತ್ತಲೇ ಹಸಿದ ನೆಲ (1975) ರಿಂದ ಇತ್ತೀಚಿನ ಗಾಂಧೀ ಟು ಗೋದ್ರಾ (2007) ರವರಗೆ

ಕಾವ್ಯಲೋಕದಲ್ಲಿ ಪಯಣಿಸುತ್ತ ಬಂದಿರುವ ಕನ್ನಡ ಕಂಡ ಶ್ರೇಷ್ಠ ಕವಿಗಳಲ್ಲಿ ಬಹುವಿಶಿಷ್ಟ ಕವಿ ಸರಜೂ. ಅವರ ಕಾವ್ಯ ಕೃಷಿ ಆರಂಭದ ಕಾಲ ಕನ್ನಡ ಸಾಹಿತ್ಯದಲ್ಲಿ ಸಂಕ್ರಮಣಕಾಲ, ನವ್ಯ-ನವ್ಯೂತ್ತರ-ಸೃಜನಶೀಲದ ಅಬ್ಬರದ ನಡುವೆ ವ್ಯವಸ್ಥೆಯ ಕ್ರೌರ್ಯವನ್ನು ಕಂಡು ಒಡಲೊಳಗೆ ಮಡುಗಟ್ಟಿದ ಆಕ್ರೋಶವನ್ನು ಶಬ್ದಗಳಲ್ಲಿ ಹಿಡಿದಿಡುವ ಛಾತಿ ಈ ಬಂಡಾಯದ ಮೊದಲ ತಲೆಮಾರಿನ ಕವಿಗಳಿಗಿತ್ತು. ಹೋರಾಟದ ತೀವ್ರ ಸ್ವರೂಪವನ್ನು ಮೈಗೂಡಿಸಿಕೊಂಡಿದ್ದ ಕಾವ್ಯ

"ಖಡ್ಗವಾಗಲಿ ಕಾವ್ಯ
ಜನರನೋವಿಗೆ ಮಿಡಿವ ಪ್ರಾಣಮಿತ್ರ"

ಕಾವ್ಯ ನಿಜವಾಗಿಯೂ ಆಗ ಖಡ್ಗವಾಗಿತ್ತು. ಇಂತಹ ಪ್ರಜ್ಞಾ ಬರವಣಿಗೆಯಿಂದಲೇ ರಾಜಕೀಯದಲ್ಲಿ ನಿಲುಕದಾಳಕ್ಕೆ ಬೇರುಬಿಟ್ಟಿದ್ದ ಕಾಂಗ್ರೆಸ್‌ಗೆ ಮುಖಭಂಗವಾಗಿ ಅಂದಿನ ಜನತಾಪಕ್ಷ ಅಧಿಕಾರಕ್ಕೆ ಬಂದಿದ್ದ ಈ ಕಾವ್ಯದ ಉತ್ಕೃಷ್ಟ ಶಕ್ತಿಯಿಂದಲೇ ತಾನೇ ಕಪ್ಪುಜನರ ಪ್ರಾಣಮಿತ್ರ ಬೆಂಜಿಮಿನ್ ಮೊಲಾಯಿಸ್ ಕಾವ್ಯ ಬರೆಯುತ್ತಲೇ ಗಲ್ಲಿಗೇರಿದ. ಈ ಕಾವ್ಯದ ಶಕ್ತಿಯಿಂದಲೇ ಇವತ್ತಿಗೂ ಬಡವರಿಗಾಗಿ ಹೋರಾಡುತ್ತಿರುವ ಗದ್ದರ್ ಎಂಬ ಮಾಂತ್ರಿಕ ಬೆನ್ನೊಳಗೆ ಗುಂಡಿಟ್ಟುಕೊಂಡೆ ಬದುಕಿರುವುದು. ವ್ಯವಸ್ಥೆಯ ವೈರುಧ್ಯದ ಕುರಿತು ಮಾತನಾಡುವಾಗ ನಿಜವಾಗಿಯೂ ಜನಪರ ಕಾಳಜಿ ಹೊಂದಿರುವ ಮನಸ್ಸು,ಭಾವನಾತ್ಮಕವಾಗಿ ಬಿಡುತ್ತದೆ. ಹಾಗಯೇ ಕಾಟ್ಕರ್ ಅವರ ಕಾವ್ಯ.

ದಿಲ್ಲಿಯ ಸೂರ್ಯ
ರಾತ್ರಿಯೂ ಉರಿಯುತ್ತಾನೆ
ಆದರೆ ಬೆಳಕು ಮಾತ್ರ ಕೆಲವರಗೇ ನೀಡುತ್ತಾನೆ.
ಸಿರಿವಂತರೆಲ್ಲಾ ಈ ಬೆಳಕನ್ನು
ತಮ್ಮ ತಿಜೋರಿಯಲ್ಲಿ ಹಾಕಿಟ್ಟು ಬೀಗ ಜಡಿದಿದ್ದಾರೆ.

ಯಾರಿಗಾಗಿ ಈ ಆಡಳಿತ, ಸರ್ಕಾರ ? ಸಮಾಜದ ಕಟ್ಟಕಡೆಯ ಮನುಷ್ಯನಿಗೆ ದಿಲ್ಲಿ ಅಂದರೆ ಗೊತ್ತಿಲ್ಲ ಸರ್ಕಾರ ಅಂದರೆ ಗೊತ್ತಿಲ್ಲ ಹಕ್ಕು ಅಂದರೆ ಗೊತ್ತಿಲ್ಲ.

ಗೊತ್ತಿರುವುದು ಈ ದೇಶವನ್ನು ಹಿಂದಿನಿಂದ ಆಳುತ್ತಿರುವ ಪುರೋಹಿತ ಶಾಯಿವರ್ಗ, ಮಠಾಧಿಪತಿಗಳು, ದೇಶವನ್ನ ಹಾಡುಹಗಲೆ ಲೂಟಿ ಮಾಡುತ್ತಿರುವ ಬಂಡವಾಳಶಾಹಿಗಳು - ರಾಜಕಾರಣಿಗಳು ಬ್ಯೂರೋಕ್ರಟ್ಸ್‌ಗಳು ಮಾತ್ರ ಸರ್ಕಾರ - ಅಧಿಕಾರದ ರುಚಿಯನ್ನು ಕಂಡಿದ್ದಾನೆ ವಿನಃ ಜನಸಾಮಾನ್ಯ ಇವತ್ತಿಗೂ, ತನ್ನ ಅಸಹಾಯಕ ಸ್ಥಿತಿಯಲ್ಲಿ ಅಸಹನೀಯವಾದ ಬದುಕನ್ನ ಬದುಕಿದ್ದಾನೆ. "ಬಂಡಾಯ ಕಾವ್ಯ ಸಂದರ್ಭ ಹಾಗೂ ಕಾಟ್ಕರ್‌ರ ಕಾವ್ಯ ಎನ್ನುವ ಶೀರ್ಷಿಕೆಯಡಿಯಲ್ಲಿ ಜಗದೀಶ ಮಂಗಳೂರ ಮಠ ಹೀಗೆ ಬರೆಯುತ್ತಾರೆ "ಸರಜೂ ಅವರ ಕಾವ್ಯ ಪ್ರತಿಭಟನೆಯನ್ನು ದಾಖಲಿಸಿದೆ, ಲೇವಡಿ, ವಿಡಂಬನೆ ಕಟುಕಿಗಳ ಮೂಲಕ ಅವರು ಈ ಶಕ್ತಿಗಳನ್ನು ಪ್ರಶ್ನಿಸುತ್ತಲೇ ಸಾಗುತ್ತಾರೆ. ಆದರೆ ಅವರ ಕವಿತೆ ಎಲ್ಲಿಯೂ ಕೂಗಾಟ ಚೀರಾಟಕ್ಕಿಳಿಯುವುದಿಲ್ಲ. ಪ್ರತಿಭಟನೆ ಅಂತರ್ಗತವಾಗಿ ಕಾವ್ಯದ ಮಡಿಲನ್ನು ತುಂಬಿಕೊಳ್ಳುತ್ತದೆ. ತಣ್ಣಗಿನ ಧ್ವನಿಯ ಒಡಲಲ್ಲಿ ಬೆಂಕಿಯ ಹೂವುಗಳು ಅರಳುತ್ತವೆ. ಉದಕದೊಳಗಣ ಬೆಂಕಿಯ ಹಾಗೆ ಬಹಳಷ್ಟು ಕವಿತೆಗಳಲ್ಲಿ ನೇರವಾದ ರಾಜಕೀಯ ಹಾಗೂ ಸಾಮಾಜಿಕ ವಸ್ತುಗಳಿಲ್ಲದಿದ್ದರೂ ದಿನನಿತ್ಯ ಕಂಡುಂಡ ಸಾಮಾನ್ಯ ಘಟನೆ ಹಾಗೂ ರಾಜಕೀಯ ಸತ್ಯಗಳನ್ನು ಹೊರಡಿಸುತ್ತಾರೆ". ಈ ಎಲ್ಲಾ ಅಂಶಗಳನ್ನು ವಾಸ್ತವಿಕ ಹಿನ್ನೆಲೆಯಲ್ಲಿ ಮೈಸೂರ ಮಠ ಗುರುತಿಸಿದ್ದಾರೆ. ಜನಪರವಾದ ಕಾವ್ಯದ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಸರಜೂ ಅವರ ಕಾವ್ಯ ನಮ್ಮ ನಡುವೆ ಬಹುಕಾಲದವರೆಗೆ ಬದುಕಲು ಸಾಧ್ಯ. ಕವಿ ವಿಲಿಯಂ ಷೇಕ್ಸ್‌ಪಿಯರ್ "shell I compare thee". ಎನ್ನುವ ಸಾನೆಟ್‌ನಲ್ಲಿ ಕವಿತೆ ಸಾಫಲ್ಯತೆ ಮತ್ತು ಅದರ ಉಳಿಯುವಿಕೆಯನ್ನು ಕುರಿತು ಬರೆಯುತ್ತಾರೆ. ಅವನ ಆಪ್ತಗೆಳೆಯನನ್ನ ಯಾರಿಗೆ ಹೋಲಿಸಿ ? ಎಂಬ ಸಂದಿಗ್ಧದಲ್ಲಿ ಕವಿ ಕಂಡುಕೊಳ್ಳುವ ಅಂತಿಮ ಸತ್ಯಬಹುಶಃ ಜಗತ್ತಿನ ಯಾವ ಬರಹಗಾರನಿಗೂ ಹೊಳೆಯಲಾಗದ್ದು ಅಥವಾ ಹೊಳೆದಿದ್ದರೂ ಅತ ಅದನ್ನ ಷೇಕ್ಸ್ ಪಿಯರ್‌ನಂತೆ ಬಳಸಿಲ್ಲಾ ಎನಿಸಿತ್ತು.

ಎಲ್ಲಿಯವರೆಗೆ ಭೂಮಿಯ ಮೇಲೆ ಸೂರ್ಯಚಂದ್ರರಿರುತ್ತಾರೋ
ಎಲ್ಲಿಯವರೆಗೆ ಜನ ಈ ಪದ್ಯವನ್ನು ಓದುತ್ತಾರೋ
ಆಗೆಲ್ಲಾ ನೀನು ಮತ್ತೆ ಹೊಸ ಹುಟ್ಟು ಪಡೆಯುವೆ
ಈ ಕವಿತೆಯೊಂದಿಗೆ.

ಕವಿ ಜನಮಾನಸದೊಳಗೆ ಯಾವಾಗಲೂ ನೆಲಸುವುದು ಅವನ ಜನಪರ ಕಾಳಜಿಯ ಪದ್ಯಗಳಿಂದ ಮಾತ್ರ. ಕಾಟ್ಕರ್ ಅವರ ಸುಮಾರು ಹತ್ತು ಕಾವ್ಯ

ಸಂಗ್ರಹಗಳು ನಿಮ್ನವರ್ಗದ ಜನರ ಬದುಕನ್ನು ಕಟ್ಟಿಕೊಂಡಿರುತ್ತಾರೆ. A.C ಖೋಲಿಯಲ್ಲಿ ಕುಳಿತು ಓದುವವನಿಗೆ ಇವರು ಪದ್ಯದ ಸಾಲುಗಳು hype ಎನಿಸಬಹುದು ಅಥವಾ imagination ಎನಿಸಬಹುದು ಆದರೆ ಜೀವನದ ಈ ಎಲ್ಲಾ ಘಟನೆಗಳನ್ನ ದಾಟಿಬಂದ ಸಾಮಾನ್ಯನಿಗೆ ಈ ಸಾಲುಗಳೆಲ್ಲಾ ಅನುಭವಗಳು.

ನೆಗಡಿ ಶೀತವಾದರೂ
ನೇರ ಐಸಿಗೆ ಅಡ್ಮಿಟ್ ನೀವು
ಕ್ಯಾನ್ಸರ್ ಬಂದರೂ
ಪೇನ್ ಕಿಲ್ಲರ್ ನುಂಗುತ್ತೇವೆ ನಾವು.

(ಫೈವ್‌ಸ್ಟಾರ್ ಆಸ್ಪತ್ರೆಯಲ್ಲಿ)

ಪ್ರತಿದಿನ ಸಾಯುತ್ತಿರುವ ಸಾವಿರಾರು ಅಸಹಾಯಕ ಬಡವರಿಗೆ ಆಸ್ಪತ್ರೆಯಲ್ಲಿಚಿಕಿತ್ಸೆಯೇ ದೊರೆಯುವುದಿಲ್ಲ. ಅದೇ ದುಡ್ಡಿದ್ದವನು ತಿಂದಿದ್ದು ಅಜೀರ್ಣವಾಗಿ ಆಸ್ಪತ್ರೆ ಸೇರಿದರೆ ಸಾಕು ಫೈವ್‌ಸ್ಟಾರ್ ಆಸ್ಪತ್ರೆಗೆ ಸೇರ್ಕೊತಾರೆಅದನ್ನ ಅರಗಿಸಿಕೊಳ್ಳೊದಕ್ಕೆ. ಹೀಗೆ ನಮ್ಮ ನಡುವಿನ ಸಮಸ್ಯೆಗಳಿಗೆ ಅವರ ವಸ್ತುವಿಷಯಗಳು ಆದ್ದರಿಂದಲೇ ಈ ಕವಿತೆಗಳಿಗೆ ಸಾವಿಲ್ಲ. ಎಲ್ಲಿಯವರೆಗೆ ಜನಸಾಮಾನ್ಯರು ಈ ಕವಿತೆಗಳನ್ನ ಓದುತ್ತಾರೋ ಅಲ್ಲಿಯವರೆಗೆ ಇವು ಉಳಿಯುತ್ತವೆ. ಮತ್ತು ಆತನ ಸಮಸ್ಯೆಗಳಿಗೆ ಸ್ಪಂದಿಸುತ್ತವೆ. ಸರ್ವಜ್ಞ, ಶಿವಶರಣರು, ದಾಸರು, ಶರೀಫ ಸಾಹೇಬರು ಅದಕ್ಕಾಗಿಯೇ ಹೆಚ್ಚು ಪ್ರಸ್ತುತರಾಗುವುದು. ಕವಿ ಯಾವತ್ತೂ ನಿರಾಶವಾದಿಯಲ್ಲಿ ಬದುಕನ್ನ ಬಹಳ ಹತ್ತಿರದಿಂದ ನೋಡಿ ಅನುಭವಿಸುತ್ತಾನೆ. "ಹೀಗೂ ಆಗಬಹುದು ಒಂದು ದಿನ " ಎಂಬ ಆತ್ಮವಿಶ್ವಾಸ ತೆಳಿಯುತ್ತಾನೆ.

ತಿಜೋರಿಗಳ ಕೀಲಿಕೈ ಬಡವರ ಕೈಗೇ ಬರಬಹುದು
ಭಿಕ್ಷೆಗಾಗಿ ಶ್ರೀಮಂತರು ಬೀದಿ ಬೀದಿ ಅಲೆಯಬಹುದು
......
ಮುಸಲ್ಮಾನರೇ ಖುದ್ದಾಗಿ ನಿಂತು ರಾಮಮಂದಿರ ಕಟ್ಟಿಸಬಹುದು
ಹಿಂದೂಗಳೆಲ್ಲಾ ಮಸೀದಿಯಲ್ಲಿ ನಮಾಜು ಬೀಳಬಹುದು

(ಪೆಗಾಸಿಸ್ ಸಂ)

ಬದುಕಿನ ಕನಿಷ್ಠ ಕಲ್ಪನೆ ಇಲ್ಲದ ಕೋಟ್ಯಾಂತರ ಜನ - ಅವಕಾಶ ವಂಚಿತರಾಗಿ- ಪದವಿ ಪಡೆದವರು, ವಿದ್ಯೆ ಕಲಿತವರು - ಅವಕಾಶಗಳಿಲ್ಲದೆ ನಾಯಿ- ನರಿಗಳಂತೆ ಬದುಕಿದ್ದಾರೆ. ಜೀವನವೆಂದರೇನು ಎಂಬುದನ್ನು ಯೋಚನೆ ಮಾಡುವ ಗೋಜಿಗೂ ಹೋಗದವರು ಸವಲತ್ತು ಸಿಕ್ಕರೆ ? ಎಂಬ ಕವಿಯ ಕಲ್ಪನೆ ಅದ್ವಿತೀಯವಾದದ್ದು. ಸಾಧ್ಯವಾಗದಿದ್ದರೂ ತನ್ನ ಕಲ್ಪನೆಯೊಳಗೆ ಸಾಧ್ಯ ಮಾಡಿಕೊಂಡು ಬದುಕುವುದು ಇದೆಯಲ್ಲಾ ಅದು ಮಹತ್ವದ್ದು. ಸಾಮ್ಯುಬ್ಯಾಕೇಟನ್. 'ವೈಟಿಂಗ್ ಪಾರ್ ಗೋಡ' ಎಂಬ ಅಸಂಗತ ನಾಟಕದಲ್ಲಿ ಬರುವ ಪಾತ್ರಗಳು ಕೂಡ ಸರಜೂರ ಆಶಯವನ್ನೇ ಹೊಂದಿದ್ದಾರೆ.

ಗೋಗೋ: ಹೋಗೋಣವೆ
ಡಿಡಿ : ಎಲ್ಲಿಗೆ
ಗೋಗೋ : ಎಲ್ಲಿಗೂ ಇಲ್ಲಾ ಬಿಡು.
ಡಿಡಿ : ಅಲ್ಲಿ ನೋಡು ಮರದಲ್ಲಿ ಎಲೆ ಚಿಗುರೊಡೆದಿದೆ
ಹಾಗೆಯೇ ಬದುಕು ಕೂಡ. ಅವನು ನಾಳೆ ಬರಬಹುದು
ಅದರೊಂದಿಗೆ ಸುಖದ ಸೋಪಾನ ಕೂಡ.

ಹೀಗೆ ಅಸಂಗತವಾಗಿಯೇ ಸಾಗುವ ಸಂಭಾಷಣೆ ಇಡೀ ಮನುಕುಲಕ್ಕೆ ಒಂದು ಆಶಯವನ್ನ ನೀಡುತ್ತದೆ. ಅದಕ್ಕಾಗಿಯೇ ಜಗತ್ತಿನಲ್ಲಿ ಬದುಕನ್ನು ಕಳೆದುಕೊಂಡವರು ಬದುಕಿರುವುದು. ನಾಳೆ ಎಂಬ ಆತ್ಮ ವಿಶ್ವಾಸದಲ್ಲಿ ಅದೆಂಥ ಅಧಮ್ಯ ಚೈತನ್ಯ ತುಂಬಿದೆಯೋ ಗೊತ್ತಿಲ್ಲಾ, ರೂಡಿ ಮನುಜ ಕುಲವೆ ನಾಳೆಯ ಬೆಳಗನ್ನ ಕಾತರದಿಂದ ಬರಮಾಡಿಕೊಳ್ಳುತ್ತದೆ. ಜಾತಿ, ಧರ್ಮ, ಮತ, ಪಂಥಗಳ ಗೋಡೆಯನ್ನೆಲ್ಲಾ ಮುರಿದು ಕವಿ ಮನುಷ್ಯತ್ವವನ್ನು ಹುಡುಕಾಡುತ್ತಾನೆ- ಹುಟ್ಟಿನೊಂದಿಗೆ ಅಂಟಿರುವ ಜಾತಿಯೆಂಬ ಜಾಡ್ಯ ಇದು ಕೃತ್ರಿಮವಾದದ್ದು. ಆದರೂ - ಭಾರತೀಯ ಸಮಾಜದಲ್ಲಿರುವ ತರತಮ ಕವಿಯನ್ನ ಅಚ್ಚರಿಗೊಳಿಸದೆ ಇರದು.

ನೀವು ನನ್ನ ಥೋರ್
ನೆಂದು ಕರೆದಾಗ
ನನ್ನ ಸಿಟ್ಟು ನೆತ್ತಿಗೇರಿ
ನಿಮ್ಮ ಮುಕಳಿಯ ಮೇಲೆ ಒದೆಯಬೇಕೆನ್ನುತ್ತೇನೆ
....
ನೀವು ನನ್ನ ಬಿಳಿಯ

ನೆಂದು ಕರೆದಾಗ
ನನ್ನ ತಾಯಿ ಸವರ್ಣೀಯನೊಂದಿಗೆ ಮಲಗಿದ್ದನ್ನೇ
ನೀವು ಕೆಣಕುತ್ತಿದ್ದಿರೆಂದು ನಾನು ಜ್ವಾಲಾಮುಖಿಯಾಗುತ್ತೇವೆ

(ಗುಜರಾತಿ ಮೂಲ- ನೀರವ ಪಟೇಲ್-ಸರಜೂ
ನೀವು ನನ್ನ ಪೆಗಾಸಿಸ್ ಪು **- 25).**

ಭಾರತೀಯಒಟ್ಟಾರೆ ಸಮಾಜದ ಮನಸ್ಥಿತಿ ಇದು. ಸರಜೂ ಅವರಿಗೆ ಗುಜರಾತಿ ಕವಿತೆ ಕಾಡಿದ್ದನ್ನ ಹೀಗೆ ತರ್ಜುಮ ಮಾಡಿದ್ದಾರೆ. ವಾಸ್ತವದ ನೆಲಗಟ್ಟಿನ ಮೇಲೆ ಕಾವ್ಯದ ಹಂದರವನ್ನು ಕಟ್ಟುತ್ತಾ ಹೋಗುವ ಕಾಟ್ಕೂರ್ ಕಿಂಚಿತ್ತೂ ಅವಾಸ್ತವಿಕತೆಯತ್ತ ಸರಿಯುವುದಿಲ್ಲ. ಅವರ ಕಾವ್ಯ ಬಂಡಾಯದ ಮನೋಧರ್ಮವನ್ನು ಹೊಂದಿ ಪ್ರತಿಭಟನೆಯ ಧ್ವನಿಯನ್ನ ಹೊರಹಾಕಿದರೂ ಎಲ್ಲೂ ಕ್ರೌರ್ಯವನ್ನು ಕಾಣುವುದಿಲ್ಲ. ಪ್ರೀತಿ-ಪ್ರೇಮ-ಪ್ರಣಯ ಗೀತೆಗಳನ್ನು ಹಾಡುತ್ತ ಮರ ಸುತ್ತುವ ಪ್ರೇಮಿಯಗಳನ್ನ ಅವರ ಯಾವ ಕವನಗಳಲ್ಲಿ ಸಿಗುವುದಿಲ್ಲ. ಕವಿತೆ ಓದುಗನ ಅಂತರಾಳಕ್ಕಿಳಿದು ಯೋಚಿಸಲು ಅನುವು ಮಾಡಿಕೊಡುತ್ತದೆ. ವಿನಃ ಸಮಾಜ ನಿನ್ನನ್ನು ಶೋಷಿಸುತ್ತಿದೆ ಅದರ ವಿರುದ್ಧ ಪ್ರತೀಕಾರ ತೀರಿಸಿಕೊ ಎಂದು ಹೇಳುವುದಿಲ್ಲ. ಬದುಕನ್ನು ತೆರೆದಿಡುತ್ತಾ- ಈ ವ್ಯವಸ್ಥೆ ಯಾಕೆ ಹೀಗೆ? ಇದಕ್ಕೆ ಕಾರಣ ಯಾರು ? ಜನ ಜಾಗೃತಿಯನ್ನ ಉಂಟು ಮಾಡುವ ಕಾಯಕದಲ್ಲಿ ಕವಿ ತೊಡಗುತ್ತಾನೆ. ಇದನ್ನೇ ಶಿವಶರಣರು ಅನುಭವ ಮಂಟಪದಲ್ಲಿ ಮಾಡಿದ್ದು.

"ಕಾಗೆ ಒಂದಗುಳ ಕಂಡರೆ ಕರೆಯದೇ ತನ್ನ ಕುಲವನೆಲ್ಲಾವ
ಕೋಳಿ ಒಂದು ಗುಟಕ ಕಂಡರೆ ಕರೆಯದೇ ತನ್ನ ಬಳಗನೆಲ್ಲವ"

ಆದರೆ ಮನುಷ್ಯ? ಈ ಪ್ರಶ್ನೆ ಅನುಭವ ಮಂಟಪದಲ್ಲಿ ಸಭೆ ಸೇರಿ ಬದುಕಿನ ಕುರಿತು ಆಲೋಚನೆ ಮಾಡಿದ 12 ನೇ ಶತಮಾನದ ಮತಿವಂತರ ಮಸ್ಥಕದೊಳಗೂ ಎದ್ದ ಪ್ರಶ್ನೆಗಳಾಗಿದ್ದವು. ಆದರೆ ಸ್ವಾರ್ಥಿ ಮನುಷ್ಯ ತನ್ನ ಸ್ವಾರ್ಥತೆಗಾಗಿ ಎಂಥಹ ಕೆಲಸ ಮಾಡಲು ಹಿಂಜರಿಯುವುದಿಲ್ಲ ಎನ್ನುವುದಕ್ಕೆ ನಮ್ಮ ನಡುವೆ ನಡೆಯುವ ಸಾವಿರಾರು ಘಟನೆಗಳೇ ಉದಾಹರಣೆ. ಸಂಜೂ ಇದನ್ನ ಬಹಳ ಸೂಕ್ಷ್ಮವಾಗಿ ಗ್ರಹಿಸಿದ್ದಾರೆ, ರಾಜಕೀಯ, ಅಧಿಕಾರದ ಲಾಭಕ್ಕೆ, ತಾನು ನಾಯಕನಾಗಬೇಕೆಂಬ ಹುಸಿ ಭ್ರಮೆಗೆ ಸಿಲುಕಿರುವ ಜನರ ಕಂಡು ಬೇಸತ್ತ ಕವಿ ಹೀಗೆ ಬರೆಯುತ್ತಾನೆ.

ಅವರ ಕೈಗೆ ಧರ್ಮ ಧ್ವಜ
ಬಂತೆಂದರೆ,

ರಕ್ತ ಗುಲಾಬಿಯಾಗಿ
ಬಂದೂಕು ಹೂವಾಗಿ
ಅಡಾಣಿ ಮನುಷ್ಯನಾಗಿ ಬದಲಾಗುತ್ತಾನೆ.

ಧರ್ಮದ ಮದವೇರಿ ಮತ್ತರಾದ ಮಂದಿಗೆ- ಮನುಷ್ಯರು ಕಾಣುವುದಿಲ್ಲ. ಬಂದೂಕು ಹೂವಾಗುವುದು ಕೋಮುವಾದಿಗಳಿಗೆ ಮಾತ್ರ. ಈ ಜಗತ್ತು ನಿಂತಿರುವುದೇ ಧರ್ಮ, ಬಣ್ಣ, ಜಾತಿಯ ತಾರತಮ್ಯದ ಮೇಲೆ, ಆಳುವವ-ಆಳಿಸಿಕೊಳ್ಳುವವ ಇವರಿಬ್ಬರು ಒಬ್ಬರಿಗೊಬ್ಬರು ಪೂರಕವಾಗಿರುತ್ತಾರೆ. ಆಳುವವನು ಕುಯುಕ್ತಿ ಬುದ್ಧಿಯಿಂದ ಪೀಳಿಗೆಯಿಂದ ಪೀಳಿಗೆಯವರೆಗೂ ಆಳುತ್ತಲೇ ಬರುತ್ತಾನೆ, ಆಳಿಸಿಕೊಳ್ಳುವವನು ಅಧಿಕಾರದಿಂದ ದೂರವೇ ಉಳಿದು ಅವನ ಪಗಡೆಯಾಟದ ದಾಳವಾಗಿವೆ. ಬಡವರ ಗುಡಿಸಲಿಗೆ ಬೆಂಕಿ ಹಚ್ಚುತ್ತಾನೆ ಅದಕ್ಕೆ ಕೋಮುಗಲಭೆಯಲ್ಲಿ, ಚುನಾವಣೆಯ ಅನಂತರ ಆಗುವ ಕೊಲೆಗಳಿಗೆ ಕಾರಣ ಒಂದೇ. ಬುದ್ಧಿಹೀನ ಬಡವ ಒಂದು ಬಾಟಲು ಹೆಂಡಕ್ಕೆ ಕೊಲೆ ಬೇಕಾದರೂ ಮಾಡಲು ಸಿದ್ಧನಾಗುವುದು ಒಂದು ವಿಪರ್ಯಾಸ. ಅಂತಹವನಿಗೆ ಧರ್ಮದ ಅಮಲೇರಿಸಿ ಕೈಗೊಂದು ಬಂದೂಕು ಕೊಟ್ಟರೆ ಇಡೀ ಜಗತ್ತನೇ ಸುಟ್ಟು ಬಿಡುವ ಹೆಬ್ಬಯಕೆ ಅವನಿಗೆ. ಹೀಗಾಗಿ ಭಾರತದಲ್ಲಿ ಬಹಳಷ್ಟು ಜನರಿಗೆ ತಮ್ಮ ಹಿತ ಚಿಂತಕರ್‍ಯಾರು ಮತ್ತು ವೈರಿಗಳಾರು ಎಂದು ತಿಳಿದಿಲ್ಲ. ಪುರೋಹಿತ ಶಾಯಿವರ್ಗ, ಬಿಸಲು ನೋಡಲು ಆಗದೆ ಶ್ರಮವಿಲ್ಲದ ಗಳಿಕೆಗಾಗಿ ದೇವರೆಂಬ ಭಯವನ್ನು ಹುಟ್ಟಿಸಿ- ದೆವ್ವವೆಂಬ ಮತ್ತೊಂದು ಅನಿಷ್ಟವನ್ನುತಂದು ಜನಸಾಮಾನ್ಯನ ಬದುಕನ್ನು ಹಿಂಡಿ ಹಿಪ್ಪೆ ಮಾಡಿದೆ. ಇವತ್ತು ಭಾರತ ಖಂಡದಲ್ಲಿ ಒಂದು ಗಣಿತಿಯನ್ನು ಮಾಡಿದರೆ ಯಾರಾದರೂ ಒಬ್ಬ ಕೂಲಿ, ಹಮಾಲಿ, ರೈತ-ಪುರೋಹಿತವರ್ಗದವರು ಸಿಕ್ಕಾನೆ? ಸಾಧ್ಯವಿಲ್ಲ, ಗುಡಿಯ ತಂಪು ನೆರಳೊಳಗೆ ಆರತಿ ತಟ್ಟೆಯಲ್ಲಿ ಬೀಳುವ ಪುಡಿಗಾಸೆ ಸಾಕೆಂದು- ಬೀದಿಗೊಂದು ದೇವಸ್ಥಾನ ಕಟ್ಟಿಸಿ ಉಸ್ತುವಾರಿ ನೋಡಿಕೊಳ್ಳುತ್ತಿರುವ ಮಂದಿ ತಮ್ಮ ಸುಖ ವೈಭೋಗಕ್ಕೆ ಶೂದ್ರ ಪ್ರಾಣಿಗಳನ್ನು ಬಲಿಕೊಡುತ್ತಿರುವುದು ಈ ಶೂದ್ರಪಶುಗಳಿಗೆ ಅರ್ಥವಾಗುತ್ತಿಲ್ಲ. ಈ ಎಲ್ಲಾ ಸೂಕ್ಷ್ಮಗಳನ್ನು ಗ್ರಹಿಸಿ ಬರವಣಿಗೆಯಲ್ಲಿ ಹಿಡಿದಿಡುವ ಪ್ರಯತ್ನ ಮಾಡಿರುವ ಸರಜೂ ನಿಜವಾಗಲೂ ಅಂತಃಕರಣ ಉಳ್ಳ ಕವಿ. "ಶಬ್ದದ ಅರ್ಥದ ತೆಕ್ಕೆ" -ಎಂಬ ತಲೆಬರಹದಲ್ಲಿ ಸರಜೂಕಾಟ್ಕರ ಅವರ ಕಾವ್ಯವನ್ನ ಅರ್ಥೈಸಿಕೊಂಡು ಬರೆದಿರುವ ಡಾ. ಕವಿತಾ ರೈ. ಹೀಗೆ ಬರೆಯುತ್ತಾರೆ. "ಕವಿ ಸರಜೂ ಕಾಟ್ಕರ್ ಅವರ ಕವನಗಳಲ್ಲಿ ಮುಖ್ಯವಾದ ವಸ್ತು. ಕ್ರಮಗತವಾದ ಎರಡು

ಮಜಲುಗಳಿವೆ. ಒಂದು - ಬಂಡಾಯದ ಧ್ವನಿ ಪ್ರಧಾನವಾದದ್ದು. ಮತ್ತೊಂದು ಭಾವಪ್ರಧಾನವಾದದ್ದು". ಇವೆರಡು ಬಹುಮುಖ್ಯ ಆಶಯ ಇವುಗಳ ಜೊತೆಗೆ ನಾನು ಗುರುತಿಸಲು ಪ್ರಯತ್ನ ಮಾಡಿದ ಇನ್ನೆರಡು ಮುಖ್ಯವಾದ ಅಂಶಗಳೆಂದರೆ

ಅ) ಮನುಷ್ಯ ಪ್ರೀತಿಯ ಕಳಕಳಿ

ಆ) ಪ್ರಕೃತಿಯೊಂದಿಗೆ ಸಮೀಕರಣ.

ಅ) ಪ್ರಕೃತಿಯೊಂದಿಗೆ ಪ್ರೀತಿಯ ಕಳಕಳಿ :

ಸರಜೂ ಅವರ ಕಾವ್ಯ ನಿಂತಿರುವುದೇ ಈ ಅಂಶದ ಮೇಲೆ ಬಂಡಾಯದ ಒಟ್ಟಾರೆ ಆಶಯ ಕೂಡ ಇದೇ ಆಗಿತ್ತು ಬರಗೂರು, ಕಾಳೇಗೌಡ, ದರ್ಗಾ, ಮಲ್ಲಿಕಾ, ಸುಕನ್ಯಾ ಮಾರುತಿ, ದೊರೆಸ್ವಾಮಿ, ಹೆಚ್.ಎಸ್. ಶಿವಪ್ರಕಾಶ್, ಮುಂತಾದ ಅನೇಕ ಸಂಗಾತಿಗಳು- ಮನುಷ್ಯನನ್ನು ತಿಳಿಯಲು ಪ್ರಯತ್ನ ಮಾಡಿದವರು. 70-80 ರ ದಶಕದಲ್ಲಿ ಪ್ರಜ್ಞೆಯ ಕುಡಿಯೊಂದು ಚಿಗುರಿ ಹೊರಚಾಚಿತ್ತು. ಚಳುವಳಿ, ಹೋರಾಟಗಳು ಗರಿಗೆದರಿದ್ದವು. ಆ ಕಾಲದಲ್ಲೇ ಪ್ರಜ್ಞಾವಂತರು ತಮ್ಮ ಚಿಂತನೆಗಳನ್ನು ಹೊರಜಗತ್ತಿನ ಸಾಮಾನ್ಯ ಮನುಷ್ಯನ ಹತ್ತಿರ ಕೊಂಡೊಯ್ಯುವ ಪ್ರಯತ್ನ ಮಾಡಿದ್ದರು. ಬ್ರಿಟಿಷರು ಹೋದ ನಂತರ ದೇಸಗತಿ ಕಳ್ಕೊಂಡ ದೇಸಾಯಿಗಳು, ಇನಾಮು ಕಳ್ಕೊಂಡು- ಭೂಮಾಲಿಕರು ಇನ್ನೂ ಭೂತಕಾಲದ ನೆನಪುಗಳನ್ನು ಮೆಲಕು ಹಾಕುತ್ತಿರುವಾಗಲೇ ಹೊಸ ಆಲೋಚನೆಗಳು ಉಗಮಗೊಂಡಿದ್ದವು. ಹತಾಶೆ, ನಿರಾಶೆಯಲ್ಲಿ ತಾಳ್ಮೆ ಕಳ್ಕೊಂಡಿದ್ದ ಜಮೀನ್ದಾರರು, ಪುರೋಹಿತ ಶಾಹಿಗಳು -ಸ್ವಾತಂತ್ರ್ಯದ ಹೊಡೆತ ತಾಳಲಾಗದೆ ಹಳೇ ದರ್ಪದಲ್ಲೇ ಮೆರೆಯುವ ಆಲೋಚನೆಯಲ್ಲಿದ್ದಾಗಲೆ- ಜಾಗ್ರತೆಯ ಯುಗ ಆರಂಭವಾಗಿತ್ತು. ಕವಿಗಳು ಬರಹಗಾರರ - ಚಿಂತಕರು ದಂಡು ದಂಡಾಗಿಯೇ ದೌಡಾಯಿಸಿದ್ದರು. ಅವರೆಲ್ಲರ ಹುಡುಕಾಟ ಒಂದೇ ಆಗಿತ್ತು. ಅದಕ್ಕಿಂತ ಮಿಗಿಲಾಗಿ ಎರಡನೇ ಮಹಾಯುದ್ಧದ ಅನಂತರ ಮನುಷ್ಯ ಸಂಪೂರ್ಣವಾಗಿ ಆತಂಕಗೊಂಡಿದ್ದ. ಇಡಿ ಜಗತ್ತಿನಲ್ಲೇ ಈ ಕುರಿತ ಆಲೋಚನೆಗಳು ಆರಂಭವಾಗಿದ್ದವು.

ಆತ ಬಹುದೊಡ್ಡ ಸಂತ
ಮನುಷ್ಯತ್ವದ ಬಗ್ಗೆಯೇ ಯಾವಾಗಲೂ
ಮಾತನಾಡುತ್ತಿದ್ದ.
ಮನುಷ್ಯತ್ವ ಹೊಂದು ದೊಡ್ಡಕಲ್ಲು

ಎತ್ತಿಕೊಳ್ಳುವವನಿಗೆ ಎಂಟೆದೆ ಬೇಕು
ದುರ್ಬಲರೆಂದೂ ಅದನ್ನು ಎತ್ತಲಾರರು,
... ಹೀಗೆ ಹೇಳುತ್ತಿದ್ದ.
ಹೇಗಾದರೂ ಮಾಡಿ ಈ ಭಾರೀ ಕಲ್ಲನ್ನು
ಎತ್ತಲೇಬೇಕೆಂದು
ಕಲ್ಲನ್ನು ತುಂಡುತುಂಡು ಮಾಡಿದೆ
ಅದು ಮನುಷ್ಯತ್ವವಲ್ಲಿ
ನೀನು ಮಾಡಿದ್ದ
ಮನುಷ್ಯತ್ವದ ಹತ್ಯಾಕಾಂಡ ...

(ಆತ ಬಹುದೊಡ್ಡ ಸಂತ)

ಮಾನವೀಯತೆ ಅಂದರೇನೆ ಹೀಗೆ. ನಮ್ಮ ಸುತ್ತಲು secular ಮುಖವಾಡ ಹಾಕಿಕೊಂಡು ದಿನಕ್ಕೊಂದು ವೇಷ - ನಾಟಕ ಮಾಡುತ್ತಿರುವ so called secular ಗಳು ಇದನ್ನು ಓದಬೇಕು. ಮನುಷ್ಯ ಬೆಳೆಯುತ್ತ ಆಲದ ಮರದಂತೆ ವಿಶಾಲವಾಗಬೇಕೆ ವಿನಃ ಪೊದೆಯಂತೆ ಕುಬ್ಜನಾಗಬಾರದು. ಬುದ್ದಣ್ಣ ಹಿಂಗಮರೆ, ಟಿ.ಎಸ್. ನಾಗೇಶ್ವರರಾವ್. ಪ್ರೊ. ರಾಜಶೇಖರ ಮನ್ಸೂರ ... ಇತ್ಯಾದಿ ಅನೇಕ ಹಿರಿಯರಲ್ಲಿ ಈ ಗುಣಗಳಿವೆ. ಇಂತಹವರು ಯಾವತ್ತು ಹತ್ತಿರವಾಗಿರುತ್ತಾರೆ. ಕವಿ ಸರಜೂ ಕೂಡ ಬರೆದಂತೆ ಬದುಕಿದವರು. ಅವರ ಈ ಕವನಕ್ಕಿಂತ ಭಿನ್ನವಾಗಿ ಮನುಷ್ಯತ್ವವನ್ನ ಪ್ರೀತಿಸಿದವರು. T.S. liot ನ The waist Land. W.H. Anden ನ un known cititzen. ಈ ಕಾಲ ಘಟ್ಟದಲ್ಲಿ ಭ್ರಮನಿರಸನಗೊಂಡ ಮನುಷ್ಯನ ಕುರಿತು ಬರೆದಂತಹ ಪದ್ಯಗಳು ಹಾಗೆಯೇ ಸರಜೂ ಕೂಡ ತಮ್ಮೆಲ್ಲಾ ಕವನಗಳಲ್ಲಿ ಮನುಷ್ಯನೊಳಗಿನ -ಮಾನವೀಯ ಗುಣವನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ.

ಕಾಟ್ಕರ್ ಅವರಿಗೆ ಪ್ರಕೃತಿಯ ಗಾಢ ಪ್ರಭಾವ ವಿರುವುದರಿಂದಲೇ ಮನುಷ್ಯನನ್ನು ಮರಕ್ಕೆ ಹೋಲಿಕೆ ಕೊಡುತ್ತಾರೆ. ವರ್ಡ್ಸ್‌ವರ್ತನಿಗೆ ಪ್ರೀಯತಮೆಯಾಗಿ, ಸಖಿಯಾಗಿ, ಗೆಳೆಯನಾಗಿ ಸರ್ವಾಂತರ್ಯಾಮಿಯಾಗಿ, ಸರ್ವಶ್ರೇಷ್ಠವಾಗಿ ಪ್ರಕೃತಿ ಕಾಣುವಂತೆ ಕವಿಗೆ ಪ್ರಕೃತಿ ಸಂಕೇತವಾಗುತ್ತದೆ. ಮರ ಮನುಷ್ಯ ಅಸ್ತಿತ್ವದ ಸಂಕೇತವಾಗಿದೆ. ಮರ-ಮನುಷ್ಯನ ಸಮೀಕರಣ-ಪ್ರಶ್ನಾತೀಥವಾದ್ದು.

ಬೀಜದಂತೆ ಮೊಳಕೆಯೊಡೆದು
ಹೊರ ಬಂದಂತೆ

ಮನುಷ್ಯ ಗಿಡದಂತೆ.
ಒಂದೇ ಸಮನೆ
ಬೆಳೆಯುಬೇಕು ...

ಅಚಲವಾಗಿ ... ತನ್ನ ಬೇರುಗಳನ್ನು ಭದ್ರವಾಗಿ ಭೂಮಿಯೊಳಕೆ ಅಡ್ಡ ದಿಡ್ಡಿ ಇಳೆ ಬಿಡುತ್ತ ಮರ-ಹೆಮ್ಮರವಾಗುತ್ತದೆ. ಮನುಷ್ಯ ಹುಟ್ಟಿದ ಮೇಲೆ - ಬೆಳೆಯುತ್ತ -ತನ್ನೆಲ್ಲಾ ಅಹಂನ್ನು, ಢಾಂಭಿಕತೆಯನ್ನು, ಖಾಲಿತನವನ್ನು, ಕೊಳಕು ಮನಸ್ಸನ್ನು ಮೀರಿ ಬೆಳೆಯುವುದು ಅನಿವಾರ್ಯವಾಗುತ್ತದೆ. ಬದುಕಿನುದ್ದಕ್ಕೂ ಮತ್ತೊಬ್ಬರ ಏಳಿಗೆಯನ್ನ ಸಹಿಸದೆ ಅವರ ಕಾಲನ್ನೆಳೆಯುವ ಯೋಜನೆಗಳ ಪಟ್ಟಿ ತಯಾರು ಮಾಡುತ್ತ -ತನ್ನ ಸಮಯವನ್ನು ವ್ಯಯ ಮಾಡುವ ಮತಿಹೀನ ಮನುಜ-ಮರದಂತಾಗಬೇಕು-ಅದರ ಬುಡದಲ್ಲಿ ಬೆಳೆಯುವ ಹುಲ್ಲು -ಗರಿಕೆ, ಪೊದೆಗಳಿಗೆ ಆಶ್ರಯವೂ ಆಗಿ, ಗಿಳಿ-ಗೊರವಂಕಗಳಿಗೆ ತಾಣವೂ ಆಗಿರದ ತನ್ನ ಇರುವಿಕೆಯನ್ನು ಜಗಜ್ಜಾಹಿರಾತು ಮಾಡದೆ ಮೌನವಾಗಿ ಮರವಾಗಬೇಕಾಗಿದೆ. ಮಹಾವೃಕ್ಷ, ಗುಲ್ ಮೊಹರ್‌ಗಿಡ ಸಂಬಂಧವನ್ನು ಮೇಳೈಸುವ ಕವಿತೆಗಳಾಗಿವೆ. ನನ್ನಂತಹ ಅನೇಕ ಓದುಗರಿಗೆ ಕವಿ ಸರಜೂಕಾಟ್ಕರ ಅತ್ಯಂತ ಶ್ರೇಷ್ಠಕವಿಗಳ ಸಾಲಿನಲ್ಲಿ ನಿಲ್ಲುವುದು

ಶಬ್ದಗಳು ಪಕ್ಷಿಗಳಾಗಬೇಕು
ಪಕ್ಷಿಗಳು ಆಗಸಕ್ಕೆ ಹಾರಿ
ಆಗಸವೆಲ್ಲ ಕವಿತೆಯಾಗಬೇಕು
ಶಬ್ದಗಳು ಚಂದ್ರ ಆಗಬೇಕು
ಚಂದ್ರ ಭೂಮಿಗೆ ಬಂದು ಭೂಮಿಗೆಲ್ಲಾ
ಬೆಳದಿಂಗಳು ನೀಡಬೇಕು.

ಇಂತಹ ಅನೇಕ Master piece ಸಾಲುಗಳಿಂದ. ಸುಮಾರು - 30- ರಿಂದ 40 ವರ್ಷಗಳ ಸುದೀರ್ಘ ಅನುಭವದ ಅವಧಿಯಲ್ಲಿ ತಮ್ಮ ವಲಯದ ಎಲ್ಲೆಯ ವಿಸ್ತರಣೆ ಮಾಡುತ್ತಲೇ ಶ್ರೇಷ್ಠತೆಯ ಸಾಲಿನಲ್ಲಿ ಸೇರ್ಪಡೆಯಾಗುವ ಅರ್ಹತೆಯನ್ನು ಹೆಚ್ಚುಸಿಕೊಳ್ಳುತ್ತ ಬಂದಿರುವ ಕಾಟ್ಕರ್ ಎಲ್ಲರನ್ನೂ ಪ್ರೀತಿಸುವ ಮನಸ್ಸುಳ್ಳವರು. ಅವರ ಕಾವ್ಯದ ಹರಿವು ಹರಿವ ತೊರೆಯಂತೆ ಹರಿದು ನದಿಯಾಗಿ - ಸಾಗರವಾಗಿರುವುದು ಸತ್ಯ. ಕಾವ್ಯವನ್ನು ಧ್ಯಾನಿಸುತ್ತಲೇ ಬರೆಯುವ ಕವಿ ಯಾವ ಹೆಚ್ಚುಗಾರಿಕೆಯುನ್ನು-ಹೊಗಳಿಕೆಯುನ್ನ-ಅಧಿಕಾರದ ಓಲೈಸುವಿಕೆಯ

❋ ❋ ❋ ❋ ❋

ಮನೋಧರ್ಮವನ್ನು ಬೆಳೆಸಿಕೊಳ್ಳದೆ ಹಸಿದ ನೆಲದಿಂದ ಓಡಿದು ಗಾಂಧಿ ಟು ಗೋದ್ರಾದವರೆಗೆ ಸುಮಾರು 10 ವೈವಿಧ್ಯಮಯ ಕಾವ್ಯಸಂಗ್ರಹಗಳನ್ನು ಕನ್ನಡದ ಓದುಗ ಜಗತ್ತಿಗೆ ನೀಡಿರುವುದು ಅವರ ಮಹತ್ತರದ ಕೊಡುಗೆ. ಅವರು ಬಹುಮುಖಿ ಪ್ರತಿಭೆಯುಳ್ಳವರು, ತರ್ಜುಮೆಗಾರರು, ನಾಟಕಕಾರರು, ವಿಮರ್ಶಕರು ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲಿ ಪಳಗಿದವರು. ಅವರ ಕಾವ್ಯ ಎಂತಹ ಪಾಮರನನ್ನು ದಿಗಿಲು ಬಡಿಸುತ್ತದೆ. ಮನಸ್ಸಿನಾಳಕ್ಕಿಳಿದು ಆಲೋಚಿಸುವಂತೆ ಮಾಡುತ್ತದೆ. ಕಾವ್ಯ-ದಣಿದ ಮನಸ್ಸಿಗೆ ಮುದ ನೀಡುತ್ತದೆ. -ನೋವಿಗೆ ಮುಲಾಮಾಗುತ್ತದೆ -ಬದುಕನ್ನು ತೆರೆದಿಡುತ್ತದೆ.

❄ ❄ ❄ ❄ ❄

ರಾಮಧಾನ್ಯ ಚರಿತ್ರೆಯ ಒಳನೋಟಗಳು ಮತ್ತು ದಲಿತ ಸಂವೇದನೆಗಳು

ದಾನವರಲ್ಲಿಯೂ ಮಾನವೀಯ ಮೌಲ್ಯಗಳನ್ನು ಹುಡುಕಲು ಯತ್ನಿಸಿ ಮಾನವೀಯತೆಯ ಮೌಲ್ಯವನ್ನು ಮೆರೆದ ಕನಕದಾಸರು ಭಾರತದಲ್ಲಿ ಆಗಿ ಹೋದ ದಾಸರು, ಶರಣರು, ಸಮಾಜ ಚಿಂತಕರಲ್ಲಿ ಅಗ್ರಸ್ಥಾನವನ್ನು ಪಡೆಯುತ್ತಾರೆ. ಇಡೀ ದಾಸ ಪರಂಪರೆಯಲ್ಲಿ ಮೌಲ್ಯಗಳಿಂದ ಮಿನುಗಿದ ತಾರೆಗಳಲ್ಲಿ ಪ್ರಖರವಾಗಿ ಮಿಂಚಿ ಪಳಗಿದವರು ಕನಕದಾಸರು. ಮನೆಮನೆಗೆ ಮನಕ್ಕೆ ಜ್ಞಾನ ದೀವಿಗೆಯ ಬೆಳಕನ್ನು ಪ್ರಸರಿಸಿ ಅಂಧಕಾರವ ಹೋಗಲಾಡಿಸಿವದರು. ಹಿಂದುಳಿದವರ, ದೀನದಲಿತರನ್ನು ಅಜ್ಞಾನದ ಅಂಧಕಾರದಿಂದ ಮುಕ್ತರನ್ನಾಗಿಸಲು ಪ್ರಯತ್ನಿಸಿದ ಮಹಾಮಾನವತಾವಾದಿ, ಭಾರತದ ಪೂರ್ವ ಇತಿಹಾಸದ ಪುಟಗಳಲ್ಲಿ ತುಂಬಿರುವ ಅಜ್ಞಾನ, ಶೋಷಣೆ, ಕಂದಾಚಾರ ಅನಾಚಾರಗಳಿಗೆಲ್ಲಾ ಅಕ್ಷರ ಸಂಸ್ಕೃತಿಯ ವಾರಸುದಾರರಂತೆ ಪೋಷಾಕುಗಳನ್ನು ಹಾಕಿಕೊಂಡು ರಾಜನಿಂದ ಭಕ್ಷೀಸು ಪಡೆದು, ಜನಸಾಮಾನ್ಯರು, ಮತ್ತು ರಾಜನ ನಡುವೆ ಗೋಡೆಯಾಗಿ ನಿಂತು ತಮ್ಮ ಗುಡಾಣದಂತ ಹೊಟ್ಟೆ ತುಂಬಿಕೊಳ್ಳಲು ಅನೇಕ ವೈಪರಿತ್ಯವನ್ನು ಸೃಷ್ಟಿಸಿದ ಪುರೋಹಿತ ಶಾಹಿವರ್ಗ ಸುಳ್ಳಿನ ತಳಹದಿಯ ಮೇಲೆ ಬರೆದ ಇತಿಹಾಸ ನಿಜವಾಗಲು ಹೇಗೆ ತಾನೆ ಸಾಧ್ಯ. ಇದನ್ನೇ, ಡಾ. ಬಾಬಾ ಸಾಹೇಬ ಅಂಬೇಡ್ಕರ್, ಹೀಗೆ ಹೇಳಿದ್ದಾರೆ. "ಭಾರತದ ಪ್ರಾಚೀನ ಇತಿಹಾಸದ ಬಹುಭಾಗವು ಇತಿಹಾಸವೇ ಅಲ್ಲ. ಹಾಗೆಂದರೆ ಭಾರತಕ್ಕೆ ಇತಿಹಾಸವೇ ಇಲ್ಲ ಎಂದಲ್ಲ. ಅದಕ್ಕೆ ತುಂಬಾ ಇತಿಹಾಸ ಉಂಟು. ಆದರೆ ಅದು ವಿರೂಪಗೊಂಡಿದೆ. ಬ್ರಾಹ್ಮಣ ಬರಹಗಾರರು ಉದ್ದೇಶ ಪೂರ್ವಕವಾಗಿಯೇ ಹೀಗೆ ಮಾಡಿದ್ದಾರೆ". ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ್ದು ಬಹಳ ಇದೆ, ವೃತ್ತಿಯ ಆಧಾರದ ಮೇಲೆ ವಿಭಜನೆಗೊಂಡಿದ ವರ್ಣಗಳು ಮುಂದೆ, ಪಂಡಿತರ ಅತಿ ಪಾಂಡಿತ್ಯದ ಪ್ರಭಾವದಿಂದಾಗಿ ಜಾತಿಗಳಾಗಿ ಶೂದ್ರಾತಿಶೂದ್ರ ಬದುಕನ್ನ ಅಸಹನೀಯಗೊಳಿಸಿತು. ದೇವರು ಬಹುರೂಪಿಯಾಗಿ ನಿರ್ಮಾಣಗೊಂಡು, ನಾನಾ ನಮೂನೆ. ಕ್ರಿಯೆಗಳನ್ನು ಆರಂಭವಾಗಿದ್ದೆ ಇಲ್ಲ. ದೇವರನ್ನು ಸೃಷ್ಟಿಸಿದ ಒಂದುವರ್ಗ ದುಡಿಯಲು ಬಯಸಿದೆ ಆರಾಮದಿಂದ ಮತ್ತೊಬ್ಬರು ದುಡಿದಿರುವವರ ಸಂಪತನ್ನು

ಲಪಟಾಯಿಸುತ್ತ ನಿಮ್ನವರ್ಗದವರ ತಲೆಯೊಳಗೆ ಯಾವುದೋ ಒಂದು ಅಧಮ್ಯ ಚೇತನದ ಹುಳವನ ಬಿಟ್ಟು

1. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂಪುಟ. 3. ಪು. 221.

ದಿನಕ್ಕೊಂದು ದೇವರನ್ನ ಸೃಷ್ಟಿಸಿ, ತೀರ್ಥಕ್ಷೇತ್ರ, ಪುಣ್ಯಕ್ಷೇತ್ರಗಳ ಸೃಷ್ಟಿಯಾಯ್ತು. ಇದನ್ನ ಕಂಡು ಬೇಸರಗೊಂಡಿದ್ದ ಕನಕದಾಸರು ಅಜ್ಞಾನಿಗಳ ಕಂಡು,

**"ಸ್ನಾನಮಾಡಿರರೋ ನೀವೆಲ್ಲರೂ
ಜ್ಞಾನ ತೀರ್ಥದಲ್ಲಿ"**

ಅಜ್ಞಾನದ ಕೂಪದಲ್ಲಿ ಹೊರಳಾಡಿ ಸಾಯುವುದಕ್ಕಿಂತ ಆ ಆಲೋಚನೆಗಳನ್ನು ಬಿಟ್ಟು ಜ್ಞಾನ ತೀರ್ಥದಲ್ಲಿ ಮಿಂದರೆ ಜನುಮಸಾರ್ಥಕವಾದೀತು. ಮುಂದುವರೆದು ಕನಕರು,

**ಜ್ಞಾನವಿಲ್ಲದೆ ನೂರು ಕಾಲ
ಬದುಕಲ್ಯಾತಕೆ ?**

ಧ್ವನಿಯೇ ಇಲ್ಲದ ಧಮನಿತ ಜನಸಮೂಹ, ಪಂಡಿತರ ಪ್ರಖಾಂಡ ಪಾಂಡಿತ್ಯದ ಕತೆಯನ್ನು ಬಹುದೂರದಿಂದಲೆ ಕೇಳಿ ಪುಳಕಿತರಾಗುವ ಕಾಲಘಟ್ಟದಲ್ಲಿ ಜ್ಞಾನವನ್ನು ಹೇಗೆ ತಾನೆ ಪಡೆಯಲು ಸಾಧ್ಯ. ಉಳ್ಳವರ ಕಾಲ್ಗೆಜ್ಜೆಯಾಗಿದ್ದ ಜನರ ಕಂಡು ಕನಕದಾಸರು ಹೀಗೆಂದಿದ್ದಾರೆ. ಶ್ರೀರಂಗಪಟ್ಟಣದಲ್ಲಿ ಹಾಯಾಗಿ ಮಲಗಿರುವ ರಂಗನಾಥನ ಕುರಿತು ಕವಿ ಕನಕದಾಸರು,

**ಇನ್ನೆಷ್ಟು ಕಾಲ ನೀನಿಲ್ಲಿ ಮಲಗಿದ್ದರೂ !
ನಿನ್ನ ನೆಬ್ಬಿಸುವವರ
ನೊಬ್ಬರನೂ ಕಾಣೆ".**

ಶ್ರೀರಂಗನಾಥನನ್ನು ಸಾಂಕೇತಿಕವಾಗಿ ಬಳಸಿಕೊಂಡ ಕನಕರು. ಶತಮಾನಗಳಿಂದ ಮೌಢ್ಯದ ನಿದ್ದೆಯಲ್ಲಿ ಮಲಗಿರುವ, ಬಡವರು ಹಾಗೆಯೆ ತಮ್ಮ ಬದುಕನ್ನು ಅನುಭವಿಸಿ ನಿದ್ದೆಯಲ್ಲೇ ಕರಗಿ ಹೋಗುತ್ತಾರೆ. ಅವರನ್ನ ಬಡಿದೆಬ್ಬಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

13-14 ನೇ ಶತಮಾನದಲ್ಲಿದ್ದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಮಹತ್ವದ

ಪಾತ್ರವನ್ನು ವಹಿಸಿತ್ತು ಎನ್ನುವುದಕ್ಕೆ ಪೂರಕವಾಗಿ ಅವರ ಹಾಡು.

ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರೂ
ಬಲ್ಲಿರಾ, ಬಲ್ಲಿರಾ
ಹುಟ್ಟದ ಯೋನಿಗಳಿಲ್ಲಾ
ಮೆಟ್ಟದ ಭೂಮಿಗಳಿಲ್ಲಾ
ಅಟ್ಟುಣ್ಣದ ವಸ್ತುಗಳಿಲ್ಲ.
ಜಲವೇ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರೂ ಬಲ್ಲಿರಾ, ಬಲ್ಲಿರಾ.

ಎಂದು ಪ್ರಶ್ನಿಸುವಂತೆ ಮಾಡಿರುವ ವ್ಯವಸ್ಥೆ ಎಷ್ಟರ ಮಟ್ಟಿಗೆ ಕಠೋರವಾಗಿದ್ದಿರಬಹುದು. ಪಂಪಕವಿಯ ಮಾನವ ಜಾತಿ ತಾನೊಂದೆ ವಲಂ, ಕುವೆಂಪು ಅವರ ವಿಶ್ವ ಸಂದೇಶ.

ಎಲ್ಲವೂ ಜಾತಿವಾದ ಸಮಾಜಕ್ಕೆ ಸವಾಲನ್ನು ಎಸೆಯುವ ಪ್ರಯತ್ನಗಳೇ ಆಗಿವೆ.

ನನ್ನ ಬಹುಮುಖ್ಯವಾದ, ಚರ್ಚೆ ಇಲ್ಲಿ, ರಾಮಧಾನ್ಯಚರಿತೆ ಮತ್ತು ಅದರ ಪ್ರಸ್ತುತತೆ. ರಾಮಧ್ಯಾನ ಚರಿತೆಗೆ ಹೋಗುವುದಕ್ಕಿಂತ ಮುನ್ನ ಭಾರತದ ಇವತ್ತಿನ ಮತ್ತು ಕನಕದಾಸರು ಬದುಕಿದ ಆ ಕಾಲದ ಸಾಮಾಜಿಕ ಸ್ಥಿತಿಯ ಸ್ಥೂಲ ಪರಿಚಯ ಮಾಡಿಕೊಳ್ಳುವುದು ಅತ್ಯವಶ್ಯಕವಾಗಿದೆ. ಜಾತಿ, ಧರ್ಮ-ಮತ, ಪಂಥ-ಪಂಗಡ ಈ ಸವಕಲು ಶಬ್ದಗಳು ಒಂದು ಕಡೆಯಾದರೆ ಉತ್ತರ-ದಕ್ಷಿಣ, ಪೂರ್ವ-ಪಶ್ಚಿಮ, ಕಪ್ಪುಬಣ್ಣ, ಬಿಳಿದೊಗಲು ಹೀಗೆ ಜಾತಿವಾರು, ಪ್ರಾಂತ್ಯವಾರು, ವಿಭಿನ್ನತೆ ಒಂದೆಡೆಯಾದರೆ, ಭಾಷೆಗಳ ಒಳಜಗಳ-ಗಡಿಗಳ ಒತ್ತುವರಿ, ಉಚ್ಚಾನೀಚ, ಬಡವ -ಶ್ರೀಮಂತ ಒಂದಾ, ಎರಡಾ, ಸಾವಿರಾರು ತಾರತಮ್ಯಗಳ ಈ ನಾಡಿನಲ್ಲಿ ಈಗ ಯಾವೊಬ್ಬ ಸಂತ, ಶರಣ ಪ್ರಸ್ತುತವಾಗುವುದಿಲ್ಲ. ಇಂಗ್ಲೀಷ್ ಲೇಖಕನೊಬ್ಬ ಹೇಳುವಂತೆ,

" ಜಗತ್ತಿನಲ್ಲಿ ಮನುಜ ಕುಲವುಳಿಯಬೇಕಾದರೆ
ಮತ್ತೊಬ್ಬರ ಪ್ರೀತಿಸದಿದ್ದರೂ
ಸಹಿಸಿಕೊಳ್ಳಲೇಬೇಕು".

ಯಾರು ಯಾರನ್ನೂ ಇಷ್ಟಪಡಲು, ಪ್ರೀತಿಸಲು ಆಗುವುದೇ ಇಲ್ಲಾ, ನಮ್ಮ ಪಕ್ಕದ ಮನೆಯವರು, ಪಕ್ಕದ ತೋಟದವರನೇ ಸರಿಯಾಗಿ ಮಾತಾಡಿಸುವುದಿಲ್ಲ.

ಇಂತಹ ಸನ್ನಿವೇಶಗಳು ಇಂದು ನಿನ್ನೆಯದಲ್ಲ. ಕನಕನ ಕಾಲಘಟ್ಟದಲ್ಲಿ ಇದ್ದವು ಎಂಬುದಕ್ಕೆ ಅವರ ಅಭಿವ್ಯಕಿಯೇ ಸಾಕ್ಷಿ. ಅವರ 'ಮೋಹನ ತರಂಗಿಣಿ'- ಈ ಹೆಸರೇ ಮನಮೋಹಕವಾಗಿದೆ. ಈ ಕೃತಿಯ ವಿಶೇಷವೆಂದರೆ, ಅದರ ಪಾತ್ರಗಳನ್ನು ಚಿತ್ರಿಸಿರುವುದು. ಇಲ್ಲಿ ಬರುವ ಶಂಬಾಸುರನಿಗೆ ಅವನ ಮಗ ಪ್ರದ್ಯುಮ್ನನಿಂದಲೇ ಸಾವು ಎಂದು ಅರಿತರೂ ಅವನನ್ನು ಹಿಂಸಿಸದೆ ಇಲ್ಲಾ ಕೊಲೆ ಮಾಡಿಸದೆ, ಕರಳುಬಳ್ಳಿಯನ್ನ ಜೋಪಾನವಾಗಿ ಸಾಕಿ ಸಲಹಿ ಸಕಲ ಶಾಸ್ತ್ರಗಳನ್ನು, ಶಸ್ತ್ರಾಸ್ತ್ರ ವಿದ್ಯೆಯನ್ನು ಕಲಿಸುತ್ತಾನೆ. ಪ್ರದ್ಯುಮ್ನ ಇವ್ಯಾವುದನ್ನು ಲೆಕ್ಕಿಸದ ಪ್ರದ್ಯುಮ್ನ ಶಂಬರಾಸುರನನ್ನು ಕೊಲ್ಲುತ್ತಾರೆ. ತಂದೆಯ ಕರ್ತವ್ಯವನ್ನು ಪಾಲಿಸಿದ ಶಂಬರಾಸುರನನ್ನು ಕೊಲ್ಲುತ್ತಾರೆ. ತಂದೆಯ ಕರ್ತವ್ಯವನ್ನು ಪಾಲಿಸಿದ ಶಂಬರಾಸುರನ ದೊಡ್ಡತನದ ಪರಿಚಯವಾಗುತ್ತದೆ.

ನಳಚರಿತ್ರೆಯಲ್ಲಿ ಕನಕದಾಸರು, ಮಾನವೀಯಮೌಲ್ಯ ದೈವತ್ವಕ್ಕಿಂತ ಮಿಗಿಲು ಎಂದು ಸಾರಿದ್ದಾರೆ. ಪರಮ ಪತಿವ್ರತೆಯು ನಳನ ಅವರ ಪ್ರೇಮಿಯು ಆದ ದಮಯಂತಿಯನ್ನು ದೇವತೆಗಳು ಒಲಿಸಿಕೊಳ್ಳುವ ಮನಸ್ಸು ಮಾಡುತ್ತಾರೆ. ಸ್ವತಃ ನಳನನ್ನೇ ದಮಯಂತಿಯನ್ನ ಅವರಿಗೆ ಒಲಿಯುವಂತೆ ಮಾಡೆಂದು ಕೇಳುವಲ್ಲಿ ದೇವತೆಗಳ ಪಕ್ಷಪಾತಿತನ, ಸ್ವಾರ್ಥ ಎದ್ದು ಕಾಣುತ್ತದೆ.

ರಾಮಧಾನ್ಯಚರಿತೆ- ಮೇಲುಜಾತಿಯ ವಿರುದ್ಧ ಕೆಳಜಾತಿಯವರ ಬಂಡಾಯ ಹಾಗೂ ಪ್ರತಿಭಟನೆಯನ್ನು ಕಾಣುತ್ತೇವೆ. ಈ ವ್ಯವಸ್ಥೆಯಲ್ಲಿ ಕಟ್ಟಕಡೆಯ ಮನುಷ್ಯ ಎಲ್ಲಿಯವರೆಗೆ ತನ್ನ ಹೆಗಲ ಮೇಲಿನ ಭಾರವನ್ನು ಹೊರಬಲ್ಲ? ಭಿನ್ನತೆಯ ಲಾವಾರಸ ಸಾಮಾಜಿಕ ಹಿನ್ನೆಲೆಯಲ್ಲಿ ಕೊತಕೊತನೆ ಕುದ್ದು ಒಂದಲ್ಲಾ ಒಂದು ದಿನ ಸ್ಫೋಟಗೊಂಡು ಉಳ್ಳವರು ಮೇಲ್ವರ್ಗದವರೆಂದು ಹಣೆಗೆ ನಾಮ ಬಳಿದು ಬಿಳಿ ಬಟ್ಟೆ ಮುಚ್ಚಿಕೊಂಡು ಮಿಲ್ಟ್ರಿ ಹೋಟೆಲುಗಳಲ್ಲಿ ಬಿಳಿಬಟ್ಟೆಯು ಮುಖವಾಡದಲ್ಲಿ ಮದ್ಯ ಹಾಗೂ ಮಾಂಸವನ್ನ ಮುಲಾಜಿಲ್ಲದೆ ಉಣ್ಣುವಾಗ ನಾವು ಯಾರೆಂದು

ತಿಳಿಯದ ಮಂದಿ ಹೊರಗಡೆ ಬಂದಾಗ ಮಾತ್ರ ಸಮಾಜದಲ್ಲಿ ದೊಡ್ಡ ಕುಲಕ್ಕೆ ಸೇರಿದವರು ಎಂಬ ಪೋಷಾಕು, ಕನಕರಿಗೆ, ಬಡವರು, ದಲಿತರು, ಹಿಂದುಳಿದ, ಶೂದ್ರರ ಮೇಲಿದ್ದ ಕಳಕಳಿಯ ಪ್ರತೀಕವೇ ಈ ರಾಮಧಾನ್ಯಚರಿತೆ. ಕನಕದಾಸರು ಏಕವ್ಯಕ್ತಿಯಾಗಿಯೇ ವೈದಿಕ ಪರಿಸರದೊಳಗಡೆ ಇದ್ದುಕೊಂಡೆ, 12ನೇ ಶತಮಾನದಲ್ಲಿ ಬಸವೇಶ್ವರರು ಹೋರಾಡಿದಂತೆ ಹೋರಾಡಿದರು. ಮುಂದೆ ಕುವೆಂಪು ಅವರು ಕೂಡ ತಮ್ಮ ಆರಂಭದ ದಿನಗಳಲ್ಲಿ ಇದೇ ಸಮಸ್ಯೆಗಳನ್ನು ಎದುರಿಸಿದರೆ, ಇವತ್ತಿಗೂ ದಲಿತ ಬರಹಗಾರರ ಬರವಣಿಗೆಯನ್ನು ಒಪ್ಪ ಹುಸಿ ಪಂಡಿತರಿದ್ದಾರೆ. ಇಂತಹ

ಹೋರಾಟದ ಒಂದು ಅತ್ಯಂತ ಉತ್ಕೃಷ್ಟ ಮಾದರಿಯೇ ಈ ಕೃತಿ. "ಗಾತ್ರವದು ಸೂತ್ರವಲ್ಲಾತ್ಮಕ್ಕೆ" ಕುವೆಂಪು ಅವರ ಮಾತಿನಂತೆ -156.

ಪದ್ಯಗಳಿರುವ 40. ಪುಟಗಳ ಪುಟ್ಟಕಾವ್ಯದ ಕೀರ್ತಿ ಬಹುದೊಡ್ಡದು. ರಾಮಧಾನ್ಯಚರಿತೆ, ನಿಜವಾದ ಅರ್ಥದಲ್ಲಿ, ಬಡವರ ರೈತರ, ದಲಿತರ ದನಿ ಇಲ್ಲದವರ, ಶೋಷಿತ ಬಹುಜನರ ಪ್ರತಿಭಟನೆಯ ಚರಿತೆಯೆಂಬುದೇ ಸರಿ. ವಿಜಯನಗರದ ಸಾಮ್ರಾಜ್ಯವನ್ನು ಸುವರ್ಣಯುಗ ಮುತ್ತು, ರತ್ನಗಳನ್ನು ಒಳ ಪದದಿಂದ ಮಾರಿದ ಕಾಲವೆಂದು ವೈಭವಿಕರಿಸುವ ವಿಜಯನಗರದ ಆ ಕಾಲದ ವಿಕಾರ ರೂಪವನ್ನು ರಾಮಧಾನ್ಯ ಚರಿತೆ ಅನಾವರಣಗೊಳಿಸುತ್ತದೆ. ಸುವರ್ಣಯುಗ ಕೇವಲ ಉಳ್ಳವರಿಗೆ - ಸಿರಿವಂತರು ಅಧಿಕಾರಿಗಳಿಗೆ ಮಾತ್ರ. ಬಡವರು-ದೀನದಲಿತರ ಪಾಲಿಗೆ ಅದೊಂದು ಕರಾಳಯುಗವಾಗಿವೆ.

ಕನಕರು, ಜನರಿಗೆ ಹತ್ತಿರವಾದ ಎರಡು ಧಾನ್ಯಗಳ ಮುಖಾಂತರ ಅದರ ಅರ್ಥ. ಆಶಯಗಳನ್ನು ಹೆಚ್ಚೆಚ್ಚು ವಿಸ್ತರಿಸಲು ಅವಕಾಶ ಮಾಡಿದ್ದಾರೆ. ಇಲ್ಲಿ, ಎರಡು ಧಾನ್ಯಗಳು ಎರಡು ವರ್ಗಗಳನ್ನು, ಎರಡು ವ್ಯವಸ್ಥೆಗಳನ್ನ ಎರಡು ಸಂಸ್ಕೃತಿಗಳನ್ನು, ಎರಡು ಮೌಲ್ಯಗಳನ್ನು, ಎರಡು ಜಾತಿ, ವರ್ಣ, ಮತಧರ್ಮಗಳನ್ನು ಪ್ರತಿನಿಧಿಸುತ್ತದೆ. ಕನಕರು ಅನುಭವಿಸಿದ ಅವಮಾನ, ಶೋಷಣೆಗೆ ಅವರು ಕೊಟ್ಟ ತಿರುಗೇಟು ರಾಮಧಾನ್ಯದಲ್ಲಿ ವ್ಯಕ್ತವಾಗಿದೆ. ಇಲ್ಲಿ ಮೇಲು ಜಾತಿಗಳೆನಿಸಿದ ಆರ್ಯಶ್ರೇಷ್ಠ, ವೈದಿಕ ಬ್ರಾಹ್ಮಣೋತ್ತಮ, ಸುಸಂಸ್ಕೃತ ಪಂಡಿತರೆನಿಸಿದವರು ಕನಕದಾಸರಿಗೆ ಬಿಟ್ಟು ಬಿಡದೆ ಅವಮಾನಸಿದರು, ಶೋಷಣೆ ಮಾಡಿದರು. ಕನಕರ ಅಂತರಾಳದಲ್ಲಿ ಆಸ್ಫೋಟಗೊಂಡಿದೆ. ರಾಗಿ, ಬಣ್ಣದಲ್ಲಿ ಕಪ್ಪು ಮತ್ತು ಅಷ್ಟೊಂದು ಜನಪ್ರಿಯ, ಜನಾಕರ್ಷಣೀಯ ಧಾನ್ಯವಲ್ಲಾ. ಈ ರಾಗಿ, ಶೂದ್ರರ, ದಲಿತರ, ಹಿಂದುಳಿದವರ, ಒಟ್ಟು ತಳ ಸಮುದಾಯಗಳ ಸಾಂಸ್ಕೃತಿಕ ಸಂಕೇತವಾಗಿದೆ. ಅಕ್ಕಿ ಎಂಬ ಬಿಳಿ ಬಣ್ಣದ ಶೋಷಕ, ಮೇಲ್ವರ್ಗವನ್ನ ಪ್ರತಿನಿಧಿಸಿ ಆ ವರ್ಗದ ಸಹಜವಾದ 'ಧಿಮಾಕು, ಅಹಂ ' ಪ್ರದರ್ಶಿಸುತ್ತದೆ. ಕನಕದಾಸರು ಈ ಎರಡು ಧಾನ್ಯಗಳನ್ನು ಸಂಕೇತಿಕವಾಗಿಟ್ಟುಕೊಂಡು ಒಂದು ವರ್ಗದ ಆತ್ಮಪ್ರಜ್ಞೆಯನ್ನ ಸ್ವಾಭಿಮಾನವನ್ನು, ಅವರ ಬದುಕಿನ ಸಾರ್ಥ್ಯಕತೆಯನ್ನು ಹೊರಜಗತ್ತಿಗೆ ಪ್ರಚುರಪಡಿಸಿದ್ದಾರೆ. ಬಹುಜನರ, ಬಹು ಸಂಸ್ಕೃತಿಯ ಪ್ರತಿನಿಧಿಯಾದ ರಾಗಿಯನ್ನ ಕನಕರು-'ನರೆದಗಲಗ' ವೆಂತಲೂ ಶೋಷಕನಾದ ಅಕ್ಕಿಯನ್ನು ವ್ರೀ ಹಗ ಎಂತಲೂ ಕರೆದಿದ್ದಾರೆ ತಮ್ಮ ಕೃತಿಯಲ್ಲಿ ಅವರ ಬಹುಜನ ಸಂಸ್ಕೃತಿಯ ಕಾಳಜಿಯನ್ನು ಕನ್ನಡದ ಅನೇಕ ವಿದ್ವಾಂಸರು ಗುರುತಿಸಿರುವುದು ಮಹತ್ವದ ಸಂಗತಿಯೇ ಸರಿ. "ಕನಕರ ಕೃತಿಗಳಲ್ಲೆಲ್ಲಾ ಇದ್ದು

ಹೆಚ್ಚು ವೈಚಾರಿಕ ಮತ್ತು ವೈಜ್ಞಾನಿಕವಾದದ್ದು. ಕನ್ನಡದ ಶ್ರೇಷ್ಠದರ್ಜೆಯ ವಿದ್ವಾಂಸರುಗಳು ಈ ಕೃತಿಯನ್ನು ಮುಕ್ತ ಮನಸ್ಸಿನಿಂದ ಕೊಂಡಾಡಿದ್ದಾರೆ ಅದರ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದ್ದಾರೆ".

ರಾಮಧಾನ್ಯ ಚರಿತ್ರೆಯನ್ನು ಸಂಪಾದಿಸಿದ ಪ್ರೊ.ದೇಜಗೌ. ಅದರ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ. ಇದೊಂದು ಸುಂದರವಾದ ಮತ್ತು ಕ್ರಾಂತಿಯುತವಾದ ವಿಡಂಬನಾಕಾವ್ಯ ಬಂಕು ಗುಳಿಗಳ ಮತಾಂಧರ ಮತ್ತು ಪಟ್ಟಭದ್ರ ಹಿತಾಸಕ್ತ ಮೂಗು ಕೆತ್ತಿ ಅವರ ಒರೆಕೋರೆಗಳನ್ನ ತಿದ್ದಬೇಕೆಂಬುದು ಕವಿಯ ಪ್ರತಿಜ್ಞೆಯಾಗಿದೆ. ಜೊತೆಗೆ ಈ ಓರಕೊರೆಗಳು ಸಾಮಾನ್ಯರಿಗೆ ಗ್ರಹಿಕೆಯಾಗಿ ಅವರು ಎಚ್ಚೆತ್ತುಕೊಳ್ಳಬೇಕೆಂಬುದು ಅವರ ಆಶಯವಾಗಿದೆ. ಸತ್ಯಾಸತ್ಯಗಳ ನಡುವೆ ರಾಜಿಯ ಸೂತ್ರಸಲ್ಲದೆಂಬುದು ಕವಿಯ ದೃಢ ನಿಲುವಾಗಿದೆ"

"ರಾಮಧಾನ್ಯ ಚರಿತ್ರೆಯನ್ನು ದಲಿತ ಧ್ವನಿಯ ಸುಂದರ ರೂಪಕ ಎಂದು ಕರೆಯಬಹುದು. ಕವಿಯ ಬಡವರ ಪ್ರೇಮ ಇಲ್ಲಿ ವ್ಯಕ್ತವಾಗಿದೆ".

ಈ ಎಲ್ಲ ಚಿಂತನೆಗಳಿಗೆ ಮೂಲಗ್ರಾಸವಾಗಿರುವ ಈ ಕೃತಿಯ ಆರಂಭ - ಸೀತೆಯನ್ನ ಅಪಹರಿಸಿದ್ದ ರಾವಣನನ್ನು ವಾನರ ಸೇನೆಯ ಸಹಾಯದಿಂದ ಸಂಹರಿಸಿ ಸ್ವಸ್ಥಾನಕ್ಕೆ ಹಿಂತಿರುಗುವಾಗ ಸೀತಾರಾಮರು ಮಾರ್ಗಮಧ್ಯದ ಗೌತಮ ಮುನಿಯ ಆಶ್ರಯದಲ್ಲಿ ಆತಿಥ್ಯ ಸ್ವೀಕರಿಸುತ್ತಾರೆ. ಅಲ್ಲಿ ಏರ್ಪಟ್ಟ ಭೋಜನಕೂಟದಲ್ಲಿ ನಾನಾ ಧಾನ್ಯಗಳ ಸಾರಸತ್ವವನ್ನು ಕುರಿತು ನಡೆದ ಚರ್ಚೆಯಲ್ಲಿ - ಗೌತಮ ಮುನಿಗಳು ಸರ್ವಧಾನ್ಯಗಳಲ್ಲಿ ರಾಗಿಯೇ ಶ್ರೇಷ್ಠ ಎಂಬಂತೆ ಮೆಚ್ಚಿ ಮಾತನಾಡುತ್ತಾರೆ. ಇದರಿಂದ ಕುಪಿತಗೊಂಡ ಭತ್ತಕ್ಕೆ ಪಿತ್ತನೆತ್ತಿಗೇರಿ ರಾಗಿಯನ್ನು ಬಾಯಿಗೆ ಬಂದಂತೆ ಬೈದು, ಜಾತಿಯ ನೆಲೆಯಿಂದ ಅಪಮಾನ ಮಾಡುತ್ತದೆ. ಈ ಎಲ್ಲಾ ಅವಮಾನವನ್ನು ಕೆಳವರ್ಗದವರು ಶತಮಾನಗಳಿಂದ ಸಹಿಸಿಕೊಂಡಂತೆ ಕಡೆಗೆ ತಡೆದುಕೊಳ್ಳಲಾಗದೆ ನೇರವಾಗಿ ತಿರುಗಿ ಬೀಳುತ್ತದೆ. ಮತ್ತು ಭತ್ತವನ್ನ ಹಿಯಾಳಿಸುತ್ತದೆ. ವಾದ ವಿವಾದವನ್ನು ಆಲಿಸಿದ ರಾಮ ರಾಗಿ -ಭತ್ತವನ್ನು ಆರು ತಿಂಗಳ ಕಾಲ ಸೆರೆವಾಸದಲ್ಲಿರಿಸುತ್ತಾನೆ. ಅವಧಿ ಮುಗಿದ ತರುವಾಯ ರಾಗಿ ಮುನ್ನಿನಂತೆ ಚೆನ್ನಾಗಿದ್ದರೆ ಭತ್ತ ಬಣ್ಣಗೆಟ್ಟು ಕಾಂತಿಹೀನವಾಗಿರುತ್ತದೆ. ಹೀಗೆ ರಾಗಿಯ ಮಹಿಮೆಯನ್ನು ಮೆಚ್ಚಿದ ರಾಮ ದೇವಾನುದೇವತೆಗಳ ಸಮ್ಮುಖದಲ್ಲಿ 'ರಾಘವನಾಭಿದಾನ' ಗೈಯುತ್ತಾನೆ. ಭತ್ತಕ್ಕಿಂತ ರಾಗಿ ಶ್ರೇಷ್ಠ ಎಂದು ಜಗಕ್ಕೆ ಸಾರುತ್ತೇನೆ. ಮೇಲ್ನೋಟಕ್ಕೆ ಸರಳವಾಗಿ ಮಕ್ಕಳಿಗೆ ಹೇಳುವ ಕಥೆಯಂತಿದ್ದರೂ ಕೃತಿಯ ಅಂತರಾಳದಲ್ಲಿ ಅಡಗಿರುವ ಮಹಾಸ್ಫೋಟವು ಸಾಮಾನ್ಯ ಓದುಗನಿಂದ ಗ್ರಹಿಸಲಾಗಲಾರದು. ದೇವೇಂದ್ರನಿಂದ

ಅನ್ಯಾಯಕ್ಕೊಳಗಾದ ಗೌತಮ ಮಹರ್ಷಿಯಿಂದ ಪರಮ ಸಾರದ ಹೃದಯವನ್ನು ಗುರುತಿಸಿರುವುದು ಎಲ್ಲ ತತ್ವದಲ್ಲೂ ಮೀರಿದ ಆಶಯವಾಗಿದೆ.

ಮುಂದೆ ಕಪಿಲ ಮುನಿಯ ಬಾಯಿಂದ ನುಡಿಸುವ

ಎಲ್ಲಾ ನವಧಾನ್ಯದಲಿ ಈತನೆ

ಬಲ್ಲಿದನು ಹುಸಿಯಲ್ಲಿ ಬಡವರ ಬಲ್ಲಿದರಾನಾರೈದು ಸಲಹುದನಿವಗೆ ಸರಿಯುಂಟೆ

ನೆಲ್ಲಿನಲಿ ಗುಣವೇನು ಭಾಗ್ಯ

ಬಲ್ಲಿದರ ಪತಿಕರಿಸುವನು ಅವನಲಿ

ಸಾರವ ಕಾಣೆ (13.25).

ಎಂಬ ಮಾತುಗಳು ಪ್ರಧಾನ ಸಂಸ್ಕೃತಿಯ ನಿಸ್ಸಾರತ್ವವೂ, ಜನಮುಖಿ ಸಂಸ್ಕೃತಿಯ ಸಾರಸರ್ವವೂ ಅನಾವರಣಗೊಂಡಿದೆ. ಹಿಂದುಳಿದ ಶೂದ್ರರನು ಹಿಂಜರಿವ ವಿಪ್ರರಿಗೆ -ಶೂದ್ರ ಸಂಸ್ಕೃತಿಯ ಹೃದಯ ವೈಶಾಲ್ಯತೆಯ ಪರಿಚಯ ಮಾಡಿಕೊಡುತ್ತದೆ.

ರಾಗಿ ಹೀನಕುಲದವರ ಪ್ರತಿನಿಧಿ ಎಂದು ಭವಿಸಿದವರಿಗೆ ಅದರ ಉತ್ಕೃಷ್ಟತೆಯನ್ನು ಎತ್ತಿ ತೋರಿಸುವ ಯತ್ನ ಕನಕರದ್ದಾಗಿದೆ. ಜಾತಿಯ ಕಾರಣಕ್ಕಾಗಿ ಗುರುಗಳಿಂದ, ಸಹಪಾಠಿಗಳಿಂದ ಅನುಭವಿಸಿದ ದುಃಖದುಮ್ಮಾನಗಳನ್ನು ಹಿನ್ನೆಲೆಯನ್ನಾಗಿ ಇಟ್ಟುಕೊಂಡು ಕೆಳಜಾತಿಯ ಜನರು ತಿನ್ನುವ ರಾಗಿಯು ಮೇಲ್ಜಾತಿಯವರು ತಿನ್ನುವ ಬತ್ತಕ್ಕಿಂತ ಶ್ರೇಷ್ಠ ಎಂಬುದನ್ನು ಸಾಧಿಸಿದ್ದಾರೆ. ಗೌತಮುನಿಯು ಬತ್ತವನ್ನು ಬಿಟ್ಟು ರಾಗಿಯೇ ಶ್ರೇಷ್ಠವೆಂದಾಗ, ಕೋಪಗೊಂಡ ಬತ್ತ ಲೋಕದಲಧಿಕ ಭೋಜನ ಎದ್ದೆ

ದಾಕೆವಾಳರು ಬುಧರು ಜರೆದು ನಿ
ರಾಕರಿಸಿ ಬಿಡಲಂತು ನೀ ಶೂದ್ರಾನ್ನ ವಾದೆಯಲ
ನಾ ಕವಿಳಯರು ಸಾಕ್ಷಿ ನಿನ್ನ ವಿವೇಕಿಗಳು ಮೆಚ್ಚುವಳೆ ಬಾಹಿರ
ಸಾಕು ನಡೆ ನೀನಾವ ದೂನ್ಯನು ಕಡೆಗೆ ತೊಲಗೆಂದ (36.,)

ಈ ಪದ್ಯದಲ್ಲಿ ಅನಾವರಣಗೊಳ್ಳುವ ಶೀತಲಸಮರ ನೆತ್ತಿಗೇರಿದ ಮುಸ್ಲಿಂ, ಸಿಖ್, ಕ್ರಿಶ್ಚಿಯನ್, ಯಹೂದ್ಯ- ಹೀಗೆ ನಾನ ನಮೂನಿಯ ಧರ್ಮಗಳು ಮತಾಂಧರಾಗಿ, Fundamentalist ಗಳಂತೆ. ತಮ್ಮದೇ ಬಹುಶ್ರೇಷ್ಠ ಧರ್ಮವೆಂಬ ಜಾಗಟೆಯನ್ನ ಬಾರಿಸುತ್ತ ಜಗತ್ತನ್ನ ತಮ್ಮ ಕಪಿಮುಷ್ಠಿಯೊಳಗೆ ಹಿಡಿದಿಡುವ

ಪ್ರಯತ್ನಗಳು ನಡೆಯುತ್ತಲೇ ಇವೆ. ಇಂತಹ ಮೂರ್ಖ ಪ್ರಯತ್ನಗಳಿಗೆ ಮಾದರಿ ಈ ರಾಮಧಾನ್ಯಚರಿತ್ರೆ.

ಅಷ್ಟಕ್ಕೆ ಬಿಡದ ಭತ್ತ, ದೇವತೆಗಳ ಸಾಕ್ಷಿಯಾಗಿ ಪರಾಕ್ರಮಿಗಳೂ, ಪ್ರಾಜ್ಞರೂ, ವಿವೇಕಿಗಳೂ ನನ್ನನ್ನು ಮೆಚ್ಚಿ ನಿನ್ನ ನಿರಾಕರಿಸಿದ್ದಾರೆ. ವರ್ಣಬಾಹಿರ ಶೂದ್ರನೆಂಬುದಾಗಿ ತುಚ್ಛೀಕರಿಸಿದ್ದಾರೆ. ಆಚರಣೆಯಲ್ಲಿ ಶುಭಭೋಜನ, ವಿವಾಹ ಭೋಜನ ವ್ರತಾದಿಗಳಲ್ಲಿ ದೇವರಿಗೆ ನೈವೇದ್ಯ ಒಪ್ಪಿಸುವ ಸಂದರ್ಭದಲ್ಲಿ ನಾನೇ ಇದ್ದೇನೆ ಎಲ್ಲೈ ರಾಗಿಯೇ ನೀನು ಅಯೋಗ್ಯ. ಭ್ರಷ್ಟ ತೊಲಗಾಚೆ. ಎಂದು ಹೇಳುವಲ್ಲಿ ಇಂದು ದಲಿತರು ಅನುಭವಿಸುತ್ತಿರುವ ಪ್ರತಿಯೊಂದು ನೋವಿನ ಸಂಕೇತವಾಗಿದೆ. ಎಲ್ಲಿಯೂ ಸಲ್ಲದವರಾಗಿ, ಮೇಲ್ವರ್ಗ, ಕೆಳವರ್ಗ ಎಲ್ಲಾ ವರ್ಗಗಳಲ್ಲಿ ಪುಟಿವ ಚೆಂಡುಗಳಾಗಿ ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಒದೆಯುವವರ ಕಾಲಿಗೆ ಕಾಲ್ಚೆಂಡಾಗಿರುವ ಈ ಶೂದ್ರಾತಿ ಶೂದ್ರರು ಜಾಗೃತರಾದರೆ, ಜಗತ್ತು ಉಳಿದಂತೆ ಈ ಸೂಕ್ಷ್ಮವನ್ನು ಸಾರಿದ ಕನಕ ಶ್ರೇಷ್ಠ ಕವಿಯೆ ಸರಿ.

❄ ❄ ❄ ❄ ❄

ಗೋರಬೋಲಿಯ ಭಾಷಿಕ ನೆಲೆಗಳು

1. ಬಂಜಾರ ಶಬ್ದವು ಸಂಸ್ಕೃತ ಭಾಷೆಯ ವಾಣೀಜ್ಯಕಾರಕ ಅಂದರೆ ವ್ಯಾಪಾರಿ ಎನು ಪದದಿಂದ ಮತ್ತು ಪ್ರಾಕೃತ ಭಾಷೆಯ ವಾಣೀಜ್ಯರಾವ್ ಅಂದರೆ ವ್ಯಾಪಾರಿ ಎಂಬ ಪದದಿಂದ ಬಂದಿದೆ. ಇದರ ಉಗಮ ಪರ್ಶಿಯನ್ ಬಿರಂಜಾರ್ ಎಂದರೆ ಅಕ್ಕಿ ವ್ಯಾಪಾರಿ ಎಂಬುದಾಗಿದೆ. ಲಂಭಾಣಿ ಅಥವಾ ಲಮಾಣಿ ಎಂಬುದು ಸಂಸ್ಕೃತ ಭಾಷೆಯ ಲವಣ ಅಂದರೆ ಉಪ್ಪು ಎಂಬುವ ಪದದಿಂದ ಬಂದುದಾಗಿದೆ. ಏಕಂದರೆ ಈ ಜನರು ಉಪ್ಪಿನ ವ್ಯಾಪಾರಿಗಳಾಗಿದ್ದರು ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ. ಲಂಭಾಣಿಗರ ಭಾರತದ ನಿವಾಸಿಗಳಾಗಿದ್ದರು ಎಂಬುದಕ್ಕೆ 6 ನೇ ಶತಮಾನದ ಸಂಸ್ಕೃತ ಕವಿ ದಂಡಾದಶಕುಮಾರ ಚರಿತೆಯಲ್ಲಿ ಕಂಡುಬರುವ ಉಲ್ಲೇಖವೆ ಸಾಕ್ಷಿಯಾಗಿದೆ. ಮುಂದೆ ಕ್ರಿ.ಶ 1612 ನೇ ಶತಮಾನದಲ್ಲಿ ನಿಯಾಮತುಲ್ಲಾ ಬರೆದ ತಾರೀಖ್-ಇ-ಖಾನ್ ಜಹಾನ್ ಲೂಧಿ ಪುಸ್ತಕದಲ್ಲಿ ಬರುವ 1504ನೇ ಇಸ್ವಿಯಲ್ಲಿ ಜರುಗಿದ ಘಟನೆಯ ಉಲ್ಲೇಖವೆ ಸಾಕ್ಷಿಯಾಗಿದೆ.

"ಅವನ ಶಿಬಿರದಲ್ಲಿ (ಸುಲ್ತಾನನ) ಕೊರತೆ ಉಂಟಾದಾಗ ಬಂಜಾರರ ಆಗಮನವಾಗದಿದ್ದಾಗ ಆಜಂ ಹುಮಾಯೂನ್ ನನ್ನು ಸರಕನ್ನ ತರಲು ಕಳುಹಿಸಿದ್ದ". ಈ ಎಲ್ಲಾ ದಾಖಲೆಗಳು ಬಂಜಾರರ ಮೂಲ ಮತ್ತು ಉದ್ಯೋಗದ ಬಗ್ಗೆ ಬೆಳಕನ್ನ ಚೆಲ್ಲಿದರೆ, ಅವರು ಮಾತನಾಡುವ ಭಾಷೆಯಾದ ಗೋರ್ ಬೋಲಿಯ ನೆಲೆಗಳನ್ನ ಗುರುತು ಮಾಡಿ ಚರ್ಚಿಸುವುದು ಈ ಚರ್ಚೆಯ ಮೂಲ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಚರ್ಚೆಯ ಅನುಕೂಲಕ್ಕೆ ಇದನ್ನ ಪೂರ್ವ ನೆಲೆಗಳ ಹುಡುಕಾಟ.

2) ಅಲೆಮಾರಿ ಜನರ ಹೊಸ ಆವಿಷ್ಕಾರಗಳು
3) ಆಂಗ್ಲಭಾಷೆಯ ಪ್ರಭಾವ
4) ಪ್ರಾದೇಶಿಕ ಭಾಷೆಗಳ ಪ್ರಭಾವ
5) ಜಾಗತೀಕರಣ ಮತ್ತು ಗೋರಬೋಲಿ
6) ಗೋಕ್‌ಬೋಲಿ ಉಳಿಯುವಿಕೆ ಸಾಧಕ ಬಾಧಕಗಳು.

ಎನ್ನು ಅಂಶಗಳ ಜಾಡು ಹಿಡಿದು ಚರ್ಚೆಯ ಉದ್ದೇಶವನ್ನು ಸಾದರ ಪಡಿಸುವ ಪ್ರಯತ್ನ ಮಾಡಿದ್ದೇನೆ.

1. ಗೋರ್ ಬೋಲಿಯ ಪೂರ್ವನೆಲೆಗಳ ಹುಡುಕಾಟ.

ಬಂಜಾರಿ ಉಪಭಾಷೆ ಬಹುಮುಖ್ಯವಾಗಿ ಎರಡು ಉಪಭಾಷೆಯೊಂದಿಗೆ ನಂಟನ್ನ ಹೊಂದಿದೆ. ಬೆರಾರ್ ಪ್ರಾಂತ್ಯದಲ್ಲಿ ಮಾತನಾಡುವ ಲಂಭಾಣಿ ಭಾಷೆಯನ್ನ ಮುಖ್ಯವಾದ ಉತ್ಕೃಷ್ಟವೆಂದುಕೊಂಡು ಪಂಜಾಬ್ ಮತ್ತು ಗುಜರಾತ್‌ನ ಉಪಭಾಷೆಗಳೊಂದಿಗೆ ಮುಜಫರ್‌ಫುರ್‌ದ 'ಲಂಭಾನ್ನಿ' ಭಾಷೆಗಳೊಂದಿಗೆ ಸೇರಿದಂತೆ ಉಳಿದ ಪ್ರಾಂತ್ಯಗಳಲ್ಲಿ ಮಾತನಾಡುವ ಬಂಜಾರಿ ಭಿನ್ನವಾಗಿರುತ್ತದೆ. ಝಾನ್ಸಿಯ ಆಸುಪಾಸು ವಾಸವಾಗಿರುವ ಬಾಚಣಿಗೆ ತಯಾರಿಸುವ ಕಾಕೇರ್ ಜನಾಂಗ, ಪಂಜಾಬಿನ ಬಹುರೂಪಿಗಳ ಬಂಜಾರಿ ಭಾಷೆ ಬೆರಾರ್‌ನ ಉತ್ಕೃಷ್ಟ ಲಂಭಾಣಿ ಭಾಷೆಯೊಂದಿಗೆ ಹೋಲಿಕೆಯಾಗುತ್ತಿದೆ. 1891 ರ ಜನಗಣತಿಯ ಪ್ರಕಾರ, ಬಂಜಾರಿ ಭಾಷೆಯನ್ನ ಮಾತನಾಡುವವರ ಸಂಖ್ಯೆ 158. 500 ಕ್ಕಿಂತಲೂ ಹೆಚ್ಚಾಗಿತ್ತು ಎಂದು ಭಾಷಾವಿಜ್ಞಾನಿಗಳು ಅಂದಾಜಿಸುತ್ತಾರೆ. ಪಂಜಾಬಿನ ಬಹುರೂಪಿಗಳು ಮಾತನಾಡುವ ಲಂಬಾನ್ನಿ ಬಿತಾನೇರಗೆ ಹೊಂದಿಕೊಂಡಿರುವ ಹಿಸ್ಸಾರ್ ಪ್ರಾಂತ್ಯದಲ್ಲಿ ವಾಸಿಸಿರುವ ಬಗರಿ ಜನಾಂಗ ಮಾತನಾಡುತ್ತದೆ. ಆದಾಗ್ಯೂ ಈ ಎಲ್ಲಾ ಉಪಭಾಷಾ ಪ್ರಭೇದಗಳು ಅಂತಿಮವಾಗಿ ಪಶ್ಚಿಮ ರಾಜಸ್ಥಾನದಲ್ಲಿನ ಭಾಷಾ ಪ್ರಭೇದದ ಮೂಲವಾಗಿವೆ.

ಈ ಎಲ್ಲಾ ಉಪಭಾಷೆಗಳಲ್ಲಿ ಬೆರಾರ್‌ನ ಲಂಬಾಣಿ ಭಾಷೆ ಮಾತ್ರ ಉತ್ತಮವಾದ್ದು. ಈ ಭಾಗದಲ್ಲಿನ ಬುಡಕಟ್ಟು ಜನರು ಪ್ರಬಲವಾಗಿ ತಮ್ಮ ಜನಾಂಗೀಯ ಗುಣವನ್ನು ಉಳಿಸಿಕೊಂಡಿದ್ದಾರೆ ಜೊತೆಗೆ ಪಾವಿತ್ರತೆಯನ್ನ ಕಾಪಾಡಿಕೊಂಡಿದ್ದಾರೆ. ಪಂಜಾಬ್ ಮತ್ತು ಗುಜರಾತ್‌ಗಳನ್ನು ಬಿಟ್ಟು, ಪೂರ್ವ, ಪಶ್ಚಿಮ -ಉತ್ತರದೆಡೆಗೆ ಹೋದರೆ ಭಾಷೆ ಹೆಚ್ಚು ಕಲುಷಿತಗೊಂಡಿರುವುದ ಕಂಡುಬರುತ್ತದೆ.

ಲಂಭಾಣಿ ಅಥವಾ ವಂಜಾರಿ ಬೆರಾರಿನಲ್ಲಿ ಮಾತಾಡುವ ಏಕೈಕ ಉತ್ಕೃಷ್ಟ ಉಪಭಾಷೆಯ ಮೂಲ ಪಶ್ಚಿಮ ರಾಜಸ್ಥಾನಿಯೊಂದಿಗೆ ಗುಜರಾತಿಯ ಸಮ್ಮಿಶ್ರಣಗೊಂಡಿರುವಂತಹ ಒಂದು ರೀತಿಯ ಒರಟು ಭಾಷೆಯಾಗಿದೆ. ಈ ಪ್ರಧಾನ ಭಾಷೆಯ ವ್ಯಾಕರಣ ಭಿನ್ನವಾಗಿದೆ.

ಉಚ್ಚಾರಣೆ : ಇಚ್ಛಾಸ್ವರಗಳ ಬಳಕೆ.

ಉದಾ : ಬೆರರ್ ಲಂಬಾಣಿ ಲಂಭಾಣಿ ಭಾಷೆ

ಮೋತ್ತೋ ಮೋಟೋ-ದೊಡ್ಡವನು

ಏಖಾದಿ ಏಕಾದಿ ಯಾರಾದರೂ

ಸ್ವರದ ಅಳತೆಯೂ ಕೂಡ ಅಸಾಮಾನ್ಯವಾದದ್ದು.

ಇ-ಗೆ-ಅ

ದಾನ್-ದಿನ್

ಸಖಿ-ಸುಖಿ

ನಾಮಪದಗಳ ಏರುಪೇರು ಸಾಮಾನ್ಯವಾಗಿ ಬಲವಾದ ನಾಮಪದಗಳಲ್ಲಿ ಅ ಕಾರವು ಎ ಕಾರದಲ್ಲಿ ಬದಲಾಗುತ್ತದೆ.

ಉದಾ :

ಘೋಡೋ - ಘೋಡಾ.

ಮಾರೋ ಚೋರೋ - ಮೊತ್ತೋ ಛೋರೊ.

ಅನೇಕ ನಾಮಪದಗಳು ವ್ಯಂಜನಗಳೊಂದಿಗೆ ಕೊನೆಗೊಳ್ಳುತ್ತವೆ.

ಬಾಪು-ಬಾಪೇನೆ

ದಾನ್-ದಾನೇಮೇ

ಖೇತ-ಬೇತೆಮೇ

ಹಾತ್-ಹಾತೇಮೆ.

ಹೀಗೆ ಅನೇಕ ಶಬ್ದಗಳ ವೈಪರೀತ್ಯವನ್ನ ಇಲ್ಲಿ ಕಾಣಬಹುದು.

2) ಅಲೆಮಾರಿಗಳ ಆವಿಷ್ಕಾರಗಳು :

ಮೂಲತ ವ್ಯಾಪಾರಿಗಳಾದ ಬಂಜಾರರು ಎತ್ತುಗಳ ಮೇಲೆ ತಮ್ಮ ಸರಕುಗಳನ್ನು ಹೇರಿಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಸುವಾಗ ಅನೇಕ ಹೊಸತನಗಳನ್ನ ಪಡೆದುಕೊಳ್ಳುತ್ತಿದ್ದರು. ಹೀಗಾಗಿಯೆ ಬೆರರ ಲಂಭಾಣಿ, ಬಾಂಬೆಯ ಲಂಭಾಣಿಭಾಷೆ, ಮಧ್ಯಭಾರತೀಯ ಪ್ರಾಂತ್ಯಗಳಲ್ಲಿ ಮಾತನಾಡುವ ಭಾಷೆ ಹಾಗೂ ಝಾನ್ಸಿಯಾ ಕಕೇರಿಯ ಲಂಭಾಣ್ಕೆ ಕಾಲಕ್ರಮೇಣ ಭಿನ್ನವಾಗತೊಡಗಿದವು. ಕರ್ನಾಟಕದಲ್ಲೇ ವಾಸವಾಗಿರುವ ಲಂಭಾಣಿಗಳು ಮಾತನಾಡುವ ಭಾಷೆಯಲ್ಲಿ ಬಳಕೆಯಾಗುವ ಪದಭಿನ್ನತೆಯನ್ನ ಕಾಣಬಹುದು.

ಉದಾಹರಣೆಗೆ :

ರಾಯಚೂರು -ಬಿಜಾಪುರ ಲಂಭಾಣಿಗಳು.

ಬಣವಿ ಎನ್ನುವ ಶಬ್ದವನ್ನು ಸಮರ್ರಿ ಎನ್ನುತ್ತಾರೆ.

ದಾವಣಗೆರೆಯ ಗೋರ್ಲಿ - ರಾಯಚೂರು ಭಾಗದಲ್ಲಿ ಮಿಂಡಿಯಾಗುತ್ತದೆ.

ದಾವಣಗೆರೆಯ ಖೋಳ-ಬಳ್ಳಾರಿಯಲ್ಲಿ ಪಟ್ಟು ಆಗುತ್ತದೆ.

ಆಯಾ ಪ್ರದೇಶದ ಭೌಗೋಳಿಕ ಹಿನ್ನೆಲೆಯನ್ನಾಧರಿಸಿ ಶಬ್ದಗಳಲ್ಲಿ ಬದಲಾವಣೆಗಳು ಉಂಟಾಗುವುದು ಸಹಜವಾದ್ದರಿಂದ -ಅಖಿಲ ಭಾರತದಲ್ಲಿ ಎಂದು ಹೇಳುವಲ್ಲಿ ಪ್ರಾದೇಶಿಕ ಭಾಷೆಯ ಪ್ರಭಾವದ ಅರಿವಾಗುತ್ತದೆ. ಕರ್ನಾಟಕದ ಬಂಜಾರಿ ಭಾಷೆ ಇಲ್ಲಿಯ ಪ್ರಾದೇಶಿಕ ಭಾಷೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಕಾರಣ ಬಹುತೇಕ ಬುಡಕಟ್ಟು ಭಾಷೆಯನ್ನ ಮಾತನಾಡುವವರನೇಕರು ದ್ವಿಭಾಷಿ ಅಥವಾ ತ್ರಿಭಾಷಿಕರಾಗಿರುತ್ತಾರೆ. ಇದು ಅವರಿಗೆ ಅನಿವಾರ್ಯವೂ ಕೂಡ. ಆಯಾ ಪ್ರದೇಶದ ಜನರೊಂದಿಗೆ ವ್ಯವಹರಿಸಲು ಪ್ರಾದೇಶಿಕೆ ಭಾಷೆ ಕಲಿಕೆ ಬೇಕೆ ಬೇಕು ಹೀಗಾಗಿ ಗೋರೋಲಿಯ ಜೊತೆಗೆ ಪ್ರಾದೇಶಿಕ ಭಾಷೆಯ ಒಡನಾಟವಾಗುತ್ತದೆ. ಇವತ್ತು ಸ್ಪರ್ಧಾತ್ಮಕ ಜಗತ್ತಿನಲ್ಲಿ ಅಕ್ಷರ ಜ್ಞಾನದ ಅರಿವಿಗಾಗಿ ಶಿಕ್ಷಣ ದೊರೆಯುವ ಭಾಷೆಯ ಕಲಿಕೆಯೂ ಕೂಡ ಒಂದು ಜರೂರತ್ತಾಗಿದೆ. ಹೀಗಾಗಿ ಕನ್ನಡ, ತಮಿಳು, ತೆಲುಗು, ಮರಾಠಿ, ಹಿಂದಿ ಮುಂತಾದ ಪ್ರಾದೇಶಿಕ ಭಾಷೆಗಳ ಒಳಸುಳುವಿಕೆಯಾಗುತ್ತದೆ ಹಾಗೂ ಇದರಿಂದ ಭಾಷೆಯ ಬೆಳವಣಿಗೆ ಮತ್ತು ವಿಕಾಸವಾಗುತ್ತದೆ. ವಿನಃ ಯಾವುದೇ ರೀತಿಯ ಹಾನಿಯಾಗುವುದಿಲ್ಲ. ಅನೇಕ ಜನರು ತಮ್ಮ ತಪ್ಪು ತಿಳುವಳಿಕೆಯಿಂದ ತಮ್ಮ ಮಾತೃಭಾಷೆಯಾದ ಗೋರೊ ಬೋಲಿಯನ್ನ ಕಲಿಸುವುದರಿಂದ ಸಮಾಜದಲ್ಲಿತಮಗೆ ಕೀಳಿರಿಮೆ ಉಂಟಾಗುತ್ತದೆ ತಮ್ಮ ಸ್ಥಾನಮಾನಕ್ಕೆ ಧಕ್ಕೆಯಾಗುತ್ತದೆಂದು ತಿಳಿದುಕೊಂಡು ತಮ್ಮ ಮಕ್ಕಳನ್ನು ಈ ಭಾಷೆಯಿಂದ ನಿರ್ವಂಚಿತರನ್ನಾಗಿ ಮಾಡುತ್ತಿದ್ದಾರೆ. English ಒಂದು Elite Class ಭಾಷೆ ಉನ್ನತವಾರ್ಗದ -ಉನ್ನತ ಶ್ರೇಣಿಯ, ಶ್ರೀಮಂತರ ಬ್ಯೂರೊಕೆಟ್‌ಗಳು ಮಾತನಾಡುವ ಭಾಷೆಯೆಂದು ಬಹಳ ಜನರ ತಪ್ಪು ಕಲ್ಪನೆ. ಇವತ್ತು English-ಸರ್ವೇಸಾಮಾನ್ಯವಾಡುವ ಭಾಷೆ. ಇದರ ವ್ಯಾಮೋಹಕ್ಕೆ ಸಿಲುಕಿರುವ ಅನೇಕ ಬಂಜಾರರು ತಮ್ಮ ಮಕ್ಕಳಿಗೆ ತಮ್ಮ ಮಾತೃಭಾಷೆ ಯನ್ನ ಕಲಿಸದೆ, ಸಮಾಜಿಕ ಭಾಷೆ ಕನ್ನಡವನ್ನು ಕಲಿಸದೆ-ನೇರ ಇಂಗ್ಲೀಷ್‌ನ ಒತ್ತಡ ಹೇರುತ್ತಿರುವುದು ವಿಪರ್ಯಾಸವೇ ಸರಿ. ಆದಾಗ್ಯೂ-ಭಾಷೆ ಯಾವುದೂ ಒಂದಕ್ಕೊಂದು ವ್ಯತಿರಿಕ್ತವಲ್ಲ ; ಎಲ್ಲವೂ ಒಂದಕ್ಕೊಂದು ಪೂರಕವೇ. ಯಾರು ತಮ್ಮ ಭಾಷೆಯನ್ನು ಅಂದರೆ, ತಮ್ಮ ಮಾತೃಭಾಷೆಯನ್ನ ಸರಿಯಾಗಿ ಕಲಿಯುತ್ತಾರೋ ಅವರು ಬೇರೊಂದು ಭಾಷೆಯನ್ನ ಅತ್ಯುತ್ತಮವಾಗಿ ಕಲಿಯಬಲ್ಲರು ಎಂಬುದಾಗಿ ಭಾಷಾವಿಜ್ಞಾನಿಗಳ ವಾದವಾಗಿದೆ ಭಾಷೆಯಲ್ಲಿನ ಬದಲಾವಣೆ ಸಹಜವೆ.

3. ಆಂಗ್ಲಭಾಷೆಯ ಪ್ರಭಾವ :

ಜಗತ್ತಿನ ಎಲ್ಲಾ ಭಾಷೆಗಳು ಒಂದರ ಮೇಲೊಂದು ತಮ್ಮ ಪ್ರಭಾವವನ್ನು ಬೀರುತ್ತದೆ. ಭಾರತಕ್ಕೆ ಇಂಗ್ಲೀಷ್ ವಸಾಹತು ಶಾಹಿಗಳು ಬಂದಾಗ ಅವರ ಮೂಲ ಉದ್ದೇಶ ವ್ಯಾಪಾರವಾಗಿತ್ತು. ಭಾರತದಲ್ಲಿ ನೆಲೆಯೂರಲು ಮತ್ತು ಭಾರತದ ಸಂಪೂರ್ಣ ಭೌಗೋಳಿಕ ಹಿನ್ನೆಲೆಯ ಪರಿಚಯ ಮಾಡಿಕೊಡುವುದರಲ್ಲಿ ಬಂಜಾರರ ಪಾತ್ರ ಮಹತ್ವದಾಗಿದೆ. ಈ ಅಲೆಮಾರಿ ಸಹಾಯ ಪಡೆದ ಬ್ರಿಟೀಷರು ಕಡೆಗೆ ಕಳ್ಳಕಾಕರ ಬುಡಕಟ್ಟೆಂದು ಜಗಜ್ಜಾಹೀರಗೊಳಿಸಿತು. ಹತ್ತೊಂಬನೇ ಶತಮಾನದ ಕೈಗಾರಿಕ ಕ್ರಾಂತಿ ಮತ್ತು ಸಂಪರ್ಕ ವ್ಯವಸ್ಥೆಯಲ್ಲಿನ ಮಾರ್ಪಾಡು ಮಂದಗತಿಯಲಲಿ ತಿಂಗಳು-ವರ್ಷಾನುಗಟ್ಟಲೇ ತೆಗೆದುಕೊಳ್ಳುತ್ತಿದ್ದ ವ್ಯಾಪಾರ ರೈಲು-ಬಸ್ಸು-ಲಾರಿಗಳ ಆಗಮನದಿಂದ ಸಂಪೂರ್ಣ ನಿಂತು ಹೋಯಿತು. ಬಂಜಾರರ ತಮ್ಮ ನೆಲೆಗಳನ್ನು ಕಳೆದುಕೊಂಡು -ಕೂಲಿಗಳಾದರು. ಆಯಾ ಪ್ರದೇಶಗಳಲ್ಲೇ ನೆಲೆನಿಂತು ಜೀವನ ಸಾಗಿಸತೊಡಗಿದರು. ಇಂಗ್ಲೀಷ್ ಭಾಷೆ-ಭಾರತದ ಅಧಿಕಾರ ಭಾಷೆಯಾಗಿ ಮಾರ್ಪಾಟು ಆದ ಮೇಲೆ -ಅನೇಕ ಭಾಷೆಗಳು ಅಸ್ಥಿತ್ವಕ್ಕಾಗಿ ಪರದಾಡತೊಡಗಿದವು. ಸಹಜವಾಗಿಯೇ ಅನೇಕ ಶಬ್ದಗಳು ಲಂಭಾಣಿ ಭಾಷೆಯ ಮೇಲೆ ಪ್ರಭಾವ ಬೀರಿದವು.

ಮೋಟಾರ ಗಾಡಿ, ಸೈಕಲ್, ರೇಡಿಯೋ, ಬಸ್ಸು, ಮೋಟಾಡೋಣ್, ಮುಂತಾದ ಶಬ್ದಗಳು ದಿನಬಳಕೆಯಲ್ಲಿ ಚಲಾವಣೆಯಾದವು. ಇಂತಹ ನೂರಾರು ಶಬ್ದಗಳು ಅವಿದ್ಯಾವಂತರ ಸ್ಮೃತಿ ಪಟಲದಲ್ಲಿ ನೆಲೆ ನಿಲ್ಲಲು ಅನುವಾಯಿತು.

4. ಪ್ರಾದೇಶಿಕ ಭಾಷೆಗಳ ಪ್ರಭಾವ :

ಕೂಲಿಯಾಳುಗಳಾಗಿ-ತಾಂಡಗಳಲ್ಲಿ ನೆಲೆನಿಂತ ಬಂಜಾರರು ಉತ್ತರ-ದಕ್ಷಿಣ - ಪೂರ್ವದ, ಪಶ್ಚಿಮ ಹೀಗೆ ಎಲ್ಲಾ ದಿಕ್ಕುಗಳಲ್ಲಿ ಹರಿದು ಹಂಚಿಹೋಗಿರುವ ಲಂಭಾಣಿಗಳು ಆಯಾ ರಾಜ್ಯಗಳ ಪ್ರಾದೇಶಿಕ ಭಾಷೆಯ ಪ್ರಭಾವಕ್ಕೊಳಗಾಗದೆ ಬದುಕನ್ನೆ ಬಲಿಕೊಟ್ಟು ಹೊಸ ಆವಿಷ್ಕಾರದ ತುಚ್ಛ ತುದಿಗೇರಿಯಾದ ಮೇಲೆ-ಭಾಷೆಯ ಬದಲಾವಣೆ ಸಹಜವಾಗೆ ಆಯಿತು.

ಉದಾಹರಣೆಗೆ

ಕರ್ನಾಟಕದ ಲಂಭಾಣಿಗಳು

ಮಾರಬೇಟ ಮೈಸೂರೇಮ ಓದರೋಚ. ಎಂದರೆ

ತೆಲುಗು ಪ್ರಭಾವವಿರುವ ಬಂಜಾರ- ಮಾರಬೇಟ ಮೈಸೂಕೀಮ ಸದವಕೋಚ ಎಂತಲೂ ತಮಿಳು ನಾಡಿನ ಲಂಭಾಣಿ- ಮಾರ ತಂಬಿ ಮೈಸೂರೇಮ ಪಡಚೇಸ್ ಜಾರೋಚ.

ಆದರೆ ಕೆಲವರೂ ಎಲ್ಲದರಲ್ಲೂ ಕೈಬಾಚಿಸಿ -'ಚೌ ಚೌ ' ಕಲಿಯುತ್ತ ಯಾವುದರಲೂ ಪರಿಪೂರ್ಣ ಇಲ್ಲದಾಗ ಮಾತ್ರ ಭಾಷೆಯ ಕಲಿಕೆಯಲ್ಲಿ ಸಮಸ್ಯೆ ಆಗುವುದು. ಮೂಲದಲ್ಲಿ ಗೋರ್ ಬೋಲಿ ಒಂದೇ ಆಗಿದ್ದು ಕಾಲಕ್ರಮೇಣ ಬಂಜಾರರು ಲದೇಣಿಯಾದ ಮೂಲಕ ಉತ್ತರ-ದಕ್ಷಿಣ ಮಧ್ಯಭಾರತದ ಎಲ್ಲಾ ಭಾಗಗಳಲ್ಲಿ ಹರಿದು ಹಂಚಿಹೋಗಿರುವುದರಿಂದ ಆಯಾ ಪ್ರಾದೇಶಿಕ ಭಾಷೆಯ ಪ್ರಾಬಲ್ಯ ಅವರ ಮೇಲೆ ಹೆಚ್ಚಾಗಿರುವುದು ಕಂಡುಬರುತ್ತದೆ.

ಉದಾಹರಣೆಗೆ :

ಮಾರೋ ಬೇಟಾ ಓದ ರೋಚ - ಕರ್ನಾಟಕ
ಮಾರೋಬೇಟಾ ಸದವರೋಚ - ಆಂಧ್ರಪ್ರದೇಶ
ಮಾರೋಬೇಟಾ ಪಡಚೇನ ಜಾರೋಚ - ತಮಿಳುನಾಡು
ಮಾರೋ ಬೇಟಾ ಪಡ್ರೋಚ - ಹಿಂದಿ ಮೂಲಕ ರಾಜ್ಯಗಳಲ್ಲಿ

ಇಲ್ಲಿ ಬರುವ ಕ್ರಿಯಾಪದ ಓದು=ಸದವು = ಪಡಚ = ಪಡ್ರೋಚ. ಆಯಾ ಪ್ರಾದೇಶಿಕ ವೈರುಧ್ಯದಿಂದ ಭಾಷೆಯ ಮೇಲೆ ಬಿದ್ದಿರುವ ಒತ್ತಡ. ಬಹುಶಃ ವ್ಯಾಪಾರಿಗಳಾದ ಬಂಜಾರರಿಗೆ ಶಿಕ್ಷಣದ ಮಹತ್ವ ಅರಿಯದ ಕಾರಣ ಈ ಓದು ಅಥವಾ ಸದವು ಅನ್ನುವ ಕ್ರೀಯಾ ಪದಕ್ಕೆ ಪರ್ಯಾಯವಾದ ಯಾವ ಶಬ್ದವು ಅವರ ಭಾಷೆಯಲ್ಲಿ ಇಲ್ಲ ಅಥವಾ ಇದ್ದರೂ 'ವಾಂಛೇನ್' ಎಂಬುದು ಇರಬಹುದು ಎಂಬುದು ನನ್ನ ಅನಿಸಿಕೆ. ಬಹುತೇಕ ಕರ್ನಾಟಕದ ಬಂಜಾರರು ಖಾಣೋ ವೇಕೋಕ - ಊಟ ಆಯ್ತಾ ಎಂದು ಸಂಬೋದಿಸಿದರೆ

ಆಂಧ್ರ : ಬೋಜನಂ - ವೇಗೊಕ
ತಮಿಳು : ಸಾಪಡ್ - ವೇಗೊಕ.

ಎಂದೆ ಬಳಸುವುದು ರೂಢಿಯಲ್ಲಿದೆ. ಇಂಥಹ ಅನೇಕ ಶಬ್ದಗಳು ಬಂಜಾರ ಭಾಷೆಯಲ್ಲಿ ಸೇರಿಕೊಂಡಿರುವುದು. ಕಂಡುಬರುತ್ತದೆ. ಹಾಗಾಗಿ ಈ ಭಾಷೆಯ ಬೆಳವಣಿಗೆ ದೃಷ್ಟಿಯಿಂದ ಒಳ್ಳೆಯದೇ ಆದರೂ ಜಾಗತೀಕರಣ ಒಳಸುಳಿಗೆ ಸಿಲುಕಿ ಮರೆಯಾಗುತ್ತಿರುವ ಅನೇಕ ಭಾಷೆಗಳು-ಸಂಸ್ಕೃತಿಗಳಂತೆ ಅಪಾಯದ ಅಂಚಿನಲ್ಲಿ ಬಂಜಾರಿ ಅಥವಾ ಗೋರ್‌ಬೋಲಿಯು ಇರುವುದರಲ್ಲಿ ಸಂಶಯವಿಲ್ಲ.

5. ಜಾಗತೀಕರಣ ಮತ್ತು ಗೋರಬೋಲಿ :

ಅನೇಕ ಭಾಷೆಗಳು ಅಪಾಯದ ಅಂಚಿನಲ್ಲಿವೆ ಎಂದು "Survey of Endangerd Languages" ಸಂಸ್ಥೆ ಎಚ್ಚರಿಕೆ ಗಂಟೆಯನ್ನ ಮೊಳಗಿಸಿದಾಗ್ಯೂ, ಪ್ರಕೃತಿ ವಿಕೋಪದಿಂದ ಮತ್ತು ಮತ್ತೊಂದು ಸಂಸ್ಕೃತಿ-ಭಾಷೆಯ ಹೇರುವಿಕೆಯಿಂದಾಗಿ ಅನೇಕ ಭಾಷೆಗಳು ಕಣ್ಮರೆಯಾಗಿರುವುದರಲ್ಲಿ ಸಂಶಯವಿಲ್ಲ. ಭಾರತದ ಸಂದರ್ಭಕ್ಕೆ ಬಂದರೆ - ಸುಸಂಸ್ಕೃತರಾಗುವ ಅಥವಾ ನಾಗರೀಕರಾಗುವ ಹೊಸ ಹುರುಪಿನ ಅನೇಕ ಜನರು ತಮ್ಮ ಭಾಷೆಯನ್ನ ಕೀಳೆಂದು ಬಗೆದು 'Social tabo' ಎಂತಲೂ ಅಥವಾ inferior ಎಂದು ಬಗೆದು ಆಯಾ ಸಂದರ್ಭದಲ್ಲಿ ಅದನ್ನ ಮಾತನಾಡುವುದೇ ಇಲ್ಲ. ಇದರಿಂದ ಯಾರಿಗೆ ಲಾಭ ಮತ್ತು ಯಾರಿಗೆ ನಷ್ಟ? ಇದನ್ನ ಅರಿಯುವರ್‍ಯಾರು. ಪ್ರಗತಿಯ ಅಥವಾ ಅಭಿವೃದ್ಧಿಯ ನೆಪದಲ್ಲಿ ಕಾಡಿನ ನಡುವೆ ತನ್ನದೇ ಬದುಕನ್ನ ನಿರುಮ್ಮಳವಾಗಿ ಬದುಕಿದ್ದ : ಜೊತೆಗೆ ಕಾಡನ್ನು ಕಾಪಾಡುತ್ತಿದ್ದ- ಜೇನು ಕುರುಬ, ಪಾಡುಕುರುಬ, ಹಕ್ಕಿಪಿಕ್ಕಿ ಗರಾಸಿಯಾ. ತೋಡ ಮುಂತಾದ ಅನೇಕ ಬುಡಕಟ್ಟುಗಳನ್ನು ನೀರಿಂದ ಮೀನು ಹೊರಹಾಕಿದಂತೆ ಹಾಕಿದೊಡನೆ ಅವರ ಹಾಡಿಯೊಳಗೆ ಅಸಹನೀಯವಾದ ಬದುಕನ್ನು ಬದುಕಲು ಆರಂಭ ಮಾಡಿ -'ನ ಘರಕಾ ನ ಘಟಗಿ' ಎಂಬ ಒತ್ತಡದಲ್ಲಿ ತನ್ನ ಭಾಷೆಯನ್ನ ಶಿಕ್ಷ್ಯವಾಗಿ ಮಾತಾಡಲು ಆರಂಭಿಸಿ ಕ್ರಮೇಣ ಆ ಪದಗಳನ್ನೆ ಮರೆಯುವ ಅಪಾಯವಿದೆ. ಇದೇ ಆಫ್ರಿಕಾ ಖಂಡದಲ್ಲಾದದ್ದು. ಕ್ರಿಶ್ಚಿಯನ್ ಮಿಷನರಿಗಳು ಅನೇಕ ಬುಡಕಟ್ಟುಗಳನ್ನು ನಾಗರೀಕನ್ನಾಗಿ ಮಾಡುವ ತರಾತುರಿಯಲ್ಲಿ ಅವರ ಆಚರಣೆ - ಭಾಷೆಯ ನುಡಿಗಟ್ಟನ್ನು ಕೊಲೆಮಾಡಿದ್ದಾರೆ. ಭಾರತದಲ್ಲಿ ಬ್ರಿಟಿಷರು ಮಾಡಿದ ಕೆಲಸ ಕೂಡ ಅದುವೇ. ಇವತ್ತು ಗೋರಬೋಲಿ ತಾಂಡಗಳಲ್ಲಿ ಮಾತ್ರ ಉಳಿಯಲು ಸಾಧ್ಯವಾಗಿದೆ. ನಗರ ಪ್ರದೇಶಗಳಲ್ಲಿ Elit class ಬಂಜಾರರು - ನಾಗರಿಕತೆಯ ಮುಖವಾಡವನ್ನ ಹಾಕಿಕೊಂಡು ತಮ್ಮ ಆಚರಣೆ, ಭಾಷೆಯನ್ನ ಸಂಪೂರ್ಣವಾಗಿ ಮರೆಯಲು ಆರಂಭಿಸಿದ್ದಾರೆ. ಭಾಷೆ ಒಂದು ಸಂಸ್ಕೃತಿಯ Identity ಗೋರ್ ಬೋಲಿಯಿಂದ ಮಾತ್ರ ಒಂದು ಜನಾಂಗವೆಂದು identity ಉಳಿಸಿಕೊಳ್ಳಲು ಸಾಧ್ಯ. ಪ್ರಪಂಚದ ಯಾವ ಮೂಲೆಗೆ ಹೋದರು ಗೋರಬೋಲಿ ಒಂದೇ - ಇಂಗ್ಲೀಷ್ ಭಾಷೆಯಂತೆ. ಆದರೆ ನಮ್ಮ identity ಸಂಪೂರ್ಣವಾಗಿ ಅಳಿಸಿಹೋಗುವ ಆತಂಕವಿದೆ. ಇದಕ್ಕೆ ಕೆಲವು ಕಾರಣಗಳಿವೆ.

ಅ) ನಮ್ಮ ಸುತ್ತಲೂ ಬದುಕಿರುವ ಕುಟುಂಬಗಳ ಪರಿಸರ ಮತ್ತು ಅವುಗಳ ಒತ್ತಡ.

ಆ) ತಮ್ಮ ಭಾಷೆಯ ಮೇಲೆ ತಮಗೆ ಕೀಳಿರಮೆ

ಇ) ಸಂಸ್ಕೃತೀಕರಣದ ಒಣ ಹುರುಪು

ಈ) ಭಾಷಾಭಿಮಾನ ಮತ್ತು ಪ್ರಜ್ಞೆ ಇಲ್ಲದಿರುವುದು.

ಅ) ನಮ್ಮ ಸುತ್ತಲು ಬದುಕಿರುವ ಕುಟುಂಬಗಳ ಪರಿಸರ ಮತ್ತು ಒತ್ತಡ.

ಮನುಷ್ಯ ಸಂಘ- ಸಮಾಜ ಜೀವಿ ಒಪ್ಪೋಣ. ಆದರೆ ಪ್ರತಿಯೊಂದು ಕ್ರೀಯೆ ತನ್ನ ಪಾಡಿಗೆ ತಾನೆ ಅಂತರ್ಗತವಾಗಿ ನಡೆಯುತ್ತಿರುತ್ತದೆ. ಸಾಂಘಿಕವಾಗಿ ಬದುಕಲು ಬಯಸುವ ಮನುಷ್ಯನಿಗೆ ಪ್ರತಿಯೊಂದು ಭಾಷೆಯು ಕರಗತವಾಗಬೇಕು, ಪ್ರತಿಯೊಂದು ವಿದ್ಯೆಯ ಕರತಾಲಮಲಕವಾಗಬೇಕು. ಇಲ್ಲಿ ಒಂದು ಸಣ್ಣ ಘಟನೆ ವಿವರಿಸುತ್ತೇವೆ. 1997-98 ರಲ್ಲಿ ಕಾರವಾರ ಆಕಾಶವಾಣಿಯಲ್ಲಿ ಉದ್ಯೋಗಿಯಾಗಿದ್ದ ನಾನು-97ನೇ ಇಸ್ವಿಯಲ್ಲಿ ಹುಟ್ಟಿದ ನನ್ನ ಮೊದಲ ಮಗ ಕ್ರಮೇಣ ದೊಡ್ಡವನಾಗುತ್ತಿದ್ದಂತೆ ಸಹಜವಾಗಿಯೇ ಪರಿಸರವನ್ನು ಬೆರಗುಗಣ್ಣಿಂದ ನೋಡಲು ಆರಂಭಿಸಿದ್ದ. ನಾವು ಆಕಾಶವಾಣಿ ವಸತಿ ಸಂಕೀರ್ಣದಲ್ಲಿ ವಾಸವಾಗಿದ್ದರಿಂದ ಬಹುಭಾಷಿಕ ಮಕ್ಕಳು ಒಂದೆಡೆ ಆಟಕ್ಕೆ ಬರುವುದು ಸಹಜವಾಗಿತ್ತು. ಆದರೆ ಕೆಲಮಹಿಳೆಯರು, "ರೀ ನಿಮ್ಮ ಮಗುಗೆ ಮೊದಲು ಕನ್ನಡ ಕಲ್ಸಿ ಪಾಪ ಅವನೊಬ್ಬನೆ ದೂರದಲ್ಲಿ ನಿಂತ್ಕೊಂಡು ಮಕ್ಕಳಾಟನ ಗಮನಿಸುತ್ತಾನೆ" ಎಂದರು. ಇದು ಅಸಹಜವಾದರೂ ಆ ಕಾಲದಲ್ಲಿ ನಿಜವೆನಿಸಿತ್ತು. ನಾನು ನನ್ನ ಹೆಂಡತಿ ಹೌಹಾರಿ - ಮಗುವನ್ನ ಸಾಮಾಜಿಕರಣಗೊಳಿಸಲು - ಭಾಷೆ ಸಹಜವಾದ ಕ್ರಿಯೆ ಮಗು ಭಾಷೆಯನ್ನ ಪರಿಸರದಲ್ಲಿ ಬೆರೆಯುತ್ತಲೇ ಕಲಿಯುತ್ತಾನೆಂದು ಭಾಷಾ ವಿಜ್ಞಾನ ವಿದ್ಯಾರ್ಥಿಯಾದ ನನಗೆ ಗೊತ್ತಿದ್ದರೂ, ಯಾರದೋ ಮಾತಿಗೆ ಗಂಟು ಬಿದ್ದು ಮನೆಯೊಳಗೆ ನಾನು-ನನ್ನ ಹೆಂಡತಿ ಮಾತನಾಡುವಾಗ ಗೋರಬೋಲಿಯನ್ನ ಮತ್ತು ಅವರ ಜೊತೆಗೆ ಮಾತನಾಡುವಾಗ ಕನ್ನಡ-ಹಿಂದಿ-ಇಂಗ್ಲೀಷ್ ಮಾತನಾಡಲು ಆರಂಭಿಸಿದೆವು. ಈ code swtiching ಮತ್ತು codemixing ಇವತ್ತಿಗೂ ನಡೆದಿದೆ. ಕೇಂದ್ರಿಯ ಪಠ್ಯಕ್ರಮವನ್ನ ಅಭ್ಯಾಸ ಮಾಡುತ್ತಿರುವ ಇಬ್ಬರು ಅನಿಕೇತನ್ ಮತ್ತು ಅಕಂಪನ್, ಅನೇಕ ಕನ್ನಡ ಶಬ್ದಗಳನ್ನ ಹೊಗಳಿ, ಒಂದು-ಎಂಟು ಎನ್ನುವ ಕನ್ನಡ ಅಂಕಿಗಳನ್ನ ಹೇಳಿದರೆ ಹೀಗಂದರೆ ಏನು? ಎಂದು ಏನು? ಎಂದು ಪ್ರಶ್ನೆ ಮಾಡುತ್ತಾರೆ ಈ ಸಂದರ್ಭದಲ್ಲಿ ಅವರ ಮೂಲಭಾಷೆಯಾದ ಗೋರ್‌ಬೋಲಿಯನ್ನ ಅವರು ನಮ್ಮ ಹಾಗೆ ನಿಖರವಾಗಿ -ಸ್ಪಷ್ಟವಾಗಿ ಕಲಿಯಲು ಸಾಧ್ಯವಾದೀತೆ. ಆದರೆ ಕೆಲವು ಬೈಗಳನ್ನು- ವ್ಯವಹಾರಿಕ ಜ್ಞಾನಕ್ಕೆ ಮತ್ತು ಸಂಪರ್ಕಕ್ಕೆ ಬೇಕಾದಷ್ಟು ಭಾಷಾಜ್ಞಾನವನ್ನು ಅವರ ಅಜ್ಜಿಯಿಂದ ಕಲೆತಿದ್ದಾರೆ. ಈಗಲೂ ಅವರ ಅಜ್ಜಿಯೊಂದಿಗೆ ಮಾತನಾಡುವಾಗ ಬಳಸುವುದು ಗೋರಬೋಲಿಯನ್ನೆ ತಾಂಡಕ್ಕೆ ಫೋನ್ ಮಾಡಿದಾಗ-ಕನ್ನಡ , ಇಂಗ್ಲೀಷ್ ಅಥವಾ ಹಿಂದಿಯ ಒಂದು ಶಬ್ದವನ್ನು ಬಳಸುವುದಿಲ್ಲ. ಹೀಗೆ ಪರಿಸ್ಥಿತಿಯ ಒತ್ತಡವೂ ಕೂಡ ಭಾಷೆ ಕಲಿಕೆಯ ಮೇಲೆ ಪ್ರಭಾವ ಬೀರುತ್ತದೆ.

ಆ) ತಮ್ಮ ಭಾಷೆಯ ಮೇಲೆ ತಮಗೆ ಕೀಳಿರಿಮೆ :

ಅನೇಕ ಸಂದರ್ಭಗಳಲ್ಲಿ ಇದಾಗುವುದು ಸಹಜ. ಇವತ್ತಿನ ಈ ಸ್ಪರ್ಧಾಜಗತ್ತಿನಲ್ಲಿ ಮತ್ತು corporate world ನಲ್ಲಿ ಯಶಸ್ಸಿನ ಬೆನ್ನು ಹತ್ತಿ ಪ್ರತಿಯೊಬ್ಬರು ಓಡುತ್ತಿದ್ದಾರೆ. ಇಲ್ಲಿ ಮುಖ್ಯವಾಗಿ ಅವಕಾಶಗಳನ್ನು ಪಡೆಯುವುದು cruial ಆಗಿದೆ. ಜಾತಿ, ಪ್ರಾದೇಶಿಕ ಹಿನ್ನೆಲೆ, ಧರ್ಮ, ಸ್ಥಳ ಮುಂತಾದ Factors ಗಳು ಕೆಲಸ ಮಾಡುತ್ತವೆ. ಆ ಸಂದರ್ಭದಲ್ಲಿ Idendtity ಯ false ನೆಪ ಒಡ್ಡಿ ತಮ್ಮ ಮಾತೃಭಾಷೆಯನ್ನ ಮರೆಮಾಚುತ್ತಾರೆ. ಈ ಹುಡುಗಿಯರು ಹುಡುಗರು ಕಂಡ ತಕ್ಷಣ ತಮ್ಮೊಳಗೆ ಕನ್ನಡದಲ್ಲಿ ಮಾತಾಡ್ಕೊಳ್ತಿದ್ದರು ಇಂಗ್ಲೀಷ್‌ಗೆ Switch over ಆಗ್ತಾಲಲ್ಲಾ ಹಾಗೆ. ತಮ್ಮ ಭಾಷೆ ಮತ್ತು Identity ಯನ್ನು ಮರೆಮಾಚಲು ಹವಣಿಸುತ್ತಾರೆ. ತಾನು ಈ ಜಾತಿಯುವವನು ಎಂದು ಗೊತ್ತಾದರೆ ಜನ ಏನಂದುಕೊಂಡಾರು, ಅವಕಾಶಗಳು ತಪ್ಪಿಹೋಗಬಹುದೇ - ಬೇರವರಿಗೆ ನಮ್ಮ ಮೇಲೆ ಕೀಳು ಭಾವೆ ಬರಹುದೇ? ಎಂಬ ಆತಂಕದಿಂದಾಗಿ ತಮ್ಮ ಹುಟ್ಟು ಭಾಷೆಯನ್ನು ಮರೆಮಾಚಲು ಪ್ರಯತ್ನಿಸುವುದು ಸಹಜವೆ; ಈ ಹಿನ್ನಲೆಯಲ್ಲಿ ಭಾಷೆಯ ಬೆಳವಣಿಗೆಯ ದೃಷ್ಟಿಕೋನ ಕಡಿಮಯಾಗುವ ಸಾಧ್ಯತೆಗಳಿವೆ.

ಇ) ಸಂಸ್ಕೃತೀಕರ್ಣದ ಒಣಹುರುಪು :

Materlistic development ಆದ ಮೇಲೆ ಅನ್ನಪ್ಡ್ ಕೂಡ ಏನೆಲ್ಲಾ ಆಲೋಚನೆಗಳಿಗೆ ತೆರೆದುಕೊಂಡಿದ್ದಾನೆ ಎಂಬುದಕ್ಕೆ ಕಳೆ ತೆಗೆಯವವನು ಒಂದು call ಬರುತ್ತೆ- ಹುಲ್ಲಿನ ಮೆದೆ ಹಿಡ್ಕೊಂಡೆ -Hello ಅಂತ ಹೇಳುತ್ತಾನೆ. ಸೀನಿಮಾ, mobile, ಟಿ.ವಿ. ಇತ್ಯಾದಿ ಮಾಧ್ಯಮಗಳ ನೇರ ಪ್ರಭಾವದಿಂದಾಗಿ ಬರದಿದ್ದರೂ ಇಂಗ್ಲೀಷ್ ಶಬ್ದಗಳನ್ನ, ಹಿಂದಿ ಶಬ್ದಗಳನ್ನ - Standardized Kannada ಮಾತನಾಡುವ ಹುಸಿಸಾಹಸ ತೋರಿಸುತ್ತಾನೆ. 10-15 ವರ್ಷಗಳ ಹಿಂದೆ ಲುಂಗಿ, ಪಂಚೆ, ತೋಳುದ್ದದ ಬನಿಯನ್ನೋ ಇಲ್ಲಾ ಅಡ್ಡ ಬಕ್ಕಣದ ಖದ್ದರ್ ಅರಿವೆಯ ಲಂಡಂಗಿ ತೊಡುತ್ತಿದ್ದ ರೈತರೆಲ್ಲಾ ಪ್ಯಾಂಟ್ ಹಾಕ್ಕೊಂಡೆ 'ಗಳೇಕ' ಹೊಂಟಾರ. ಕಬ್ಬು ಕಡಿಯುವಾಗ ಕಾಲುಕೈಗೆ ರೌದಿ ತಾಗಿದರೆ ಮೈಮೇಲೆ ಗೆರೆಗಳು ಮೂಡುತ್ತವೆ ಎಂದು ಪ್ಯಾಂಟ್ ಮತ್ತು ಪೂರ್ತಿ ತೋಳಿನ ಅಂಗಿ ಹಾಕ್ತಿದ್ರೋನಿಗ ಅದನೆ ಪೂರ್ಣ ಪ್ರಮಾಣದ ಉಡಪನ್ನಾಗಿಸಿಕೊಂಡಿರೋದು ವಿಪರ್ಯಾಸವೇ ಸರಿ. ಅದು ಸಾಲದು ಅನ್ನೋ ಹಾಗೆ, ನಮ್ಮ ಹೆಂಗಸರೂನುವೆ ಅದೇನೂ ನೈಟಿ ಅಂತೇಳಿ ಉಡೋದಕ್ಕೆ ಆರಂಭಿಸಿದ್ದಾರೆ. ಇವುಗಳ ಜೊತೆಗೆ ಅವರ ಭಾಷೆ ನಡೆ ನುಡಿಯಲು ಕೆಲವು

ಬದಲಾವಣೆ ಕಂಡುಬರುತ್ತಿರುವುದು ಸಂಸ್ಕೃತಕರಣದ ಒಣ ಹುರುಪೆ ಸರಿ. ಇದು ಕೂಡ ಗೋರಬೋಲಿಯ ಅವನತಿಗೆ ಕಾರಣವಾಗಬಹುದು. ಆದ್ದರಿಂದ ಗೋರಮಾಟಿಗಳು ಇವೆಲ್ಲವುದರ ನಡುವೆ ಭಾಷೆಯ ಉಳಿಯುವಿಕೆಗೆ ಗಮನ ಹರಿಸಬೇಕು ದೀಪಾವಳಿ ಹಬ್ಬದ ಮುಂದಿನ ಒಂದು ತಿಂಗಳು ನೃತ್ಯಭಾಷ್ಯ-ಹಾಡುಗಳೆಲ್ಲಾ ಕಡಿಮೆಯಾಗುತ್ತಿದ್ದು -ಸಿನಿಮಾಹಾಡುಗಳು ತಮ್ಮ ಪ್ರಭಾವ ಬೀರಲು ಆರಂಭಿಸಿವೆ ಕರ್ನಾಟಕ ರಾಜ್ಯದಲ್ಲಿ ಸುಮಾರು 20-30- ಲಕ್ಷ ಜನಸಂಖ್ಯೆ ಇರಬಹುದೆಂದು ಅಂದಾಜಿಸಲಾಗಿದ್ದು, ಪಟ್ಟಣಪ್ರದೇಶದಲ್ಲಿ ವಾಸವಾಗಿರುವ 10% ಪ್ರತಿಶತ ಜನರು ತಮ್ಮ ಭಾಷೆಯನ್ನ ಮರೆಯುತ್ತಿರುವದು ಆತಂಕದ ವಿಷಯವಾದರೆ ಉಳಿದ 90% ಜನರು ಭಾಷೆಯ ಕುರಿತು ತಾತ್ಸರ ಮಾಡುತ್ತಿರುವುದು ಮತ್ತೊಂದು ಆತಂಕದ ಸಂಗತಿ.

ಈ) ಭಾಷೆಯ ಮೇಲೆ ಅಭಿಮಾನ ಕಳೆದುಕೊಳ್ಳುತ್ತಿರುವುದು :

ಮನುಷ್ಯನ ಪ್ರವೃತ್ತಿಯೇ ಇದು, ತನ್ನ ಮನೆಯನ್ನ, ಜನರನ್ನ, ಭಾಷೆಯನ್ನ ಪ್ರೀತಿಸುವುದಿಲ್ಲಾ, ಗೌರವಿಸುವುದಿಲ್ಲಾ, ಅಭಿಮಾನ ಪಡುವುದಿಲ್ಲ ಬೇರೆಯವರ ಮೇಲೆ ಹೆಚ್ಚು ಅಭಿಮಾನ ಪಡುತ್ತಾನೆ ಭಾಷೆಯ ವಿಷಯದಲ್ಲೂ ಕೂಡ ಹಾಗೆಯೇ. ಬಹುಬೇಗನೆ ಭಾಷೆಯನ್ನ ಕುರಿತು ವ್ಯಾಮೋಹಿಯಾಗುತ್ತಾನೆ. ನಾವು ಎಷ್ಟು ಭಾಷೆಗಳನ್ನ ಕಲಿಯುತ್ತೇವೆಯೋ ಅಷ್ಟು ಬೆಳೆಯುತ್ತೀವೆ ಎಂಬ ಸತ್ಯವನ್ನು ಮೊದಲು ಅರಿಯಬೇಕು. ನಮ್ಮ ಭಾಷೆಯ ಮೇಲೆ ನಾವು ಅಭಿಮಾನ ಪಡಬೇಕು ಉಳಿದಂತೆ ಇತರ ಭಾಷೆಗಳು ಪರರ ಮುಂದೆ, ನಮ್ಮ ಭಾಷೆಯನ್ನ ತೆಗಳುತ್ತಾ ಮತ್ತೊಂದು ಭಾಷೆಯ ಕುರಿತು ಒಳ್ಳೆಯ ಮಾತುಗಳನ್ನಾಡುತ್ತಿದ್ದರೆ ನಮ್ಮ ಅಭಿಮಾನ ಸೂನ್ಯತೆಯನ್ನು ಹೊರಹಾಕಿದಂತೆ.

ಗೋರ್‌ಬೋಲಿಯ ಉಳಿಯುವಿಕೆಯ ಸಾಧಕಬಾಧಕಗಳು :

So called ಗಳು ಎನಿಸಿಕೊಂಡಂತಹ ಎಲ್ಲಾ ಪಟ್ಟಣದ ನಿವಾಸಿಗಳು ಅಧಿಕಾರಿಗಳು ತಮ್ಮ ಮಕ್ಕಳಿಗೆ ಈ ಭಾಷೆಯನ್ನ ಕಲಿಸುವ ಪ್ರಯತ್ನ ಮಾಡಬೇಕು. ಭಾಷೆ ನಮ್ಮ ಅಸ್ತಿತ್ವದ ಕುರುಹು- ಒಂದು ಜನಾಂಗ ಭೂಮಿ ಮೇಲೆ ಹುಟ್ಟಿದಾಗ ಅದರ ಭಾಷೆಯಿಂದಲೇ ಅದನ್ನ ಗುರುತಿಸುವುದು ಆ identity ಯ ಉಳಿವಿಗೆ ಪ್ರತಿಯೊಬ್ಬ ಗೋರಮಾಟಿ ಭಾಷೆಯ ಮೇಲಿನ ತಮ್ಮ ಅಭಿಮಾನ ಕಳೆಯುವುದು ಬಹಳ ಅವಶ್ಯವಾಗಿದೆ. ಸಂಸ್ಕೃತೀಕರಣದ ಗಡಿಬಿಡಿಯಲ್ಲಿ ನಮ್ಮ ಆಚರಣೆ ಮತ್ತು ಉಡುಪುಗಳನ್ನು ಸಂಪೂರ್ಣವಾಗಿ ಕಳೆದುಕೊಂಡು ಪರದಾಡುತ್ತಿರುವ ಆ

ಸಂದರ್ಭದಲ್ಲಿ ನಮ್ಮ ಏಕೀರಣಕ್ಕೆ ಮತ್ತು ಗುರುತಿಗೆ ಉಳಿದಿರವುದು ಒಂದೇ ಒಂದು ಅಂಶವೆಂದರೆ ಭಾಷೆ ಅದನ್ನೆ ಮರೆತರೆ 'ಬಂಜಾರ' ಎಂಬ ಪದ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ ಹಾಗಾಗಿ ಈ ಕುರಿತು ಜನರಲ್ಲಿ ಹೆಚ್ಚೆಚ್ಚು ಜಾಗೃತಿ ಮೂಡಬೇಕು. ವಿಶ್ವಮಾನವರಾಗುತ್ತಿರುವ ಈ ಸಂದರ್ಭದಲ್ಲಿ ಸಂಕುಚಿತ ಆಲೋಚನೆ ಎಂದುಕೊಳ್ಳುವವರಿಗೆ ಒಂದು ಜನಾಂಗದ identity ಯ ವಿನ ಬಗ್ಗೆ ತಿಳಿಯುವುದಿಲ್ಲ. ತನ್ನದೇ ಆದ ನುಡಿಗಟ್ಟನ್ನು, ಭಾಷೆಯ ವೈವಿಧ್ಯವನ್ನು, ಭಾಷೆಯ ಅಂತಃ ಸತ್ವ ಹೊಂದಿರುವ ಬಂಜಾರ ಜನಾಂಗದ ಉಳಿವು ಆ ಭಾಷೆಯ ಮೂಲಕ ಮಾತ್ರ ಸಾಧ್ಯ.

ಇಡಿ ಭಾರತ ಮತ್ತು ಅದರಾಚೆ ಬದುಕಿರಬಹುದಾದ ಗೋರಮಾಟಗಳಿಗೆಲ್ಲಾ ಒಂದೇ ತರನಾದ ಭಾಷೆ ಇದೆ ಅದರಿಂದ ಮಾತ್ರ ಅವರು ಆ ಜನಾಂಗದ ಪ್ರತೀಕವೆಂದು ತಿಳಿದುಕೊಳ್ಳಲು ಸಾಧ್ಯ. ಅದನ್ನ ಅವರು ಕಾಪಾಡಿಕೊಳ್ಳುವುದು ಅನಿವಾರ್ಯವಾಗಿದೆ.

❄ ❄ ❄ ❄ ❄

ಸಾಹಿತ್ಯದ ಜಾತ್ಯಾತೀತ ನೆಲೆಗಳು

ಸಾಹಿತ್ಯ ಜನಧನಿಗುಣವನ್ನು ಹೊಂದಿರುವಂತಹದ್ದು ಇದಕ್ಕೆ ಯಾವುದೆ ಸ್ಪರ್ಶ ಅಥವಾ ಅಸ್ಪರ್ಶದ ಬೇದವಿಲ್ಲ. ತಾಳೆಗರಿ, ಕಲ್ಲುಬಂಡೆಯ ಮೇಲೆ ಅರಳಿದ ಸಾಹಿತ್ಯವನ್ನೆ ತೆಗೆದುಕೊಂಡರು ಬಹುಮುಖಿಯ ಅಂತಸತ್ವವನ್ನು ಹೊಂದಿರುವುದು ಕಂಡುಬರುತ್ತದೆ. ಅಶೋಕನ ಬಂಡೆಗಲ್ಲ ಮೇಲಿನ ಶಾಸನಗಳಲ್ಲಿ ಅವನು ಮಾಡಿದ ಸಾಧನೆಯನ್ನೆ ವರ್ಣಿಸಿದರೂ, ಅದರಲ್ಲಿ ಅಂದಿನ ಜನ ಜೀವನದ ಪ್ರತಿಕೃತಿಯನ್ನು ಕಾಣಬಹುದು. ಭಾಷೆಗೆ ಎಷ್ಟೊಂದು ಶಕ್ತಿ ಇತ್ತು ಎಂಬುದನ್ನು ಈ ಶಾಸನಗಳಲ್ಲಿನ ಬಹರವಣಿಗೆ ಸಾರಿದರೆ, ಅದನ್ನು ಬರೆಯಿಸಿದವನು ಮತ್ತು ಬರೆದವನು ಅಥವಾ ಕೆತ್ತಿದವನು ಯಾವುದೇ ಪೂರ್ವಾಗ್ರಹ ಪೀಡಿತನಾಗದೆ ಬರೆದಿರುವಂತಹದ್ದು ಕಂಡುಬರುತ್ತದೆ. ಯಾವುದೇ ದೇಶಭಾಷೆ ಯಾವತ್ತು ಏಕಸ್ವಾಮ್ಯತೆಯನ್ನು ಪಡೆದುಕೊಂಡಿರುವುದಿಲ್ಲ. ಬಹುಶಃ ಸಂಸ್ಕೃತಭಾಷೆಯುನ್ನು ಬಿಟ್ಟು ಅನಾದಿಕಾಲದಿಂದಲೂ ದೇವರಾಡುವ ಭಾಷೆ ಎಂದು ಸುಳ್ಳು ಹೇಳಿ ಬಹುಜನರಿಂದ ದೂರವಿರಿಸಿ ಕಗ್ಗೊಲೆಮಾಡಿದ ಪಾಪ ಪಂಡಿತ ವರ್ಗಕ್ಕೆ ಸೇರುತ್ತದೆ. ಏಕೆಂದರೆ ಆ ಕಾಲ ಘಟ್ಟದಲ್ಲಿ ಪಂಡಿತ-ಪಾಂಡಿತ್ಯ-ಸಾಹಿತ್ಯ ಈ ಎಲ್ಲಾ ಪದಗಳು ಏಕಸ್ವಾಮ್ಯತೆಯನ್ನು ಪಡೆದುಕೊಂಡಿದ್ದವು. ಅಕ್ಷರ ಸಂಸ್ಕೃತಿಯ ಒಳ ಆವರಣವನ್ನು ಪ್ರವೇಶಿಸಿದ ಪಂಡಿತರು, ಖಗೋಳ, ಭೂಗೋಳ, ತಾರಾಮಂಡಲ, ಬ್ರಹ್ಮಾಂಡ, ಸ್ವರ್ಗ, ನರಕ ಇತ್ಯಾದಿ ಲೋಕಗಳನ್ನು ಸೃಷ್ಟಿಸಿ, ಗ್ರಹಗತಿಗಳನ್ನು ಕಾಲರಾಯನ ಹೆಗಲ ಮೇಲೆ ಹೊರಿಸಿ, ಶೂದ್ರತಿಶೂದ್ರ ಜನರಿಗೆ ಹೆದರಿಸುವ ಶಕ್ತಿಯನ್ನಾಗಿ ಮಾಡಿ ತಮ್ಮ ಬೊಜ್ಜನ್ನ ಬೆಳೆಸಿಕೊಳ್ಳುತ್ತಿದ್ದರು. ಆದರೆ ಸಾಹಿತ್ಯ ಸರ್ವಕಾಲಿಕ ಸತ್ಯವನ್ನೆ ಪ್ರತಿಪಾದಿಸುತ್ತ ಅನೇಕ ಸಿದ್ಧಾಂತಗಳನ್ನು ತಲೆಕೆಳಗೆ ಮಾಡಿ, ಎಲ್ಲಾ ಪ್ರಚಾರಗಳ ನಡುವೆಯು ನಳನಳಿಸುತ್ತ ನಿಂತಿರುವ ಸೂರ್ಯಕಾಂತಿ, ಜಗತ್ತಿನ ಯಾವುದೇ ಸಾಹಿತ್ಯ ಮತ್ತು ಸಿದ್ಧಾಂತಗಳನ್ನು ತೆಗೆದುಕೊಂಡರು ಆಯಾಕಾಲಘಟ್ಟದಲ್ಲಿ ಪಡೆದುಕೊಂಡ ಪುಷ್ಠಿಯಿಂದಾಗ ಬೆಳೆದ ಬೆಳೆಯೇ ವಿನಃ ಹೊಸದಾಗಿ ಇಂದ್ರಲೋಕದಿಂದಲೋ ಬ್ರಹ್ಮಾಂಡದಿಂದ ಉದುರಿದ ಅಥವಾ ಬ್ರಹ್ಮನ ಬಾಯಿಯಿಂದ ಹೊರ ಹೊಮ್ಮಿದ ಶಬ್ದಗಳೇನು ಅಲ್ಲ. ಪುನರುತ್ಥಾನದ ಸಂಕ್ರಮಣಾವಸ್ತೆಯಲ್ಲಿ ವಿಫುಲವಾಗಿ ಬೆಳೆದ ಸರಿಸುಮಾರು 500ರಿಂದ 600 ವರ್ಷಗಳಷ್ಟೆ ಇತಿಹಾಸವನ್ನು ಹೊಂದಿರುವ

ಆಂಗ್ಲ ಭಾಷೆಯ ಸಾಹಿತ್ಯ, ಫ್ರಾನ್ಸ್, ಜರ್ಮನಿ, ಲ್ಯಾಟೀನ್, ಗ್ರೀಕ್, ರೋಮನ್, ಭಾಷೆಯ ಕಾಂಪೊಸ್ಟ್‌ನಿಂದಾಗಿ ಕಸುಕಿತ್ತು ಬೆಳೆಯಿತು. 1453ರ ಕಾನಸ್ಟಾಂಟಿನೋಪಲ್‌ಪತನದ ನಂತರ ಏಕೈಕ ಭೂಮಾರ್ಗವಾದ ಗುಡ್‌ಹೊಪ್ ಭೂಶಿಖರವನ್ನು ಬಿಟ್ಟು ಮತ್ತೆಲ್ಲಿಂದಲೊ ಮಾರ್ಗವಿದೆಯೇ ಎಂಬ ಕುತೂಹಲದ ತೆವಲಿಗಾಗಿ ಹಳೆಯ ಶಾಸ್ತ್ರೀಯ ಸಾಹಿತ್ಯದ ಅಧ್ಯಯನ ಆರಂಭಿಸಿದ ಬ್ರಿಟೀ ಗೆ ಸಿಕ್ಕಿದ್ದಾದರೂ ಏನು ? "Necessity is the Mother of Invention" ಅವಶ್ಯಕತೆ ಹೊಸ ಹೊಳವಿನ ಜನನಿಯಾಗಿ ಪರಿಣಮಿಸಿತು. ಅದಕ್ಕಿಂತ ಎಷ್ಟೋವರ್ಷಗಳ ಇತಿಹಾಸವನ್ನು ಹೊಂದಿರುವ ಜಗತ್ತಿನ ಅನೇಕ ಸಾಹಿತ್ಯ ಪ್ರಕಾರಗಳು ಕಸುಕಿತ್ತು ಬೆಳೆಯದಿದ್ದರೂ ತಮ್ಮ ಜಾತ್ಯಾತೀತ ನೆಲಗಳ ಮೇಲೆ ಜಗತ್ತಿನ್ನು ಆಕರ್ಷಿಸಿವೆ. ಗ್ರೀಕ್‌ನ ಆರಂಭಿಕ ನಾಟಕಗಳಾದ ಎಲೆಕ್ಟ್ರಾ, ಇಡಿಪಸ್, ಮಿಡಿಯಾ, ಯಾವೊಂದು ಧರ್ಮ ಮತ್ತು ಮಣ್ಣಿನ ಗುಣಕ್ಕೆ ಅಂತಲೆ ರಚಿಸಲ್ಪಟ್ಟಿಲ್ಲಾ. ಇಡಿಪಸ್ ಭಾರತದ ಮಣ್ಣಿನಲ್ಲೂ ಅಪ್ಯಯಮಾನವಾಗುವುದರಲ್ಲಿ ಸಂದೇಹವೇ ಇಲ್ಲಾ. ಮಿಡಿಯಾಳಂತ ಪ್ರತಿಕಾರತೀರಿಸಿಕೊಳ್ಳುವ ಹೆಂಗಸು ಭಾರತದಲ್ಲೂ ಇದ್ದಾಳೆ. ಹೊರದೇಶದಲ್ಲೂ ಇದ್ದಾಳೆ. ಆದರೆ ಹೆಂಗಸರಿಗೆ ಬರಿ ಪ್ರತಿಕಾರದ ಗುಣಗಳೇ ಹೆಚ್ಚು, ಗಂಡಸಿನ ಮೇಲೆ ಸಮಯ ಸಿಕ್ಕಾಗಲೆಲ್ಲಾ ಸೇಡುತೀರಿಸಿಕೊಳ್ಳುವಂತಹವರೆ. ಅದರಲ್ಲೂ ಯಾವುದಾದರೂ ಅಧಿಕಾರ ಬಂದರೆ ಮುಗಿಯಿತು. ಕಾಗೆ ಕೈಗೆ ಅಧಿಕಾರಕೊಟ್ರೆ ಕಛೇರಿ ತುಂಬ ಹೇಲಮಾಡ್ತು'ಎನ್ನು ಗಾದೆಯೊಂದು ಹಳ್ಳಿಯಲ್ಲಿ ಪ್ರಚಲಿತದಲ್ಲಿದೆ ಹಾಗೆ ಕೆಲವು ಜನರಿಗೆ ಅಧಿಕಾರವೆಂದರೆ. ಹೀಗಾಗಿ ಸಾಹಿತ್ಯ ಈ ಎಲ್ಲಾ ಘಟ್ಟವನ್ನು ಮೀರಿರುವಂತಹದ್ದು. ಭಾರತದಲ್ಲಿರುವ ಶ್ರೇಣಿಕೃತ ವ್ಯವಸ್ಥೆಯಲ್ಲಿ ಮೊದಲು ಬರುವ ಬ್ರಾಹ್ಮಣ ತಾನು ಬ್ರಹ್ಮನ ತಲೆಯಿಂದ ಹುಟ್ಟಿದ್ದರಿಂದಾಗಿಯೆ ಹುಟ್ಟುತ್ತ ಅಕ್ಷರದ ಜ್ಞಾನವನ್ನು ಪಡೆದುಕೊಂಡು ಹುಟ್ಟಿರುವುದಾಗಿ ಸುಳ್ಳುಹೇಳುತ್ತ ಜನರನ್ನು ನಂಬಿಸುತ್ತ ಬಂದು ಬ್ರಿಟೀಷರ ಗುಲಾಮಗಿರಿಗೆ ಪರಾಕು ಹೇಳಿ ಇನಾಮ ಪಡೆದು ಇಂಗ್ಲಿಷ್ ಭಾಷೆಯನ್ನು ಕಲಿತು ಇಂಗ್ಲಿಷ್ ಸಾಹಿತ್ಯದ ನಕಲುಮಾಡಿ ಮೊದಲ ತಲೆಮಾರಿನ ಬರಹಗಾರರೆಲ್ಲಾ ಶ್ರೇಷ್ಠ ಪಂಡಿತರೆಂತಲೂ ಅವರೆಲ್ಲಾ ಆಳಿದ ಕೋಟೆಯನ್ನು ಹಿಡಿದು ಆಳಲು ಹೊರಟ ಕೋಟೆಯನ್ನು ಶೂದ್ರರಿಗೆ ಮತ್ತು ಅತಿಶೂದ್ರರಿಗೆ ಬಿಟ್ಟುಕೊಡಲಾಗಿದೆ. ಕವಿಗಳು ಬರಹಗಾರರು, ಅದೇನಬರಿತವ್ರೋ, ಅಪದ್ಯಾಪಿಗಳು ಎಂದು ಕರುವಾಗೆ ಟೀಕಿಸಿ ಅವಹೇಳಮಾಡಿ ತಮ್ಮ ಗತಕಾಲದ ವೈಭವವನ್ನು ನೆನಪು ಮಾಡಿಕೊಳ್ಳುತ್ತಾ ಆದಿಕವಿಗಳ ಮೂಲವೂ ವೈದಿಕ ಎಂದು ತೆರೆಮರೆಯಲ್ಲಿ ಹೆಮ್ಮೆ

ಪಟ್ಟುಕೊಳ್ಳುತ್ತಾರೆ. ಬದುಕಿನ ತಾಜತನವನ್ನು ಸಮಾಜದ ಅನೈತಿಕತೆಯನ್ನು ಎದುರಿಸಿ ಬರೆಯಲು ಆರಂಭಿಸಿದ ಕನ್ನಡದ ಬೀಷ್ಮಪಿತಾಮಹ ಕುವೆಂಪು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿರುವುದೀಗ ಸಹಿಸಿಕೊಳ್ಳಲಾಗದೆ ಪರಿತಪಿಸುತ್ತಿರುವ ಅನೇಕರನ್ನು, ಎದುರಿಸಲಾಗದ ಸ್ಥಿತಿ ಕುವೆಂಪು ಅವರ ಶಿಷ್ಯ ವೃಂದಕ್ಕೆ ಉಂಟಾಗಿರುವುದು ಒಂದು ವಿಪರ್ಯಾಸವೋ ಅಥವಾ ಜಾಣಕಿವುಡೋ ಅರಿಯುವರಾರು ?

ಸಾಹಿತ್ಯಕ್ಕೆ ಅಗಾಧವಾದ ಶಕ್ತಿ ಇದೆ ಎಂಬುದು ಆ ಕಾಲದ ರಾಜರಿಗೂ ಗೊತ್ತಿತ್ತು ಅಂತೆಯೇ ರಾಜ ಪುರೋಹಿತರು ಕಾವ್ಯದ ಮುಖೇನ ಉಳಿಯುವುದಕ್ಕೆ ಪ್ರಯತ್ನಗಳನ್ನು ಮಾಡಿದ್ದರು. ಅಧಿಕಾರ ಎಂಬುದು ಪ್ರತಿಯೊಬ್ಬರಿಗೂ ಸಲ್ಲುವ ಮಾತಲ್ಲ. il is not every one's cup of coffee ಅಧಿಕಾರದ ಮತ್ತು ನೆತ್ತಿಗೇರಿದರೆ ಅವನು ಮನುಷ್ಯನಾಗಿರುವುದಿಲ್ಲ ರಾಜ ಮಾನವೀಯತೆಯನ್ನು ಹೊಂದಿದ್ದರು ಅವನ ಸುತ್ತಲು ಇರುವಂತಹ ಜನರ ನೀಯತ್ತು ಸರಿ ಇಲ್ಲದಿದ್ದರೆ ಅವನ ಅಧಿಕಾರಕ್ಕೇನು ಪ್ರಯೋಜನವಿಲ್ಲ ಹಲ್ಲುಕಿತ್ತ ಹಾವಿನಂತಾಗುತ್ತಾನೆ. ಅಬ್ರಾಹಂ ಲಿಂಕನ್ ಹೇಳುತ್ತಾನೆ. "ಸಾವಿರಾರು ಕೂಗುಗಳನ್ನು ತಾಳ್ಮೆಯಿಂದ ಕೇಳಿ ಸತ್ಯದತಳಹದಿಯ ಮೇಲೆ ಪರಾಮರ್ಶಿಸಿ ಯಾವುದು ಸತ್ಯವೊ ಅದನ್ನೆ ಪ್ರತಿಪಾದಿಸು" ಎಂದು. ಆದರೆ ಯಾರದೋ ಮಾತಿಗೆ ಕೋತಿಯಂತೆ ಲಾಗ ಹಾಕುವ ಅಧಿಕಾರ ವರ್ಗ ಯಾರ ಮಾತನ್ನು ಕೇಳಲು ಸಿದ್ಧವಿಲ್ಲದೆ ತನ್ನ ಸುತ್ತಲೂ ಇರುವ Tom, Dick, Harry'ಗೆ ಯಾವುದು ಸರಿಯೋ ಅದನ್ನೆ ಮಾಡುವುದು. ಹೀಗಾಗಿ ಸಾಹಿತಿ -ಸಾಹಿತ್ಯ ಯಾವಾಗಲೂ ರಾಜಕಾರಣದಿಂದ ಮಾರುದೂರ ಉಳಿಯುವುದು ಅದಕ್ಕೂ ಶ್ರೇಷ್ಠ ಅದರ ಪ್ರತಿಪಾದಕನಿಗೂ ಒಳಿತು. ರಾಜಕಾರಣದಲ್ಲಿ ಸಾಹಿತ್ಯದ ಬಳಕೆಯಾದರೆ ಯಾವ ರೀತಿಯ ನಷ್ಟವೂ ಇಲ್ಲ, ಆದರೆ ಸಾಹಿತ್ಯದಲ್ಲಿ ರಾಜಕಾರಣ ಬಳಕೆಯಾದರೆ ಅದರ ಬುನಾದಿಯೇ ಅಲುಗಾಡುತ್ತದೆ. ಇವತ್ತಿನ ಸ್ಥಿತಿ ಅಂತದ್ದೇ ಆಗಿದೆ. ರಾಜಕೀಯದ ಕೈಗಳು ಬಹಳ ಉದ್ದ ಎಷ್ಟು ಉದ್ದ ಇವೆ ಎಂದರೆ ಏನೂ ಬರೆಯದವನು ಸಾಹಿತಿ ಎನಿಸಿಕೊಳ್ಳಬಹುದು ಯಾವುದೋ ಕಿತ್ತು ಹೋಗಿರುವ ನಾಲ್ಕು ಜಾಗಟೆ ಪದ್ಯಗಳನ್ನು ಬರೆದು ನಾಡಿನ ಖ್ಯಾತನೋ ಕುಖ್ಯಾತ್ಯ ಕವಿ ಎನಿಸಿಕೊಳ್ಳಬಹುದು ಕಾರಣ ರಾಜಕೀಯ ಕೈಯೊಂದು ಅವನ ತಲೆಯಮೇಲಿದೆಯಲ್ಲ. ಮಹಾಕವಿ ಸೆಕ್ಸಪಿಯರ್ ಯಾವ ರಾಜಕೀಯವನ್ನು ಮಾಡದೇ ಇದ್ದ ಕಾರಣ ಜಗತ್ತಿನ ಜೀವನನಾಡಿಯಲ್ಲಿ ಜನ ಜನಿತನಾಗಿರುವುದು ಆತ ಕಟ್ಟಿಕೊಟ್ಟ ಜೀವನ

ಅನುಭವಗಳನ್ನು ಜಾತ್ಯಾತೀತವಾದ ಹೊಳವುಗಳನ್ನು ಮತ್ಯಾರಿಂದಲೂ ಸಾಧ್ಯವಾಗಿಲ್ಲ. ಕಾಫ್ಕ, ಕಾಮು, ನರೋದ, ಟ್ಯಾಗೋರ್, ಡಬ್ಲು ಹೆಚ್.ಆಡೆನ್ ಕವಿ, ಇಂತಹ ಅನೇಕ ದಾರ್ಶನೀಕ ಸಾಹಿತಿಗಳು ಯಾವತ್ತು ಗುಂಪುಗಾರಿಕೆ ಮಾಡಲಿಲ್ಲಾ ಹಾಗೂ ಅದರ ಪ್ರಯೋಜನ ಅವರಿಗೆ ಇರಲಿಲ್ಲ. ಆದರೆ ಇವತ್ತು ಗಲ್ಲಿ ರಾಜಕೀಯದಕಾಲ, ಗಲ್ಲಿಯೊಂದರಲ್ಲಿ ಅಂಬೆಗಾಲಿಡುವ ಸಾಹಿತಿಯನ್ನು ಸಮ್ಮೇಳನದ ಅಧ್ಯಕ್ಷಗಿರಿಗೂ ಅಕಾಡೆಮಿಯ ಬಹುಮಾನಗಳಿಂದ ಶೋಭಿತರಾಗುತ್ತಾರೆ.

ಕಾಲಮಾರ್ಕ್ಸ್, ಟಾಲಸ್ಟಾಯ್‌ರಂತ ಮಹಾನ್ ಬರಹಗಾರರಾಗಲಿ ಅರಿಸ್ಟಾಟಲ್, ಸಾಕ್ರೆಟಿಸ್, ಪ್ಲಾಟೋರಂತ ಚಿಂತಕರು, ಲೋಹಿಯಾ ಅಂಬೇಡ್ಕರ ಹಾಗೂ 12ನೇ ಶತಮಾನದ ವಚನಕಾರರು ಯಾರ ಒತ್ತಾಸೆಗೂ ಬೀಳದೆ ಎಲ್ಲಾ ಎಲ್ಲೆಗಳನ್ನು ಮೀರಿ ಸಾಹಿತ್ಯ ಕೃತಿಯನ್ನು ರಚಿಸಿದರು. ಇವರೆಲ್ಲಾ ಮೌಲ್ಯ ಮತ್ತು ಆದರ್ಶಗಳು ಸಾಹಿತ್ಯದ ಪರಂಪರೆಗಳು ಜಾತ್ಯಾತೀತ, ಕಾಲಾತೀತ, ದೇಶಾತೀತವಾದವುಗಳು. ಯಾವುದೇ ವಸ್ತುವಾಗಲಿ ಯಾವುದು ನಿಜವೋ ಅದು ಶ್ರೇಷ್ಠವೂ, ಯಾವುದು ಶ್ರೇಷ್ಠವೋ ಅದು ಗಟ್ಟಿಯಾಗಿ ನೆಲೆಉರುವಂತಹದ್ದು. ಕುವೆಂಪು ಅವರನ್ನು ಕವಿಯೇ ಅಲ್ಲವೆಂದು ಅಲ್ಲಗಳೆದ ಒಂದು ವರ್ಗ ಸಾಹಿತ್ಯವನ್ನು ಟೀಕಿಸಿದರು ಬೆಳೆದು ಹೆಮ್ಮರವಾದರು. ಜಾತಿ ಮೇಲೆ ಬದುಕಿರುವ ಸಾಹಿತಿ ಯಾವ ಗುಣಮಟ್ಟದ ಶ್ರೇಷ್ಠ ಸಾಹಿತ್ಯವನ್ನು ನೀಡಬಲ್ಲಾ. ತನ್ನ ಸುತ್ತಲ ಜಗತ್ತನ್ನೆ ಪ್ರೀತಿಸದವನು ಜಗತ್ತನ್ನ ಹೇಗೆತಾನೆ ಪ್ರೀತಿಸಿಯಾನು. ಸಾಹಿತ್ಯ ಅಭಿವ್ಯಕ್ತಿಯಲ್ಲಿ ಒಂದು ಜಗತ್ತಿನ ಅನುಭವ ಅಡಗಿರುತ್ತದೆ. ಶಾಸನಗಳು ಪ್ರತಿಬಿಂಬಿಸುವ ಸಾಹಿತ್ಯ ಸಂಗತಿಗಳು ಆ ಕಾಲಘಟ್ಟದ ಸಾಮಾಜಿಕ ಸ್ಥಿತಿಗಳು.ಕನಕದಾಸರು ತಾವು ಪಟ್ಟ ಪಾಡನು ಹಾಡಾಗಿಸಿಕೊಂಡೆ ಹಾಡುತ್ತ ಜನಜಾಗೃತಿ ಮಾಡುವ ಪ್ರಯತ್ನ ಮಾಡಿದರು. ಈತನನ್ನು ನಾಯಕರು ತಮ್ಮ ಕುಲದವನೆಂತಲೂ, ಕುರುಬಜನಾಂಗದವರು ತಮ್ಮ ಕುಲದವನೆಂದು ತಮ್ಮಲ್ಲೇ ಕಿತ್ತಾಡಿಕೊಳ್ಳತ್ತಿರುವುದು ಎಷ್ಟುಸರಿ. ಈ ಎಲ್ಲಾ ಅಲ್ಪತನವನ್ನು ದಾಟಿ ಎಷ್ಟೋದೂರ ಹೆಜ್ಜೆ ಇಟ್ಟಿರುವ ಕನಕರು, ಶರೀಪಸಾಹೇಬರು, ಪುರಂದರದಾಸರು, ಪಂಪ, ರನ್ನ, ಪೊನ್ನ, ರಾಘವಾಂಕ, ಮುದ್ದಣ್ಣ ಮುಂತಾದ ಅನೇಕ ಕವಿಗಳು ದಾರ್ಶನೀಕರು ನಮ್ಮ ಮುಂದೆ ಒಂದುಸವಾಲಾಗಿದ್ದಾರೆ. ಆದರೆ, ಅಕ್ಷರಸಂಸ್ಕೃತಿಯ ಅರಿವನ್ನ ಪಡೆಯುತ್ತಾ ಹೋದ 21ನೇ ಶತಮಾನದ ಬರಹಗಾರರು-ಕಲಾವಿದರು ತಮ್ಮ ಭಟ್ಟಂಗಿಗಳನ್ನು ಜಾತಿಯ ಜನರನ್ನ, ಪಂಗಡ, ಒಳಪಂಗಡವರನ್ನಷ್ಟೆ ಓಲೈಸುತ್ತಾ ಅವರು ಬರೆದ ಕಳಪೆ ಲದ್ದಿಯನ್ನು ಕೂಡ ಹೊಗಳಿ

ಶ್ರೇಷ್ಠವೆಂದು ಪ್ರತಿಪಾದಿಸುತ್ತಿರುವ ಭಂಡತನ ತೋರುತ್ತಿರುವುದು ಯಾವ ಪುರಷಾರ್ಥಕ್ಕಾಗಿಯೋ.

ಒಂದು ಒಳ್ಳೆಯ ಸಾಹಿತ್ಯ ಕೃತಿಯ ಪರಿಚಯವಾಗುವುದು ಅದರ ಜಾತ್ಯಾತೀತವಾದ ನೆಲೆಯಿಂದ ಕವಿಗಳಿಗೆ ಕಲಾವಿದರುಗಳಿಗೆ ಯಾವುದೇ ಜಾತಿಯ ಪಾಬಂದಿ ಇರುವುದಿಲ್ಲ ಎಂಬುದು ಜಾಗತಿಕ ಸತ್ಯವಾದರೆ ಅನೇಕರು ಜಾತಿಯ ಆದಾರದ ಮೇಲೆ ವಸೂಲಿಯ ಆಧಾರದ ಮೇಲೆ, ಪ್ರಶಸ್ತಿಗಳ ಮೇಲೆ ಪ್ರಶಸ್ತಿ ಬಾಚಿಕೊಳ್ಳುತ್ತಲೆ ಹೋಗುತ್ತಾರೆ. ಪದವಿಗಳ ಮೇಲೆ ಪದವಿಯನ್ನು ಗಳಿಸುತ್ತಲೇ ಸಾಗುತ್ತಾರೆ. ಸಾಹಿತ್ಯ ಒಂದು ಅಭಿವ್ಯಕ್ತಿಯಷ್ಟೇ, ಮಿಕ್ಕೆಲ್ಲವೂ ಗೌಣ ಆದರೆ ಕೆಲವೊಮ್ಮೆ ಸಾಹಿತ್ಯ ಕೃತಿ ಕಳಪೆಯಾಗಿದ್ದರೂ ಅದನ್ನು ವೈಭವಿಕರಿಸುವ ಸಣ್ಣತನ ವಿದೆಯಲ್ಲಾ ಅದು ಬಹಳ ಮಟ್ಟಿಗೆ ದುರದೃಷ್ಟಕರ. ಅತಿ ಉಗ್ರವಾಗಿಯೇ ಟೀಕೆಯನ್ನು ಮಾಡಿತು. ಆದರೆ ಆತನ ಮುಂದಿನ ತಲೆಮಾರು ಶೂದ್ರರ ರದ್ದಾಗಿದ್ದರಿಂದ, ಅಕ್ಷರ ಸಂಸ್ಕೃತಿಯ ವಾರಸುದಾರರೆಲ್ಲಾ ಕ್ಷೇತ್ರಬಿಟ್ಟು ದೂರಸರಿದದ್ದರಿಂದ ಬಹುಶಃ ಕುವೆಂಪು ಪ್ರಜ್ವಲವಾಗಿ ಸಾಹಿತ್ಯಲೋಕದಲ್ಲಿ ಮಿನುಗುತ್ತಿದ್ದಾರೆ. ಒಂದು ಪರಂಪರೆಯನ್ನು ನಿರ್ಮಿಸಿದ ಕುವೆಂಪು ಇಡಿ ಶೂದ್ರ ಸಮುದಾಯದ ಸಾಹಿತ್ಯದ ಒತ್ತಾಸೆಯಾಗಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಹಾಗಂತ, ಅವರು ಬರೆದ ಸಾಹಿತ್ಯ ಕೇವಲ ಒಂದು ವರ್ಗಕ್ಕೆ ಸೀಮಿತವಾಗಿಲ್ಲ. ಆದರೆ ಕೆಲಪಂಡಿತರು ಒಂದು ಚೌಕಟ್ಟನ್ನು ಹಾಕಿ - ಇವರೆಲ್ಲಾ ಸಾಹಿತಿ, ಕವಿ ವಿಮರ್ಶಕರು ಇವರು ಬರೆದದ್ದು ಮಾತ್ರವೆ ಸಾಹಿತ್ಯ ಉಳಿದದ್ದು ಜೊಳ್ಳು ಎಂದು ಎಂದು ಅಲ್ಲಗಳೆಯುವುದು ಎಷ್ಟು ಸರಿ. ಬಸವಲಿಂಗಪ್ಪನವರ ಬೂಸ ಕೂಡ ಇದೇ ಹಿನ್ನಲೆಯನ್ನು ಪಡೆದುಕೊಂಡಿರುವುದು ಜೀವನದ ಹಸಿ ಹಸಿ ಅನುಭವದ ಕ್ಷಣಗಳನ್ನು ಯಾವುದೇ ಪ್ರತಿಮೆಗಳಿಲ್ಲದೆ. ಸೌಂಧರ್ಯಮಿಮಾಂಸೆಯ ಗೋಜಿಗೂ ಹೋಗದೆ ತನ್ನ ನೆನಪಿನ ಆಳದಲ್ಲಿ ಬೇರೂರಿರುವ ಪುಂಖಾನುಪುಂಖ ಹಿಂಸೆ, ನೋವು, ತಲ್ಲಣ, ಸಂಕಟ ಹೊರಹಾಕಲಾರದೆ ಕುಬ್ಜನಾಗಿ ಹೋಗಿರುವೆ ಕವಿಗೆ ಅಭಿವ್ಯಕ್ತಿಯಾದ ಮೇಲೆ ಸಿಗುವ ಪ್ರಸವ ಸುಖ ಮತ್ತೆಲ್ಲೂ ಸಿಗದು. ಕಾವ್ಯ ಅಥವಾ ಸಾಹಿತ್ಯ ಜಾತ್ಯಾತೀತವಾದದ್ದು. ಆದರೆ ತನ್ನ ತ್ರಿಪದಿಗಳಿಂದ ಕರ್ನಾಟಕದ ಮನೆಮಾತಾಗಿರುವ ಸರ್ವಜ್ಞ ಕವಿ ಕುಂಬಾರನೆಂಬ ಕಾರಣಕ್ಕೆ ಮನ್ನಣೆ ಸಿಗದಿರುವುದು ಎಷ್ಟರ ಮಟ್ಟಿಗೆ ಸರಿ. ರಾಜಾಶ್ರಯದಲ್ಲಿ ಬೆಳೆದು ಮುಂದೆ ದಾಖಲೆಗಳನ್ನು ಬಿಟ್ಟುಹೋದ ಅನೇಕ ಕವಿಗಳು ತಮ್ಮ ಜ್ಯಾತ್ಯಾತೀತವಾದ ನಿಲವುಗಳಿಂದ ಕನ್ನಡ ಸಾರಸತ್ವ ಲೋಕದಲ್ಲಿ

ಅಜರಾಮರರಾಗಿ ಉಳಿದಿದ್ದಾರೆ. ಕನ್ನಡದ ಸಂದರ್ಭದಲ್ಲಿ ಹೇಳುವುದಾದರೆ 12ನೇ ಶತಮಾನ ಸಾಹಿತ್ಯದ ಉಚ್ಛ್ರಾಯ ಕಾಲವೇ ಸರಿ. ಇಲ್ಲಿ ಜನಸಾಮಾನ್ಯರ ಭಾವನೆಗಳಿಗೆ ಬೆಲೆಬಂದಿತ್ತು. ಅವರ ಕನಸುಗಳು ಪದಪುಂಜಗಳಾಗಿ ಹೊರಹೊಮ್ಮಿದ್ದವು. ಸೂಳೆಸಂಕವ್ವೆಯಿಂದ ಹಿಡಿದು ಡೋಹರ ಕಕ್ಕಯ್ಯ ಮಡಿವಾಳ ಮಾಚದೇವ ಮುಂತಾದ ಅನೇಕ ಶಿವಶರಣರರು ಅನುಭವ ಮಂಟಪದಲ್ಲಿ ಮಹತ್ವದ ಚರ್ಚೆಗಳಲ್ಲಿ ಪಾಲ್ಗೊಂಡಿದ್ದು ಯಾವ ಕ್ರಾಂತಿಗೂ ಕಡಿಮೆ ಏನು ಅಲ್ಲ. ಜಾತೀಯ ಸಂಕುಚೀತತೆಯ ಮೊಟ್ಟೆಯಲ್ಲಿ ಸೇರಿಕೊಂಡ ಜಗತ್ತು ಯಾರನ್ನು ಪ್ರೀತಿಸದಾಗಿದೆ. ನಾವೆಲ್ಲ ಜಾತ್ಯಾತೀತರೆಂಬ ಮುಖವಾಡವನ್ನು ಹಾಕಿಕೊಂಡು ಬದುಕನ್ನು ನೂಕುತ್ತಿದ್ದೇವೆ. ನಮ್ಮ ಒತ್ತಡಗಳ ಸಂದಿಗ್ದಗಳು ನಮ್ಮ ಬೌದ್ಧಿಕ ಆಲೋಚನೆಗಳ ಮೇಲೆ ಕವಿದಿರುವ ಕರಾಳ ಛಾಯೆಯೇ ಸರಿ. ಮನುಷ್ಯನನ್ನು ಪ್ರೀತಿಸದೆ ನಮ್ಮ ಅಹಾಂನ ಕೋಟೆಯಲ್ಲಿ ಬದುಕಿರುವ ಸಾಹಿತಿ ಯಾವ ಗುಣಮಟ್ಟದ ಶ್ರೇಷ್ಠ ಸಾಹಿತ್ಯವನ್ನು ನೀಡಲು ಸಾಧ್ಯ.

❄ ❄ ❄ ❄ ❄



ಬರವಣಿಗೆ ಮತ್ತು ಸಿದ್ಧಾಂತಗಳು ಶಿರಗಾನಹಳ್ಳಿ ಶಾಂತನಾಯ್ಕ ಅವರ ಇಪ್ಪತ್ತೆರಡಕ್ಕಿಂತ ಹೆಚ್ಚು ಲೇಖನಗಳ ಸಂಗ್ರಹ. ಈ ಲೇಖನಗಳಲ್ಲಿ ಕೆಲವು ಸಾಹಿತ್ಯ ಕೃತಿಗಳನ್ನು ಕುರಿತು ಕೆಲವು ವ್ಯಕ್ತಿಗಳನ್ನು ಕುರಿತ ಮತ್ತು ಕೆಲವು ಸಂಸ್ಕೃತಿಯ ಅಧ್ಯಯನದ ಕುರಿತ ಲೇಖನಗಳು. ಶಾಂತನಾಯ್ಕ ಲಂಭಾಣಿ ಜನಾಂಗದಿಂದ ಬಂದವರು. ಸಾಹಿತ್ಯವನ್ನು ಅಧ್ಯಯನ ಮಾಡಿ ಈಗ ಸಾಹಿತ್ಯವನ್ನು ಬೋಧಿಸುತ್ತಿರುವವರು ಈಗಾಗಲೇ ನಾಟಕಗಳನ್ನು, ಕಾದಂಬರಿಗಳನ್ನು ಕವನ ಸಂಕಲನಗಳನ್ನು, ಕಥಾಸಂಕಲನಗಳನ್ನು ಪ್ರಕಟಿಸಿ ಹೆಸರು ಮಾಡಿದವರು. ಹೊಸದನ್ನು ಕಲಿಯಬೇಕು; ಕಲಿಯುತ್ತಲೇ ಬೆಳೆಯಬೇಕು ಎಂಬ ಪ್ರಾಮಾಣಿಕ ತುಡಿತವನ್ನು ಇಟ್ಟುಕೊಂಡವರು. ಇವರು ಬರವಣಿಗೆಯನ್ನು ಪ್ರಾರಂಭ ಮಾಡಿದ ದಿನಗಳಿಂದಲೂ ನಾನು ಅವರನ್ನು ಹತ್ತಿರದಿಂದ ಗಮನಿಸುತ್ತಿದ್ದೇನೆ. ತಮ್ಮ ಅನನ್ಯತೆಯನ್ನು ಶೈಕ್ಷಣಿಕ ವೃತ್ತಿಜೀವನದಲ್ಲಿ ಹಾಗೂ ಬರವಣಿಗೆಯಲ್ಲಿ ಕಂಡು ಕೊಳ್ಳುವುದಕ್ಕೆ ಹಠಯೋಗಿಯಂತೆ ಶ್ರಮ ಪಡುತ್ತಿರುವವರು.

ಪ್ರಸ್ತುತ ಸಂಕಲನದಲ್ಲಿ ಇರುವ ಲೇಖನಗಳು ಶಾಂತನಾಯ್ಕ ಸಾಹಿತ್ಯ ಕೃತಿಗಳನ್ನು ಬೇರೆ ಬೇರೆ ಲೇಖಕರ ಮಾನವೀಯ ಮುಖ ಮತ್ತು ಕೊಡುಗೆಗಳನ್ನು ತಮ್ಮ ಗ್ರಹಿಕೆಯ ಮತ್ತು ಅನುಭವದ ಚೌಕಟ್ಟಿನಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. -ಹಾಗೆಯೇ ತಾವು ಬೆಳೆದು ಬಂದ ಲಂಭಾಣಿ ಪರಿಸರದ ಭಾಷೆ, ಸಂಸ್ಕೃತಿಯ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಇಲ್ಲಿಯ ಲೇಖನಗಳ ದೃಷ್ಟಿಕೋನ ಸಾಹಿತ್ಯದ ವೈಭವವನ್ನು ಕಂಡು ಚಪ್ಪರಿಸುವಂಥದ್ದಲ್ಲ. ಮಾನವೀಯ ನೆಲೆಯಿಂದ ಅರಿವಿನ ಅನಾವರಣಕ್ಕೆ ತಯ್ಯುವಂತಹವು. ಶಾಂತನಾಯ್ಕ ಎಡಪಂಥೀಯ ಎನ್ನ ಬಹುದಾದ ಸಿದ್ಧಾಂತಗಳಿಂದ ಸ್ವಲ್ಪ ಮಟ್ಟಿಗೆ ಪ್ರಭಾವಿತರಾದವರು. ಆ ಅರಿವಿನಿಂದಲೇ ಅವರು ಕೃತಿಯನ್ನು, ವ್ಯಕ್ತಿಗಳನ್ನು ಮತ್ತು ಸಂಕಥನಗಳನ್ನು ಅನುಸಂಧಾನ ಮಾಡಲು ಹೊರಡುತ್ತಾರೆ. ಇದೊಂದು ಆರೋಗ್ಯಕರ ಲಕ್ಷಣ. ಆದರೆ ಇಲ್ಲಿಯ ಕೆಲವು ಲೇಖನಗಳು ಅವಸರದಲ್ಲಿ ಬರೆದಂತೆ ಕಾಣುತವೆ ಹಾಗೂ ತಟಕ್ಕನೆ ಮುಕ್ತಾಯವಾಗುತ್ತವೆ. ಮುಂದಿನ ಬರವಣಿಗೆಯಲ್ಲಿ ಇದರ ಕಡೆ ಅವರು ಗಮನ ನೀಡುತ್ತಾರೆಂದು ಆಶಿಸುತ್ತೇನೆ.

ಲಿಂಗದೇವರು ಹಳೆಮನೆ

ನಿರ್ದೇಶಕರು, ರಂಗಾಯಣ